॥ ಶ್ರೀರಸ್ತು ॥

ಶ್ರೀ ಮದ್ವಾದಿರಾಜಪೂಜ್ಯಚರಣವಿರಚಿತ

ಶ್ರೀ ರುಕ್ಮಿಣೀಶವಿಜಯ

(ಕನ್ನಡ ಅನುವಾದ ಸಹಿತ)

ಅನುವಾದಕರು :
ಪಂಡಿತ ಸಂತೇಬಿದನೂರು ಭೀಮಸೇನಾಚಾರ್ಯರು
ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ
ಅಕ್ಕಸಾಲಿಗರ ಬೀದಿ
ಬಳ್ಳಾರಿ.

ಶಕೆ ೧೮೯೨ ಸಾಧಾರಣ ಸಂವತ್ಸರ ಯುಗಾದಿ ಪ್ರತಿಪದೆ
7—4—1970

ಬೆಲೆ: ೨-೦೦

— ವಿಷಯಾನುಕ್ರಮಣಿಕೆ —

|| ಶ್ರೀ ಗುರುರಾಜೋ ವಿಜಯತೇ ||

ಮುನ್ನುಡಿ

ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ
ಕರೋತಿ ಕೀರ್ತಿಂ ಪ್ರೀತಿಂ ಚ ಸಾಧುಕಾವ್ಯನಿಷೇವಣಮ್ ||

ಯಾವುದೇ ಒಂದು ವಿಷಯವನ್ನು ಹೃದಯ ಸ್ಪರ್ಶಿಯಾಗಿ ತೋರ್ಪಡಿಸುವುದರಲ್ಲಿ ಕಾವ್ಯವನ್ನು ಬಿಟ್ಟು ಬೇರೊಂದಿಲ್ಲವೆಂಬುದು ಎಲ್ಲರ ಅನುಭವ ಅದರಲ್ಲಿ "ಸಾಧು ಕಾವ್ಯಗಳ ಸೇವನೆಯು ತತ್ಕಾಲದಲ್ಲಿ ಸಂಗೀತದಂತೆ ಪರಮಾಹ್ಲಾದವನ್ನುಂಟು ಮಾಡುವುದಲ್ಲದೇ, ವಿಮುಕ್ತಿಸಾಧನವಾದ ಭಗವಂತನ ಪಾದಾರವಿಂದದಲ್ಲಿ ನಿಶ್ಚಲ ಭಕ್ತಿಯನ್ನೂ, ವಿಷಯ ವೈರಾಗ್ಯವನ್ನೂ, ಅಚಲ ಯಥಾರ್ಥ ನಿಶ್ಚಯವನ್ನೂ ಹುಟ್ಟಿಸಿ, ಶಾಶ್ವತ ಪರಮಾನಂದಕ್ಕೆ ಸಾಧನವಾಗುವದೆಂದು ಸಾಹಿತ್ಯ ಶಾಸ್ತ್ರಜ್ಞರು ಸಾರಿದ್ದಾರೆ. ಇಂಥ ಕಾವ್ಯಗಳಲ್ಲಿ ಮಹಾ ಕವಿವರೇಣ್ಯರಾದ ಶ್ರೀ ವಾದಿರಾಜ ಗುರುರಾಜರ "ರುಕ್ಮಿಣೀಶವಿಜಯ" ಕಾವ್ಯವೇ ಮೇಲುಗೈ" ಎಂದು ಅದರ ಸೇವನೆಗೈದವರ ಅನುಭವವೇ ಸಾಕ್ಷಿಯೆಂದು ಧಾರಾಳವಾಗಿ ಹೇಳಬಹುದು.

ಶ್ರೀಮದ್ವಾದಿರಾಜತೀರ್ಥ ಶ್ರೀಮಚ್ಚರಣರ ಕಲಾಕೃತಿಯಾದ ಈ ರುಕ್ಮಿಣೀಶ ವಿಜಯವೆಂಬ ಕಾವ್ಯವು ಸಾಹಿತ್ಯ ಕ್ಷೀರಾರ್ಣವವನ್ನು ಮಥನಮಾಡಿ ಹೊರಗೆ ತಂದಿರುವ ಶ್ರೇಷ್ಠ ಕಾವ್ಯ ರಸಾಮೃತ ಕಳಶವಾಗಿದೆ. ಚಿತ್ರ ವಿಚಿತ್ರ ಕಲ್ಪನೆ, ಸಮಯೋಚಿತ ಶಬ್ದವಿನ್ಯಾಸ, ಅರ್ಥಾಲಂಕಾರ ಶಬ್ದಾಲಂಕಾರಗಳ ಹೆಣಿಕೆ, ಸ್ಮೃತಿಮಾತ್ರದಿಂದ ಸಹೃದಯಾನಂದದಾಯಿಯಾದ ಧ್ವನ್ಯಾದಿಗಳು ಮುಂತಾದ ವಿಶಿಷ್ಟ ಗುಣಗಳಿಂದ ಸಾರಸ್ವತ ಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನಗಳಿಸಿ, ರಾರಾಜಿಸುತ್ತಿರುವ ಅದ್ವಿತೀಯ ಕಾವ್ಯರತ್ನ, ಶ್ರೀ ರುಕ್ಮಿಣೀಶವಿಜಯ; ನಗರ ವರ್ಣನೆ, ಷಡೃತುಗಳ ವರ್ಣನೆ. ನಾಯಕ, ನಾಯಕಿಯರ ಹಾವ, ಭಾವ ವಿಲಾಸ ವರ್ಣನೆ, ವನೋದ್ಯಾನ ಚಂದ್ರಾರ್ಕ ಉದಯಾಸ್ತಗಳ ವರ್ಣನೆ, ಎಲ್ಲಕ್ಕೂ ಮಿಗಿಲಾಗಿ ಪ್ರತ್ಯಕ್ಷರ ಪ್ರತಿಪದಗಳಲ್ಲಿ, ಸಾಲಂಕಾರಕವಾಗಿ ಶೃಂಗಾರಾದಿ ನವರಸಗಳ ಸುಸ್ಪಷ್ಟ ನಿರೂಪಣೆ ಮುಂತಾದ ಉತ್ತಮ ಕಾವ್ಯ ಲಕ್ಷಣಗಳಿಂದ ಪರಿಪೂರ್ಣವಾದ ಈ ಕೃತಿಯು- ಸಾಹಿತ್ಯ ಸರಸ್ವತೀ ಸಮುಪಾಸಕರಿಗೆ ಅಮೃತ ಫಲವೆನಿಸಿಬಂದ ಒಂದು ಶ್ರೇಷ್ಠ ಮಹಾಕಾವ್ಯವಾಗಿದೆ. ಹತ್ತೊಂಬತ್ತು ಸರ್ಗಾತ್ಮಕವಾದ ಈ ಕಾವ್ಯವು, ಕಾವ್ಯವಷ್ಟೇ ಆಗಿರದೆ ಭಾಗವತಾದಿ ಪುರಾಣ

ಗಳ ಮಾರ್ಮಿಕ ತತ್ವಾಂಶಗಳ ಅರ್ಕವನ್ನು ಸಜ್ಜನರ ಹೃದಯದಲ್ಲಿ ಪ್ರತಿಬಿಂಬಿಸುವ ಕಲಾಕೌಶಲ್ಯದಿಂದ ಓತಪ್ರೇತವಾದ ವ್ಯಾಖ್ಯಾನ ಗ್ರಂಥವಾಗಿದೆ. ಅಷ್ಟೇ ಅಲ್ಲ. ತಾಪತ್ರಯ ಪರಿಹಾರಕವಾದ ಪಾರಮಾರ್ಥಿಕ ವಿಚಾರ ವಿತರಣೆ ಮಾಡುವ, ಪ್ರಭುಸಂಹಿತ, ಸುಹೃತ್ ಸಂಹಿತ, ಕಾಂತಾಸಂಹಿತ ಎಂದು ವಿಭಾಗಿಸಲ್ಪಟ್ಟ ಶಬ್ದ ಪ್ರಪಂಚದಲ್ಲಿ, ಸತ್ತತ್ವಗಳ ನಿರೂಪಣೆಯ ದ್ವಾರಾ, ವೇದ ಮತ್ತು ಪುರಾಣ ಗಳು ಕ್ರಮವಾಗಿ ಪ್ರಭುಸಂಹಿತ ಸುಹೃತ್ ಸಂಹಿತಾ ಸ್ಥಾನಗಳನ್ನು ಪೂರ್ಣ ಮಾಡಿದಾಗ್ಯೂ, ನಿರ್ದಿಷ್ಟ ತತ್ವಾಂಶಗಳ ನಿರೂಪಣೆ ಇಲ್ಲದ ಕಾರಣ (ಉಳಿದ) ಇತರ ಮಹಾಕಾವ್ಯಗಳು, ಕಾಂತಾಸಂಹಿತಾ ಸ್ಥಳವನ್ನು ಪೂರ್ಣಮಾಡಲು ಅಸ ಮರ್ಥವಾದಾಗ ಭಕ್ತಿರಸಸೇಚನದಿಂದ ಸತ್ ಸಿದ್ಧಾಂತ ತತ್ವರತ್ನಗಳನ್ನು ಬೆಳಗಿಸಿ ಕಾಂತಾಸಂಹಿತಾ ಸ್ಥಾನವನ್ನು ಪೂರ್ಣಮಾಡಿದ ಮಹತ್ವವು ಈ ರುಕ್ಮಿಣೀಶವಿಜಯ ಮಹಾಕಾವ್ಯಕ್ಕೊಂದೇ ಸಲ್ಲುತ್ತದೆ ಎಂದರೆ ಏನೂ ಅತಿಶಯೋಕ್ತಿಯಾಗಲಾರದು. ಜಾಗತಿಕ ಸಾಹಿತ್ಯ ಮೇರು ಪರ್ವತದ ಶಿಖರವನ್ನೇ ಮುಟ್ಟಿರುವ ಈ ಕಾವ್ಯವು ಮಾಧ್ವ ಸಾಹಿತ್ಯ ಚೂಡಾಮಣಿಯಾಗಿದೆ ಎಂಬಲ್ಲಿ ಏನು ಅಚ್ಚರಿ ?

ಅದ್ಭುತ ಅಲೌಕಿಕ ವ್ಯಕ್ತಿಯ ಆವಿರ್ಭಾವವು ಅತ್ಯದ್ಭುತವಿದ್ದಂತೆ ಅಲೌಕಿಕ ಕವಿಕೃತಿಯ ಆವಿರ್ಭಾವವೂ ಕೂಡ ಚಮತ್ಕಾರ ಮತ್ತು ಮಹಾ ಘಟನೆಗಳಿಂದ ಕೂಡಿರುತ್ತದೆ. ಅಂತಹ ಸುಂದರ ಕೃತಿಗಳಲ್ಲೊಂದಾದ ಈ ಕಾವ್ಯದ ಆವಿರ್ಭಾ ವವೂ ಕೂಡ ಅದ್ಭುತ ಘಟನೆಯಿಂದ ಕೃತಿಯ ಮತ್ತು ಕವಿಯ ಮಹತ್ವ, ವೈಶಿಷ್ಟ್ಯಗಳ ದಿಗಂತ ವಿಶ್ರಾಂತಿ ಹೊಂದುವಂತೆ ಮಾಡಿದೆ. ಈ ಕೃತಿಯ ಉತ್ಪತ್ತಿ ವಿಷಯವಾಗಿ ಒಂದು ಕಥಾ ಪರಂಪರೆ ಇದೆ.

ಭಾರತೀಯ ಸಂಸ್ಕೃತ ಸಾಹಿತ್ಯ ಪರಂಪರೆಯಲ್ಲಿ ಹೊರ ಹೊಮ್ಮಿದಂತಹ ಅಸಂಖ್ಯ ಕಾವ್ಯರತ್ನಗಳಲ್ಲಿ, ಯಾವುದು ಶ್ರೇಷ್ಠರತ್ನವೆಂದು ನಿರ್ಣಯಿಸಿ, ಆ ಕಾವ್ಯಕ್ಕೆ, "ಕಾವ್ಯರಾಜ" ಎಂಬ ಬಿರುದನ್ನಿತ್ತು ಸನ್ಮಾನಿಸಬೇಕೆಂದು, ಕೆಲವು ಶತಮಾನಗಳಹಿಂದೆ ಪುಣೆಯಲ್ಲಿ ಒಂದು ಮಹಾವಿದ್ವತ್ಸಭೆಯು ಏರ್ಪಟ್ಟಿತ್ತು. ಕಾವ್ಯರತ್ನಗಳನ್ನು ವಿದ್ವಜ್ಜನರ ಬುದ್ಧಿಮತ್ತೆಎಂಬ ಒರೆಗಲ್ಲಿಗೆ ಹಚ್ಚಿ, ತಿಕ್ಕಿ, ನೋಡಿದಾಗ ಮಾಘಕವಿ ಕಲಾಕೃತಿಯಾದ "ಶಿಶುಪಾಲವಧೆ" ಎಂಬ ಕಾವ್ಯವು, "ಮಾಘೇ ಸಂತಿ ತ್ರಯೋಗುಣಾಃ" ಎಂದು ಉತ್ತಮ ಕಾವ್ಯವೆಂದು ಪರಿಗಣಿಸಿ ಈ ಕಾವ್ಯಕ್ಕೆ "ಕಾವ್ಯರಾಜ ಎಂಬ ಬಿರುದನ್ನಿತ್ತು, ಆನೆಯಮೇಲೆ ಅಂಬಾರಿ ಹಾಕಿ ಮೆರವಣಿಗೆ ನಡಿಸಬೇಕೆಂದು ಸಭೆಯು ಒಕ್ಕೊರಲಿನಿಂದ ಘೋಷಿಸಿ ದಾಗ, ದೈವಾಯತ್ತವಾಗಿ ಆಪತ್ತನಕ್ಕೆ ಸಂಚರಿಸುತ್ತಾ ದಿಗ್ವಿಜಯ ಮಾಡಿದ ಶ್ರೀ ವಾದಿರಾಜತೀರ್ಥರು ಆ ಸಭೆಯ ಘೋಷಣೆಯನ್ನು ಕೇಳಿ, ತಮ್ಮಲ್ಲಿ ಒಂದು ಅಪೂರ್ವ ಕಾವ್ಯವಿದೆ. ಅದನ್ನು ಕೇವಲ ೩೦ ದಿನಗಳಲ್ಲಿ ತಮ್ಮಲ್ಲಿಗೆ

ತರಿಸಿ ಕೊಡುತ್ತೇನೆ. ಅದನ್ನು ವಿಮರ್ಶಿಸಿದನಂತರ ಈ ಸನ್ಮಾನ ಸಮಾರಂಭವನ್ನು ಮಾಡಿರಿ ಎಂದು ಆ ಮಹಾಸಭೆ ಹೇಳಿಕಳುಹಿಸಿದರು. ಅದರಂತೆ ವಿದ್ವಜ್ಜನರು ಕಾವ್ಯ ಪ್ರತೀಕ್ಷೆಯಲ್ಲಿರುವಾಗ ಶ್ರೀ ವಾದಿರಾಜರು ತಮ್ಮ ಮಾಧ್ಯಾಹ್ನಿಕ ದೇವತಾರ್ಚನೆಯನ್ನು ಮಾಡಿದನಂತರ (ಗಂಧ ಧಾರಣಮಾಡಿ) ಗಂಧಾಕ್ಷತೆಯನ್ನು ಧಾರಣಮಾಡುವ ಕಾಲಕ್ಕೆ ಪ್ರತಿನಿತ್ಯ ಒಂದು ಸರ್ಗದಂತೆ ಹತ್ತೊಂಬತ್ತು ದಿನಗಳಲ್ಲಿ ಹತ್ತೊಂಬತ್ತು ಸರ್ಗಗಳನ್ನು ರಚಿಸಿ "ರುಕ್ಮಿಣೀಶವಿಜಯ" ಎಂದು ಅನ್ವರ್ಥ ನಾಮವನ್ನಿಟ್ಟು ಭಗವಂತನಿಗೆ ಸಮರ್ಪಿಸಿ ಇಪ್ಪತ್ತನೇದಿವಸ ಸಭೆಗೆ ತಮ್ಮ ಗ್ರಂಥವನ್ನು ಕಳುಹಿಸಿಕೊಟ್ಟರು.

ಅಲ್ಲಿಯ ವಿದ್ವಾಂಸರು ಈ ಕಾವ್ಯವನ್ನು ನೋಡಿ ಶಿಶುಪಾಲವಧೆ ಕಾವ್ಯದಲ್ಲಿ ಕಾಣದ ಅತ್ಯಲೌಕಿಕ ಕಲಾಚಮತ್ಕಾರ, ರಸಭಾವಗಳ ಅಭಿವ್ಯಂಜನ ಮುಂತಾದ ಗುಣ ಗಣಗಣಗಳನ್ನು ಈ ಕಾವ್ಯದಲ್ಲಿ ಮನಗಂಡರು. ಮಧುರ ಭಾಷಾ, ಶೈಲೀ, ವರ್ಣನೆ, ಅಲಂಕಾರ, ಅನುಪ್ರಾಸ ಕಥಾನಿರೂಪಣೆ, ಶ್ರವಣ ಮಾತ್ರದಿಂದ ಕಾವ್ಯಕಥಾ ಸಂದರ್ಭವನ್ನು ಸೂಚಿಸುವ ಶಿರೋನಾಮಿಕೆಯು ವಿತರಣೆ ಮುಂತಾದ ಗುಣಗಳಿಂದ ಶ್ರೀ ರುಕ್ಮಿಣೀಶವಿಜಯ ಕಾವ್ಯಕ್ಕೆ ಸದೃಶವಾದ ಕಾವ್ಯವು ಇನ್ನೊಂದಿಲ್ಲ ಎಂದು ಸಾರಿ "ಕಾವ್ಯರಾಜ" ಎಂಬ ಬಿರುದನ್ನು ಈ ಅಪೂರ್ವ ಕಾವ್ಯಕ್ಕೆಕೊಟ್ಟು ಆನೆಯಮೇಲೆ ಮೆರವಣಿಗೆ ಮಾಡಿದರು.

ಹೀಗೆ ಈ ಕಾವ್ಯರತ್ನವು ಭಗವದ್ಭಕ್ತಿ ವರ್ಧಕವಾಗದ ಇತರ ಕಾವ್ಯಕ್ಕೆ ಉತ್ಸಾಹ ಕೊಡುವುದರಿಂದ ಸಜ್ಜನರಿಗೆ ಅಜ್ಞಾನಾಂಧಕಾರವು ಆವರಿಸುವ ಸಂದರ್ಭದಲ್ಲಿ ಈ ಅಂಧಕಾರ ಪ್ರಸಾರವನ್ನು ತಡೆಗಟ್ಟಲು ಕೇವಲ ಭಗದ್ಭಕ್ತಿ ಮತ್ತು ಭಗವತ್‌ಕೃಪಾ ಸಮುದ್ರದಿಂದ ಹೊರಚೆಲ್ಲಿ ಆವಿರ್ಭವಿಸಿತು. ಈ ಗ್ರಂಥವ ಉತ್ಪತ್ತಿಯ ಮಹಿಮೆಯನ್ನು ಕೇಳುವಾಗಲೇ ಗ್ರಂಥದ ಹಿರಿಮೆಯು ವ್ಯಕ್ತವಾಗುತ್ತದೆ.

ಇಂಥ ಗ್ರಂಥವು ಸಾಹಿತ್ಯಕ್ಕೆ ದೊರಕಿರುವುದು ಒಂದು ಭಾಗ್ಯವೇ. ತತ್ರಾಪಿ ಮಾಧ್ವರಿಗೆ ಒಂದು ಅಭಿಮಾನ ಕೆರಳಿಸುವ ಗ್ರಂಥವೇ ಆಗಿದೆ. ಇದರ ಓದು ಬರಹಗಳು ದೃಢವಾದ ಕಾವ್ಯವ್ಯುತ್ಪತ್ತಿ ಮತ್ತು ಭಗವದ್ಭಕ್ತಿ ಮಾಧ್ವಮತದಲ್ಲಿ ನಿಶ್ಚಂಚಲ ಆಸಕ್ತಿ ಸಾಂಸಾರಿಕ ವಿಷಯಗಳಲ್ಲಿ ಅನಾಶಕ್ತಿ ಇವುಗಳನ್ನು ಹುಟ್ಟಿಸುತ್ತವೆ. ಹೀಗೆ ಸರ್ವ ವಿಧದಲ್ಲಿ ಪರಮೋಪಕಾರಕ ಗ್ರಂಥವಾಗಿದೆ.

ಸಂಸ್ಕೃತ ಭಾಷೆಯಲ್ಲಿದ್ದ ಈ ಕಾವ್ಯದ ಉಪಯೋಗವು ಸಂಸ್ಕೃತ ಭಾಷಾ ಜ್ಞಾನವಿಲ್ಲದವರಿಗೂ ಆಗಲಿ, ಅವರೂ ಕಾವ್ಯರಸಾ ಸ್ವಾದದಿಂದ ಸಂತೋಷ ಪಡಲೆಂದು ನಮ್ಮ ಶ್ರೀ ನ್ಯಾಯವೇದಾಂತ ಪಂಡಿತರಾದ ಶ್ರೀ ಸಂತೇಬಿದನೂರ

ಆನಂದತೀರ್ಥ ಭೀಮಸೇನಾಚಾರ್ಯರು ಈ ಕಾವ್ಯವನ್ನು ಕನ್ನಡಿಸಿ ಕನ್ನಡಿಗರಿಗೆ ಪರಮೋಪಕಾರ ಮಾಡಿದ್ದಾರೆ, ಅನ್ಯೋನ್ಯಾನತಿಪ್ರಸಕ್ತ ನುಡಿಗಳಿಂದ ಪದ್ಯಗಳ ಭಾವವನ್ನು ತಿಳಿಗನ್ನಡದಿಂದ ಪ್ರಕಾಶಿಸಿದ್ದಾರೆ ಶಾಸ್ತ್ರಾಭ್ಯಾಸದಿಂದ ನೈಸರ್ಗಿಕವಾಗಿಬರುವ ಸಂಸ್ಕೃತ ಜಟಿಲ ಶೈಲಿಯಲ್ಲಿ ಬರೆದಿದ್ದರೂ ಸಾಮಾನ್ಯಜನರ ಬಳಕೆಯಲ್ಲಿರುವ ಶಬ್ದಗಳನ್ನುಪಯೋಗಿಸಿದ್ದರಿಂದ ಸರ್ವರಿಗೂ ಅರ್ಥವಾಗಿ ಆನಂದವಾಗುವುದರಲ್ಲಿ ಸಂದೇಹವಿಲ್ಲೆಂದು ಹೇಳಬಹುದು.

ಶ್ರೀಕೃಷ್ಣನ ಚರಿತ್ರೆಯೇ ಮೊದಲು ಆನಂದಕರ. ಅದರಲ್ಲೂ ಕಾವ್ಯಬದ್ಧವಾದಮೇಲೆ ಶ್ರೀ ವಾದಿರಾಜತೀರ್ಥ ಕವಿವರೇಣ್ಯರ ಸರಸ ನುಡಿಗಳಿಂದ ತುಂಬಿದಮೇಲೆ ಅದರಲ್ಲೂ ಭಾಷಾಂತರಿಸಿಯಥಾರ್ಥ ಸರಸ ಭಾವಾಭಿವ್ಯಕ್ತಿಯಿಂದತುಂಬಿದ ಮೇಲಂತೂ ಕೇಳುವದೇನು?

ರಸಿಕರು ಆಸ್ವಾದಿಸಿ ಪರಮಾನಂದ ಪಡೆಯುವರೆಂದು ನಾವು ನಂಬಿದ್ದೇವೆ. ಇದೇ ರೀತಿಯಾಗಿ ಈ ಕಾವ್ಯವನ್ನು ಸಂಪೂರ್ಣ ಭಾಷಾಂತರಿಸಿ, ಪ್ರಕಟಿಸಿ, ಜನರಿಗುಪಕಾರಮಾಡಿ ಶ್ರೀ ಹಯಗ್ರೀವ ದೇವರ ಅನುಗ್ರಹಕ್ಕೆ ಪಾತ್ರರಾಗಲೆಂದು ನಾವು ಶ್ರೀ ಭೀಮಸೇನಾಚಾರ್ಯರನ್ನು ಆಶೀರ್ವದಿಸುತ್ತೇವೆ.

धारवाड — श्रीनिवासाचार्य जालीहाळ;

फाल्गुण कृष्ण ३,

ता. २६-३-७०.

ಮುದ್ರಕರು:
ಆರ್. ಎಸ್. ಹೊಂಬಾಳಿ,
ಪ್ರಿಂಟರ; ಗದಗ.

ಪ್ರಕಾಶಕರು:
ಎ. ಎಸ್. ಭೀಮಸೇನಾಚಾರ್ಯ
ಅಕ್ಕಸಾಲಿಗರ ಬೀದಿ,
ಬಳ್ಳಾರಿ-೨.

— ಪ್ರಕಾಶಕರ ಮಾತು —

ಜಗತ್ತಿನಲ್ಲಿ ಪ್ರಾಚೀನರು ಜ್ಞಾನಿಗಳು ನಾನಾವಿಧ ಮಾರ್ಗಗಳಿಂದ ಜ್ಞಾನ ಪ್ರಸಾದವನ್ನು ಮಾಡಿದ್ದಾರೆ. ಅದರಲ್ಲಿ ಶ್ರೀಮದ್ವಾದಿರಾಜ ತೀರ್ಥ ಶ್ರೀಪಾದಂಗಳವರು ತಾವು ಒಂದು ಹೊಸ ಮಾರ್ಗವನ್ನೇ ಅನುಸರಿಸಿ ಜ್ಞಾನಪ್ರಸಾರವನ್ನು ಮಾಡಿದ್ದಾರೆ. ಅಂತಹ ಮಾರ್ಗಗಳಲ್ಲಿ ಈ ರುಕ್ಮಿಣೀಶವಿಜಯ ಮಹಾಕಾವ್ಯವೂ ಒಂದು. ಕಾವ್ಯಸಾಹಿತ್ಯಗಳಿಂದಲೇ ತೃಪ್ತಿಹೊಂದುವ ಜನರೂ ಕೂಡ ಕಾವ್ಯಸಾಹಿತ್ಯ ಮಾರ್ಗದಿಂದಲೇ ಭಗವಂತನ ಗುಣಮಹಿಮೆಗಳನ್ನೇ ತಿಳಿದು (ಭಗವಂತನ) ಶ್ರೀಕೃಷ್ಣನ ಕೃಪೆಗೆ ಪಾತ್ರರಾಗಲಿ; ಎಂದು ಕೃಪಾಲುಗಳಾದ ಶ್ರೀವಾದಿರಾಜರು ಈ ಗ್ರಂಥವನ್ನು ರಚಿಸಿದರು. ಕೇವಲ ಮನೋರಂಜಕ ಕಾವ್ಯವಷ್ಟೇ ಆಗಿರದೆ ಶ್ರವಣ ಮಾತ್ರದಿಂದಲೇ ಪಾಪಪರಿಹಾರಕ ಮತ್ತು ಅಭೀಷ್ಟದಾಯಕ ಗ್ರಂಥವೂ ಇದಾಗಿದೆ; ಎಂದು ಶ್ರೀವಾದಿರಾಜರೇ ತಮ್ಮ ಗ್ರಂಥದ ಪ್ರತಿ ಸರ್ಗ ಕೊನೆಯಲ್ಲಿ ದೃಢಪಡಿಸಿದ್ದಾರೆ. ಇಂತಹ ಪರಮ ಮಂಗಲಕರವಾದ ಗ್ರಂಥಗಳಲ್ಲಿ ನಮ್ಮ ಮಾಧ್ವರಲ್ಲಿ ಮಧ್ವವಿಜಯದಂತೆ ಈ ರುಕ್ಮಿಣೀಶವಿಜಯವೂ ಒಂದಾಗಿದೆ. ಸಂಸ್ಕೃತ ಭಾಷಾ ಪ್ರಚಾರ ರಹಿತವಾದ ಈ ಕಾಲದಲ್ಲಿ ಸಾಮಾನ್ಯತಃ ಜನರಿಗೆ ಸಂಸ್ಕೃತ ಸಾಹಿತ್ಯ ಗ್ರಂಥಗಳ ಜ್ಞಾನವಾಗಲು ನಾನಾ ದೇಶೀಯ ಭಾಷೆಗಳಲ್ಲಿ ಅನುವಾದವಾಗುತ್ತಿರುವದನ್ನು ನೋಡಿ ಇಂಥ ಅಪೂರ್ವ ಗ್ರಂಥವನ್ನು ಜನಸಾಮಾನ್ಯರಿಗೆ ಉಪಯೋಗವಾಗುವಂತೆ ಕನ್ನಡಕ್ಕೆ ಭಾಷಾಂತರಿಸಬೇಕು; ಎಂದು ನನ್ನ ಮನಸ್ಸಿನಲ್ಲಿ ಮೂಡಿತು. ಅದಕ್ಕೆ ಅನುಗುಣವಾಗಿ ನನಗೆ ಜ್ಯೇಷ್ಠ ಭ್ರಾತೃವಿನಂತೇ ಶ್ರೇಯೋಭಿಲಾಷಿಗಳಾದ ಪರಮ ಪೂಜ್ಯ ಘೂಳೀ ಕೃಷ್ಣಮೂರ್ತ್ಯಾಚಾರ್ಯರು ಬರೆಯಲು ಹೇಳುವುದೆ ಅಲ್ಲದೆ ಮುದ್ರಣಾದಿಗಳ ವಿಷಯಗಳಲ್ಲಿಯೂ ಸಪ್ರೇಮ ಅಭಯೋಕ್ತಿಗಳಿಂದ ನನ್ನನ್ನು ಉತ್ಸಾಹಪೂರ್ಣನನ್ನು ಮಾಡಿದರು. ಅನಂತರ ಗುರುಹಿರಿಯರನ್ನು ಸ್ಮರಿಸಿ ಯಥಾ ಶಕ್ತಿ ಬರೆಯಲು ಪ್ರಾರಂಭಿಸಿದೆನು. ಬಹು ವಿಸ್ತಾರದಿಂದ ಅದರಲ್ಲಿಯ ವ್ಯಾಕರಣ ವಿಚಾರಾದಿಗಳಿಂದ ಕೂಡಿಸಿ ಬರೆದರೆ ಬಹು ದೊಡ್ಡ ಅನುವಾದವಾಗಿ ಮಾರ್ಪಟ್ಟು, ಸಾಮಾನ್ಯ ಜನರಿಗೆ ದೂರವಾಗಬಹುದೆಂಬ ಭಯದಿಂದ ಕೇವಲ ಶ್ಲೋಕಗಳ ಭಾವಾರ್ಥವು ಇಲ್ಲಿ ಅನುವಾದಿಸಲ್ಪಟ್ಟದೆ. ಸಾಮಾನ್ಯತಃ ಸಂಸ್ಕೃತ ಶ್ಲೋಕಗಳ ಪದ ಪದಾರ್ಥಜ್ಞಾನವು ಜನರಿಗೆ ಆಗುವಂತೆ ಸಂಸ್ಕೃತ ಶ್ಲೋಕಗಳನ್ನು ಕೊಟ್ಟು ಅದರ ಕೆಳಗೆ ಅನ್ವಯಾನುಸಾರವಾಗಿಯೇ ಅನುವಾದವು ಮಾಡಲ್ಪಟ್ಟದೆ. ವಿಶೇಷತಃ ಈ ಗ್ರಂಥದಲ್ಲಿ ತುಂಬಿರುವ ಅಲಂಕಾರ ಧ್ವನ್ಯಾದಿಗಳ ವಿಸ್ತರಣೆಯನ್ನು ಇಲ್ಲಿ ಮಾಡಿಲ್ಲ. ಆದರೂ ಶ್ಲೋಕಗಳ ಸ್ವಾರಸ್ಯಾಂಶವು

ಓದುಗರ ಮನದಲ್ಲಿ ಮೂಡುವಂತೆ ಪ್ರಯತ್ನಿಸಿದ್ದೇನೆ. [ಪ್ರಕೃತದಲ್ಲಿ ೬ ಸರ್ಗಗಳ ಅನುವಾದವನ್ನು ಮಾಡಲಾಗಿದೆ. ಇದರಂತೆ ಇನ್ನೆರಡು ಭಾಗಗಳಲ್ಲಿ ಉಳಿದ ಸರ್ಗಗಳ ಅನುವಾದವನ್ನು ಮಾಡಿ ಪ್ರಕಟಿಸುವೆನು.]

ಈ ನನ್ನ ಅನುವಾದರೂಪ ಅಲ್ಪಸೇವೆಯನ್ನು ಸಜ್ಜನರು ಉದಾರ ಹೃದಯದಿಂದ ಸ್ವೀಕರಿಸಿ ಆನಂದಪಟ್ಟರೆ ಸಾಕು; ನನ್ನ ಪ್ರಯತ್ನವು ಸಫಲವಾಗುತ್ತದೆ. ಇದರ ಓದುವಿಕೆಯು ಗ್ರಂಥದ ಸವಿಯನ್ನು ಹುಟ್ಟಿಸಿ ಮೂಲ ಗ್ರಂಥದ ಓದುವಿಕೆಯಲ್ಲಿ ಆಸಕ್ತಿಯನ್ನು ಹೆಚ್ಚಿಸುವುದೆಂದು ನನ್ನ ಭಾವನೆ.

ಈ ನನ್ನ ಸಣ್ಣ ಪ್ರಯತ್ನಕ್ಕೆ ನನ್ನ ವಿದ್ಯಾಗುರುಗಳೂ ಸರ್ವಥಾ ಸಕಲವಿಧ ಉಪಕಾರಕರೂ ಆದ ಶ್ರೀಪಂಡಿತೋತ್ತಮರಾದ ಶ್ರೀಮಜ್ಜಾಲೀಹಾಳ ಶ್ರೀನಿವಾಸಾಚಾರ್ಯರು ನನ್ನ ಪ್ರಾರ್ಥನೆಯನ್ನು ಮನ್ನಿಸಿ ಪ್ರಭಾವ ಪೂರ್ಣವಾದ ತಮ್ಮ ಮುನ್ನುಡಿಯನ್ನು ಕೊಟ್ಟು ಪರಮಾನುಗ್ರಹ ಮಾಡಿದ್ದಕ್ಕೆ ಅವರಿಗೆ ಸರ್ವವಿಧದಲ್ಲಿಯೂ ಸರ್ವಕಾಲದಲ್ಲಿ ನಮಸ್ಕಾರ ಪೂರ್ವಕ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಇವರ ತಮ್ಮಂದಿರೂ ನನಗೆ ಪರಮಪೂಜ್ಯರೂ ಆದ, ಸುಧಾ ಪರಿಮಳಾದಿ ಅನೇಕ ಉದ್ಗ್ರಂಥಗಳ ಕನ್ನಡಾನುವಾದಕರಾದ ಪಂಡಿತ, ಜಾಲೀಹಾಳ ಕೇಶವಾಚಾರ್ಯರೂ ಶ್ರಮವಹಿಸಿ ಪ್ರೂಫ್ ಕರೆಕ್ಷನ್ನವಗೈರೆ ಮಾಡಿದುದಕ್ಕೆ ಹಾಗೂ ನನ್ನಲ್ಲಿ ತೋರಿದ ಪ್ರೇಮಾತಿಶಯಕ್ಕೆ ಕೃತಜ್ಞತಾ ಪೂರ್ವಕ ಸಾಷ್ಟಾಂಗ ನಮಸ್ಕಾರವನ್ನು ಅರ್ಪಿಸುತ್ತೇನೆ. ಸಕಾಲದಲ್ಲಿ ಶ್ರಮವಹಿಸಿ ಸುಂದರವಾಗಿ ಮುದ್ರಣ ಮಾಡಿಕೊಟ್ಟ ಶ್ರೀ ಆರ್. ಎಸ್. ಹೊಂಬಾಳಿಯವರಿಗೂ ಉತ್ಸಾಹಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಅಜ್ಞಾನ ಪ್ರಮಾದಾದಿಗಳಿಂದುಂಟಾದ ಅನುವಾದ ದೋಷ ಹಾಗು ಮುದ್ರಣ ದೋಷಗಳನ್ನು ಶೋಧಿಸಿ ಸಾರಗ್ರಾಹಿಗಳಾದ ಸುಜನರು ನನ್ನಲ್ಲಿ ದಯೆತೋರಲೆಂದು ಪ್ರಾರ್ಥಿಸುತ್ತೇನೆ.

ಸಾಧಾರಣ ಸಂ, ಯುಗಾದಿ
ಶ್ರೀಲಕ್ಷ್ಮೀ ನರಸಿಂಹ ದೇವಾಲಯ
ಬಳ್ಳಾರಿ-೨.

ಸಜ್ಜನವಿಧೇಯ
ಸಂತೇ ಬಿದನೂರ
ಭೀಮಸೇನಚಾರ್ಯರು.

ಶ್ರೀ

ಶ್ರೀ ಗುರುಭ್ಯೋ ನಮಃ ॥ ಹರಿಃ ಓಂ ॥

ಶ್ರೀ ರುಕ್ಮಿಣೀಶವಿಜಯಃ

ಮೊದಲನೆಯ ಸರ್ಗ

ಶ್ರೀಮತ್ಪೂಜ್ಯ ವಾದಿರಾಜ ಶ್ರೀಪಾದಂಗಳವರು, "ಶ್ರೀರುಕ್ಮಿಣೀಶ ವಿಜಯ"ವೆಂಬ ಕಾವ್ಯವನ್ನು ರಚಿಸುವವರಾಗಿ, ಗ್ರಂಥದ ನಿರ್ವಿಘ್ನಪರಿಸಮಾಪ್ತಿ ಮೊದಲಾದ ಪ್ರಯೋಜನವುಳ್ಳದ್ದಾಗಿಯೂ, ಶ್ರೋತ್ರಾದಿಗಳಿಗೆ ದೀರ್ಘಾಯುರಾರೋಗ್ಯವರ್ಧಕವಾಗಿಯೂ, ಅನೇಕ ಪ್ರಮಾಣಗಳಿಂದ ಪ್ರಮಿತವೂ ಕರ್ತವ್ಯವೆಂದು ಅನೇಕ ಶಿಷ್ಟಾಚಾರಪರಂಪರೆಯಿಂದ ದೃಷ್ಟವೂ ಆಗಿರುವುದರಿಂದ, ವಾಚನಿಕಮಂಗಲಾಚರಣವನ್ನು ಆಚರಿಸಿ, ಗ್ರಂಥಾದಿಯಲ್ಲಿ ನಿಬಂಧಿಸುತ್ತಾರೆ.

ಶ್ರೀವೇದಾಂತಮಹಾಚಲಂ ಹಿ ಪರಿತಃ ಸಂಯೋಜ್ಯ ಸೂತ್ರಾಹಿಪಂ
ಸದ್ವಾತಾಗಮಪೋಷಿತಾತ್ಮಹೃದಯಂ ತತ್ಪೂರ್ವಪಕ್ಷಾಸುರೈಃ ॥
ಸಿದ್ಧಾಂತೋಕ್ತಿಸುರೇಶ್ವರೈಶ್ಚ ಮಥಿತೋ ಯಃ ಕೃಷ್ಣದುಗ್ಧಾಂಬುಧಿಃ
ಸ್ವೀಯಾನಾಮಮೃತಂ ಪ್ರಯಚ್ಛತಿ ಸ ಮಾಂ ಪಾಯಾದ್ ಗುಣೋದ್ಯನ್ಮಣಿಃ
॥೧॥

ಶ್ರೀ ಮಧ್ವಾನಂದತೀರ್ಥರ ಸದಾಗಮವೆಂಬ ಗಾಳಿಯಿಂದ ಪೋಷಿತವಾದ ತನ್ನ ಹೃದಯವುಳ್ಳ ಅನಂತ ವೇದನಿರ್ಣಾಯಕಗಳಾದ ಬ್ರಹ್ಮಸೂತ್ರಗಳೆಂಬ ವಾಸುಕಿಯೆಂಬ ಸರ್ಪವನ್ನು (ಹಗ್ಗದಂತೆ) ವೇದಾಂತವೆಂಬ ಮಂದರ ಪರ್ವತಕ್ಕೆ (ಕಡಗೋಲಿನಂತೆ) ಸುತ್ತುಹಾಕಿ, ಪೂರ್ವಪಕ್ಷವಚನಗಳೆಂಬ ದೈತ್ಯರೂ ಸಿದ್ಧಾಂತವಚನಗಳೆಂಬ ದೇವತೆಗಳೂ ಸೇರಿ, ಮಥನಮಾಡಲು, ಸ್ವಕೀಯರಿಗೇ ಅಮೃತವನ್ನು ಕೊಡುವ, ಜ್ಞಾನಾನಂದಾದಿ ಕಲ್ಯಾಣಗುಣಗಳೆಂಬ ಮಣಿಗಳಿಂದ ಶೋಭಿಸುವ ಶ್ರೀ ಕೃಷ್ಣನೆಂಬ ಕ್ಷೀರಸಮುದ್ರವು ನಮ್ಮನ್ನು ಸಂರಕ್ಷಿಸಲಿ! ॥೧॥

ಪೂರ್ವದಲ್ಲಿ ದೇವದಾನವರು ಸೇರಿ, ಮಂದರ ಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯೆಂಬ ಸರ್ಪವನ್ನು ಹಗ್ಗವನ್ನಾಗಿಯೂ ಮಾಡಿ, ಕ್ಷೀರಸಮುದ್ರವನ್ನು ಕಡೆಯಲು, ಬೆಣ್ಣೆಯಂತೆ ಅನೇಕ ಸಾರಪದಾರ್ಥಗಳು ಹುಟ್ಟಿ,

ಕೊನೆಗೆ ಮುಖ್ಯ ಉದ್ದೇಶ್ಯವಾದ ಅಮೃತವೂ ಹುಟ್ಟಿತು. ಅದನ್ನು ಶ್ರೀಹರಿಯು ಪಾತ್ರರಾದ ದೇವತೆಗಳಿಗೇ ಪಾನ ಮಾಡಿಸಿದನು. ಅದರಂತೆಯೇ ಪಾತ್ರರಾದ ಭೂಸುರರಾದ ನಮಗೆ, ಅನಂತಗುಣಗಳಿಗೆ ಆಗರನಾಗಿ ಕ್ಷೀರಾಂಬುಧಿಯಂತಿರುವ ಶ್ರೀ ಹರಿಯು, ಪೂರ್ವಪಕ್ಷಸಿದ್ಧಾಂತಗಳನ್ನೊಳಗೊಂಡ ಬ್ರಹ್ಮಸೂತ್ರಗಳ ವ್ಯಾಖ್ಯಾನಗಳಾದ ಶ್ರೀಮದಾನಂದತೀರ್ಥರ ಸಚ್ಛಾಸ್ತ್ರದ ವಿಚಾರವನ್ನು ಕೈಗೂಡಿಸಿ, ಭಗವದಪರೋಕ್ಷಜ್ಞಾನದೊಂದಿಗೆ ಮೋಕ್ಷವನ್ನು ನಮಗೆ ಅನುಗ್ರಹಿಸಲಿ! ಹೀಗೆ ತಾತ್ಪರ್ಯವು.

ಈ ಶ್ಲೋಕದಲ್ಲಿ ಶ್ರೀ ಕೃಷ್ಣಪರಮಾತ್ಮನಿಗೂ ಕ್ಷೀರಸಮುದ್ರಕ್ಕೂ, ದೇವದಾನವರಿಗೂ ಪೂರ್ವಪಕ್ಷಸಿದ್ಧಾಂತವಚನಗಳಿಗೂ, ವಾಸುಕಿಯೆಂಬ ಸರ್ಪಕ್ಕೂ ಬ್ರಹ್ಮಸೂತ್ರಗಳಿಗೂ, ಮಂದರ ಪರ್ವತಕ್ಕೂ ವೇದಾಂತಕ್ಕೂ ಹಾಗು ಅಮೃತಕ್ಕೂ ಮೋಕ್ಷಕ್ಕೂ, ರೂಪ್ಯರೂಪಕಭಾವವು ವರ್ಣಿತವಾಗಿದೆ.

ದೇವತಾವಾಚಕವೂ ಮಂಗಳಾರ್ಥಕವೂ ವಕ್ತೃಶ್ರೋತೃಗಳಿಗೆ ಪರಮ ಮಂಗಳಕಾರಕವೂ ಆಗಿರುವುದರಿಂದ, ಆದಿಯಲ್ಲಿ ಶ್ರೀಕಾರವನ್ನೇ ಪ್ರಯೋಗಿಸಿರುತ್ತಾರೆ.

ತಮ್ಮ ಪ್ರಬಂಧವು ಶಾರ್ದೂಲದಂತೆ ಅಪ್ರತಿಹತವಾಗಿ ಸಾಗುವುದೆಂದು ಸೂಚಿಸಲು ಶಾರ್ದೂಲವಿಕ್ರೀಡಿತವೃತ್ತವನ್ನೇ ಆದಿಯಲ್ಲಿ ಉಪಯೋಗಿಸಿ (ಬಳಸಿ) ಮುಂದೆ ಅನೇಕ ವೃತ್ತಗಳಿಂದ ಶ್ರೀ ರುಕ್ಮಿಣೀಶನ ವಿಜಯವನ್ನು ವರ್ಣಿಸುವರು.

ಈ ಶ್ಲೋಕದಲ್ಲಿ ಶ್ಲೇಷವಚನಗಳಿಂದ ಕೂಡಿದ ರೂಪಕಾಲಂಕಾರವು ಇರುತ್ತದೆ. ॥೧॥

ಅತ್ಯಂತ ಭಕ್ತಿಪರವಶವಾಗಿ ಶ್ರೀ ವಾದಿರಾಜಶ್ರೀಚರಣರು ತಮ್ಮ ಉಪಾಸ್ಯನಾದ ಶ್ರೀಹಯವದನನ ಮೂರ್ತಿಯನ್ನು ಭಾವತರಂಗಗಳೊಡನೆ ಭಜಿಸುತ್ತಾರೆ—

ಸಚ್ಛಾಸ್ತ್ರೋದಿತವರ್ತ್ಮನಾ ಪದಮಿದಂ ಧ್ಯಾಯನ್ ಮದಂಕಾಂಕಿತೋ
ಮನ್ಮಂತ್ರಂ ಜಪ ಶಾಸ್ತ್ರಸಂಪದಮಹೋ ದಾಸ್ಯಾಮಿ ಭಾಗ್ಯೈಃ ಸಹ ॥
ತತ್ತತ್ತ್ವಾನ್ಯಪಿ ಬೋಧಯಾಮಿ ತದನು ಪ್ರಾಪ್ಯೋ ಮದಂಘ್ರಿರ್ಭವೇ-
ದಿತ್ಯಾಘೋಷಯತೀವ ಯಃ ಕರಚಯೈಸ್ತಂ ವಾದಿವಕ್ತ್ರಂ ಭಜೇ ॥ ೨ ॥

ಸಚ್ಛಾಸ್ತ್ರೋಕ್ತಮಾರ್ಗದಿಂದ ಈ ನನ್ನ ಪಾದಗಳನ್ನು ಭಜಿಸುತ್ತ, ನನ್ನ ಚಿಹ್ನಗಳಾದ ಶಂಖ-ಚಕ್ರಗಳನ್ನು ಧರಿಸುತ್ತ, ನನ್ನ ಮಂತ್ರಗಳನ್ನೇ ಜಪಿಸಿರಿ. ನಾನು ಐಹಿಕಸಂಪತ್ತಿನೊಂದಿಗೆ ಶಾಸ್ತ್ರಸಂಪತ್ತನ್ನೂ ಕೊಟ್ಟು, ನನ್ನ ತತ್ತ್ವವನ್ನು ಅರುಹಿ, ನನ್ನ ಪಾದಾರವಿಂದಪ್ರಾಪ್ತಿರೂಪವಾದ ಮೋಕ್ಷವನ್ನೇ ಕೊಡುತ್ತೇನೆ;" ಎಂದು ಉದ್ಘೋಷಿಸುತ್ತಾನೋ ಎಂಬಂತೆ. ಚತುರ್ಭುಜಗಳಲ್ಲಿ, ಜ್ಞಾನ, ಪುಸ್ತಕ,

ಶಂಖ, ಅಕ್ಷಮಾಲೆಗಳನ್ನು ಧರಿಸಿ, ಯೋಗಪಟ್ಟಿಕಾಸನದಿಂದ ಅಲಂಕೃತನಾದ ಶ್ರೀಹಯವದನನ ಮೂರ್ತಿಯನ್ನು ಭಜಿಸುತ್ತೇನೆ.

ಶ್ರೀಹಯವದನನ ಮೂರ್ತಿಯು ಯೋಗಾಸನದಿಂದ ಒಪ್ಪುತ್ತ, ಎರಡು ಕೆಳಹಸ್ತಗಳ ಕನಿಷ್ಠ ಅನಾಮಿಕಾ ಬೆರಳುಗಳನ್ನು ಅಧೋಮುಖವಾಗಿ ಮಾಡಿ, ಒಂದು ಹಸ್ತದ ತರ್ಜನಿ ಅಂಗುಷ್ಠ ಬೆರಳುಗಳಿಂದ ಜ್ಞಾನ ಮುದ್ರೆಯನ್ನು ತೋರುತ್ತ ಎಡ ಮಂಡೆಯ ಮೇಲೂ, ಮತ್ತೊಂದು ಹಸ್ತದ ಮಧ್ಯಮ ತರ್ಜನಿ ಅಂಗುಷ್ಠಗಳಿಂದ ಪುಸ್ತಕವನ್ನು ಹಿಡಿದು ಬಲಮಂಡೆಯ ಮೇಲೆಯೂ, ಹಾಗು ಮೇಲಿನ ಎರಡು ಹಸ್ತಗಳಲ್ಲಿ ಶಂಖ ಅಕ್ಷಮಾಲೆಗಳನ್ನು ಧರಿಸಿರುತ್ತದೆ. ಇದನ್ನು ಉತ್ಪ್ರೇಕ್ಷಾಲಂಕಾರದಿಂದ ವರ್ಣಿಸುತ್ತಾರೆ.

ಕೆಳಗಿನ ಎರಡು ಕೈಗಳಲ್ಲಿರುವ ಅಧೋಮುಖವಾದ ಕಿರಿಬೆರಳು ಅನಾಮಿಕೆಗಳಿಂದ, "ನನ್ನ ಪಾದಗಳನ್ನು ಭಜಿಸಿರಿ" ಎಂಬ ಅರ್ಥವನ್ನು ಶಂಖಹಸ್ತದಿಂದ, "ನನ್ನ ಚಿನ್ಹಗಳಾದ ಶಂಖ-ಚಕ್ರ-ಗದಾ-ಪದ್ಮಾದಿಗಳನ್ನು ಧರಿಸಿರಿ" ಎಂಬ ಅರ್ಥವನ್ನೂ, ಅಕ್ಷಮಾಲಾ ಹಸ್ತದಿಂದ, "ನನ್ನ ಮಂತ್ರವನ್ನೆ ಜಪಿಸಿರಿ" ಎಂಬ ಅರ್ಥವನ್ನೂ, ಹಾಗು ಜ್ಞಾನಮುದ್ರಾ ಪುಸ್ತಕ ಹಸ್ತದಿಂದ "ನಿಮಗೆ ಜ್ಞಾನವನ್ನೇ ಕೊಡುವೆ"ನೆಂಬ ಅರ್ಥವನ್ನೂ, "ಇದೇ ನನ್ನ ಅವತಾರದ ಉದ್ಘೋಷಣೆ"ಯೆಂಬ ಅರ್ಥವನ್ನು ಪುನಃ ಶಂಹಖಸ್ತದಿಂದಲೂ ತಿಳಿಸುವುದಕ್ಕಾಗಿಯೋ ಏನೋ ಎಂಬಂತೆ, ಚತುರ್ಭುಜಗಳಿಂದ ಒಪ್ಪುವ ಶ್ರೀ ಹಯವದನನನ್ನು ಭಜಿಸುತ್ತೇನೆಂಬುದು ತಾತ್ಪರ್ಯವು.

ಈ ಶ್ಲೋಕದಲ್ಲಿ ಕ್ರಿಯಾಸಂಗತ ಇವ ಕಾರದಿಂದ ("ಅಧೋಪಯತೀವ" ಎಂಬುದರಿಂದ) ಉತ್ಪ್ರೇಕ್ಷಾಲಂಕಾರವಷ್ಟೇ ತೋರುವುದಲ್ಲ. "ಇದೇ ಹರಿಯ ಹಾರ್ದವು" ಎಂಬ ಅರ್ಥವೂ ಧ್ವನಿತವಾಗುತ್ತದೆ.

ಈ ಶ್ಲೋಕದಲ್ಲಿ ಫಲೋತ್ಪ್ರೇಕ್ಷಾಲಂಕಾರವೂ ಶಾರ್ದೂಲವಿಕ್ರೀಡಿತವೃತ್ತವೂ ಇರುತ್ತದೆ. ॥ ೨ ॥

ವಿಘ್ನಬಾಹುಲ್ಯಶಂಕೆಯಿಂದ, ಗ್ರಂಥಸಮಾಪ್ತಿಯನ್ನು ಆಶಂಸಿಸುತ್ತಾರೆ.

ಶ್ರಯೇ ಹಯಮುಖಂ ಶ್ರಾವ್ಯಕಾವ್ಯಮಾರ್ಗಸಮಾಪ್ತಯೇ ॥
ಸರಾಗಯೋಗಿಪೂಗೋಕ್ತಸ್ತೋತ್ರತೋತ್ರವಶಂ ಮುಹುಃ ॥ ೩ ॥

ಅನಭ್ಯಸ್ತವಾದ ಒಂದು ಮಾರ್ಗವನ್ನು ಹಿಡಿಯುವ ಮನುಷ್ಯನು ಸ್ವಸ್ಥಾನವನ್ನು ಮುಟ್ಟಲು, ಚಲುಕೋಲಿಗೆ ವಶವಾದ ಮಾರ್ಗಪರಿಚಯವುಳ್ಳ ಕುದುರೆಯನ್ನೂ, ಮಧ್ಯದಲ್ಲಿ ಮಾರ್ಗಶ್ರಮದಿಂದುಂಟಾದ ಆಲಸ್ಯ ಹಾಗು ಅಂಧಕಾರಗಳ ನಿವಾರಣೆಗಾಗಿ ದೀಪವನ್ನೂ ಹೇಗೆ ಆಶ್ರಯಿಸುತ್ತಾನೋ ಹಾಗೆ

ಶ್ರಾನ್ಯವಾದ ಶ್ರೀ ರುಕ್ಮಿಣೀಶ ವಿಜಯವೆಂಬ ಕಾವ್ಯ ಮಾರ್ಗದ ಸಮಾಪ್ತಿಯೆಂಬ ಸ್ಥಾನವನ್ನು ಮುಟ್ಟಲು, ಒಳ್ಳೆಯ ಭಕ್ತಿಯುಳ್ಳ ತಪಸ್ವಿಗಳಾದ ಯೋಗಿಸಮುದಾಯದ ಸ್ತೋತ್ರವೆಂಬ ಬಾರ್ಕೋಲಿನ ವಶಸಂತಿರುವ ತೇಜೋರೂಪಸಾದ ಶ್ರೀಹಯವದನನೆಂಬ ಕುದುರೆಯನ್ನು ಆಶ್ರಯಿಸುತ್ತೇನೆ. ||೩||

ಸಕಲ ವಾಙ್ಮನೋನಿಯಾಮಿಕೆಯೂ ಕಾವ್ಯನಾಯಿಕೆಯೂ ಆದ ಶ್ರೀ ರುಕ್ಮಿಣೀದೇವಿಯನ್ನು ಸ್ವಭಾವೋಕ್ತ್ಯಲಂಕಾರಗರ್ಭಿತವಾದ ಪದ್ಯದಿಂದ ನಮಸ್ಕರಿಸುತ್ತಾರೆ.

ಶಿಂಜನ್ನೂಪುರಶೋಭಿಪಾದಯುಗಲಾಂ ಮಂದಸ್ಮಿತೋದ್ಯನ್ಮುಖೀಂ
ಕಂಜಾಕ್ಷೀಂ ಕುಜಭಾರಭೀರುವಿಲಸನ್ಮಧ್ಯಾಂ ಕ್ವಣತ್ಕಂಕಣಾಮ್ ||
ಶಂಭ್ವಾದ್ಯೈಃ ಪರಿಸೇವಿತಾಂ ಸುವಸನಾಂ ಜಾಂಬೂನದಾಲಂಕೃತಾಂ
ಅಂಬಾಂ ತಾಂ ಪ್ರಣತೋಽಸ್ಮಿ ಕೃಷ್ಣರಮಣೀಂ ಲಂಬಾಲಕಾಂ ರುಕ್ಮಿಣೀಮ್
||೪||

ಝೇಂಕರಿಸುವ ಪೈಜಣಗಳಿಂದ ಶೋಭಿಸುವ ಕಮಲಸದೃಶಪಾದದ್ವಂದ್ವದಿಂದಲೂ, ಮಂದಹಾಸದಿಂದ ಶೋಭಿಸುವ ಮುಖದಿಂದಲೂ, ಕಂಜಕಮಲ ದಲದಂತೆ ವಿಕಸಿತನಯನಗಳಿಂದಲೂ, ಸ್ತನಭಾರಕ್ಕೆ ಬೆದರಿದಂತೆ ಕೊರಗಿ ಕೃಶವಾದ ತನುಮಧ್ಯತೆಯಿಂದಲೂ ಧ್ವನಿಗರಿಸುವ ಕಂಕಣಗಳಿಂದಲೂ ಶುಭ್ರ ವಸನದಿಂದಲೂ ಬಂಗಾರದ ನಿಲುವಾಭರಣಗಳಿಂದಲೂ ಜೋಲುತ್ತಿರುವ ಉಂಗುರುಂಗರ ಸುಳಿಗೂದಲುಗಳಿಂದಲೂ ಮೆರೆಯುತ್ತಿರುವ, ಶ್ರೀ ಕೃಷ್ಣನಿಗೆ ಒಪ್ಪುವ ರಮಣಿಯೂ ಬ್ರಹ್ಮಾದಿಗಳಿಂದ ಪರಿಸೇವಿತಳೂ ಹಾಗೂ ಜಗಜ್ಜನನಿಯೂ ಆದ ಶ್ರೀ ರುಕ್ಮಿಣೀದೇವಿಯನ್ನು ನಮಸ್ಕರಿಸುತ್ತೇನೆ.

ಜಗದ್ಗುರುಗಳೂ ಪರಮಹಂಸರೂಪರೂ ಆದ ಶ್ರೀಮದಾಚಾರ್ಯರನ್ನು, ತನ್ನ ಹೃದಯದಲ್ಲಿ ಬಂದು ವಾಸಮಾಡಲು ರೂಪಕಾಲಂಕಾರದಿಂದ ಪ್ರಾರ್ಥಿಸುತ್ತಾರೆ.

ಸತ್ಸಂಘಮಾನಸಸರೋವರಮಧ್ಯವರ್ತೀ
ಕೃಷ್ಣಾಂಘ್ರಿಚಾರುಕಮಲಾರ್ಪಿತಚಿತ್ತವೃತ್ತಿಃ ||
ಶಾಸ್ತ್ರಾತಿಮಂಜುಪದರಂಜಿತರಮ್ಯಸಂಸ-
ದಾಸ್ಮಾಕಹೃತ್ಸರಸಿಜೇಽಸ್ತು ಸ ಮಧ್ವಹಂಸಃ ||೫||

ಸಜ್ಜನ ಸಮುದಾಯವೆಂಬ ಮಾನಸ ಸರೋವರದ ಮಧ್ಯದಲ್ಲಿ ವಾಸಿಸುವ, ಯಾವಾಗಲೂ ಶ್ರೀಕೃಷ್ಣನ ಸುಂದರ ಪಾದಗಳೆಂಬ ಕಮಲಗಳಲ್ಲಿಯೇ ಆಸಕ್ತ ಚಿತ್ತವೃತ್ತಿಯುಳ್ಳ, ತನ್ನ ಶಾಸ್ತ್ರೀಯವಾದ ಅತಿ ಮನೋಹಾರಕ ಪದಗಳಿಂದ ಸಜ್ಜನ ಸಭೆಯನ್ನು ರಂಜನಗೊಳಿಸುವ, ಶ್ರೀಮದಾನಂದ ತೀರ್ಥರೆಂಬ ಪರಮ

ಹಂಸ ಪಕ್ಷಿಯು ನನ್ನ ಮನಸ್ಸೆಂಬ ಸರೋಜದಲ್ಲಿ ಬಂದು ನೆಲಿಸಲಿ. (ನಮ್ಮ ಧ್ಯಾನಗೋಚರನಾಗಲೆಂದು ಭಾವ) ॥ ೫ ॥

ಸರಸ್ವತೀದೇವಿಯರನ್ನು, ತಮ್ಮ ಶ್ರೇಯಸ್ಸಿಗಾಗಿ ಆಶೀರಲಂಕಾರದಿಂದ ಪ್ರಾರ್ಥಿಸುತ್ತಾರೆ.

ತಾಟಂಕದ್ವಯಶೋಭಿಗಂಡಯುಗಲಂ ಭ್ರಾಜದ್ದಯಾವೀಕ್ಷಣಂ
ಪೂರ್ಣೇಂದುದ್ಯುತಿವಿದ್ರುಮಾಧರರುಚಾ ವ್ಯಾಮಿಶ್ರಮಂದಸ್ಮಿತಮ್ ॥
ಈಷತ್ಕುಂಚಿತಕುಂತಲಂ ಸತಿಲಕಂ ನಾಸೋಲ್ಲಸನ್ಮೌಕ್ತಿಕಂ
ಭೂಯಾತ್ ಕೂರ್ಮಸದೃಕ್ಷಗಂಡಯುಗಲಂ ವಾಣೀಮುಖಂ ಶ್ರೇಯಸೇ
॥ ೬ ॥

ಓಲೆಗಳಂತೆ ಶೋಭಿಸುವ ಕರ್ಣಾಭರಣಯುಕ್ತವಾದ ಕರ್ಣದ್ವಂದ್ವ ದಿಂದಲೂ, ದಯಾಪೂರ್ಣವಾದ ಕಟಾಕ್ಷವೀಕ್ಷಣದಿಂದಲೂ ಪೂರ್ಣ ಚಂದ್ರನ ಕಾಂತಿಯಂತಿರುವ ಕಾಂತಿಯಿಂದಲೂ ಹವಳದಂತಿರುವ ಕೆಂದುಟಿಯ ಕಾಂತಿ ಯಿಂದ ಮಿಶ್ರಿತವಾದ (ಶೋಭಿಸುವ) ಮಂದಹಾಸದಿಂದಲೂ ಉಂಗುರುಂಗುರದ ನೀಲಕೇಶಗಳಿಂದಲೂ, ತಿಲಕದಿಂದಲೂ, ಮುತ್ತಿನ ಮುಖರದಿಂದೊಪ್ಪುವ ನಾಸಿ ಕೆಯಿಂದಲೂ, ಕೂರ್ಮದ ಬೆನ್ನಿನಂತೆ ತುಂಬಿಕೊಂಡ ಕೆನ್ನೆಗಳಿಂದಲೂ, ಸುಂದರ ತರವಾದ ಶ್ರೀ ಸರಸ್ವತೀದೇವಿಯ ಮುಖವು ನಮ್ಮೆಲ್ಲರ ಶ್ರೇಯಸ್ಸಿಗೆ ಕಾರ ಣವಾಗಲಿ ! ॥ ೫ ॥

ತಮ್ಮಿಂದ ಮಾಡಲಪೇಕ್ಷಿತವಾದುದನ್ನು ಪರ್ಯಾಯೋಕ್ತ್ಯಲಂಕಾರಗರ್ಭಿತ ಶ್ಲೋಕದಿಂದ ಪ್ರತಿಜ್ಞಾರೂಪವಾಗಿ ಹೇಳುತ್ತಾರೆ.

ಶ್ರೀನಾಥಕೀರ್ತ್ಯಂಬುಜಸೇವ್ಯಗಂಧಂ
ಪ್ರಾಣಃ ಸ ಸಂಗೃಹ್ಯ ವಿಹರ್ತುಮೀಷ್ಟೇ ॥
ಸೋಹಂ ತದೀಯಾಗಮವಿಸ್ತೃತಂ ತದ್
ವಾಣೀಮುಖಂ ವಾಸಯಿತುಂ ವೃಣೋಮಿ ॥ ೭ ॥

ಶ್ರೀನಾಥನಾದ ಶ್ರೀಹರಿಯ ಕೀರ್ತಿಯೆಂಬ ಕಮಲದ ಸಂಸೇವ್ಯವಾದ ಗಂಧವನ್ನು (ಶ್ರೀಹರಿ ಮಹಿಮೆಯ ಏಕದೇಶವನ್ನು) ಸಂಗ್ರಹಿಸಿ ವಿಹರಿಸಲು (ವರ್ಣಿಸಲು) ಆ ಉತ್ತಮಾಧಿಕಾರಿಯೆಂದು ಪ್ರಸಿದ್ಧನಾದ ಶ್ರೀ ಪ್ರಾಣೇಶನೇ ಸಮರ್ಥನು. ಆದರೆ ಅಷ್ಟು ಉತ್ತಮಾಧಿಕಾರಿಯಲ್ಲದ ನಾನು ಆ ಪ್ರಾಣೇಶನ ಅವತಾರರಾದ ಶ್ರೀ ಮಧ್ವಾನಂದತೀರ್ಥರ ಸದಾಗಮದಿಂದ ವಿಸ್ತರಿಸಲ್ಪಟ್ಟ ಆ ಶ್ರೀನಾಥನ ಕೀರ್ತಿಕಮಲದ ಗಂಧ(ಲೇಶ)ವನ್ನು ನನ್ನ ವಾಕ್ಶುದ್ಧಿಗಾಗಿ ವರ್ಣಿಸುತ್ತೇನೆ.

ಸುಗಂಧಯುಕ್ತವಾದ ಗಾಳಿಗೆ ಅಭಿಮುಖನಾಗದವನಿಗೆ ಸುಗಂಧವು ದುರ್ಲಭವಾಗುವಂತೆ, ಶ್ರೀಮದಾನಂದ ತೀರ್ಥರ ಮತವನ್ನವಲಂಬಿಸದವನಿಗೆ ಭಗವನ್ ಮಹಿಮೆಯ ಜ್ಞಾನವು ದುರ್ಲಭವು. ಆದರೆ ಶ್ರೀಮದಾನಂದ ತೀರ್ಥರ ಮತಾವಲಂಬಿಯಾದ ನನಗೆ ಅದು ಸುಲಭವೇ! ಈ ಕಾರಣದಿಂದ ಅವರ ಮಾರ್ಗವನ್ನು ನಾನು ಅವಲಂಬಿಸುತ್ತೇನೆಯೆಂಬುದು ತಾತ್ಪರ್ಯವು ॥ ೭ ॥

ಈ ಪ್ರಬಂಧ ರಚನೆಯಲ್ಲಿ ತಮಗೆ ಸಾಮರ್ಥ್ಯವಿದೆ–ವಿಘ್ನಗಳಿಲ್ಲವೆಂಬುದನ್ನು ಕಾವ್ಯಲಿಂಗಾಲಂಕಾರದಿಂದ ತಿಳಿಸುತ್ತಾರೆ.

ಹಯಾಸ್ಯನಾಸಾಪುಟಜಾತವಾತ–
ನಿಘಾತಧೂತಾಘಪಲಾಲಜಾತಃ ॥
ಮುನೀಶವಾಗೀಶಸುತಃ ಸುರಮ್ಯಾಂ
ಹರೇಃ ಕಥಾಂ ಶಂಸತಿ ವಾದಿರಾಜಃ ॥ ೮ ॥

ಶ್ರೀ ಹಯವದನ ಮೂರ್ತಿಯ ನಾಸಾ ಪುಟದಿಂದ ಹೊರಹೊರಟ ಗಾಳಿಯ ಹೊಡೆತದಿಂದ ನಷ್ಟವಾದ (ಹಾರಿ ಹೋದ) ಪಾಪಗಳೆಂಬ ಹೊಟ್ಟಿನ ರಾಶಿಯುಳ್ಳ ಹಾಗು ಮುನಿಶ್ರೇಷ್ಠರಾದ ಶ್ರೀ ವಾಗೀಶತೀರ್ಥರ ಶಿಷ್ಯನಾದ ವಾದಿರಾಜನೆಂಬ ಕವಿಯು ಶ್ರೀಹರಿಯ ಸುರಮ್ಯವಾದ ಚರಿತ್ರೆಯನ್ನು ಕಾವ್ಯರೂಪದಿಂದ ವರ್ಣಿಸುತ್ತಾನೆ.

ಈ ಶ್ಲೋಕದಲ್ಲಿ “ ಶಂಸಾಮಿ ” (ಹೇಳುತ್ತೇನೆ) ಎಂಬ ಉತ್ತಮ ಪುರುಷದ ಪ್ರಯೋಗವನ್ನಿಡದೆ, “ ಶಂಸತಿ ” (ಹೇಳುತ್ತಾನೆ) ಎಂಬ ಪ್ರಥಮಪುರುಷದ ಪ್ರಯೋಗವನ್ನು ಮಾಡಿರುವುದರಿಂದ, “ ಈ ಕಾವ್ಯಕ್ಕೆ ಮುಖ್ಯ ಕರ್ತನು ಶ್ರೀಹರಿಯೇ; ಹಾಗು ಸಕಲರ ಸಕಲ ಕಾರ್ಯಗಳು ಅವನ ಅಧೀನವಾಗಿಯೇ ಇರುತ್ತವೆ”ಯೆಂಬ ಪ್ರಮೇಯವನ್ನು ಅಭಿವ್ಯಕ್ತಗೊಳಿಸಿರುತ್ತಾರೆ ॥ ೮ ॥

ಲೋಕ ಶಿಕ್ಷೆಗಾಗಿ ಸ್ವಾಹಂಕಾರವನ್ನು ಅಲ್ಲಗಳೆಯುತ್ತ, ತಮ್ಮಿಂದ ರಚಿಸಲ್ಪಡಬೇಕಾದ ಕಾವ್ಯದ ಶ್ರೇಷ್ಠತೆಯನ್ನು ನಿದರ್ಶನಾಲಂಕಾರದಿಂದ ನಿರೂಪಿಸುತ್ತಾರೆ.

ಅಪಂಡಿತೇನಾಪಿ ಮಯಾರ್ಜಿತೇಯಂ
ಮುಕುಂದಲೀಲಾ ಕವಿಕಂಠಮಾಲಾ ॥
ಅಕೌಶಲೇನ ಗ್ರಥಿತೇತಿ ಜಾತಿ–
ಪ್ರಸೂನಮಾಲಾಂ ಕಿಮು ಸಂತ್ಯಜಂತಿ ॥ ೯ ॥

ಪಂಡಿತನಲ್ಲದಿದ್ದರೂ ನನ್ನಿಂದ ಕಾವ್ಯರೂಪದಿಂದ ವರ್ಣಿಸಲ್ಪಟ್ಟಿರುವ ಮೋಕ್ಷಪ್ರದನಾದ ಶ್ರೀಹರಿಯ ಈ ಲೀಲೆಯು (ಅಂದರೆ ಅವನ ಲೀಲಾವರ್ಣನ ರೂಪವಾದ ಈ ನನ್ನ ಕಾವ್ಯವು) ಕವಿಗಳ ಕಂಠಗಳಿಗೆ ಮಾಲಾರೂಪವೇ

[illegible]

[illegible]

[illegible]
[illegible]
[illegible]
[illegible] ॥

[illegible]

[illegible]

[illegible]
[illegible]
[illegible]
[illegible] ॥

[illegible]

[illegible]
[illegible] ।
[illegible]
[illegible] ॥

ಆ ಭೂದೇವಿಯು ಸಹನಶೀಲಳು, ಹಾಗು ಕ್ಷಮಾಗುಣಯುಕ್ತಳಾಗಿದ್ದರೂ, ಮೋಕ್ಷದಾಯಕನಾದ ಪರಮಾತ್ಮನನ್ನು ದ್ವೇಷಿಸುವ ದೈತ್ಯರ ಭಾರದಿಂದ ಭಗ್ನ ಸರ್ವಾಂಗಳೂ ಅತ್ಯಂತ ಖಿನ್ನಳೂ ಆದಳು. ಅದು ವಿಹಿತವೇ! ಏಕೆಂದರೆ ಲೋಕದಲ್ಲಿ ಪತಿವ್ರತೆಯರಿಗೆ ಪತಿನಿಂದಕರಿಂದ ಬೇರೆಯಾದ ಭಾರವೆಂಬುದು ಎಲ್ಲಿದೆ? ಬೇರೆ ಭಾರವಾವುದೂ ಇರುವುದಿಲ್ಲ. ॥೧೨॥

ನಿಶಮ್ಯ ಗೋಬ್ರಾಹ್ಮಣಮುಖ್ಯಬಂಧುಂ
ಧ್ರುವಂ ಮುಕುಂದಂ ಶರಣಂ ವ್ರಜಂತೀ ॥
ಬಭೂವ ಗೋರೂಪಧರಾ ಧರಾ ಸಾ
ತಮಾರ್ತಭಾರಾಪಹರಂ ಚ ದೀನಾ ॥೧೩॥

"ಗೋಬ್ರಾಹ್ಮಣ ಮುಖ್ಯ ಬಂಧುವು ಹರಿಯೇ" ಎಂಬುದನ್ನರಿತೇ, ಮುಕುಂದ ನನ್ನು ಶರಣು ಹೊಂದುತ್ತಿರುವ ಭೂದೇವಿಯು, ಗೋರೂಪವನ್ನು ಧರಿಸಿ, ದೈನ್ಯ ವನ್ನು ತಾಳಿ, ಆರ್ತಭಾರಾಪಹಾರಿಯಾದ ಆ ಹರಿಯನ್ನು ಮೊರೆ ಹೊಕ್ಕಳು. ॥೧೩॥

ವಿರಿಂಚವೈರಿಂಚಿಮುಖಾಮರೇಶಾಃ
ಸ್ವಪಾರತಂತ್ರ್ಯಂ ಭುವಿ ದರ್ಶಯಂತಃ ॥
ಹರಿಂ ಧರಾಕಾರ್ಯಕೃತೇ ಗೃಣಂತಃ
ಪುರಾನ್ನಿರೀಯುರ್ಹೃದಿ ಸಂಸ್ಮರಂತಃ ॥೧೪॥

ಚತುರ್ಮುಖಬ್ರಹ್ಮ, ಶಂಭು, ಇವರೇ ಮುಂತಾದ ದೇವೇಶರು, "ಶ್ರೀ ಹರಿಯೇ ಸ್ವತಂತ್ರನು, ನಾವೆಲ್ಲರೂ ಅಸ್ವತಂತ್ರರು, ಅವನ ಅಧೀನರು"; ಎಂಬ ವಿಷಯವನ್ನು ಜಗತ್ತಿಗೆ ತೋರಿಸುತ್ತ, ಭೂದೇವಿಯ ಕಾರ್ಯಸಿದ್ಧಿಗಾಗಿ ಮುಖ ದಿಂದ ಹರಿಯನ್ನು ಸ್ತುತಿಸುತ್ತ ಹಾಗು ಹೃದಯದಲ್ಲಿ ಸಂಸ್ಮರಿಸುತ್ತ, ತಮ್ಮ ತಮ್ಮ ಸ್ಥಾನಗಳಿಂದ ಹೊರ ಹೊರಟರು. ॥೧೪॥

ಸುರಾವಲೀ ಸಾ ಶ್ರುತಿವರ್ಣ್ಯವೇಷಾ
ನಭಸ್ತಲೇ ನಷ್ಟತಮಿಸ್ರಜಾಲೇ॥
ಯಯೌ ಯತೀಂದ್ರೈರಪಿ ಯತ್ನಗಮ್ಯಾಂ
ಪಯೋಬ್ಧಿವೇಲಾಂ ಪತದೂರ್ಮಿಮಾಲಾಮ್ ॥೧೫॥

ಪ್ರಕಾಶದಿಂದ ಶುಭ್ರವಾದ (ಅಂಧಕಾರರಹಿತವಾದ) ಗಗನತಲದಲ್ಲಿ, ಶ್ರುತಿ ಗಳಿಂದ ವರ್ಣಿಸಲರ್ಹವಾದ ಆಕಾರವುಳ್ಳ ಆ ದೇವತಾವೃಂದವು, ಯತೀಂದ್ರ ರಿಂದಲೂ ಪ್ರಯತ್ನ ಪೂರ್ವಕ ಹೊಂದಲರ್ಹವಾದ, ಮೇಲೇರಿ ಬರುವ ಅಲೆಗಳ ಸಾಲುಗಳಿಂದ ಅಲಂಕೃತವಾದ, ಕ್ಷೀರ ಸಮುದ್ರದ ದಂಡೆಯನ್ನು ಕುರಿತು ಆಗ ಮಿಸಿತು. ॥೧೫॥

ಬ್ರಹ್ಮಾದಿ ದೇವತೆಗಳ ತಪೋವೈಶಿಷ್ಟ್ಯವನ್ನು ಏಳು ಶ್ಲೋಕಗಳಿಂದ ವರ್ಣಿಸುತ್ತಾರೆ.

ತತೋಽಬ್ಜಭೂಃ ಕ್ಷೀರಪಯೋಧಿತೀರೇ
ಸಮಾಧಿಮಾಸ್ಥಾಯ ಸುಸಂಯತಾಕ್ಷಃ ॥
ಸ್ಥಿರಾಸನಃ ಪ್ರಾಣಗಣಾಯಮ್ಯಮ್ಯ
ಪ್ರಚಕ್ರಮೇ ಪ್ರಾಂಜಲಿರಾತ್ಮದೀಕ್ಷಾಮ್ ॥ ೧೬ ॥

ಅನಂತರ, ಕಮಲ ಸಂಭೂತರಾದ ಚತುರ್ಮುಖ ಬ್ರಹ್ಮದೇವರು, ಕ್ಷೀರ ಸಮುದ್ರದ ತೀರದಲ್ಲಿ, ಸ್ಥಿರವಾದ ಆಸನದಲ್ಲಿ ಕುಳಿತು, ರೇಚಕ ಪೂರಕ ಕುಂಭಕಗಳಿಂದ ಪ್ರಾಣಗಳನ್ನು (ಶ್ವಾಸೋಚ್ಛ್ವಾಸಗಳನ್ನು) ನಿರೋಧಿಸಿ, ಇಂದ್ರಿಯಗಳನ್ನು ಚನ್ನಾಗಿ ನಿಯಮಿಸಿ, ಸಮಾಧಿಯನ್ನು ತಾಳಿ, (ಏಕಾಗ್ರ ಚಿತ್ತದಿಂದ) ಕೈಮುಗಿದು, ಪರಮಾತ್ಮನ ಪೂಜಾರೂಪವಾದ ತಪಸ್ಸನ್ನು ಪ್ರಾರಂಭಿಸಿದರು. ॥ ೧೬ ॥

ಯದಾ ಸ ಪದ್ಮಾಸನಸಂಸ್ಥಿತೋಽಲಂ
ಜಜಾಪ ವಿದ್ಯಾಮಿತರೈರವೇದ್ಯಾಮ್ ॥
ತದಾಪ್ರಭೃತ್ಯೇವ ಜಗತ್ಸು ನೂನಂ
ಬಭೂವ ಪದ್ಮಾಸನಶಬ್ದಿತೋಽಸೌ ॥ ೧೭ ॥

ಯಾವ ಕಾಲದಲ್ಲಿ ಚತುರ್ಮುಖನು ಪದ್ಮಾಸನಸ್ಥಿತನಾಗಿ ಇತರರಿಗೆ ಗೊತ್ತಾಗದಂತಹ ಪುರುಷಸೂಕ್ತ ಮಂತ್ರವನ್ನು ಚನ್ನಾಗಿ ಜಪಿಸಿದನೋ ಆ ಕಾಲವನ್ನಾರಂಭಿಸಿಯೇ (ಅಂದಿನಿಂದಲೇ) ಜಗತ್ತಿನಲ್ಲಿ "ಪದ್ಮಾಸನ"ವೆಂಬ ಶಬ್ದದಿಂದ ವಾಚ್ಯನಾದನು. ಇದು ನಿಜವು. ॥ ೧೭ ॥

ತದಾ ತದನ್ಯಾನ್ಯಪಹಾಯಹೇಯಾ-
ನ್ಯರಕ್ತಚಿತ್ತಃ ಸ ವಿರಿಂಚಿಪುತ್ರಃ
ಸ್ತುವನ್ ಗಿರೀಶೋಽಪಿ ಗಿರಾ ಮುರಾರಿ-
ಮನಂಗಜಿದ್‌ದಿಗ್ವಸನೋ ಬಭೂವ ॥ ೧೮ ॥

ಆಗ, ಆ ಬ್ರಹ್ಮಪುತ್ರನಾದ ಶಿವನು, ಶ್ರೀಹರಿವ್ಯತಿರಿಕ್ತವಾದುದೆಲ್ಲವನ್ನೂ ಹೇಯವೆಂದು ತ್ಯಜಿಸಿ, ತದೇಕಚಿತ್ತನಾಗಿ (ಅನ್ಯತ್ರ, ಕಾಮರಹಿತಾಂತಃಕರಣನಾಗಿ) ವಾಕ್ಯಗಳಿಂದ ಹರಿಯನ್ನು ಸ್ತುತಿಸುತ್ತ ಕಾಮಹರನೂ ದಿಗಂಬರನೂ ಗಿರೀಶನೂ ಆದನು. ಈ ಉಪನಾಮಗಳು ಅವನಿಗೆ ಆಗಲೇ ಬಂದವೆಂಬುದು ತಾತ್ಪರ್ಯ ॥೧೮॥

ತನ್ನೈವ ಶೇಷೋಽಜನಿ ವಾಯುಭಕ್ಷಃ
ಸಹಸ್ರನೇತ್ರೋಽಪಿ ತನ್ನೈವ ನೂನಂ ॥
ಶತಕ್ರತುಃ ಸುಪ್ತಿವಿದೂರಭಾವಾ
ಬಭೂವುರಸ್ವಪ್ನಪದಾಶ್ಚ ದೇವಾಃ ॥ ೧೯ ॥

ಅನಂತನಾಮಕ ಶೇಷನೂ, ಯಾವಾಗ ಹರಿಯ ಅನುಗ್ರಹವನ್ನಪೇಕ್ಷಿಸಿ ಬೇರೆ ಆಹಾರವನ್ನೆಲ್ಲ ತ್ಯಜಿಸಿ ಗಾಳಿಯನ್ನೇ ತಿನ್ನುತ್ತ ತಪಸ್ಸನ್ನು ಆಚರಿಸಿದನೋ ಅಂದಿನಿಂದಲೇ (ಆಗಲೇ) "ವಾಯುಭಕ್ಷ" (ಪವನಾಶನ) ಎಂಬ ಉಪನಾಮವುಳ್ಳವನಾದನು. ಹರಿಯನ್ನು ಸ್ತುತಿಸಿ ನೂರು ಯಜ್ಞಗಳ ಫಲಗಳನ್ನು ಸಹಸ್ರನೇತ್ರನಾದ ಇಂದ್ರನು ಯಾವಾಗ ಪಡೆದನೋ ಆವಾಗ್ಗೆನೇ ಅವನು "ಶತಕ್ರತು" ಪದವಿಯನ್ನು ಹೊಂದಿದನು. ದೇವತೆಗಳೂ ಶ್ರೀ ಹರಿಪೂಜೆಯಲ್ಲಿ ನಿದ್ರೆ, ಆಲಸ್ಯ, ಜಾಡ್ಯಗಳಿಲ್ಲದೆ ಪರಮ ಜಾಗರೂಕರಾದುದರಿಂದ, "ಅಸ್ವಪ್ನ" ಎಂಬ ಉಪನಾಮವನ್ನು ಹೊಂದಿದರು. ॥ ೧೯ ॥

ರಸಾ ಪಿಪಾಸೋಗ್ರಭರಾಶನಾಯಾ
ವಿಷಹ್ಯ ವಿಷ್ಣುಂ ಮನಸಾಽಚಲೇನ ॥
ತದಾನುಧಾವಂತ್ಯಚಲೇತಿ ಸರ್ವಂ-
ಸಹೇತಿ ನೂನಂ ಜಗದೇ ಜಗತ್ಯಾಮ್ ॥ ೨೦ ॥

ಆಗ ಭೂದೇವಿಯು, ಬಹು ಹಸಿವೆ, ನೀರಡಿಕೆ, ಹಾಗು ಬಹು ಭಾರ, ಇವುಗಳನ್ನು ಸಹಿಸಿ ನಿಶ್ಚಂಚಲ (ಸ್ಥಿರ) ಮನಸ್ಸಿನಿಂದ ವಿಷ್ಣುವಿನನ್ನು ಸ್ಮರಿಸಿದವಳಾಗಿ, ಜಗತ್ತಿನಲ್ಲಿ "ಸರ್ವಂಸಹಾ, ಅಚಲಾ" ಎಂಬ ಉಪನಾಮಗಳಿಂದ ಕರೆಯಲ್ಪಟ್ಟಳು. ॥ ೨೦ ॥

ಸಹಸ್ರಕಾರ್ಯೇಷು ಭವಾನ್ ಸಮರ್ಥಃ
ಸಹಸ್ರನೇತ್ರಾನನಪಾಣಿಪಾದಃ ॥
ಇತೀವ ವಿಜ್ಞಾಪಯಿತುಂ ವಿರಿಂಚಃ
ಸ್ತುತಿಂ ಸ ಪುಂಸೂಕ್ತಗತಾಂ ತತಾನ ॥ ೨೧ ॥

ಬ್ರಹ್ಮದೇವನು, "ಸಹಸ್ರಾರು ಕರಚರಣಗಳು ಕಣ್ಣು-ಮುಖಗಳುಳ್ಳ ನೀನೇ ಸಹಸ್ರಾರು ಕಾರ್ಯಗಳಲ್ಲಿ ಸಮರ್ಥನು" ಎಂದು ಸೂಚಿಸಲೋ ಏನೋ ಎಂಬಂತೆ, ಪುರುಷಸೂಕ್ತೋಕ್ತವಾದ ಸ್ತೋತ್ರವನ್ನು ಮಾಡಿದನು. ॥ ೨೧ ॥

ತಚ್ಚಿಂತೇಽಂಕುರಿತಃ ಸುಭಕ್ತಿಲತಯಾ ಶ್ಲಿಷ್ಟಃ ಪ್ರಮೋದಾಶ್ರುಭಿಃ
ಸಿಕ್ತಃ ಸತ್ಪುಲಕಾಲಿಮೂಲವಿತತಃ ಕಾಯಪ್ರಭಾಪಲ್ಲವಃ ॥
ಈಷನ್ಮೀಲಿತನೇತ್ರಕುಡ್ಮಲಯುತಃ ಶಾಖಾಸಹಸ್ರೋರ್ಜಿತಃ
ಪ್ರಾಪ್ತಃ ಶ್ರೀರಮಣದ್ವಿಜೇನ ಫಲಿತಸ್ತದ್ಧ್ಯಾನಕಲ್ಪದ್ರುಮಃ ॥ ೨೨ ॥

ಆ ದೇವತೆಗಳ ಚಿತ್ತವೆಂಬ ಪ್ರದೇಶದಲ್ಲಿ ಅಂಕುರಿಸಿದ,ಆನಂದದಿಂದ ಹೊರ ಚಿಮ್ಮಿದ ಅಶ್ರುಗಳಿಂದ ಸಿಕ್ತವಾದ, ಸಮೀಚಿನವಾದ ಭಕ್ತಿಯೆಂಬ ಲತೆಯಿಂದ ಸುತ್ತರಿಸಿಕೊಂಡ, ಪುಲಕಿತ ದೇಹ ರೋಮಾವಲಿಯೆಂಬ ಬೇರುಗಳಿಂದ ವ್ಯಾಪ್ತ ವಾದ, ಸಮಾಧ್ಯವಸ್ಥೆಯಲ್ಲಿ ಉತ್ಪನ್ನವಾದ ದೇಹಕಾಂತಿಯೆಂಬ ಚಿಗುರೆಲೆಗ ಳಿಂದೊಡಗೂಡಿದ,ಅರೆದೆರದ ಕಣ್ಣುಗಳೆಂಬ ಮೊಗ್ಗೆಗಳುಳ್ಳ ಅನುಸಂಧೀಯ ಮಾನ ವಾದ ಅನೇಕ ವೇದೀಯ ಸಹಸ್ರಾರು ಶಾಖೋಪಶಾಖೆಗಳಿಂದ ಉನ್ನತವಾದ, ಪರಿ ಪಕ್ವತೆಯೆಂಬ ಫಲದಿಂದಲೂ ಯುಕ್ತವಾದ ಆ ದೇವತೆಗಳ ಧ್ಯಾನವೆಂಬ ಕಲ್ಪವೃ ಕ್ಷವು, ಶ್ರೀರಮಣನೆಂಬ ಪಕ್ಷಿಯಿಂದ ಯುಕ್ತವಾಯಿತು.

ಧ್ಯಾನದ ಪಕ್ವ ಆವಸ್ಥೆಯಲ್ಲಿ ಶ್ರೀವಿಷ್ಣುವು ಪ್ರಸನ್ನನಾಗಿ ಅಲ್ಲಿಗೆ ಬಂದನು ಹೀಗೆ ಅರ್ಥ. ॥ ೨೨ ॥

ತತಃ ಪ್ರಸನ್ನಃ ಕರುಣಾಂಬುರಾಶಿಃ
ಸುರಾನ್ ಸಮಾಶ್ವಾಸ್ಯ ವಿರಿಂಚಪೂರ್ವಾನ್ ॥
ಧರಾಂ ಗತಕ್ಲೇಶಭರಾಂ ವಿಧಾಯ
ಸ್ವಕೀಯಮಾಯಾಂ ಹರಿರಿತ್ಯವೋಚತ್ ॥ ೨೩ ॥

ದಯೆಯಿಂದ ಸಮುದ್ರದಂತಿರುವ ಶ್ರೀ ಹರಿಯು ಪ್ರಸನ್ನನಾಗಿ ವಿರಿಂಚಿ ಮೊದಲಾದ ದೇವತೆಗಳನ್ನು ಸಮಾಧಾನಗೊಳಿಸಿ, ಧರೆಯನ್ನು ಕ್ಲೇಶಭಾರರಹಿತಳ ನ್ನಾಗಿ ಮಾಡಿ, ತನ್ನವಳೇ ಆದ ಪ್ರಕೃತಿ ಮಾನಿನಿಯಾದ ಶ್ರೀ ಮಹಾಲಕ್ಷ್ಮಿಯನ್ನು ಕುರಿತು ಇಂತು ನುಡಿದನು. ॥ ೨೩ ॥

ದೇವೇಷು ಧಾತಾ ಪ್ರಭುರಸ್ಯ ಲಕ್ಷ್ಮೀಃ
ತಸ್ಯಾಃ ಪ್ರಭುಃ ಸೋಽಹಮಿತೀವ ಶಂಸನ್ ॥
ಆಜ್ಞಾಮಜಸ್ಯೈವ ದದಾವದೃಶ್ಯೋ
ವಿಜ್ಞೇಯಮೂರ್ತಿಃ ಸ್ಫುಟಮಿಂದಿರಾಯಾಃ ॥ ೨೪ ॥

"ದೇವತೆಗಳಿಗೆಲ್ಲ ಪ್ರಭುವು ಚತುರ್ಮುಖನು; ಆ ಚತುರ್ಮುಖನಿಗೆ ಲಕ್ಷ್ಮೀ ದೇವಿಯು ನಿಯಾಮಕಳು. ಆ ಲಕ್ಷ್ಮೀದೇವಿಗೆ ನಾನು ಪ್ರಭುವು" (ಒಡೆಯನು) ಹೀಗೆ ಹೇಳುವನೋಎಂಬಂತೆ, ಶ್ರೀಹರಿಯು ಅದೃಶ್ಯರೂಪನಾಗಿ ಚತುರ್ಮುಖನಿಗೆ ಆಜ್ಞೆಯನ್ನು ಮಾಡ್ನಿದನು. ಲಕ್ಷ್ಮೀದೇವಿಯರಿಗೆ ದೃಶ್ಯವಾದ ಮೂರ್ತಿಯುಳ್ಳವ ನಾಗಿ ಆಜ್ಞೆಯನ್ನು ಮಾಡಿದನು.

ಅದೃಶ್ಯನಾದ ಶ್ರೀ ಹರಿಯು ದೇವತೆಗಳಿಗೆ ಆಜ್ಞೆ ಮಾಡದೆ, ಅಜನಿಗೆ ಆಜ್ಞೆ ಯಿತ್ತಿರುವುದರಿಂದ,ಎಲ್ಲ ದೇವತೆಗಳಿಗಿಂತ ಅಜನು ಉತ್ತಮನೆಂಬ ಸಂಗತಿಯೂ ದೃಶ್ಯ ಮೂರ್ತಿಯಾಗಿ ಲಕ್ಷ್ಮೀದೇವಿಯಾನ್ನಾಜ್ಞಾಪಿಸಿದುದರಿಂದ, ಅಜನಿಗಿಂತಲೂ

ಲಕ್ಷ್ಮೀದೇವಿಯು ಉತ್ತಮಳೆಂಬ ವಿಷಯವೂ ತೋರಿಸಲ್ಪಟ್ಟಿದೆಯೆಂದು ತಿಳಿಯಬೇಕು. ॥ ೨೪ ॥

ಆಜ್ಞೆಯನ್ನು ಮಾಡಿದ ಪ್ರಕಾರವನ್ನು ಹೇಳುತ್ತಾರೆ.

ತ್ವಮೇತ್ಯ ದೇವಕ್ಯುದರಸ್ಥಗರ್ಭಂ
ನಿಧೇಹಿ ರೋಹಿಣ್ಯುದರೇ ಸ್ವಶಕ್ತ್ಯಾ ॥
ಇತೀರಿತಾ ತಂ ರಮಣಂ ರಮಾ ಸಾ
ಪ್ರದಕ್ಷಿಣೀಕೃತ್ಯ ತಥಾಽಕರೋತ್ತತ್ ॥ ೨೫ ॥

"ಹೇ ಲಕ್ಷ್ಮಿಯೇ! ನೀನು ಭೂಮಿಗೆ ಹೋಗಿ, ದೇವಕಿಯ ಉದರದಲ್ಲಿರುವ ಗರ್ಭವನ್ನು, ನಿನ್ನ ಶಕ್ತಿಯಿಂದ ರೋಹಿಣಿಯ ಉದರಲ್ಲಿ ಸೇರಿಸು" ಹೀಗೆ ಶ್ರೀ ಹರಿಯಿಂದ ಆಜ್ಞಪ್ತಳಾದ ರಮಾದೇವಿಯು, ಪತಿಗೆ ಪ್ರದಕ್ಷಿಣೆಯನ್ನು ಮಾಡಿ, ಅವನು ಆಜ್ಞಾಪಿಸಿದಂತೆ ಆ ಕಾರ್ಯವನ್ನು ಮಾಡಿದಳು. ॥ ೨೫ ॥

ಬಲರಾಮನ ಅವತಾರವನ್ನು, ಉತ್ಪ್ರೇಕ್ಷಿಸುತ್ತ ಅರ್ಥಾಂತರನ್ಯಾಸದಿಂದ ವರ್ಣಿಸುತ್ತಾರೆ.

ಆಜ್ಞಾಪಯಾಮಾಸ ಪುರಾ ಸ ಶೇಷಂ
ಜಜ್ಞೇ ಸ ರೋಹಿಣ್ಯುದರೋದಯಾದ್ರೇಃ ॥
ಸಂಪ್ರೇಷಯಂತಿಸ್ಮ ನರೈರ್ನರೇಂದ್ರಾಃ
ಶಯ್ಯಾಂ ಸ್ವಕೀಯಾಂ ಪುರತಃ ಪ್ರಯಾಣೇ ॥ ೨೬ ॥

ಶ್ರೀ ಹರಿಯು, ತನ್ನ ಅವತಾರಕ್ಕಿಂತ ಮುಂಚೆ ಅವತರಿಸಲು ಶೇಷನನ್ನು ಆಜ್ಞಾಪಿಸಿದನು. ಆ ಶೇಷನು ರೋಹಿಣಿಯ ಉದರವೆಂಬ ಉದಯಾಚಲದಿಂದ ಜನಿಸಿದನು. ಇಲ್ಲಿ ಶೇಷನನ್ನು ಮುಂಚೆ ಅವತರಿಸಲು ಕಳಿಸಿದುದು ಯುಕ್ತವೇ! ಏಕೆಂದರೆ– ರಾಜರು ಪ್ರಯಾಣಸಂದರ್ಭದಲ್ಲಿ ಸೇವಕಜನರಿಂದ ತಮ್ಮ ಹಾಸುಗೆಯನ್ನು ಮುಂಚಿತವಾಗಿಯೇ ಕಳಿಸುತ್ತಾರೆ. ಇದು ಲೋಕಪ್ರಸಿದ್ಧವು.

ಕೇಶಾತ್ಮನಾ ಸಂನಿಹಿತಃ ಸ ತಸ್ಮಿನ್
ಶ್ರೀಶೋಽಗ್ರಜತ್ವಂ ಸ್ವಯಮೇವ ನೂನಂ ॥
ಧತ್ತೇ ವಿಧತ್ತೇ ಬಲಭದ್ರಮಾತು–
ರ್ನಿತ್ಯಂ ಸ್ವಮಾತೃತ್ವಸುಖಂ ಸುಖಾತ್ಮಾ ॥ ೨೭ ॥

ಸುಖಸ್ವರೂಪಿಯಾದ ಲಕ್ಷ್ಮೀಪತಿಯು, ಶುಕ್ಲಕೇಶರೂಪದಿಂದ ಬಲರಾಮನಲ್ಲಿ ಅವತಾರ ಸಮಾಪ್ತಿಯವರೆಗೂ ಸನ್ನಿಹಿತನಾಗಿದ್ದು, ತಾನೇ ತನ್ನ

ಅಗ್ರಜತ್ವವನ್ನು ಪಡೆದನು. ಹಾಗು ಬಲರಾಮನ ತಾಯಿಯಾದ ರೋಹಿಣಿಗೆ, ತನ್ನ ತಾಯಿಯಾಗುವುದರಿಂದಾಗುವ ಸೌಖ್ಯವನ್ನು ನಿತ್ಯದಲ್ಲಿಯೂ ಕೊಟ್ಟನು. ॥ ೨೭ ॥

ಭಗವದವತಾರ ಪ್ರಯೋಜನವನ್ನು ಉತ್ಪ್ರೇಕ್ಷೆಯಿಂದ ವರ್ಣಿಸುತ್ತಾರೆ.

ಬಲಾತ್ ಪ್ರಗೃಹ್ಯ ಸ್ವಕವಾಟಪಾಲೌ
ನಿಶಾಚರೌ ಭೂತಲಮೇತ್ಯ ದೃಪ್ತೌ ॥
ನೃತಸ್ಕರೌ ತೌ ವಿನಿಹತ್ಯ ವಿಷ್ಣು-
ರ್ನಿಜೌ ನಿನೀಷನ್ನಿವ ಗಾಂ ಗತೋಽಭೂತ್ ॥ ೨೮ ॥

ತನ್ನ ದ್ವಾರಪಾಲಕರಾದ ಜಯ ವಿಜಯರನ್ನು ಬಲಾತ್ಕಾರದಿಂದ ಹಿಡಿದು (ಎಳಕೊಂಡು) ದೈತ್ಯರಿಬ್ಬರು, ಶಿಶುಪಾಲ ದಂತವಕ್ತ್ರ ರೂಪದಿಂದ ಭೂಮಿಗೆ ಬಂದು ಉನ್ಮತ್ತರಾಗಿರುತ್ತಾರೆ. ಈ ನರಚೋರ ರಾಕ್ಷಸರನ್ನು ಸಂಹರಿಸಿ, ತನ್ನವರನ್ನು ತನ್ನ ಬಳಿಗೆ ತಿರುಗಿ ಕೊಂಡೊಯ್ಯುವ ಇಚ್ಛೆಯುಳ್ಳವನೋ ಎಂಬಂತೆ, ಶ್ರೀಹರಿಯು ಭೂಮಿಯನ್ನು ಕುರಿತು ಬಂದನು. ॥ ೨೮ ॥

ನ ಗರ್ಭವಾಸೋ ಮಮ ನಿರ್ಮಲಸ್ಯೇ-
ತ್ಯದೋ ಬುಧಾನ್ ಬೋಧಯಿತುಂ ಹೃದೇವ ॥
ಫಣೀಶ್ವರಂ ಗರ್ಭಗತಂ ವಿಧಾಯ
ಪುನಃ ಸ್ವಯಂ ಸನ್ನಿಹಿತೋ ಬಭೂವ ॥ ೨೯ ॥

"ನಿರ್ದೋಷಿಯಾದ ನನಗೆ ಗರ್ಭವಾಸವಿಲ್ಲ"ವೆಂಬುದನ್ನು ಜ್ಞಾನಿಗಳಿಗೆ ಬೋಧಿಸುವ ಅಭಿಪ್ರಾಯದಿಂದಲೋ ಏನೋ ಎಂಬಂತೆ, ದೇವಕೀ ಗರ್ಭದಲ್ಲಿ ಸರ್ಪಶ್ರೇಷ್ಠನಾದ ಶೇಷನನ್ನು ಇರಿಸಿ (ಸ್ಥಾಪಿಸಿ) ಅನಂತರ ಅವನನ್ನು ಹೊರಗೆಳೆದು, ಸ್ವತಃ ತಾನೇ ಅಲ್ಲಿ ಸನ್ನಿಹಿತನಾದನು. (ಪ್ರವಿಷ್ಟನಾದನು) ॥ ೨೯ ॥

ಗರ್ಭೇಽಪ್ಯದಭ್ರಾತ್ಮಸುಖೈಕಮೂರ್ತಿ-
ಮಭ್ಯೇತ್ಯ ಪದ್ಮಾಸನಮುಖ್ಯದೇವಾಃ ॥
ಗೀರ್ಭಿರ್ಭವದ್ಗರ್ಭನಿವಾಸಜಾರ್ತಿ-
ನಿರ್ಭಂಗಸಿದ್ಧ್ಯರ್ಥಮಿವಾಸ್ತುವಂಸ್ತಮ್ ॥ ೩೦ ॥

ಚತುರ್ಮುಖ ಮುಂತಾದ ದೇವತೆಗಳು, ದುಃಖಕಾರಣ ಸ್ಥಾನವಾದ ಜಠರ (ಗರ್ಭ)ದಲ್ಲಿಯೂ ಸಹ ಅಪರಿಮಿತ ಸ್ವರೂಪಾನಂದೈಕ ದೇಹನಾದ ಆ ಶ್ರೀಹರಿಯನ್ನು ಕುರಿತು ಬಂದು, ತಮಗೆ ಆಗುವ ಗರ್ಭವಾಸದಿಂದ ಉತ್ಪನ್ನವಾದ ದುಃಖ ಪರಿಹಾರದ ಸಿದ್ಧಿಯೆಂಬ ಪ್ರಯೋಜನಕ್ಕೋಸುಗವೋ ಎಂಬಂತೆ, ಸ್ತುತಿರೂಪ ವಚನಗಳಿಂದ ಅವನನ್ನು ಸ್ತುತಿಸಿದರು. ॥ ೩೧ ॥

ಅಥೋ ಜಯಂತ್ಯಾಮುದಭೂನ್ನಿಶೀಥೇ
ಶಶೀವ ದೇವಕ್ಯದರೋದಯಾದ್ರೇಃ ||
ದಿಗಷ್ಟಕೇ ರಾತ್ರಿ ಚರಾನ್ ಜಿಗೀಷೋ-
ಸ್ತಿಥಿರ್ನಿಶಾ ಸಾ ಚ ಗುಣೋಚಿತೈವ || ೩೧ ||

ಬ್ರಹ್ಮಾದಿಗಳ ಸ್ತುತಿಯು ಮುಗಿದ ಅನಂತರದಲ್ಲಿ, ಶ್ರೀಹರಿಯು, ಶ್ರಾವಣ ಕೃಷ್ಣಾಷ್ಟಮೀ ಮಧ್ಯರಾತ್ರಿ ರೋಹಿಣೀ ನಕ್ಷತ್ರಯುಕ್ತ ಜಯಂತೀ ಮುಹೂರ್ತದಲ್ಲಿ ದೇವಕಿಯ ಉದರವೆಂಬ ಉದಯ ಪರ್ವತದಿಂದ ಚಂದ್ರನಂತೆ ಪ್ರಕಟನಾದನು. ಎಂಟು (ಅಷ್ಟ) ದಿಕ್ಕುಗಳಲ್ಲಿರುವ ನಿಶಾಚರ (ದೈತ್ಯ)ರೆಲ್ಲರನ್ನು ಜಯಿಸಲಿಚ್ಛಿಸುವ ಶ್ರೀಹರಿಗೆ, ಆ ಅಷ್ಟಮೀ ತಿಥಿಯೂ ಆ ರಾತ್ರಿ ಸಮಯವೂ ಆ ಮುಹೂರ್ತವೂ ಅನ್ವರ್ಥಕವೇ ಆಗಿರುತ್ತದೆ. || ೩೧ ||

ಪ್ರಥಾಂ ಯಶೋದಾಸುತ ಇತ್ಯುದಾರಾಂ
ಕರಿಷ್ಯಮಾಣೋ ಜನನೀಮಿವಾನ್ಯಾಮ್ ||
ಸ ದೇವಕೀಗರ್ಭಭವೋऽನುಗೃಣ್ಹಂ-
ಸ್ತತಾನ ರೋಹಿಣ್ಯುದಯಪ್ರಸಿದ್ಧಿಮ್ || ೩೨ ||

ದೇವಕೀ ಗರ್ಭಸಂಭೂತನಾಗಿದ್ದು, ಮುಂದೆ "ಯಶೋದಾ ಸುತನು" ಎಂಬ ಉತ್ಕೃಷ್ಟವಾದ ಪ್ರಸಿದ್ಧಿಯನ್ನು ಮಾಡುವವನಾಗಿ ಶ್ರೀಕೃಷ್ಣನು, ದೇವಕೀ ಯಶೋದೆಯರಿಂದ ಬೇರೆಯಾದ ತಾಯಿಯೊಬ್ಬಳನ್ನು ಅನುಗ್ರಹಿಸುವವನಂತೆ ರೋಹಿಣೀ ನಕ್ಷತ್ರದಲ್ಲಿ ತನ್ನ ಉದಯವಾಗಿದೆಯೆಂಬ ಪ್ರಸಿದ್ಧಿಯನ್ನು ಮಾಡಿದನು. ಅಂದರೆ "ದೇವಕಿಯಲ್ಲಿ ಪ್ರಾದುರ್ಭೂತನಾಗಿದ್ದರೂ ನಾನು, ಯಶೋದೆಯ ಮಗನೆಂಬ ಪ್ರಸಿದ್ಧಿಯನ್ನು ಸಂಪಾದಿಸುವ ಹಾಗೆ, ರೋಹಿಣೀ ನಕ್ಷತ್ರದಲ್ಲಿ ಪ್ರಕಟನಾಗಿದ್ದರೂ, ಸಮಾನ ನಾಮವಿದ್ದುದರಿಂದ, "ರೋಹಿಣಿಯಲ್ಲಿ ಹುಟ್ಟಿದನು" ಎಂಬ ಪ್ರಸಿದ್ಧಿಯಿಂದ ಬಲರಾಮನ ತಾಯಿಯಾದ ರೋಹಿಣಿಯನ್ನೂ ಅನುಗ್ರಹಿಸುತ್ತೇನೆಂಬ ಅಭಿಪ್ರಾಯದಿಂದಲೇ ರೋಹಿಣ್ಯುದಯದ ಪ್ರಸಿದ್ಧಿಯನ್ನು ಮಾಡಿದನು" ಹೀಗೆ ಭಾವ. || ೩೨ ||

ಯದಾ ಹರಿಃ ಪ್ರಾದುರಭೂತ್ ಕಲಾಭಿಃ
ತದಾ ಸಮಾಯಮ್ಯಯವಾಂಶ್ಚ ಚಂದ್ರಃ ||
ಪ್ರಿಯಾಪ್ರಿಯಾಪ್ಯೇವ ನಿಜಾನ್ವಯೋತ್ಥ-
ಮುಕುಂದವಕ್ತ್ರೇಂದುಕಲಾವಲೋಕಾತ್ || ೩೩ ||

ಯಾವಾಗ ಶ್ರೀಹರಿಯು ಶ್ರೀಕೃಷ್ಣರೂಪದಿಂದ ಪ್ರಕಟನಾದನೋ ಆ ಸಮಯದಲ್ಲಿ ತನ್ನ ಕುಲದಲ್ಲಿ ಅವತರಿಸಿದ ಶ್ರೀಕೃಷ್ಣನ ಚಂದ್ರನಂತಹ ಮುಖದ

ಕಾಂತಿಯನ್ನು ಕಂಡು, ಪ್ರಿಯ ಅಪ್ರಿಯಗಳೆರಡರ ಪ್ರಾಪ್ತಿಯಿಂದೆಂಬಂತೆ ಹದಿನಾರು ಕಲೆಗಳಿಂದ ಸಮಾನವೃದ್ಧಿಹ್ರಾಸವುಳ್ಳವನಾಗಿ ಚಂದ್ರನು ಪ್ರಾದುರ್ಭವಿಸಿದನು.

ಕೃಷ್ಣನು ಸೋಮಕುಲಜಾತನೆಂಬ ಪ್ರಸಿದ್ಧವಾದ ಕೀರ್ತಿಯೆಂಬ ಪ್ರಿಯದ ಪ್ರಾಪ್ತಿ, ಹಾಗು ನಿರತಿಶಯ ಸೌಂದರ್ಯಕಾಂತಿಭರಿತ ಕೃಷ್ಣಮುಖೇಂದುವಿನ ದರ್ಶನದಿಂದಾದ ತನ್ನ ಪರಾಜಯವೆಂಬ ಅಪ್ರಿಯದ ಪ್ರಾಪ್ತಿ, ಇವೆರಡರಿಂದ ಹರ್ಷ ಶೋಕಗಳುಂಟಾಗಿ, ಚಂದ್ರನ ಅರ್ಧಶರೀರಕ್ಕೆ ಕಳಂಕವು (ಕೊರಗು) ಉಂಟಾಯಿತೆಂದು ಭಾವ. ॥ ೩೩ ॥

ತದೈವ ಗಂಧರ್ವಗಣಾ ಜಗುಸ್ತಂ
ತಿಲೋತ್ತಮಾದ್ಯಾ ನನೃತುಸ್ತದೈವ ॥
ಸ್ವಗೀತನಾಟ್ಯೇನ ವಿಜೇಷ್ಯಮಾಣಂ
ತಮಾತ್ಮಸಾತ್ಕರ್ತುಮಿವಾಶು ಬಾಲ್ಯೇ ॥ ೩೪ ॥

ಅದೇ ಕಾಲದಲ್ಲಿಯೇ, ತನ್ನ ಗೀತನರ್ತನಗಳಿಂದ ಎಲ್ಲರನ್ನೂ ವಿಜೈಸುವ (ಮುಗ್ಧಗೊಳಿಸಿ, ತನ್ನ ವಶೀಕರಿಸಿಕೊಳ್ಳುವ) ಶ್ರೀಕೃಷ್ಣನನ್ನು, ಶೈಶವಾವಸ್ಥೆಯಲ್ಲಿ ಅತಿತ್ವರೆಯಿಂದ ತಮ್ಮ ವಶವರ್ತಿಯನ್ನಾಗಿ (ಆತ್ಮೀಯ=ತನ್ನವನನ್ನಾಗಿ) ಮಾಡಿಕೊಳ್ಳಲೋ ಏನೋ ಎಂಬಂತೆ ಶ್ರೀಕೃಷ್ಣನನ್ನು ಕುರಿತು ಗಂಧರ್ವಗಣಗಳು ಗಾಯನ ಮಾಡಿದವು. ತಿಲೋತ್ತಮ ಮೊದಲಾದ ಅಪ್ಸರೆಯರು ನರ್ತನ ಮಾಡಿದರು. ॥೩೪॥

ದಿಶೋ ಯಶೋಭಿಃ ಪರಿಪೂರಯಿಷ್ಯ-
ತ್ಯದಗ್ರಚೇಷ್ಟಃ ಸ ಇತಿ ಪ್ರಹೃಷ್ಟಾಃ ॥
ರಸಾ ಪ್ರಸನ್ನಾ ಕಿಲ ರಂಜಿತಾಂ ಮಾಂ
ಕರಿಷ್ಯತಿ ಸ್ವಾಂಘ್ರಿತಲಶ್ರಿಯೇತಿ ॥ ೩೫ ॥

ಉತ್ತಮ ವ್ಯಾಪಾರ (ಲೀಲೆ)ಗಳನ್ನೆಸಗುವ ಶ್ರೀಕೃಷ್ಣನು ಕೀರ್ತಿಗಳಿಂದ ನಮ್ಮನ್ನು ತುಂಬಿಸು (ಅಲಂಕರಿಸು)ತ್ತಾನೆಂದೇ ದಿಕ್ಕುಗಳು ಹರ್ಷಗೊಂಡವು. ತನ್ನ ಪಾದತಲದ ಕಾಂತಿಯಿಂದ ನನ್ನನ್ನು ಅಲಂಕೃತಳನ್ನಾಗಿ ಮಾಡುವನೆಂದೇ ಭೂಮಿಯು ಪ್ರಸನ್ನಳಾದಳು. ಇದು ನಿಜವು ! ॥ ೩೫ ॥

ತದೈವ ದೇವಾ ವವೃಷುಃ ಪ್ರಸೂನೈಃ
ಹೃದಿ ಸ್ಮರಂತೋ ವಚಸಾ ಸ್ತುವಂತಃ ॥
ನಗೇಂದ್ರಮೈಂದ್ರಂ ಭುವಿ ನೇಷ್ಯತೋಽಸ್ಯ
ಮನಃ ಸಮುದ್ಬೋಧಯಿತುಂ ಪುರೇವ ॥ ೩೬ ॥

ಅದೇ ಕಾಲದಲ್ಲಿಯೇ, ದೇವತೆಗಳು ಶ್ರೀಕೃಷ್ಣನನ್ನು ಹೃದಯದಲ್ಲಿ ಸಂಸ್ಮರಿಸುತ್ತ, ಮುಂದೆ ಇಂದ್ರನ ಪಾರಿಜಾತ ವೃಕ್ಷವನ್ನು ಭೂಮಿಯಲ್ಲಿರುವ ತನ್ನ

ಮನೆಗೆ ಒಯ್ಯುವ ಈ ಶ್ರೀಕೃಷ್ಣನ ಮನಸ್ಸನ್ನು ಮುಂಚೆಯೇ ಉದ್ಬೋಧಗೊಳಿಸುವ ಅಭಿಪ್ರಾಯದಿಂದಲೇ (ಪುಷ್ಪಗಳನ್ನು ತೋರಿಸಿ, ಅವುಗಳ ಬಗ್ಗೆ ಲೋಭವನ್ನು ಹುಟ್ಟಿಸುವ ಅಭಿಪ್ರಾಯದಿಂದ) ಹೂವುಗಳಿಂದ ಅವನ ಮೇಲೆ ಮಳೆಗರೆದರು. ॥ ೩೬ ॥

ಪುತ್ರತ್ವಾದಿಹ ವಾಸುದೇವಪದವೀ ಯದ್ಯಸ್ಯ ಶೌರೇಸ್ತದಾ
ನಃ ಪುತ್ರತ್ವಕೃತಾಸ್ತು ಸೇತಿ ವಸವೋ ದೇವಾಶ್ಚ ಹೃಷ್ಟಾ ಧ್ರುವಮ್ ॥
ಯದ್ಯಸ್ಯಾನಕದುಂದುಭೀಷ್ಟ ಶಿಶುತಾ ಸೋಽಸ್ಮಾಕಮೇವಂ ಶಿಶುಃ
ತರ್ಹೀತ್ಯಾನಕದುಂದುಬಿ ಧ್ವನಿರಭೂದ್ವ್ಯೋಮ್ನಿ ಸ್ವಯಂಭೂದಯೇ ॥೩೭॥

ವಸುದೇವನ ಸಂಬಂಧಿಕ(ಪುತ್ರ)ನಾದುದರಿಂದ ಈ ಶ್ರೀಕೃಷ್ಣನಿಗೆ “ ವಾಸುದೇವ ” ಪದವಿಯು ಬಂದ ಪಕ್ಷದಲ್ಲಿ ನಮ್ಮ ಸಂಬಂಧಿಕ(ಪುತ್ರ)ನಾದುದರಿಂದಲೂ ಆ ಪದವಿಯು ಬರಲಿ ! ಈ ರೀತಿಯಿಂದ ಅಷ್ಟ ವಸುಗಳೂ ಇತರ ದೇವತೆಗಳೂ, ಆ “ ಸ್ವಯಂಭು ” ಎನಿಸಿದ ಶ್ರೀಕೃಷ್ಣನ ಉದಯವಾಗಲು ಹರುಷಗೊಂಡರು. ಹಾಗು ಈ ಕೃಷ್ಣನಿಗೆ ಆನಕದುಂದುಭಿಯ(ವಸುದೇವನ) ಇಷ್ಟ ಪುತ್ರತ್ವವು ಇರುವುದಾದರೆ, ನಮಗೂ ಅವನೇ ಏಕೆ ಶಿಶುವಾಗಲಾರನು ? ಹೀಗೆ ಆನಕದುಂದುಭಿಗಳ ಧ್ವನಿಯು ಆಕಾಶದಲ್ಲಿ ಉಂಟಾಯಿತು ॥೩೭॥

ಶರೀರಕಾಂತ್ಯಾ ಜಲದಃ ಸ್ವಜೈತ್ರಂ
ನಿರೀಕ್ಷ್ಯ ಕೃಷ್ಣಂ ಜಲರಾಶಿತೀರೇ ॥
ಜಗರ್ಜ ಶಕ್ತ್ಯಾ ರಹಿತಸ್ಯ ಪುಂಸೋ
ಜಲಾಂತಿಕೇಷ್ವೇವ ಹಿ ಗರ್ಜಿತಾನಿ ॥ ೩೮ ॥

ನೀರನ್ನು ಕೊಡುವ ಮೇಘವು, ಇಂದ್ರನೀಲದಂತೆ ಶ್ಯಾಮವಾದ ಶರೀರದ ಕಾಂತಿಯಿಂದ ತನ್ನನ್ನು ಜಯಿಸುತ್ತಿರುವ ಶ್ರೀಕೃಷ್ಣನನ್ನು ಕಂಡು, ಸಮುದ್ರದ ತೀರದಲ್ಲಿ ಗುಡುಗಿತು. ಏಕೆಂದರೆ– ಶಕ್ತಿರಹಿತನಾದವನ ಬರಿ ಮಾತುಗಳು ಜಡ-ಮೂರ್ಖರ ಸಮೀಪದಲ್ಲಿಯೇ ನಡೆಯುತ್ತವೆ. ಇದು ಲೋಕಸಿದ್ಧವು. ॥೩೮॥

ಸರಃ ಪ್ರಸನ್ನಂ ನಿಶಿ ಸಾರಸೌಘೈಃ
ಸ ಕಾಮಿನೀಭಿಃ ಸಹ ಸಂಪ್ರವಿಶ್ಯ ॥
ಕರಿಷ್ಯತೀಶೋ ಮುಖಪದ್ಮಪುಂಜೈ-
ರಲಂಕೃತಂ ಮಾಮಿತಿ ಶಂಸತೀವ ॥ ೩೯ ॥

ಒಡೆಯನಾದ ಶ್ರೀಕೃಷ್ಣನು, ರಾತ್ರಿಯಲ್ಲಿ ಕಾಮಿನಿಯರೊಡನೆ ನನ್ನಲ್ಲಿ ಪ್ರವೇಶಿಸಿ, (ಕಂಠದವರೆಗೆ ಅವಗಾಹನ ಮಾಡಿ) ಅವರ ಮುಖಗಳೆಂಬ ಪಂಕಜಗಳ ಸಮೂಹದಿಂದ ನನ್ನನ್ನು ಅಲಂಕರಿಸುತ್ತಾನೆಂದು ಹೇಳುವದೋ ಎಂಬಂತೆ,

ರಾತ್ರಿಯಲ್ಲಿಯೂ ಕಮಲಗಳ ಸಮೂಹದಿಂದ ಸರೋವರವು ನಿರ್ಮಲವಾಗಿ ಪ್ರಸನ್ನತೆಯಿಂದ ಶೋಭಿಸಿತು. ॥ ೩೯ ॥

ನಭಃ ಪ್ರಸನ್ನೋಡುಗಣಂ ತದಾಸೀದ್
ವಿಭುತ್ವಧರ್ಮೇಣ ತಮದ್ವಿತೀಯಮ್ ॥
ವಿಲೋಕ್ಯ ಬಾಲಂ ಭುವಿ ತಾರಹಾರ
ವಿಭೂಷಿತ ಸ್ವಾಂಗಮಿವ ಪ್ರಹರ್ಷಾತ್ ॥ ೪೦ ॥

ಆ ಸಮಯದಲ್ಲಿ ಪ್ರಕಾಶಿಸುವ ನಕ್ಷತ್ರ ಸಮೂಹವುಳ್ಳ ಆಕಾಶವು, ಪೂರ್ವದಲ್ಲಿ ವಿಭುತ್ವವೆಂಬ (ವ್ಯಾಪಕವಾಗಿರುವುದೆಂಬ) ಧರ್ಮದಿಂದ ಅದ್ವಿತೀಯ (ಅಸದೃಶ)ನಾದ ಆ ಶ್ರೀಕೃಷ್ಣನನ್ನು ಈಗ ಭೂಮಿಯಲ್ಲಿ ಅಲ್ಪ ಪ್ರದೇಶದಲ್ಲಿರುವ ಶಿಶುವಾಗಿರುವುದನ್ನು ನೋಡಿ, ನನ್ನಕಿಂತ ಅತಿ ವಿಭುವಾದವನು ಈಗ ನನ್ನಕಿಂತ ಅಲ್ಪ ಪ್ರದೇಶವುಳ್ಳ ಸ್ಥಲದಲ್ಲಿ ಹುಟ್ಟಿದನು"; ಎಂಬ ಸಂತೋಷದಿಂದ, ನಕ್ಷತ್ರ ಗಳೆಂಬ ಮುತ್ತಿನ ಮಾಲೆಗಳಿಂದ ತನ್ನ ಅಂಗಗಳನ್ನು ಅಲಂಕರಿಸಿಕೊಂಡಿರುವದೋ ಎಂಬಂತೆ ಶೋಭಿಸಿತು. ॥ ೪೦ ॥

ಶಿಶುಂ ವಶೀಕರ್ತುಮಯಂ ಹಿ ಕಾಲ
ಇತೀವ ಬುದ್ಧ್ಯಾ ತುತುಷುಸ್ಮ ವೃದ್ಧಾಃ
ಉಪೇಕ್ಷಯಿಷ್ಯಂತಿ ನ ಚೇತ್ ಕೃತಾರ್ಥಾ
ಇತಿ ಸ್ವಯಂ ಪ್ರಾಜ್ವಲದಗ್ನಿರೇಷಾಮ್ ॥ ೪೧ ॥

ತಪಸ್ಸು, ಜ್ಞಾನ, ವಯಸ್ಸು ಮುಂತಾದವುಗಳಿಂದ ವೃದ್ಧರಾದ ತಪಸ್ವಿಗಳು, ಶಿಶುರೂಪಿಯಾದ ಪರಮಾತ್ಮನನ್ನು ವಶೀಕರಿಸಲು ಇದು ಕಾಲವು; ಎಂಬ ಬುದ್ಧಿಯಿಂದೆಂಬಂತೆ ಸಂತುಷ್ಟರಾದರು. ಈ ವೃದ್ಧರ ಅಗ್ನಿಯು, ನಾನು ಪ್ರಜ್ವಲಿಸದಿದ್ದಲ್ಲಿ ಆಚರಿಸಿದ ಕರ್ಮಫಲವನ್ನು ಪಡೆದು ಕೃತಾರ್ಥರಾದ ತಪಸ್ವಿಗಳು ನನ್ನನ್ನು ಉಪೇಕ್ಷಿಸುತ್ತಾರೆಂಬ ತಿಳುವಳಿಕೆಯಿಂದಲೋ ಎಂಬಂತೆ ತನ್ನಷ್ಟಕ್ಕೆ ತಾನೇ (ಊದುಗೊಳವೆಗಳಿಂದ ಊದಿಸಿಕೊಳ್ಳದೇ) ಪ್ರಜ್ವಲನ ಹೊಂದಿತು ॥೪೧॥

ಪ್ರಸೂನವೃಂದಾನಿ ವಿಕಂಪಯಂಸ್ತ
ದ್ಗೃಹಂ ಸ್ಪೃಶನ್ ಸಾರಸವಾರಿಸಂಗಃ ॥
ವವೌ ಮರುನ್ಮಾಮಸುರಾದ್ವಿಯುಕ್ತಂ
ಕರಿಷ್ಯತೀತ್ಯಂಜನಧೀರಿವಾಸ್ಯ ॥ ೪೨ ॥

ಸುಳಿಗಾಳಿಯು ಹೂವುಗಳ ಸಮೂಹವನ್ನು ಹೊಯ್ದಾಡಿಸುತ್ತ (ನಡುಗಿಸುತ್ತ) ಸರೋವರದ ಜಲಸಂಗವನ್ನು ಪಡೆದು, ಶ್ರೀಕೃಷ್ಣನ ನಿವಾಸಸ್ಥಲವನ್ನು ಸ್ಪರ್ಶಿಸುತ್ತ

" ಅಸುರರನ್ನು ಸಂಹರಿಸಿ, ದುಃಸಂಗದಿಂದ ನನ್ನನ್ನು ಬಿಡಿಸುವ "ನೆಂಬ ಕಾರಣ ದಿಂದ ಶ್ರೀಕೃಷ್ಣನ ಪೂಜೆಯಲ್ಲಿ ಬುದ್ಧಿಯುಳ್ಳವನಂತೆ ಬೀಸಿತು ॥ ೪೨ ॥

ಜಾತೇ ಹರೌ ಸ್ವರ್ಪಿತ ಪುಷ್ಪವರ್ಷೈ
ಗೀರ್ಭಿಃಸ್ತುವದ್ಭಿಃ ಸುರಸಿದ್ಧಸಂಘೈಃ ॥
ದೂರೇ ವಿಧೂತಾ ಇವ ವಿಘ್ನಭೀತ್ಯಾ
ಮೇಘಾ ದಿಗಂತಂ ಯಯುರಂಬರಾಂತಾತ್ ॥ ೪೩ ॥

ಶ್ರೀಕೃಷ್ಣನ ಪ್ರಾದುರ್ಭಾವವಾದ ಮೇಲೆ, ಕಡುಭಕ್ತಿಯಿಂದ ಕುಸುಮ ಗಳನ್ನು ಸಮರ್ಪಿಸಿ ಸ್ತೋತ್ರ ವಚನಗಳಿಂದ ಸ್ತುತಿಸುತ್ತಿರುವ ದೇವಋಷಿಗಳ ಸಮೂಹಗಳಿಂದ ಸುರಿಸಿರುವ, ಪುಷ್ಪಗಳನ್ನು ನಾವು ಮಧ್ಯದಲ್ಲಿ ಬಂದು, ಶ್ರೀ ಕೃಷ್ಣನ ಸಮೀಪಕ್ಕೆ ಬರದಂತೆ ತಡೆಮಾಡುವುವೆಂಬ ವಿಘ್ನ ಭೀತಿಯಿಂದ ಅತಿದೂರದಲ್ಲಿಯೇ ದಂಡಾದಿಗಳಿಂದ ದೂಡಲ್ಪಟ್ಟವುಗಳಂತೆ, ಮೇಘಗಳು ಆಕಾಶ ಮಧ್ಯದಿಂದ ದಿಕ್ಕುಗಳ ಕೊನೆಯ ಸೀಮೆಯನ್ನು ಸೇರಿಕೊಂಡವು ॥ ೪೩ ॥

ಅಜನ್ಮನಸ್ತಸ್ಯ ಹಿ ಜನ್ಮಕಾಲೇ
ಚರಾಚರಂ ತುಷ್ಟಮಭೂತ್ ಕಿಲೇದಮ್ ॥
ತಥಾ ಹಿ ತುಷ್ಟಿರ್ಭುವಿ ಕಸ್ಯ ನಸ್ಯಾ
ದದೃಷ್ಟ ಪೂರ್ವಸ್ಯ ನಿರೀಕ್ಷಣೇನ ॥ ೪೪ ॥

ಜನ್ಮರಹಿತನಾದ ಪರಮಾತ್ಮನ ಅವತಾರ (ಪ್ರಾದುರ್ಭಾವ) ಕಾಲದಲ್ಲಿ ಚೇತನಾತ್ಮಕವಾದ ಪ್ರಪಂಚವೆಲ್ಲ ಸಂತುಷ್ಟವಾಯಿತು ಇದು ಪ್ರಸಿದ್ಧವೇ! ಹಾಗೂ ಯುಕ್ತವೇ! ಏಕೆಂದರೆ ಹಿಂದೆ ಕಂಡಿರದಂತಹ ವಸ್ತುವಿನ ಸಂದರ್ಶನದಿಂದ ಯಾವ ನಿಗೆ ಸಂತೋಷವಾಗಲಿಕ್ಕಿಲ್ಲ ? ಅಪೂರ್ವ ವಿಷಯದ ದರ್ಶನವಾದರೆ ಎಲ್ಲರಿಗೂ ಸಂತೋಷವೇ ಆಗುತ್ತದೆ. ಹೀಗೆ ಅರ್ಥ. ॥ ೪೪ ॥

ಶರೀರಿಣಾಂ ಸ್ಥಾವರ ಜಂಗಮಾನಾಂ
ನಿರೀಕ್ಷಣೇನೈವ ವಿಮೋಕ್ಷದೋಽಹಮ್ ॥
ಇತೀವ ವಿಜ್ಞಾಪಯಿತುಂ ಸ ದೃಷ್ಟೋ
ಜಹಾರ ಪಿತ್ರೋರ್ನಿಗಡಸ್ಯ ಬಂಧಮ್ ॥ ೪೫ ॥

"ನಾನು ಸ್ಥಾವರ ಜಂಗಮಗಳಾದ ದೇಹಧಾರಿಗನಾದ ಜೀವರುಗಳಿಗೆ ದರ್ಶನ (ಜ್ಞಾನ) ಮಾತ್ರವೇ ಸಂಸಾರ ಬಂಧ ವಿಮೋಚಕನು"; ಎಂಬ ಸಂಗತಿ ಯನ್ನು ದೃಷ್ಟಾಂತ ಮುಖದಿಂದ ಹೇಳುವದಕ್ಕೋ ಎಂಬಂತೆ ಶ್ರೀ ಕೃಷ್ಣನು ಕಣ್ಣಿಗೆ ಗೋಚರನಾಗಿ ತಂದೆತಾಯಿಗಳಾದ ವಸುದೇವ ದೇವಕಿಯರ ಕಂಸಕೃತನಿಗಡ ಬಂಧನವನ್ನು ಪರಿಹರಿಸಿದನು. ॥ ೪೫ ॥

ಪಿತಪ್ರಿತ್ವತ್ವ ಪ್ರಥಯಾ ಭಯಂಸ್ಯಾತ್
ಪಾಪಾದಿತೀಡ್ಯಂ ಪಿತರೌ ಗುಣಾಢ್ಯಮ್ ॥
ಜ್ಞಾನಾತ್ಮಕಸ್ತ್ವಂ ಪ್ರಕೃತೇರ್ವಿದೂರ
ಸ್ತ್ವಾವಸ್ತುತಾಂ ತಾತ ಇತೀಶ ಮಸ್ಯ ॥ ೪೬ ॥

ತಂದೆತಾಯ್ಗಳೆನಿಸಿದ ವಸುದೇವ ದೇವಕಿಯರು, " ತಾವು ಶ್ರೀಕೃಷ್ಣನ ತಾಯ್ತಂದೆಗಳೆಂಬ ಪ್ರಸಿದ್ಧಿಯಿಂದ, ಉತ್ಪನ್ನವಾಗುವ ಪಾಪದಿಂದ ಪತಕವಾಗುವದೆಂಬ ಭಯದಿಂದ, ಗುಣಾಢ್ಯನೂ ಸತ್ಯನೂ ಸ್ವಾಮಿಯೂ ಆದ ಕೃಷ್ಣನನ್ನು ನೀನು ಜ್ಞಾನರೂಪಿಯು, ಪ್ರಕೃತಿವಿದೂರನು ಈ ಜಗತ್ತಿನ ಜನಕನು" ಎಂಬುದಾಗಿ ಸ್ತುತಿಸಿದರು. ॥ ೪೬ ॥

ಜನನಾದಿಗಳಿಲ್ಲದ ಶ್ರೀಕೃಷ್ಣನಿಗೆ "ವಸುದೇವ ಸುತ" ಇತ್ಯಾದಿ ವ್ಯವಹಾರವು ಶಾಸ್ತ್ರ ಸಂಮತವೆಂಬುದನ್ನು ಯುಕ್ತಿ ಬದ್ಧವಾಗಿ ತೋರಿಸುತ್ತ, ಪ್ರಮೇಯ ವಿಶೇಷವನ್ನು ತಿಳಿಸುತ್ತಾರೆ.

ಯ ಏಷ ಪುತ್ ಸಂಜ್ಞಿತ ನಾರಕಸ್ಥಾನ್
ಜನಾನ್ ಸ್ವನಾಮ ಸ್ಮರಣೇನ ಪಾತಿ ॥
ಸದೃಷ್ಟಿಗಃ ಸನ್ ವಸುದೇವ ಪತ್ನ್ಯಾಃ
ಕಥಂ ನ ಪುತ್ರಃ ಶತಪತ್ರನೇತ್ರಃ ॥ ೪೭ ॥

ಯಾವ ಈ ಶ್ರೀಕೃಷ್ಣನು ಪುನ್ನಾಮಕ ನರಕದಲ್ಲಿ ನರಳುವ ಜನರನ್ನು ತನ್ನ ನಾಮಸ್ಮರಣೆಯಿಂದ ಸಂರಕ್ಷಿಸುತ್ತಾನೋ ಈ ಕಮಲದಂತೆ ವಿಶಾಲ ನಯನನಾದ ಅದೇ ಶ್ರೀಕೃಷ್ಣನು ವಸುದೇವನ ಮತ್ತೂ ದೇವಕಿಯ ಕಣ್ಣಿಗೆ ಕಾಣಿಸಿಕೊಂಡು ಪುನ್ನಾಮಕಾದಿ ನರಕಗಳಿಂದ ಸಂರಕ್ಷಿಸುವವನಾದುದರಿಂದ ಹೇಗೆ ಪುತ್ರನಾಗಲಾರನು ? ಪುತ್ರನಾಗಿಯೇ ಆಗುತ್ತಾನೆ. ನಾಮಸ್ಮರಣಮಾಡುವವರಿಗೆ ಪುತ್ರನಾಗುವ ಈ ಶ್ರೀಕೃಷ್ಣನು ದೇವಕಿಯ ಕಣ್ಣಿಗೆ ಪ್ರತ್ಯಕ್ಷನಾದ ಮೇಲೆ ಅವಳಿಗೆ ಪುತ್ರನು (ಪುನ್ನಾಮಕನರಕದಿಂದ ರಕ್ಷಕನು) ಹೇಗೆ ಆಗುವದಿಲ್ಲ? ಹೀಗೆ ಭಾವ ॥ ೪೭ ॥

ಯದೀಯರೂಪಂ ಪ್ರಕಟೀಕರೋತಿ
ಪೀತಾ ಸ ತಸ್ಯೇತಿ ಹಿ ವೇದ ವಾದಃ ॥
ತಥಾ ವಿಧಸ್ಯಾನಕದುಂದುಭೇಸ್ತ
ತ್ಪಿತೃತ್ವಮಪ್ಯಸ್ತು ನ ತೇನ ಹಾನಿಃ ॥ ೪೮ ॥

" ಯಾವನು ಯಾವನ ಸ್ವರೂಪವನ್ನು ಪ್ರಕಟಮಾಡುತ್ತಾನೆಯೋ ಅವನು ಅವನಿಗೆ ತಂದೆಯು"; ಎಂಬುದಾಗಿ ವೇದವಚನವು ಸಾರುತ್ತಿರುವದು ಪ್ರಸಿದ್ಧವಿದೆ.

ಅದರಂತೆ ಶ್ರೀಕೃಷ್ಣನ ಸ್ವರೂಪವನ್ನು ಪ್ರಕಟಿಸುವ ಆನಕದುಂದುಭಿಗೆ (ವಸುದೇವನಿಗೆ) ಶ್ರೀಕೃಷ್ಣನ ಪಿತೃತ್ವವೂ ಇರಲಿ! ಆದರಿಂದ ಯಾವ ಅನಿಷ್ಟವೂ ಇಲ್ಲ. ‖ ೪೮ ‖

ಏತೇನೈವ ಪುರಾತ್ಮನಾ ಹ ಮುಭವಂ ತ್ವದ್ದೃಷ್ಟಿಮಾರ್ಗೋಽಧುನಾ
ತೇನೈವಾಸ ಮಿತೀರಯನ್ ಜನಿಮುಸೌ ಮೇನೇ ನ ಸೂನುಃ ಸ್ವಕಾತ್ ‖
ಮಾತಾ ತಂ ಕಿಲ ಮಾನಯುಂತ್ಯಭಿನವಂ ವಿಶ್ವಂ ಯದಿತ್ಯಾದಿನಾ
ಪ್ರಾಜ್ಞೋಽಸೌ ವಿನತಃ ಪಿತಾ ಚ ವಿದಿತೋಽಸೀತ್ಯಾದಿಭಿಸ್ತಂ ಗೃಣನ್ ‖ ೪೯ ‖

ಪುತ್ರನೆನಿಸುವ ನಾನು ನಿನ್ನಹಿಂದಿನಜನ್ಮದಲ್ಲಿ ಇದೇ ಶರೀರದಿಂದ ನಿನ್ನ ಕಣ್ಣಿಗೆ ಕಾಣಿಸಿಕೊಂಡಿದ್ದೆನು. ಹಿಂದೆ ನೋಡಿದ ಅದೇ ಶರೀರದಿಂದಲೇ ಈಗ ನಿನ್ನ ದೃಗ್ಗೋಚರನಾಗಿದ್ದೇನೆ"; ಹೀಗೆ ಹೇಳುತ್ತ ತನ್ನ ಉತ್ಪತ್ತಿಯನ್ನು ಅಂಗೀಕರಿಸಲಿಲ್ಲ. ತಾಯಿಯೆನಿಸುವ ದೇವಕಿಯೂ ಸಹ ಕಮನೀಯನಾದ ಕೃಷ್ಣನನ್ನು "ವಿಶ್ವಂ ಯದೇತತ್ ಸ್ವತನೌ ನಿಶಾಂತೇ" ಇತ್ಯಾದಿ ಶ್ಲೋಕಗಳಿಂದ ಸ್ತುತಿಸುತ್ತ ತನ್ನಿಂದ ಶ್ರೀಕೃಷ್ಣ ಜನನವೆಂಬುದನ್ನು ಒಪ್ಪಲಿಲ್ಲ. ಮತ್ತು ಮಹಾ ಮತಿವಂತನಾದ ತಂದೆಯೆನಿಸುವ ಈ ವಸುದೇವನೂ "ವಿದಿತೋಽಸಿ ಭವಾನ್ ಸಾಕ್ಷಾತ್" ಇತ್ಯಾದಿ ಶ್ಲೋಕಗಳಿಂದ, ಅವನನ್ನು ಸ್ತುತಿಸುತ್ತ, ತನ್ನಿಂದ ಅವನ ಜನನವೆಂಬುದನ್ನು ಸಮ್ಮತಿಸಲಿಲ್ಲ. ತಂದೆತಾಯ್ಗಳೂ ಹುಟ್ಟಿದ ಶಿಶುವಿನ ಜನನವನ್ನಂಗೀಕರಿಸಿಲ್ಲವಾದುದರಿಂದ ಶ್ರೀಕೃಷ್ಣನಿಗೆ ಜನನವಿಲ್ಲವೆಂದು ತಾತ್ಪರ್ಯ. ‖ ೪೯ ‖

ಜಾನಾತಿ ಮಾತಾ ಪರಮಾತ್ಮಜಾತಂ
ನೂನಂ ಪಿತಾಽಪಿಕ್ವಚಿದೇವ ಲೋಕೇ ‖
ತಾಭ್ಯಾಮನಂಗೀಕೃತ ಕೃಷ್ಣಜನ್ಮ
ಕೋವಾ ಪುಮಾನ್ ಸಾಧಯಿತುಂ ಸಮರ್ಥಃ ‖ ೫೦ ‖

ಲೋಕದಲ್ಲಿ ತಾಯಿಯೊಬ್ಬಳೇ ತನ್ನಿಂದ ಹುಟ್ಟಿದುದೆಂಬುದನ್ನು ನಿಶ್ಚಯದಿಂದ ತಿಳಿಯುತ್ತಾಳೆ. ತಂದೆಯಾದರೋ ಕೆಲವಡೆಗಳಲ್ಲಿಯೇ ತಿಳಿಯುತ್ತಾನೆ. ಇದು ಪ್ರಸಿದ್ಧವು. ತಂದೆತಾಯ್ಗಳೆನಿಸಿದ ವಸುದೇವ ದೇವಕಿಯರೀರ್ವರಿಂದ ಅಂಗೀಕರಿಸಲ್ಪಡದ ಶ್ರೀಕೃಷ್ಣ ಜನನವನ್ನು ಸಮರ್ಥಿಸಲು ಯಾವ ಪುರುಷನು ಸಮರ್ಥನು? ಯಾವನೂ ಸಮರ್ಥನಲ್ಲವೆಂದು ಅರ್ಥ. ‖ ೫೦ ‖

ಸ್ತುತಿಂ ಸ್ವಪಿತ್ರೋರವಧಾರ್ಯ ಯೋಽಸೌ
ಬಭೂವ ಪಶ್ಚಾಚ್ಛಿಶುವೇಷಧಾರೀ ‖
ಅಸೂತ ತಂ ಕಾನು ತದಾ ಮೃಗಾಕ್ಷೀ
ಪುರಾ ಪುರಾಣಾಕೃತಿಮಪ್ರಮೇಯಮ್ ‖ ೫೧ ‖

ತನ್ನ ತಂದೆ ತಾಯ್ಗಳೆನಿಸಿದ ವಸುದೇವ ದೇವಕಿಯರ ಸ್ತುತಿಯನ್ನು ಕೇಳಿ "ಉಪಸಂಹರ ವಿಶ್ವಾತ್ಮನ್" ಇತ್ಯಾದಿಯಾದ ಅವರ ಪ್ರಾರ್ಥನೆಯ ಅನಂತರ ಅವರು ನೋಡುವಾಗಲೇ ಯಾವನು ಶಿಶು ರೂಪವನ್ನು ತಾಳಿದನೋ ಅಂಥ ಪುರಾತನ ಶರೀರದವನೂ ಅಪ್ರಮೇಯನೂ ಆದ ಆ ಶ್ರೀಕೃಷ್ಣನನ್ನು ಯಾವ ಹರಿಣಾಕ್ಷಿಯು (ಸ್ತ್ರೀಯು) ಹೆತ್ತಳು. ॥ ೫೧ ॥

ಯದೀಹ ಜಾತೋ ವಸುದೇವ ವೀರ್ಯಾತ್
ತದಾ ಕುತಸ್ತಸ್ಯ ವಿಭೂಷಣಾನಿ ॥
ವರಾಂಬರಂ ಕೌಸ್ತುಭರತ್ನ ಮುದ್ಯ
ತ್ಸು ದರ್ಶನಂ ಶಂಖ ಗದಾದಿ ಜಾತಮ್ ॥ ೫೨ ॥

ಈ ಭೂಮಿಯಲ್ಲಿ ಶ್ರೀಕೃಷ್ಣನು ವಸುದೇವನ ವೀರ್ಯದಿಂದ ದೇವಕಿಯಲ್ಲಿ ಹುಟ್ಟಿದವನಾಗಿದ್ದರೆ, ಹುಟ್ಟಿದ ಶ್ರೀಕೃಷ್ಣ ಶಿಶುವಿಗೆ. ಮುಕುಟ ಕುಂಡಲಾದಿ ಆಭರಣಗಳೂ ಕೌಸ್ತುಭರತ್ನ. ಬೆಳಗುವ ಸುದರ್ಶನ, ಶಂಖ,ಗದಾ, ಕೌಮೋದಕೀ ಮುಂತಾದವುಗಳೂ ಎಲ್ಲಿಂದ ಹುಟ್ಟಿದವು ? ॥ ೫೨ ॥

ಅಹೋ ಪಿಶಾಚಾ ಅಪಿ ದೇಹಿದೇಹೇ
ಗತಾಗತಂ ಶಕ್ತಿಯುತಾ ಲಭಂತೇ ॥
ಅನಂತಶಕ್ತೇಃ ಪರಮಸ್ಯ ನ ಸ್ಯಾತ್
ಕುತೋ ಬಹಿರ್ನಿರ್ಗಮಮಪಿವ ತರ್ಹಿ ॥ ೫೩ ॥

ಅಂತರ್ಧಾನಾದಿ ಶಕ್ತಿಯುಳ್ಳ ಪಿಶಾಚಿಗಳೂ ಸಹ ದೇಹಧಾರಿಗಳ ಶರೀರಗಳಲ್ಲಿ ಗಮನಾಗಮನಗಳನ್ನು ಪಡೆಯುತ್ತವೆ. ಅಂದಮೇಲೆ, ಅಪರಿಮಿತ ಶಕ್ತಿಸಂಪನ್ನನಾದ ಸರ್ವೋತ್ತಮ ಶ್ರೀಕೃಷ್ಣನಿಗೆ ದೇವಕಿಯ ಉದರದಿಂದ ಕೇವಲ ಹೊರಬಂದಿರುತ್ತಾನೆಂಬುದು ಏಕೆ ಸಂಭವಿಸಲಾರದು? ಅಲ್ಪಶಕ್ತಿಯುಳ್ಳ ಪಿಶಾಚಿಗಳಲ್ಲಿರುವ ವಿಶ್ವಾಸವು ಪರಮಾತ್ಮನಲ್ಲಿಲ್ಲದಿರುವುದು ಆಶ್ಚರ್ಯವೇ! ॥ ೫೩ ॥

ಯದಾ ನೃಸಿಂಹಾಕೃತಿರಾವಿರಾಸೀತ್
ಪದಾಹತಸ್ತಂಭವರಾದ್ಧಿ ಪೂರ್ವಮ್ ॥
ತದಾನು ಕಾ ಸ್ತ್ರೀ ಸುಷುವೇ ಮುಕುಂದಂ
ಸ ಕಸ್ಯ ವೀರ್ಯಾದಜನಿಷ್ಟ ಕಾಯಃ ॥ ೫೪ ॥

ಹಿಂದೆ, ಹಿರಣ್ಯಕಶ್ಯಪುವಿನ ಪಾದ ತಾಡನದಿಂದ ಬಿರಿದ ಕಂಬದಿಂದ ತೋರಿಬಂದ ಆ ನರಸಿಂಹಾಕೃತಿಯಾದ ಪರಮಾತ್ಮನನ್ನು ಆಗ ಯಾವ ಸ್ತ್ರೀಯು ಪ್ರಸವಿಸಿದ್ದಳು ? ಆ ನೃಸಿಂಹರೂಪೀ ಹರಿಯ ಶರೀರವು ಯಾವನ ವೀರ್ಯದಿಂದ ಜನಿಸಿದ್ದಿತು ? ॥ ೫೪ ॥

ತಥೈವ ಮಾಯಾ ಹರಿಣೋಪದಿಷ್ಟಾ
ಬಭೂವ ನಂದಸ್ಯ ಕಲತ್ರರತ್ನೇ ||
ಹರಿಸ್ತ್ವಗಿತ್ಯಾದಿ ವಿಮೋಹರಾಶೇ
ರ್ಭವಿಷ್ಯತೋಽಸ್ಯಾ ಇವ ಮೂಲಭೂತಾ || ೫೫ ||

ಶ್ರೀಹರಿಯಿಂದ ಆಜ್ಞಪ್ತಳಾದ ಮಹಾಲಕ್ಷ್ಮಿಯು, ಹರಿಯ ಹೇಳಿಕೆಯಂತೆಯೇ ನಂದನಗೋಪನ ಶ್ರೇಷ್ಠ ಪತ್ನಿಯಾದ ಯಶೋದೆಯಲ್ಲಿ, "ಕೃಷ್ಣನು ನನ್ನ ಮಗನು" ಈ ಮುಂತಾಗಿ ಹುಟ್ಟುವ ಅವಳ ಭ್ರಮಸಮೂಹಕ್ಕೆ ಮೂಲ ಕಾರಣಳೋ ಎಂಬಂತೆ ಮಾಯಾ (ದುರ್ಗಾ) ರೂಪದಿಂದ ಅವತರಿಸಿದಳು. ||೫೫||

ಯದಿ ಸ್ಮ ಧೀಮಾನ್ ವಸುದೇವಗೇಹೇ
ವಾಸೋ ಮಮಸ್ಯಾದಿಹ ತರ್ಹಿ ಕಂಸಃ ||
ಸುಹೃದ್ವಧ ಕ್ಲೇಶವಿದೂರ ಏವ
ಯಮಾತಿಥಿಃ ಸ್ಯಾದಗಮದ್ವ್ರಜಂ ತತಃ || ೫೬ ||

ಬಹು ಚತುರನಾದ ಶ್ರೀಕೃಷ್ಣನು, "ವಸುದೇವನ ಮನೆಯಲ್ಲಿ ನಾನು ...ಸಿಸಿದರೆ ನಾನು ಮಾಡುವ ತನ್ನ ಬಂಧು ಮಿತ್ರ ಮೊದಲಾದವರ ವಧೆಯಿಂದುಂಟಾಗುವ ಕ್ಲೇಶವನ್ನು ಅನುಭವಿಸದೆಯೇ ಕಂಸನು ಯಮನ ಅತಿಥಿಯಾಗಿ ಹೋದಾನು!" ಎಂಬುದನ್ನು ವಿಚಾರಿಸಿಯೇ ಅಲ್ಲಿಂದ ಗೋಕುಲಕ್ಕೆ ತೆರಳಿದನು. || ೫೬ ||

ನ ಕಂಸಭೀತ್ಯಾಭಿಯಯೌ ವ್ರಜಂ ಸ
ಸ್ವಸಂಶ್ರಿತಾನಾಮಭಯಸ್ಯ ಕರ್ತಾ ||
ಸ್ವವಲ್ಲಭಾಂ ನಂದಕಲತ್ರ ಜಾತಾಂ
ಮನೋರಮಾಂ ವೀಕ್ಷಿತುಮೇವ ಸೋಽಗಾತ್ || ೫೭ ||

ತನ್ನನ್ನು ಆಶ್ರಯಿಸಿದವರ ಭಯವನ್ನು ನಾಶಪಡಿಸುವ ಶ್ರೀಕೃಷ್ಣನು ಕಂಸನ ಭೀತಿಯಿಂದ ಗೋಕುಲಕ್ಕೆ ಹೊರಡಲಿಲ್ಲ. ಆದರೆ ನಂದ ಪತ್ನಿ ಯಶೋದೆಯಲ್ಲಿ ಜನಿಸಿದ ತನ್ನ ಪ್ರಣಯದ ಪ್ರಾಣಕಾಂತೆಯನ್ನು ಕಾಣುವುದಕ್ಕೋಸ್ಕರವೇ ಅಲ್ಲಿಗೆ ಹೋದನು. || ೫೭ ||

ಕವಾಟ ಮುದ್ಘಾಟ್ಯ ಗೃಹಾಣಿ ವರ್ತ್ಮ
ದದುಃಕಿಲಾಸ್ಮೈ ಮಮ ಬುದ್ಧಿರಿತ್ಥಮ್ ||
ವನಸತ್ಪ್ರೀಶೋ ಬಹಿರಭ್ರಸಂಸ್ಥ
ಸ್ತದೀಕ್ಷಣಾರ್ಥೀ ಸ್ವ ಯಮುದ್ಬಿಭೇದ || ೫೮ ||

ಸಕಲ ಗೃಹಗಳು ಬಾಗಿಲುಗಳನ್ನು ತೆರೆದು ಈ ಶ್ರೀಕೃಷ್ಣನಿಗೆ ದಾರಿಯನ್ನು ಕೊಟ್ಟವು. ನನ್ನ ಬುದ್ಧಿಗೆ ತೋರುತ್ತದೆ ಹೊರ ಆಕಾಶದಲ್ಲಿರುವ, ವನಸ್ಪತಿಗಳ ಒಡೆಯನಾದ ಚಂದ್ರನು, ಆ ಶ್ರೀಕೃಷ್ಣನನ್ನು ನೋಡಲಪೇಕ್ಷಿಸಿ, ತಾನೇ ಆ ಬಾಗಿಲು ಕಪಾಟಗಳನ್ನು ತೆರೆದುಹಾಕಿದನು. ॥ ೪೮ ॥

ಕರೇ ನಿಧಾಯಾದ್ಭುತ ಬಾಲಮೇನ
ಮುಭೊದ್ವಹಿರ್ನಿಃಸರತೋಽಸ್ಯ ಶೌರೇಃ ॥
ನ ತದ್ಗೃಹದ್ವಾರ ಗಣೋಂತರಾಯಃ
ಕರಸ್ಥ ದೇವಸ್ಯ ಕುತೋಽಂತರಾಯಃ ॥ ೪೯ ॥

ಅದ್ಭುತ ಬಾಲಕನಾದ ಈ ಶ್ರೀಕೃಷ್ಣನನ್ನು ಕೈಯಲ್ಲಿ ಹಿಡಿದುಕೊಂಡು ಹೊರಹೊರಡುವ ವಸುದೇವನಿಗೆ ಕಾರಾಗೃಹದ ದ್ವಾರ ಸಮೂಹವು ಪ್ರತಿಬಂಧಕಗಳಾಗಲಿಲ್ಲ. ಏಕೆಂದರೆ ಹರಿಯನ್ನು (ದೇವನನ್ನು) ಕೈಯಲ್ಲಿ ಹಿಡಿದಿರುವವನಿಗೆ ವಿಘ್ನಗಳೇಕೆ ಬರುತ್ತವೆ ? ದೇವರ ಸ್ಮರಣೆಯುಳ್ಳವರಿಗೇ ವಿಘ್ನಗಳಿಲ್ಲದಿರುವಾಗ ದೇವರನ್ನು ಕೈಯಲ್ಲಿಟ್ಟುಕೊಂಡವರಿಗೆ ವಿಘ್ನಗಳಿಲ್ಲವೆಂಬುದನ್ನೇನು ಹೇಳತಕ್ಕದ್ದೆಂದು ಭಾವ ॥ ೪೯ ॥

ಅಗಣ್ಯ ಗೋಗೋಕುಲಗೋಪ ನಾಶ
ಮಭೀಪ್ಸತಾ ಸ್ವೇನ ಕರಿಷ್ಯಮಾಣಮ್ ॥
ಅಘಂ ಹಿ ಪೂರ್ವಂ ಪರಿ ಹರ್ತುಮೀಷದ್
ವವರ್ಷ ತಸ್ಮಿನ್ ಜಲದೋಽಧಿಮಾರ್ಗಮ್ ॥ ೫೦ ॥

ಅಸಂಖ್ಯ ಗೋವುಗಳು, ಗೋಕುಲ ಗೋಪಾಲಕರು, ಇವರುಗಳ ನಾಶವನ್ನು ಬಯಸುವ ತನ್ನಿಂದ ಮುಂದೆ ಮಾಡಲಾಗುವ ಅಪರಾಧವನ್ನು ಮುಂಚೆಯೇ ಪರಿಹರಿಸುವುದಕ್ಕೆಂಬಂತೆ ಮಾರ್ಗದಲ್ಲಿ ಶ್ರೀ ಕೃಷ್ಣನು ಹೋಗುವಾಗ ಮೇಘ ಸಮುಯದಾವು ಸ್ವಲ್ಪ ಮಳೆಯನ್ನು ಸುರಿಸಿತು. ॥ ೫೦ ॥

ಯದೇಷ ದೇವೇಶಿತುರಗ್ರಜತ್ವಂ
ಬಭಾರ ರೋಹಿಣ್ಯುದಯಾದ್ರಿ ಚಂದ್ರಃ ॥
ಅಘಸ್ಯ ತಸ್ಯ ಪ್ರಶಮೇಚ್ಛ ಏವ
ಪಥಿ ವ್ರಜಂತಂ ಫಣಿಪಃ ಸಿಷೇವೆ ॥ ೫೧ ॥

ಫಣಿರಾಜನಾದ ಶೇಷನು, ರೋಹಿಣಿಯಲ್ಲಿ ಹುಟ್ಟಿ (ಬಲರಾಮನಾಗಿ) ದೇವೇಶನಾದ ಶ್ರೀಕೃಷ್ಣನ ಅಣ್ಣನಾಗಿರುವುದೆಂಬ ಪಾಪದ ಪರಿಹಾರೇಚ್ಛೆ

ಯಿಂದೆಂಬಂತೆ, ದಾರಿಯಲ್ಲಿ ಹೋಗುತ್ತಿರುವ ಶ್ರೀಕೃಷ್ಣನಿಗೆ ಛತ್ರಾಕಾರವಾದ ವಿಶಾಲ ಹೆಡೆಗಳಿಂದ ಮಳೆಯನ್ನು ನಿವಾರಿಸಿ ಸೇವೆ ಮಾಡಿದನು. ॥ ೬೧ ॥

ವಿರಿಂಚಿ ವೈರಿಂಚ ಮುಖಾಮರಾಲಿಃ
ಪ್ರಬೋಧಯಂತೀವ ತದಾ ನನಾಮ ॥
ಪುರಾಣ ಪುಂಸಃ ಪುರುಷೋತ್ತಮಸ್ಯ
ನಮಸ್ಕೃತಿಂ ಲೋಕವಿಡಂಬನಸ್ಯ ॥ ೬೨ ॥

ಆ ಸಮಯದಲ್ಲಿ, ಬ್ರಹ್ಮರುದ್ರ ಮುಂತಾದ ದೇವತಾ ವೃಂದವು, ಮುಂದೆ ಲೋಕಾನುಸಾರವಾಗಿ ಹಿರಿಯರಿಗೆ ನಮಸ್ಕಾರ ಮಾಡಲಿರುವ ಪುರಾಣ ಪುರುಷನಾದ ಪುರುಷೋತ್ತಮನಿಗೆ, "ಹೀಗೆ ನಮಸ್ಕಾರವನ್ನು ಮಾಡಬೇಕು" ಎಂಬುದನ್ನು ತಿಳಿಸುವುದಕ್ಕೊ ಎಂಬಂತೆ ಅವನನ್ನು ನಮಸ್ಕರಿಸಿತು. ॥ ೬೨ ॥

ಪುರಾ ಸ್ವಭರ್ತುಃ ಪ್ರತಿಬಂಧಕರ್ತುಃ
ವಿಶೋಷಣಂ ಬಂಧನ ಮರ್ಕಕನ್ಯಾ ॥
ವಿಚಿಂತ್ಯ ಭೀ ತೇವ ದದೌ ಮುರಾರೇಃ
ಪ್ರವಾಹ ಮಾರಾತ್ ಪರಿಹೃತ್ಯ ಮಾರ್ಗಮ್ ॥ ೬೩ ॥

ಹಿಂದೆ ರಾಮಾವತಾರದಲ್ಲಿ ಲಂಕೆಗೆ ಹೋಗಲು ಮಾರ್ಗವನ್ನು ಪ್ರತಿಬಂಧಿಸಿದ ತನ್ನ ಪತಿಯಾದ ಸಮುದ್ರನಿಗೆ ರಾಮಬಾಣಾಗ್ನಿಯಿಂದಾದ ಶೋಷಣವನ್ನು ಸೇತು ಬಂಧನವನ್ನೂ ಆಲೋಚಿಸಿ, ಮಾರ್ಗವನ್ನು ಕೊಡದಿದ್ದರೆ ನನಗೂ ಅದೇ ಗತಿಯಾದೀತೆಂದು ಭಯಗೊಂಡವಳಂತೆ ಯಮುನೆಯು ತನ್ನ ಪ್ರವಾಹವನ್ನು ದೂರದಲ್ಲಿಯೇ ಬದಿಗೊತ್ತಿ ಮುರಾರಿಗೆ ಮಾರ್ಗವನ್ನಿತ್ತಳು. ॥ ೬೩ ॥

ಭವ ಪ್ರವಾಹೋಽಪಿ ತವೈವ ಮೇವೇ
ತ್ಯುದೀರಯಂತೀವ ಯಮಸ್ವಸಾ ಸಾ
ಕರಸ್ಥಕೃಷ್ಣಾಯ ದಿದೇಶ ದೂರೇ
ಪ್ರವಾಹ ಮಾಧಾಯ ಪದಾರ್ಹಪದ್ಯಾಮ್ ॥ ೬೪ ॥

"ಸಂಸಾರದ ಪ್ರವಾಹವೂ ನಿನಗೆ ನನ್ನ ಹಾಗೆ ಪಾದ ಪರಿಮಿತವೇ" ಎಂಬುದನ್ನು ನುಡಿಯುತ್ತಿರುವವಳಂತೆ, ಯಮಭಗಿನಿಯಾದ ಯಮುನೆಯು ತನ್ನ ಪ್ರವಾಹವನ್ನು ದೂರದಲ್ಲಿಯೇ ನಿಲ್ಲಿಸಿ, ಕೈಯಲ್ಲಿ ಕೃಷ್ಣನನ್ನು ಹಿಡಿದ ವಸುದೇವನಿಗೆ ಕಾಲು ಮಾತ್ರ ಪ್ರವಾಹವಿದ್ದಂತೆ ದಾರಿಯನ್ನು ಕೊಟ್ಟಳು. ॥ ೬೪ ॥

ವಿಭೂಷಣೇಷು ಪ್ರತಿಬಿಂಬಿತಾಹಿಃ
ಪ್ರಹೃಷ್ಟ ಪಾಣಿದ್ವಯ ರೋಮಪತ್ರಃ
ಸ ಕೃಷ್ಣ ವಾಹೋ ವಿನತಾಂಗಜಾತಃ
ಪಿತಾ ಗರುತ್ಮಾನಿವ ವೇಗತೋಽಗಾತ್ || ೬೫ ||

ಆಭರಣಗಳಲ್ಲಿ ಪ್ರತಿಬಿಂಬಿಸಿದ ಸರ್ಪಗಳಿಂದ, ಹಾಗೂ ಕೃಷ್ಣನನ್ನು ಎರಡು ಕೈಗಳಲ್ಲಿ ಹಿಡಿದುದುದರಿಂದ ಹರ್ಷಗೊಂಡು ಅಂಚಿತಗಳಾದ ರೋಮಗಳೆಂಬ ರೆಕ್ಕೆಗಳಿಂದ, ಗರುಡನಂತ ತೋರುವ, ತಂದೆಯಾದ ವಸುದೇವನು ಕೃಷ್ಣನನ್ನು ಎತ್ತಿಕೊಂಡು ಗರುಡವೇಗದಿಂದ ಪಯಣಿಸಿದನು. || ೬೫ ||

ಗರ್ಜದ್ವಾರ್ವಹ ದುಂದುಭಿಃ ಪರಿಪತದ್ಗಂಧರ್ವಬಂದಿಧ್ವನಿಃ
ಹಸ್ತಾಬ್ಜೇಧ್ವಜಚಿಹ್ನಿತೇ ಸ ನಿವಸನ್ ಸತ್ಪುಷ್ಪಕ ಶ್ರೀಮುಷಿ ||
ಸ್ವರ್ಮುಕ್ತಾಮಲಮಾಲ್ಯಚಾಮರಗಣಚ್ಛತ್ರಾಯಿತಾಹೀಶ್ವರಃ
ಶಕ್ರಾದ್ಯೈಃ ಪರಿವಾರಿತಃ ಪಥಿಯಯೌ ರಾಜಾಧಿರಾಜಪ್ರಭಃ || ೬೬ ||

ಗರ್ಜಿಸುತ್ತಿರುವ ಮೇಘದುಂದುಭಿಗಳಿಂದಲೂ, ಸ್ತುತಿಸುವ ಗಂಧರ್ವರೆಂಬ ಬಂದಿಗಳ ಧ್ವನಿಗಳಿಂದಲೂ, ಪುಷ್ಪಕ ವಿಮಾನದ ಕಾಂತಿಯನ್ನು ಮೀರಿಸುವ ಶೋಭೆಯುಳ್ಳ ಧ್ವಜಾದಿಚಿಹ್ನಚಿಹ್ನಿತವಾದ ವಸುದೇವನ ಹಸ್ತಾರವಿಂದದಲ್ಲಿ ವಾಸಿಸುತ್ತ (ಕುಳಿತು) ಸ್ವರ್ಗಲೋಕದಿಂದ ದೇವತೆಗಳು ಚಲ್ಲಿದ ಅಚ್ಚ ಮುತ್ತಿನ ಮಾಲೆಗಳೆಂಬ ಚಾಮರಸಮೂಹದಿಂದಲೂ, ಶೇಷನೆಂಬ ಶ್ವೇತಚ್ಛತ್ರದಿಂದಲೂ 'ಇಂದ್ರಾದಿ ದೇವತಾ ಪರಿವಾರದಿಂದಲೂ ದಾರಿಯಲ್ಲಿ ಮೆರೆಯುತ್ತ, ರಾಜಾಧಿರಾಜ ಪ್ರಭೆವುಳ್ಳವನಾಗಿ ಕಾಂತಿಯುಳ್ಳ ಶ್ರೀಕೃಷ್ಣನು ವ್ರಜಕ್ಕೆ ಸಾಗಿದನು. || ೬೬ ||

ರೋಮ್ಣಾಂ ಹರ್ಷಣಕಾರಿಣಿ ಶ್ರವಣತಃ ಪಾಪೌಘ ವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ಚಿತ್ರ ವಿಮಲಶ್ಲಾಘ್ಯಾರ್ಥ ಸಂದಾಯಿನಿ ||
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷು ಮಹಿತಃ ಸರ್ಗೋಽಯಮಾದ್ಯೋ
ಮುದಾಮ್ || ೬೭ ||

ಇತಿಶ್ರೀಮತ್ಕವಿಕುಲತಿಲಕ ಶ್ರೀಮದ್ವಾದಿರಾಜತೀರ್ಥ ಪೂಜ್ಯ ಚರಣ ವಿರಚಿತೇ
ಶ್ರೀರುಕ್ಮಿಣೀಶವಿಜಯೇ ಪ್ರಥಮಃ ಸರ್ಗಃ ಸಮಾಪ್ತಃ

ಶಬ್ದಾರ್ಥಗಳ ಚಮತ್ಕಾರದಿಂದ ರೋಮಾಂಚಕಾರಕವೂ ಶ್ರವಣಮಾತ್ರದಿಂದ ಪಾಪರಾಶಿಗಳ ವಿನಾಶಕವೂ ಆದರದಿಂದ ವಿಮರ್ಶಿಸುವವರಿಗೆ ವಿವಿಧ ವಿಮಲ ಶ್ಲಾಘ್ಯ ಅರ್ಥಗಳ ಪ್ರಕಾಶಕವೂ ಆದ ಶ್ರೀ ರುಕ್ಮಿಣೀಶವಿಜಯವೆಂಬ ಮಹಾಕಾವ್ಯವು, ಭೂಮಿಯಲ್ಲಿ ಶ್ರೀವಿಷ್ಣುಭಕ್ತರೂ ಉತ್ತಮರೂ ಆದ ವಾದಿರಾಜರೆಂಬ ಕವಿಶ್ರೇಷ್ಠರಿಂದ ರಚಿತವಾಗುತ್ತಿರಲು ಸ್ವರ್ಲೋಕದಲ್ಲಿ ಸುರಮಂಡಲಿಯಲ್ಲಿ ಆನಂದವರ್ಧಕವಾಗಿ ಮೊದಲನೆಯ ಭಾಗವು (ಸರ್ಗವು) ಉತ್ಪನ್ನವಾಯಿತು. ॥ ೬೭ ॥

ಹೀಗೆ ಕವಿಕುಲತಿಲಕರಾದ ಶ್ರೀಮದ್ವಾದಿರಾಜತೀರ್ಥ ಪೂಜ್ಯ ಚರಣರಿಂದ ವಿರಚಿತವಾದ ಶ್ರೀರುಕ್ಮಿಣೀಶವಿಜಯ ಮಹಾಕಾವ್ಯದಲ್ಲಿ ಪ್ರಥಮ ಸರ್ಗವು ಮುಗಿದುದು.

— ಶ್ರೀಮಧ್ವೇಶಾರ್ಪಣಮಸ್ತು —

ಶ್ರೀ ರುಕ್ಮಿಣೀಶವಿಜಯ— ಎರಡನೆಯ ಸರ್ಗ.

ಶ್ರೀ ವಾದಿರಾಜರು ಕಾವ್ಯವನ್ನು ಮುಂದುವರೆಯಿಸುತ್ತ ಪ್ರಸಂಗೋಚಿತ ವಾಗಿ ಉತ್ಪ್ರೇಕ್ಷಾದಿ ಅಲಂಕಾರಗಳಿಂದ ಕಥೆಯನ್ನು ವರ್ಣಿಸುತ್ತಾರೆ.

ತತೋ ಯಶೋದಾಂ ಸ್ವಕುಲಸ್ಯ ಪುಣ್ಯ
ಲಸದ್ಯಶೋದಾಂ ಹಿ ಕರಿಷ್ಯಮಾಣಃ
ಸ ಗೋಕುಲಂ ಗೋಕುಲಗೋಪಪುಂಜ
ವಿಭೂಷಿತಂ ಪ್ರಾವಿಶದಬ್ಜ ನೇತ್ರಃ ॥ ೧ ॥

ಮಾರ್ಗವನ್ನು ಕ್ರಮಿಸಿದ ಅನಂತರ, ಯಶೋದೆಯನ್ನು ತನ್ನ ಕುಲಕ್ಕೆ ಪುಣ್ಯ ಹಾಗು ಶೋಭಿಸುವ ಕೀರ್ತಿಗಳನ್ನು ಕೊಡುವವಳನ್ನಾಗಿ ಮಾಡಲು ಗೋವು ಗಳ ಹಾಗು ಗೋಪಾಲಕರ ಗುಂಪುಗಳಿಂದ ಅಲಂಕೃತವಾದ ಗೋಕುಲವನ್ನು ಕಮಲನಯನನಾದ ಶ್ರೀಕೃಷ್ಣನು ಪ್ರವೇಶಿಸಿದನು.

ವಿಕೀರ್ಣ ಪುಷ್ಪಾಂಬುದಲಂಬಿ ಚಂದ್ರ
ಮಹಃ ಪತಾಕಾ ನವವಾರಿಸಿಕ್ತಾ ॥
ಫಣೀಂದ್ರ ಕಂಠೋಧರ ರತ್ನಕಾಂತಿ
ವಿಚಿತ್ರಿತಾ ಸಾ ಗೃಹವೀಥಿಕಾಽಽಸೀತ್ ॥ ೨ ॥

ಶ್ರೀಕೃಷ್ಣನು ಗೋಕುಲವನ್ನು ಪ್ರವೇಶಿಸುತ್ತಿರಲಾಗಿ ದೇವತೆಗಳಿಂದ ಹರವ ಲ್ಪಟ್ಟ ಪುಷ್ಪಗಳುಳ್ಳದ್ದಾಗಿಯೂ, ಮೇಘಗಳ ಮಧ್ಯದಿಂದ ಇಳಿದು ಬಂದಿರುವ ಚಂದ್ರಕಿರಣಗಳೆಂಬ ಪತಾಕೆಗಳುಳ್ಳದ್ದಾಗಿಯೂ, ಹೊಸ ಮಳೆಯ ತುಂತುರಗಳಿಂದ ಥಳಿಗಳುಳ್ಳದ್ದಾಗಿಯೂ ಸಂಚರಿಸುವ ಫಣಿರಾಜನ ಕಂಠ,ಉದರ,ರತ್ನಗಳು, ಇವು ಗಳ ಕಾಂತಿಯಿಂದ ಬಣ್ಣ ಬಣ್ಣದ ರಂಗವಲ್ಲಿಗಳುಳ್ಳದ್ದಾಗಿಯೂ ನಂದ ಗೋಪನ ಮನೆಯ ಮಾರ್ಗವು ಚಿತ್ರವಿಚಿತ್ರವಾಗಿ ಶೋಭಿಸಿತು. ॥ ೨ ॥

ಫಣಾವಲೀ ತೋರಣ ಭಾಗ್ವಿಮಾನ
ವಿತಾನಯುಕ್ತೋರಗರಾಜ ಮೌಲೇಃ ॥
ಪತತ್ಪಯೋಬಿಂದು ಸಿತಾಕ್ಷತಾ ಸಾ
ಸ್ಥಲೀ ನಿಶೀಥೇಽಪಿ ವಿಭೂಷಿತೇವ ॥ ೩ ॥

ಶೇಷನ ಸಹಸ್ರಾರು ಹೆಡೆಗಳೆಂಬ ತೋರಣಗಳಿಂದಲೂ ಸಂದಣಿಸಿದ ದೇವತೆ ಗಳ ವಿಮಾನಗಳೆಂಬ ಮೇಲ್ಗಟ್ಟುಗಳಿಂದಲೂ, ಶೇಷನ ಹೆಡೆಗಳ ಮೇಲೆ ಬಿದ್ದು

ಜರಿದು ಬೀಳುವ ಜಲಬಿಂದುಗಳೆಂಬ ಶುಭ್ರಮಂಗಲಾಕ್ಷತೆಗಳಿಂದಲೂ ಶೋಭಿಸುವ ಆ ಗೋಕುಲವು ಅರ್ಧರಾತ್ರಿಯಲ್ಲಿಯೂ ಸಹ ಅಲಂಕೃತವಾದಂತೆ ಇದ್ದಿತು. || ೩ ||

ವಿಮುಕ್ತ ವರ್ಗಾಧಿಪತಿಂ ಪತಿಂ ಶ್ರೀಃ
ಶಿಶುಂ ಸಮಾಲೋಕ್ಯ ಸುಲಜ್ಜಿತೇವ ||
ಇಯೇಷ ದೋಷಾಂತರ ಏವ ಗಂತುಂ
ಸ್ವಯಂ ಗೃಹೀತಾರ್ಭಕ ರಮ್ಯರೂಪಾ || ೪ ||

ಶ್ರೀ ಲಕ್ಷ್ಮೀದೇವಿಯು ಮುಕ್ತರ ಗುಂಪುಗಳ ಒಡೆಯನಾದ ತನ್ನ ಪತಿಯು, ಶಿಶುವಾಗಿರುವುದನ್ನು ಕಂಡು ಲಜ್ಜೆಗೊಂಡವಳೋ ಎಂಬಂತೆ ತಾನೂ ರಮ್ಯವಾದ ಶಿಶುರೂಪವನ್ನು ತಾಳಿ, ರಾತ್ರಿಯಲ್ಲಿಯೇ ಸ್ಥಳಾಂತರಕ್ಕೆ ತೆರಳಲಿಚ್ಛಿಸಿದಳು. || ೪ ||

ಹರೇಃ ಪ್ರಿಯಾ ತದ್ಭಗಿನೀತ್ವಮದ್ಯ
ಸಮೀಯುಷೀ ತತ್ರ ನ ಸಾ ಸ್ಥಿರಾಽಽಸೀತ್ ||
ಮನೋಜ್ಞ ಮೂರ್ತ್ಯಂತರತಸ್ತದೀಯ
ವಿಶಾಲವಕ್ಷಸ್ಥಲ ಮೇತ್ಯ ತೃಪ್ತಾ || ೫ ||

ಲಕ್ಷ್ಮೀದೇವಿಯು, "ಶ್ರೀ ಹರಿಯ ಪ್ರಿಯಪತ್ನಿಯಾದ ನಾನು, ಈಗ ಅವನ ಹತ್ತಿರ ತಂಗಿಯಾಗಿರುವುದು ಚನ್ನವಲ್ಲ" ಎಂಬ ಕಾರಣದಿಂದ ಗೋಕುಲದಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ. (ಮಥುರೆಗೆ ತೆರಳಿದಳು) ಮತ್ತೊಂದು ಮನೋಹರರೂಪದಿಂದ ಅವನ ವಿಶಾಲವಾದ ವಕ್ಷಸ್ಥಲದಲ್ಲಿ ನಿಂತು, ತೃಪ್ತಳಾದಳು || ೫ ||

ಮುಕುಂದಸೇವಾರ್ಹ ಫಲಂ ಸ್ಮ ತಾವದ್-
ವಹನ್ನಿವಾಥಾನಕದುಂದುಭಿಸ್ತಾಮ್ ||
ಶಿಶುಸ್ವರೂಪಾಂ ಕಮಲಾಂ ಸ್ವಹಸ್ತೇ
ಸ ಬಿಭ್ರದಭ್ಯಾಗಮದಾತ್ಮವಾಸಮ್ || ೬ ||

ವಸುದೇವನು ಮೋಕ್ಷದಾಯಕನಾದ ಪರಮಾತ್ಮನ ಸೇವೆಗೆ (ಶ್ರೀ ಕೃಷ್ಣನನ್ನು ಎತ್ತಿಕೊಂಡು ಬಂದ) ಉಚಿತವಾದ ಫಲವನ್ನು ಪಡೆದವನಂತೆ ಶಿಶುರೂಪಳಾದ ಲಕ್ಷ್ಮೀದೇವಿಯನ್ನು ತನ್ನ ಕೈಯಲ್ಲಿ ಎತ್ತಿಕೊಂಡವನಾಗಿ, ತನ್ನ ವಾಸಸ್ಥಲಕ್ಕೆ (ಮಥುರೆಗೆ) ಬಂದನು.

ಸುತಂ ಯಶೋದಾಶಯನೇ ನಿಧಾಯ
ವಿರಿಂಚಿಪೂರ್ವಾಮರ ಮುಖ್ಯತಾತಮ್ ||
ವಿವೇಶ ಕಂಸಸ್ಯ ಗೃಹಂ ಸ ಶೌರಿಃ
ಪ್ರಗೃಹ್ಯ ತನ್ಮೃತ್ಯುಮಿವಾಂಬಿಕಾಂ ತಾಮ್ || ೭ ||

ವಸುದೇವನು, ತನ್ನ ಮಗನಂತೆ ಅವತರಿಸಿದ, ಬ್ರಹ್ಮಾದಿದೇವತೆಗಳಿಗೆ ಮುಖ್ಯಜನಕನಾದ ಶ್ರೀ ಕೃಷ್ಣನನ್ನು, ಯಶೋದೆಯ ಹಾಸುಗೆಯ ಮೇಲೆ ಮಲಗಿಸಿ, ಕಂಸನಿಗೆ ಮೃತ್ಯುವಿನಂತಿರುವ ದುರ್ಗಾರೂಪಳಾದ ಆ ಶಿಶುವನ್ನು ತೆಗೆದುಕೊಂಡು ಕಂಸನ ಮನೆಯನ್ನು ಪ್ರವೇಶಿಸಿದನು. ‖೭‖

ಪ್ರಭಾತಕಾಲೇ ಖಳಮುಭ್ರಗಾ ಸಾ
ಪ್ರಬೋಧ್ಯ ಬಂಧಾತ್ಪಿತರೌ ವಿಯೋಜ್ಯ ‖
ಹರೇರ್ವಿಯೋಗೋದಿತ ಚಿತ್ತಚಿಂತಾಂ
ಬಿಭೇದ ಮಾತುಃಶಯನೀಯಸಂಸ್ಥಾ ‖೮‖

ಬೆಳಗಾಗಲು, ಆ ಶಿಶುರೂಪಳಾದ ದುರ್ಗಾದೇವಿಯು ಕಂಸನ ಕೈಯಿಂದ ಆಕಾಶಕ್ಕೆ ಹಾರಿ, ಕಂಸನಿಗೆ ಶತ್ರುಜನನದ ವೃತ್ತಾಂತವನ್ನು ತಿಳಿಸಿ, ತಂದೆ ತಾಯ್ಗಳಾದ ವಸುದೇವ ದೇವಕಿಯರನ್ನು ನಿಗಡಬಂಧದಿಂದ ಬಿಡಿಸಿ, ದೇವಕಿಯ ಹಾಸುಗೆಯಲ್ಲಿಯೇ ಇರುವವಳಾಗಿ ಶ್ರೀಕೃಷ್ಣನ ವಿಯೋಗದಿಂದುಂಟಾದ ಮಾನಸಿಕ ವ್ಯಥೆಯನ್ನು ಪರಿಹರಿಸಿದಳು. ‖೮‖

ಸೂರ್ಯೋದಯವನ್ನು ವರ್ಣಿಸುತ್ತಾರೆ—.

ಸ್ನಾತ್ವಾ ಪೂರ್ವಪಯೋನಿಧಾವಚಲ ಸತ್ಪೀಠಾಧಿರೂಢಃ ಕರೈಃ
ಪದ್ಮಾನಿ ಪ್ರತಿಗೃಹ್ಯ ಸಾಂದ್ರತಿಮಿರಾಣ್ಯುನ್ಮೀಲ್ಯ ರಾಗಾವೃತಃ ‖
ಶಿಂಜತ್ಪಕ್ಷಿಗಣಾನ್ನಿಶಮ್ಯ ಪರಮಂ ಕೃಷ್ಣಾವತಾರಂ ರವಿಃ
ತತ್ಪೂಜಾರ್ಥಮಿವೋದಿತೋ ವ್ರಜಗೃಹದ್ವಾರೇಷು ತಾನ್ ಪ್ರಾಹಿಣೋತ್
‖೯‖

ಸೂರ್ಯನು, ಕಿಲಕಿಲ ಧ್ವನಿಮಾಡುವ ಪಕ್ಷಿಗಳ ವೃಂದದಿಂದ ಉತ್ತಮವಾದ ಕೃಷ್ಣಾವತಾರವನ್ನು ಕೇಳಿ, ಶ್ರೀಕೃಷ್ಣನ ಪೂಜೆ ಮಾಡುವುದಕ್ಕೋಸುಗವೋ ಏನೋ ಎಂಬಂತೆ ಪೂರ್ವಸಮುದ್ರದಲ್ಲಿ ಮಿಂದು, ಉದಯಾಚಲವೆಂಬ ಪೀಠವನ್ನು ಆರೋಹಣ ಮಾಡಿ, ದಟ್ಟವಾಗಿರುವ ಕತ್ತಲವನ್ನು ಕಳೆದು, ತನ್ನ ಕರ(ಕಿರಣ)ಗಳಿಂದ ಪದ್ಮಗಳನ್ನು ತೆಗೆದುಕೊಂಡು, (ಅರಳಿಸಿ) ಭಕ್ತಿಯುಕ್ತನಾಗಿ ಗೋಕುಲದ ಗೃಹದ್ವಾರಗಳಲ್ಲಿ ತನ್ನ ಕರ(ಕಿರಣ)ಗಳನ್ನು ಮುಂಚಾಚಿದನು, ಸೂರ್ಯೋದಯವಾಗಿ ಬಿಸಿಲು ಗೋಕುಲದಲ್ಲಿ ಹರಡಿತೆಂದು ತಾತ್ಪರ್ಯವು. ‖೯‖

ಸುಮೇರು ಸಂಸ್ಥೈರಮರೈರುಪಾಯಾತ್
ಸಮುದ್ಧೃತಂ ವಿಷ್ಣು ಪದಾರ್ಚನಾಯ ‖
ಸಮುದ್ರ ವಾಪೀಸ್ಥ ಸಹಸ್ರ ಪತ್ರ-
ಮಿವೋದಿತೋ ಭಾತಿ ಸಹಸ್ರರಶ್ಮಿಃ ‖೧೦‖

ಮೇರು ಪರ್ವತದಲ್ಲಿರುವ ದೇವತೆಗಳಿಂದ, ಆಕಾಶವನ್ನು ಬೆಳಗಿಸಲು, (ಶ್ರೀಹರಿಯ ಪಾದಗಳನ್ನುಪೂಜಿಸಲು) ಎತ್ತಲ್ಪಟ್ಟ ಸಮುದ್ರವೆಂಬ ಸರೋವರದಲ್ಲಿರುವ ಸಹಸ್ರ ದಲಗಳುಳ್ಳ ಕಮಲವೋ ಎಂಬಂತೆ ಉದಯಹೊಂದಿದ ಸೂರ್ಯನು ಸಹಸ್ರ ಕಿರಣಗಳಿಂದ ಶೋಭಿಸಿದನು. ॥ ೧೧ ॥

ದಿವಿ ದ್ಯುರತ್ನೇ ಭ್ಯುದಿತೇಂಬುಜಾನಿ
ಭುವಿ ಪ್ರಸೇದುರ್ಭುವನೋದಯಾನಿ ॥
ಇಹ ಪ್ರಜಾತೇ ಯದುವಂಶರತ್ನೇ
ಸುರಾನನಾಬ್ಜಾನಿ ಚ ನಾಕ ಲೋಕೇ ॥ ೧೧ ॥

ಆಕಾಶದಲ್ಲಿ ದ್ಯುರತ್ನನಾದ ಸೂರ್ಯನು ಉದಯಿಸುತ್ತಿರಲು, ಜಲಗಳಿಗೆ ಶೋಭೆಯನ್ನೀಯುವ ಕಮಲಗಳು ಭೂಮಿಯಲ್ಲಿ ಅರಳಿದವು. ಭೂಮಿಯಲ್ಲಿ ಯದುವಂಶರತ್ನನಾದ ಶ್ರೀಕೃಷ್ಣನು ಉದಯಿಸುತ್ತಿರಲು ಸ್ವರ್ಗಲೋಕದಲ್ಲಿ ದೇವತೆಗಳ ಮುಖಗಳೆಂಬ ಕಮಲಗಳು ವಿಕಾಸ ಹೊಂದಿದವು. ॥ ೧೨ ॥

ತರುವ್ರಜೆ ಪಕ್ಷಿಗಣಾಶ್ಚರಂ ತೋ
ಜಗುರ್ನಿರೀಕ್ಷ್ಯೋದಯ ಮುಷ್ಣ ರಶ್ಮೇಃ
ವ್ರಜೇ ಚ ದುಷ್ಟ್ಯೋಷ್ಣಲಸ್ಮರೀಚೇಃ
ಸಮಾಗತಾ ಮಾಗಧ ಬಂದಿಸೂತಾಃ ॥ ೧೨ ॥

ಗಿಡಗಳ ಗುಂಪಿನಲ್ಲಿ ಸಂಚರಿಸುವ ಪಕ್ಷಿಗಳು, ಉಷ್ಣರಶ್ಮಿಯುಳ್ಳ ಸೂರ್ಯನ ಉದಯವನ್ನು ನೋಡಿ, ಕಿಲಕಿಲಧ್ವನಿಯಿಂದ ಹಾಡಿದವು, ಗೋಕುಲದಲ್ಲಿಯಾದರೋ ದುಷ್ಟರಿಗೆ ಸಂತಾಪಕೊಡುವ ಹೊಳೆಯುವ ಕಾಂತಿಯುಳ್ಳ ಶ್ರೀಕೃಷ್ಣನ ಉದಯವನ್ನು ಕಂಡು, ಸೂತ ಮಾಗಧರು ಬಂದು ಗಾಯನಮಾಡಿದರು. ॥ ೧೨ ॥

ತದಾ ಸ್ವವಂಶ್ಯೈಃ ಸಹ ರಾಜ ಹಂಸ್ಯೋ
ಜನ್ಯೈರ್ವ್ಯದೃಶ್ಯಂತ ಶನೈಶ್ಚರಂತ್ಯಃ ॥
ಬೃಹನ್ನಿತಂಬಸ್ತನಭಾರ ಭೀರು
ತನುಸ್ಫುರನ್ಮಧ್ಯಯುತಾಶ್ಚ ಗೋಪ್ಯಃ ॥ ೧೩ ॥

ಸೂರ್ಯೋದಯವಾಗುತ್ತಿರಲು, ಹೆಣ್ಣುರಾಜಹಂಸ ಪಕ್ಷಿಗಳು, ತಮ್ಮ ವಂಶದಲ್ಲಿ ಜನಿಸಿದ ಇತರ ಪಕ್ಷಿಗಳೊಡನೆ ಮೆಲ್ಲಮೆಲ್ಲಗೆ ಸಂಚರಿಸುತ್ತ ಜನರುಗಳಿಗೆ ಕಾಣಿಸಿಕೊಂಡವು. ಗೋಕುಲದಲ್ಲಿಯೂ ಬೃಹತ್ತರವಾದ ಕಟಿಪಶ್ಚಾದ್ಭಾಗದಿಂದಲೂ ಸ್ತನಗಳ ಭಾರದಿಂದ ಭಯಗೊಂಡು ಸಣ್ಣದಾಗಿರುವ ಹೊಳೆಯುವ ನಡುವಿನಿಂದಲೂ ಶೋಭಿಸುವ, ಗೋಪಿಯರು, ಮೆಲ್ಲಮೆಲ್ಲಗೆ ಸಂಚರಿಸುವವರಾಗಿ ಜನಗಳಿಗೆ ಕಾಣಿಸಿದರು. ॥ ೧೩ ॥

ಕೃಷ್ಣಂ ಸ್ವಕಾಂತ ಮಧುನೈವ ವಶೀ ವಿಧಾತು
ಮುತ್ಕಾನ್ವಿತಾ ಇವ ಮನೋಹರ ಕೋಮಲಾಂಗ್ಯಃ ॥
ನ್ಯಾಲೋಲ ಹಾರ ಸರ ಕುಂಡಲ ಕುಂತಲೋದ್ಯತ್
ಚೈಲಾಂತನೂಪುರರುಚಃ ಪಥಿ ತಾ ವಿರೇಜುಃ ॥ ೧೪ ॥

ಮನೋಹರ ಮೃದು ಅವಯವಗಳುಳ್ಳ, ನಡೆಯುವಾಗ ಚಲಿಸುತ್ತಿರುವ ಹಾರ, ಸರ, ಕರ್ಣಕುಂಡಲ, ಉಂಗುರುಂಗುರ ಕೂದಲಗಳು, ಹಾರಿ ಜಾರುವ ಸೆರಗು, ಧ್ವನಿಗರೆವ ಪೈಜಣಗಳ ಕಾಂತಿಯುಳ್ಳ ಆ ಗೋಪಿಯರು, ತಮಗೆ ಕಾಂತನಾದ ಶ್ರೀಕೃಷ್ಣನನ್ನು ಕೂಡಲೇ ವಶೀಕರಿಸಿಕೊಳ್ಳಲು ಉದ್ರೇಕಗೊಂಡು ಅನುಸರಿಸಿ ಬಂದವರಂತೆ ಮಾರ್ಗದಲ್ಲಿ ವಿರಾಜಿಸಿದರು. ॥ ೧೪ ॥

ಸಹಸ್ರಶೋ ಗೋಗಣ ಮುಷ್ಣದೀಪ್ತಿಃ
ಸಮರ್ಪಯಾಮಾಸ ಪದೇ ಮುರಾರೇಃ ॥
ಸುವರ್ಣಭಾಸಂವಲಿತಾಂಶ್ಚ ನಂದಃ
ಸ್ವಗೋಗಣಾನ್ ವಿಪ್ರಕುಲಾಯ ದತ್ತಾನ್ ॥ ೧೫ ॥

ಉಷ್ಣ ಕಿರಣಗಳುಳ್ಳ ಸೂರ್ಯನು ಆಕಾಶದಲ್ಲಿ ಸಹಸ್ರಾರು ಕಿರಣಗಳನ್ನು ಹರವಿದನು. ನಂದಗೋಪನಾದರೋ ವಿಪ್ರಸಮುದಾಯಕ್ಕೆ ಕೊಟ್ಟಿರುವ ಸುವರ್ಣಗಳ ಕಾಂತಿಯಿಂದ ಹೊಳೆಯುವ, ತನ್ನ ಗೋವುಗಳನ್ನು ಶ್ರೀಕೃಷ್ಣನ ಪಾದಗಳಲ್ಲಿ ಸಮರ್ಪಿಸಿದನು. ॥ ೧೫ ॥

ಸನಂದಗೋಪಃ ಪ್ರದದೌ ದ್ವಿಜೇಭ್ಯೋ
ಬಹೂನಿ ಗೋರೂಪಧನಾನಿ ವಿಷ್ಣೋಃ ॥
ತಟೇಷುಗೋಭಿಃ ಸಹಸಂಚರಿಷ್ಣೋಃ
ಸಹಸ್ರಶಸ್ತಾ ಇವ ಸಾಧಯಿಷ್ಯನ್ ॥ ೧೬ ॥

ಮುಂದೆ ಯಮುನಾತಟಗಳಲ್ಲಿ ಗೋವುಗಳೊಡಗೂಡಿ ಸಂಚರಿಸಲಿಚ್ಛಿಸುವ ಶ್ರೀ ಕೃಷ್ಣನಿಗೆ, ಸಹಸ್ರಾರು ಗೋವುಗಳನ್ನು ಸಾಧಿಸುವವನೋ ಎಂಬಂತೆ ಆ ನಂದ ಗೋಪನು ಬ್ರಾಹ್ಮಣರಿಗೆ ಅನೇಕ ಗೋ ಧನಗಳನ್ನುದಾನಮಾಡಿದನು ॥೧೬॥

ವಿಪ್ರರ್ಷಿದೇವಪಿತೃಬಂದಿಸುಹೃಜ್ಜನೇಭ್ಯೋ
ವಿತ್ತಾನ್ಯದಾತ್ ಕಿಲಸುತುಷ್ಟಮನಾಃ ಸ ನಂದಃ ॥
ಇತ್ಥಂ ಮತಿರ್ಮಮವಿಭೋಃ ಪಿತೃತಾಂ ಸ್ವಸಂಸ್ಥಾ-
ಮುದ್ವೀಕ್ಷ್ಯ ತಾನ್ ಪ್ರಹಸತೋಽಭಿಮುಖೀಚಿಕೀರ್ಷುಃ ॥೧೭॥

ಸಂತುಷ್ಟಮನಸ್ಕನಾದ ಆ ನಂದಗೋಪನು, ಬ್ರಾಹ್ಮಣರು, ಋಷಿಗಳು, ದೇವತೆಗಳು, ಪಿತೃಗಳು, ಬಂದಿಗಳು, ಸ್ನೇಹಿತರು, ಇವರೆಲ್ಲರಿಗೆ ತಕ್ಕಂತೆ

ಧನಕನಕ ವಸ್ತ್ರಧಾನ್ಯಾದಿಗಳನ್ನು ದಾನಮಾಡಿದನಷ್ಟೇ! ಲೋಕಕ್ಕೆ ಪ್ರಭುವಾದ ಶ್ರೀಕೃಷ್ಣನನ್ನು ಕುರಿತು ತನ್ನ ತಂದೆತನವನ್ನು ನೋಡಿ ನಗುತ್ತಿರುವ ಆ ವಿಪ್ರಾದಿಗಳನ್ನು ಅಭಿಮುಖೀಕರಿಸಲಿಚ್ಛಿಸಿ ದಾನವಿತ್ತನೆಂದು ನನ್ನ ಮತಿಯು ॥೧೭॥

ಧ್ವಜಪ್ರಭೈರೂರ್ಧ್ವಮುಖೈರ್ಮಯೂಖೈಃ
ಅಧೋಮುಖೈಸ್ತೋರಣಸಂನಿಭೈಶ್ಚ ॥
ವಿಭೂಷಿತಾ ದ್ಯೌರ್ವ್ರಜಭೂಶ್ಚ ಚಿತ್ರ-
ಧ್ವಜೈಃ ಸ್ಫುರತ್ತೋರಣಸಂಚಯೈಶ್ಚ ॥೧೮॥

ಆಕಾಶವು, ಧ್ವಜದಂತೆ ಕಾಣುವ ಊರ್ಧ್ವಮುಖ (ಮೇಲೆ ಹೋಗುವ) ಕಿರಣಗಳಿಂದಲೂ, ತೋರಣಗಳಂತಿರುವ ಅಧೋಮುಖ (ಕೆಳಗೆ ಬೀಳುವ) ಕಿರಣಗಳಿಂದಲೂ ಶೋಭಿಸಿತು. ವ್ರಜಭೂಮಿಯಾದರೋ ಬಣ್ಣಬಣ್ಣದ ಬಾವುಟಗಳಿಂದಲೂ ಝುಗಿಝುಗಿಸುವ ತೋರಣಗಳ ಸಾಲುಗಳಿಂದಲೂ ಅಲಂಕೃತವಾಯಿತು. ॥೧೮॥

ಲಸತ್ಪತಾಕಧ್ವಜಕುಂಭತೋರಣೈ-
ರ್ವಿಭಾಸಿತಾನಿ ವ್ರಜಮಂದಿರಾಣಿ ॥
ಪ್ರವೇಕ್ಷ್ಯತೀಮಾನಿ ಸ ಬಾಲಲೀಲಯಾ
ವಿಭೂಷಿತಾನೀವ ವಿತೇನುರಂಜಸಾ ॥೧೯॥

ಆ ಗೋಪಾಲಕರು, "ಈ ಮನೆಗಳನ್ನು ಶ್ರೀಕೃಷ್ಣನು ಬಾಲಕ್ರೀಡೆಯಿಂದ ಪ್ರವೇಶಿಸುವನು"ಎಂದು, ಶೋಭಿಸುವ ಪತಾಕೆ, ಧ್ವಜಗಳಿಂದಲೂ ಪೂರ್ಣಕುಂಭ ತೋರಣಗಳಿಂದಲೂ ಪ್ರಕಾಶಿತವಾದ ಗೋಕುಲದ ಗೃಹಗಳನ್ನು ಚನ್ನಾಗಿ ಇನ್ನಷ್ಟು ಅಲಂಕೃತವಾದವುಗಳನ್ನಾಗಿ ಮಾಡಿದರು. ॥೧೯॥

ಸ ಪಾಲಯಿಷ್ಯನ್ ಸದಯಾವಲೋಕೈ-
ರಿಮಾನ್ ಕೃತಾರ್ಥಾನ್ ರಚಯಿಷ್ಯತೀತಿ ॥
ಹೃದೇವ ವತ್ಸ ವ್ರಜಗೋವೃಷಾದೀ-
ನಲಂ ಪಚಕ್ರುಃ ಸ ಹರಿದ್ರತೈಲೈಃ ॥೨೦॥

"ಶ್ರೀಕೃಷ್ಣನು ದಯಾಯುಕ್ತವಾದ ನೋಟಗಳಿಂದ ಇವುಗಳನ್ನುಪಾಲಿಸುತ್ತಾ ಕೃತಾರ್ಥಗಳನ್ನಾಗಿ ಮಾಡುತ್ತಾನೆ," ಈ ಅಭಿಪ್ರಾಯದಿಂದಲೋ ಎಂಬಂತೆ, ಆ ಗೋಪಾಲಕರು, ವ್ರಜದಲ್ಲಿರುವ, ಕರುಗಳು, ಹೋರಿ(ಎತ್ತು)ಗಳು, ಆಕಳು, ಹಾಗು ಇತರ ಪಶುಗಳನ್ನು ಎಣ್ಣೆ ಅರಿಶಿನ ಮುಂತಾದವುಗಳಿಂದ ಅಲಂಕರಿಸಿದರು. ॥೨೦॥

ಇತ್ಥಂ ತ್ವಮತ್ರ ಶಿಶುಭಾವಮುಪೇತ್ಯಸಾಕ
ಮಸ್ಮಾಭಿರೀಶ ವಿಚರೇತಿ ವದನ್ನಿವಾಸ್ಮೈ ||
ದಧ್ನಾ ಘೃತೇನ ಪಯಸಾ ನವನೀತ ಜಾತೈಃ
ಸ್ನಿಗ್ಧಸ್ತ ದೈತ್ಯ ವಿಜಹಾರ ಕುಮಾರವರ್ಗಃ || ೨೧ ||

ಸ್ನೇಹಯುಕ್ತರಾದ ಬಾಲಕರ ವೃಂದವು, "ಒಡೆಯನೇ! ನೀನು ಈ ವ್ರಜದಲ್ಲಿ ಶಿಶುಭಾವವನ್ನು ತಾಳಿ, ನಮ್ಮಿಂದೊಡಗೂಡಿ ಇದೇ ಪ್ರಕಾರದಿಂದ ಆಟವಾಡಿಸು" ಎಂದು ಹೇಳುವಂತೆ, ಅಲ್ಲಿಗೆ ಬಂದು, ಹಾಲು, ಮೊಸರು, ತುಪ್ಪ ಬೆಣ್ಣೆಗಳಿಂದ ಆ ಸಮಯದಲ್ಲಿ ಆಟವಾಡಿತು! || ೨೧ ||

ವಿಧೌ ಪ್ರಶಾಂತೇಽಭ್ಯುದಿತೇ ಜನೋಽಯ-
ಮಭುಂಕ್ತ ಭೋಗಾನ್ ಪುನರುಷ್ಣಭಾನೌ ||
ಕರೋತಿ ಧರ್ಮಾಂಶ್ಚಕಿತಸ್ತಥಾ ತದ್-
ಬಿಭೇತಿ ಸರ್ವಃ ಪರುಷಾನ್ನಶಾಂತಾತ್ || ೨೨ ||

ಪ್ರಶಾಂತನಾದ ಚಂದ್ರನು ಉದಯಿಸುತ್ತಿರಲು, ಈ ಜನಸಮುದಾಯವು ಸ್ತ್ರ್ಯಾದಿ ಭೋಗಗಳನ್ನು ಸೇವಿಸಿತು. (ಸೇವಿಸುತ್ತದೆ) ಆದರೆ ಸೂರ್ಯನು ಉದಯಿಸುತ್ತಿರಲು, ಈ ಜನವು ಭಯಚಕಿತವಾಗಿ ಸ್ನಾನಸಂಧ್ಯಾದಿ ಧರ್ಮಾನು ಷ್ಠಾನವನ್ನು ಮಾಡುತ್ತದೆ. ಹೀಗಿರುವುದು ಯುಕ್ತವೇ! ಏಕೆಂದರೆ ಜನ ವೆಲ್ಲವೂ ಕ್ರೂರಸ್ವಭಾವದವನಿಗೆ ಅಂಜುವದೇ ವಿನಾ ಶಾಂತಸ್ವಭಾವದವನಿಗೆ ಅಂಜುವುದಿಲ್ಲ. || ೨೨ ||

ನಭಸ್ಸ್ಪೃಶನ್ನುನ್ಮುಖ ದೀಪ್ತಿ ವೃಂದೈ-
ರಸೌ ಕ್ರಮೇಣೋರ್ಧ್ವಮಿಯಾಯ ಭಾಸ್ವಾನ್ ||
ತಥಾ ಹಿ ತದ್ವಿಷ್ಣು ಪದಾನುಷಕ್ತ-
ಕರಃ ಕಥಂ ನೋರ್ಧ್ವ ಮುಪೈತಿ ಲೋಕಃ || ೨೩ ||

ಈ ಸೂರ್ಯನು, ತನ್ನ ಮೇಲೆರುವ ಕಿರಣ ಸಮೂಹ(ಕರ)ಗಳಿಂದ ಗಗನ (ವಿಷ್ಣುಪದ)ವನ್ನು ಸ್ಪರ್ಶಿಸುತ್ತ, ಕ್ರಮದಿಂದ ಮೇಲಕ್ಕೆ ಹೋದನು. ಇದು ಯುಕ್ತವೆ ಏಕೆಂದರೆ ವಿಷ್ಣುಪದವನ್ನು ಸ್ಪರ್ಶಿಸುವ (ಪೂಜಿಸುವ) ಕರಗಳುಳ್ಳ ಜನವು ಹೇಗೆ ಉನ್ನತಗತಿಯನ್ನು ಹೊಂದುವುದಿಲ್ಲ? || ೨೩ ||

ಸೋಮಾನ್ವಯೇ ಜಾತಮಿನೋ ನಿರೀಕ್ಷ್ಯ
ರಾಮಾನುಜಂ ಮನ್ಯುಮಿವಾದಧಾನಃ ||
ರಾಗಂ ಪರಿತ್ಯಜ್ಯ ಬಭೂವ ತೀಕ್ಷ್ಣಃ
ಶ್ರೇಯೋಽನುಜಸ್ಯಾಪಿ ನ ವೈ ಸಹಂತೇ || ೨೪ ||

ಸೂರ್ಯನು, ಚಂದ್ರವಂಶದಲ್ಲಿ ಜನಿಸಿದ ಬಲರಾಮನ ತಮ್ಮನಾದ ಶ್ರೀಕೃಷ್ಣನನ್ನು ನೋಡಿ, ರಾಮಾವತಾರದಂತೆ ತನ್ನ ವಂಶದಲ್ಲಿ ಹುಟ್ಟಲಿಲ್ಲವೆಂದು ಹೊಟ್ಟೆಕಿಚ್ಚನ್ನು ತಾಳಿದವನಂತೆ, ರಾಗ(ಭಕ್ತಿ, ಕೆಂಬಣ್ಣ)ವನ್ನು ತ್ಯಜಿಸಿ, ಪ್ರಖರನಾದನು. ಲೋಕದಲ್ಲಿ ತಮ್ಮನ ಶ್ರೇಯಸ್ಸನ್ನೂ, ಸಹ ಜನವು ಸಹಿಸುವುದಿಲ್ಲವೆಂಬುದು ಪ್ರಸಿದ್ಧವು. || ೨೪ ||

ಗ್ಲಾನಂ ವಿಧತ್ತೇ ನ ಸುಖಂ ಜನಾನಾಂ
ಛಾಯಾಶ್ರಿತಾನಾಮಪಿ ತಿಗ್ಮಶೋಚಿಃ ||
ಕ್ರೂರೋಽಪಿ ಮರ್ತ್ಯಃ ಸ್ವ ಕಲತ್ರಸಾಂದ್ರ-
ಸಂಬಂಧಭಾಜಾಂ ನಹಿ ತಾಪದಾಯೀ || ೨೫ ||

ಸೂರ್ಯನು ಪ್ರಖರ ಕಿರಣವುಳ್ಳವನಾದರೂ ನೆರಳನ್ನು (ಛಾಯಾ- ಸೂರ್ಯಪತ್ನಿ) ಆಶ್ರಯಿಸಿದವನಿಗೆ ಸುಖವನ್ನು ಉಂಟುಮಾಡುವನೇ ಆಗಲಿ ತಾಪವನ್ನುಂಟುಮಾಡುವುದಿಲ್ಲ ಇದು ಸಹಜವೇ ! ಮನುಷ್ಯನು ಎಷ್ಟೇ ಕ್ರೂರನಿದ್ದರೂ ತನ್ನ ಸತಿಯ ನಿಕಟ ಸಂಬಂಧವುಳ್ಳವರಿಗೆ ತಾಪವನ್ನು ಕೊಡುವವನಲ್ಲವಷ್ಟೇ ? || ೨೫ ||

ಯತೋ ಹಿ ಗೋರೂಪಧರಾಂ ಧರಿತ್ರೀಂ
ಸ ಪಾಲಯಿಷ್ಯನ್ ಹರಿರಾವಿರಾಸೀತ್ ||
ಸಹಾನುಕೂಲೈರಮರೈಃ ಸ್ವಕೀಯೈಃ
ತತಃ ಸ ಗೋಪಾಲಕ ವಂಶಜೋಽಭೂತ್ || ೨೬ ||

ಶ್ರೀಹರಿಯು ಗೋರೂಪಳಾದ ಭೂದೇವಿಯನ್ನು ಸಂರಕ್ಷಿಸಲು ಆವಿರ್ಭವಿಸಿದನು. ಆದುದರಿಂದಲೇ, ತನ್ನವರೂ ತನಗನುಕೂಲರೂ ಆದ ದೇವತೆಗಳಿಂದ ಒಡಗೂಡಿ ಗೋಪಾಲಕ ವಂಶದಲ್ಲಿ ಹುಟ್ಟಿದವನಾದನು. || ೨೬ ||

ಅಜನ್ಮನಸ್ತಸ್ಯ ಹಿ ಜಾತಕರ್ಮ
ವಿಧಾಯ ವಿಪ್ರಾ ವಿದಧುರ್ವಿಧಿಜ್ಞಾಃ ||
ಮಧೋಃ ಕುಲೇಽಜಾತ ಮಪಿ ಸ್ವಮಂತ್ರ-
ಮಧುಶ್ರಿಯಾ ಮಾಧವ ಮಾದಿ ದೇವಮ್ || ೨೭ ||

ವಿಧಿಜ್ಞರಾದ ಬ್ರಾಹ್ಮಣರು ಜನ್ಮವಿಲ್ಲದ ಶ್ರೀಕೃಷ್ಣನಿಗೆ ಜಾತಕರ್ಮವನ್ನು ಮಾಡಿ, ಮಧುನಾಮಕ ಯದುಕುಲದಲ್ಲಿ ಹುಟ್ಟದಿದ್ದರೂ ಆದಿ ದೇವನಾದ ಆ ಶ್ರೀಕೃಷ್ಣನಿಗೆ ಆ ಜಾತಕರ್ಮೋಪಯುಕ್ತ ವೇದಗಳ ಹಾಗು ಮಧುನಾಮಕ ಮಾಕ್ಷಿಕದ ಕಾಂತಿಯಿಂದ "ಮಾಧವ" ನೆಂಬ ನಾಮಕರಣವನ್ನು ಮಾಡಿದರು || ೨೭ ||

ತತಃ ಸ ಕೃಷ್ಣಃ ಕೃತ ಜಾತಕರ್ಮಾ
ಪ್ರಚಕ್ರಮೇಽಂಬಾಸ್ತನಪಾನಕರ್ಮ ॥
ಸ್ವವೀಕ್ಷಣೇನೈವ ಮುಹುಃಸ್ರುತಂ ತತ್
ಪಯೋ ಮುಧಾ ಸ್ಯಾದಿತಿ ಚಿಂತಯೇವ ॥ ೨೮ ॥

ಜಾತಕರ್ಮ ಸಂಸ್ಕಾರ ಹೊಂದಿದ ಶ್ರೀಕೃಷ್ಣನು, ಆ ಮೇಲೆ ತನ್ನನ್ನು ನೋಡುವುದರಿಂದಲೇ ನಿರಂತರವಾಗಿ ಹೊರಚಿಮ್ಮಿ ಬಂದಿರುವ ಆ ಸ್ತನಕ್ಷೀರವು ವ್ಯರ್ಥವಾಗಬಾರದೆಂಬ ಅಭಿಪ್ರಾಯದಿಂದಲೇ ತಾಯಿಯ ಸ್ತನಪಾನ ಕರ್ಮವನ್ನು ಕೈಕೊಂಡನು. ॥ ೨೮ ॥

ಪುರಾ ಜನನ್ಯಾಃ ಸ್ತನಪಾನ ಜಾತ-
ಸುಖಾನಭಿಜ್ಞೋಽಜನಿರೇಷ ಕೃಷ್ಣಃ ॥
ಪಪೌ ಸ್ತನಕ್ಷೀರಮತೃಪ್ತಕಲ್ಪಃ
ಪ್ರಿಯೇಷು ನೂತ್ನೇಷು ಹಿ ಕಸ್ಯ ತೃಪ್ತಿಃ ॥ ೨೯ ॥

ಜನ್ಮರಹಿತನಾದುದರಿಂದಲೇ, ಪೂರ್ವದಲ್ಲಿ ತಾಯಿಯ ಸ್ತನಪಾನ ದಿಂದುಂಟಾದ ಸುಖವನ್ನೇ ಅರಿಯದ ಈ ಶ್ರೀಕೃಷ್ಣನು ಅತೃಪ್ತನಂತೆ ಮೊಲೆಯ ಹಾಲನ್ನು ಕುಡಿದನು. ಇದು ವಿಹಿತವೇ! ಪ್ರಿಯವೂ ನೂತನವೂ ಆದ ವಿಷಯ ಗಳ ಬಗ್ಗೆ ತೃಪ್ತಿಯು ಯಾರಿಗೆ ಆದೀತು ? ॥ ೨೯ ॥

ಬಹೂನಿ ಪುಣ್ಯಾನಿ ಸ ನಂದಪತ್ನ್ಯಾಃ
ಹೃದಿ ಸ್ಥಿರೀಕರ್ತುಮುರೋಜದುಗ್ಧಮ್ ॥
ಪಪೌ ಪ್ರದೇಶಾರ್ಥಿತಯೈವ ಶೌರಿಃ
ನ ಚೇತ್ ಸುತೃಪ್ತಸ್ಯ ಕುತಸ್ತದಿಚ್ಛಾ ॥ ೩೦ ॥

ನಂದಪತ್ನಿಯಾದ ಯಶೋದೆಯ ಹೃದಯದಲ್ಲಿ ಬಹು ಪುಣ್ಯಗಳನ್ನು ಸ್ಥಾಪನ ಮಾಡಲು ಅವಕಾಶವನ್ನು ಬಯಸುವವನಾದುದರಿಂದಲೇ ಶ್ರೀಕೃಷ್ಣನು ಮೊಲೆ ಹಾಲನ್ನು ಕುಡಿದನು. ಹಾಗಿಲ್ಲದಿದ್ದಲ್ಲಿ ನಿತ್ಯ ಸಂತೃಪ್ತನಾದ ಆ ಪರಮಾತ್ಮ ನಿಗೆ ಸ್ತನಪಾನೇಚ್ಛೆಯು ಏಕೆ ಆಗುತ್ತವೆ ? ॥ ೩೦ ॥

ವಿಭುರ್ಯಶೋದಾಂಕಗತೋಽಪಿಬತ್ ಸ
ಸ್ತನಂ ಪ್ರಗೃಹ್ಯಾನ್ಯಮುರೋಜ ದುಗ್ಧಮ್ ॥
ದೃಶಾಮೃತಂ ದಾನಫಲಂ ತದೈವ
ದಿಶನ್ನಿವಾಂಬಾನನವೀಕ್ಷಣಮಾಣಃ ॥ ೩೧ ॥

ಸಮರ್ಥನಾದ ಶ್ರೀಕೃಷ್ಣನು ಯಶೋದೆಯ ತೊಡೆಯ ಮೇಲೆ ಮಲಗಿ, ಒಂದು ಮೊಲೆಯನ್ನು ಕೈಯಲ್ಲಿ ಹಿಡಿದು, ಮತ್ತೊಂದು ಮೊಲೆ ಯನ್ನು ಬಾಯಲ್ಲಿರಿಸಿಕೊಂಡವನಾಗಿ ತನಗೆ ಹಾಲು ಕೊಟ್ಟ ಫಲವಾಗಿ

ನಿನಗೆ ಅಮೃತ(ಮುಕ್ತಿ)ವನ್ನು ಕೊಡುವೆನೆಂಬರ್ಥವನ್ನು ದೃಷ್ಟಿಯಿಂದಲೇ ತೋರುವವನಾಗಿ ತಾಯಿಯ ಮುಖವನ್ನುನೋಡುತ್ತ ಮೊಲೆಯ ಹಾಲನ್ನುಕುಡಿದನು. ||೩೧||

ಪೂರ್ಣಸ್ಯಾ ಪೂರ್ಣತಾಂ ಮತ್ವಾ ಗೋಪೀ ಗೋಪೀನಮಂದಿರಾ ||
ಕ್ಷೀರಸ್ಯತೀತಿ ಕ್ಷಣಶಃ ಕ್ಷೀರಂ ಪಾಯಯತಿ ಪ್ರಭುಮ್ || ೩೨ ||

ಗೋವುಗಳಿಂದ ತುಂಬಿದ ಮನೆಯುಳ್ಳ ಆ ಯಶೋದೆಯು, ಪೂರ್ಣನೂ ಪ್ರಭುವೂ ಆದ ಶ್ರೀಕೃಷ್ಣನಿಗೆ ಅಪೂರ್ಣತೆಯನ್ನು ತಿಳಿದು, ಹಾಲನ್ನು ಬಯಸುತ್ತಾನೆಂದು ಭ್ರಮಿಸಿ ಪುನಃ ಪುನಃ ಹಾಲನ್ನು ಕುಡಿಸುತ್ತಿದ್ದಳು. || ೩೨ ||

ತತಃ ಕದಾಚಿತ್ ಪಥಿ ಪೂತನಾಖ್ಯಾ
ಸ್ವಮಾಯಯಾ ರಮ್ಯಮವಾಪ್ಯ ರಮ್ಯಮ್ ||
ತಮಂಕಮಾರೋಪ್ಯ ವಿಷಾನುಷಕ್ತ-
ಕುಚಂ ಮುದಾಽಪಾಯಯದಂಬುಜಾಕ್ಷಮ್ || ೩೩ ||

ಜಾತಕರ್ಮದ ಅನಂತರ ಒಂದು ದಿವಸ ಪೂತನೆಯೆಂಬ ರಾಕ್ಷಸಿಯು ಮಾರ್ಗದಲ್ಲಿ ತನ್ನ ಮಾಯೆಯಿಂದ ರಮಣೀಯ ರೂಪವನ್ನು ಧರಿಸಿ ಬಂದು, ಕಮಲನೇತ್ರವಾದ ಶ್ರೀಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು, ವಿಷದಿಂದ ಕೂಡಿದ ಮೊಲೆಯನ್ನು ಸಂತೋಷದಿಂದ ಕುಡಿಸಿದಳು. || ೩೩ ||

ಪೂತನೆಯು ಬರುವಾಗ ಹೇಗಿದ್ದಳೆಂಬುದನ್ನು ವರ್ಣಿಸುತ್ತಾರೆ.

ಪರಿಸ್ಫುರನ್ನೂಪುರ ಕಂಕಣೋಜ್ವಲಾ
ಲಸನ್ನಿತಂಬಾರ್ಪಿತರತ್ನ ಮೇಖಲಾ ||
ದೃಗಂತಸಂಸ್ತಂಭಿತಮಾನಿ ಮಂಡಲಾ
ತದೋರ್ವಶೀವಾಸ್ತಿ ವಿಲೋಲಕುಂಡಲಾ || ೩೪ ||

ಥಳಥಳಿಸುವ ಕಾಲ್ಗಡಗ, ಕಂಕಣಗಳ ಕಾಂತಿಯುಕ್ತಳಾಗಿಯೂ ಶೋಭಿಸುವ ಟೊಂಕದಲ್ಲಿ ಬಿಗಿದ ನವರತ್ನಖಚಿತ ವೊಡ್ಯಾಣದಿಂದ ಅಲಂಕೃತಳಾಗಿಯೂ ತನ್ನ ಕಡೆಗಣ್ಣಿನ ಓರೆನೋಟದಿಂದ ಮಾನಿಗಳ ಮನಸ್ಸನ್ನು ಸ್ತಂಭಿಸುವವಳಾಗಿಯೂ ಚಲಿಸುವ ಕರ್ಣ-ಕುಂಡಲಗಳ ಝುಳಿಪಿನಿಂದ ಊರ್ವಶಿಯೋ ಎಂಬಂತೆ ತೋರುವವಳಾಗಿ ಬಂದಳು. || ೩೪ ||

ಸ ಪೂತನೋಚ್ಚ ಸ್ತನಕುಂಭ ಚುಂಬಿ-
ಮುಖಾರವಿಂದೋ ಹರಿರಾಬಭಾಸೇ ||
ವಿಷಂ ಬಹಿಷ್ಕಂ ಪ್ರಮದಾಂತರಂಗೇ
ಸುಪೂರಯಂಸ್ತನ್ಮುಖವರ್ತ್ಮನೇವ || ೩೫ ||

ಶ್ರೀಕೃಷ್ಣನು ಪೂತನೆಯ ಉನ್ನತವಾದ ಕಲಶದಂತಿರುವ ಕುಚವನ್ನು ಮುಖಾರವಿಂದದಿಂದ ಚುಂಬಿಸಿದನು. ಆ ದೃಶ್ಯವು ಅದೇ ಸ್ತನದ್ವಾರಗಳಿಂದಲೇ ಬಹಿಸ್ಥವಾದ ವಿಷವನ್ನು ಪೂತನೆಯ ಹೃದಯದಲ್ಲಿ ತುಂಬುವನೋ ಎಂಬಂತೆ ತೋರುತ್ತಿದ್ದಿತು. ॥ ೩೫ ॥

ರಮಾಧರೋಷ್ಠಾಮೃತಪಾನಜಾತ-
ಮಹಾನುಭಾವೇನ ನ ಪೂತನಾಯಾಃ ॥
ಉರೋಜಸಂಗ್ರಾರ್ತಿಕರೋಗರೋಸೌ
ಬಭೂವ ಬಾಲಸ್ಯ ಬಲಾನುಜಸ್ಯ ॥ ೩೬ ॥

ರಮಾದೇವಿಯ ಅಧರಾಮೃತ ಪಾನದಿಂದ ಹುಟ್ಟಿದ ಮಹಾ ವೈಭವವುಳ್ಳ ಶ್ರೀಕೃಷ್ಣನಿಗೆ ಪೂತನಾ ಸ್ತನಗಳಲ್ಲಿ ಹಚ್ಚಲ್ಪಟ್ಟ ವಿಷವು ಬಲರಾಮನ ತಮ್ಮನಾಗಿ ಶಿಶುಭಾವವನ್ನು ತಾಳಿದವನಾಗಿದ್ದರೂ, ಏನೂ ದುಃಖಕರವಾಗಲಿಲ್ಲ. ॥ ೩೬ ॥

ಮರಿಷ್ಯತೋ ಭೋಜಪತೇರ್ನ ಜನ್ಮ
ತಮುಃಶ್ರಮಾರ್ಹಸ್ಯ ಭವಿಷ್ಯತೀಹ ॥
ಇತೀವ ಧಾತ್ರೀಮವಧೀತ್ ಸ ತಸ್ಯ
ಯತೀಂದ್ರವೃಂದಾರ್ಚಿತಪಾದಪೀಠಃ ॥ ೩೭ ॥

ಯತೀಂದ್ರರ ವೃಂದದಿಂದ ವಂದಿತ ಪಾದಪೀಠವುಳ್ಳ ಶ್ರೀಕೃಷ್ಣನು ತಮಸ್ಸಿಗೆ ಅರ್ಹನೇ ಆಗಿ ಸಾಯಲು ಸಿದ್ಧನಾದ ಭೋಜಕುಲಜನಾದ ಕಂಸನಿಗೆ ಹೇಗೂ ಇನ್ನು ಈ ಲೋಕದಲ್ಲಿ ಜನ್ಮವಿಲ್ಲ ಧಾತ್ರಿಯಾದ (ಸಾಕುತಾಯಿ) ಇವಳ ಅಗತ್ಯವೇನು ? ಎಂಬಂತೆ; ಅವಳನ್ನು ಸಂಹರಿಸಿದನು. ॥ ೩೭ ॥

ವ್ರಜಸ್ಥಬಾಲಗ್ರಹಪೀಡಿತಾ ಸಾ
ವಿಷಪ್ರಧಾನಸ್ಯ ಫಲಂ ಪ್ರಪೇದೇ ॥
ತಥಾ ಹಿ ಕೃತ್ಯಾ ಮಹತಿ ಪ್ರಯುಕ್ತಾ
ಸ್ವಕೀಯಮೃತ್ಯುತ್ವಮುಪೈತಿ ಪೃಥ್ವ್ಯಾಮ್ ॥ ೩೮ ॥

ಬಾಲಕರಿಗೆ ಗ್ರಹರೂಪಳಾದ ಪೂತನೆಯು, ಗೋಕುಲದಲ್ಲಿರುವ ಶ್ರೀಕೃಷ್ಣನೆಂಬ ಬಾಲಗ್ರಹದಿಂದ ಪೀಡಿತಳಾಗಿ ವಿಷವನ್ನು ಉಣಿಸಿದುದಕ್ಕೆ ಫಲವಾಗಿ ಪ್ರಾಣವನ್ನೇ ಬಿಟ್ಟಳು. ಇದು ವಿಹಿತವೇ ! ಲೋಕದಲ್ಲಿ ಮಹಾತ್ಮರಲ್ಲಿ ಪ್ರಯೋಗಿಸಿದ ಕೃತ್ಯವು (ಅಭಿಚಾರಿಕವಿಧಾನವು) ಸ್ವಮೃತ್ಯುವಿಗೇ ಕಾರಣವಾಗುವದು. ॥ ೩೮ ॥

ಅಪಿ ಪ್ರದತ್ತೇ ಗರಲೇ ಶಿಶುಂ ತ
ಮಭೀತ ಮುದ್ವೀಕ್ಷ್ಯ ಭುಜಂಗಸಂಘಾನ್ ||
ವಿಭೀಷಯಂತೀ ಸಮಗಾದಧಃ ಸಾ
ನ ಚೇದ್ವಿಪರ್ಯಸ್ತ ಮೃತಿಃ ಕಥಂ ಸ್ಯಾತ್ || ೩೯ ||

ಶಿಶುವಿಗೆ ವಿಷಕೊಟ್ಟರೂ ನಿರ್ಭೀತನಾಗಿರುವದನ್ನು ಕಂಡು, ಪಾತಾಲದಲ್ಲಿರುವ ತನಗೆ ವಿಷಕೊಟ್ಟ ಸರ್ಪಗಳನ್ನು ಭಯಪಡಿಸುವಳೋ ಎಂಬಂತೆ ಅಧೋಲೋಕವನ್ನು ಕುರಿತು ಹೋದಳು. ಹಾಗಲ್ಲದ ಪಕ್ಷದಲ್ಲಿ ವಿಪರೀತವಾದ ಮರಣವು ಹೇಗಾಯಿತು ? || ೩೯ ||

ಉತ್ತುಂಗ ಹಸ್ತಚರಣಾಯು ಶೈಲ ಶೃಂಗಾಂ
ವಿಸ್ತಾರಿತಾನನ ವಿನಿರ್ಗತ ದೀರ್ಘದಂಷ್ಟ್ರಾಮ್ ||
ಶುಷ್ಯತ್ತಟಾಕ ಸದೃಶೋದರ ಘೋರರೂಪಾಂ
ತರ್ಕ್ಯತಿಕರ್ಕಶರವೋಜ್ವಲತಾಟಕಾಂತಾಮ್ || ೪೦ ||

ಉನ್ನತಗಳಾಗಿ ದೀರ್ಘವಾಗಿ ಚಾಚಿರುವ ಕೈಕಾಲುಗಳು ಬೆಟ್ಟಗಳಂತೆಯೂ ವಿಸ್ತಾರವಾಗಿ ತೆರೆಯಲ್ಪಟ್ಟ ಬಾಯಿಯಲ್ಲಿರುವ ಕೋರೆ ಹಲ್ಲುಗಳೂ ಕೋಡುಗಲ್ಲುಗಳಂತೆಯೂ, ಹೊಟ್ಟೆಯಾದರೋ ಬತ್ತಿದ ಕೆರೆಯಂಗಳದಂತೆಯೂ ಘೋರವಾದ ರೂಪುವುಳ್ಳವಳಾಗಿ, ಕರ್ಕಶವಾದ ಧ್ವನಿಯಿಂದ ಬಿದ್ದ ಇವಳನ್ನು ಪೂರ್ವದಲ್ಲಿ ಶ್ರೀರಾಮನಿಂದ ಹತಳಾದ ತಾಟಕೆಯೆಂದು ಊಹಿಸುತ್ತೇನೆ. || ೪೦ ||

ಸಚ್ಚೇತನಗಳಿಗೇ ಮುಕ್ತಿಯು. ಪುರಾಣಗಳಲ್ಲಿ ಪೂತನೆ ಕಂಸಾದಿಗಳಿಗೆ ಉಕ್ತವಾದ ಮೋಕ್ಷೋಕ್ತಿಯು ಜೀವದ್ವಯ ವಿವಕ್ಷೆಯಿಂದಲೇ! ಎಂಬುದನ್ನು ಉಪಪಾದಿಸುತ್ತಾರೆ.

ಮುಕುಂದ ವಿದ್ವೇಷ ವಿಷಾನುಷಂಗಾದ್
ವಿಯೋಜಿತಾಂಗೀ ಕಿಲ ಪೂತನೈಕಾ ||
ಪಪಾತ ಧನ್ಯಾ ಲಲನಾಗ್ರಗಣ್ಯಾ
ಜಗಾಮ ಚಾನ್ಯಾಮರಲೋಕಲೋಕಮ್ || ೪೧ ||

ಮುಕುಂದನಲ್ಲಿ ವಿಶೇಷ ದ್ವೇಷದಿಂದ ವಿಷವನ್ನು ಕೊಟ್ಟ ಪೂತನೆಯು (ದುರ್ಜೀವವು) ಅಧೋಗತಿಯನ್ನು ಹೊಂದಿದಳು. ಆ ದುಷ್ಟಳಿಂದ ವಿಯುಕ್ತಳಾದ, ಸ್ತ್ರೀ ಶ್ರೇಷ್ಠಳಾದ ಧನ್ಯಳಾದ ಊರ್ವಶಿಯು ದೇವತೆಗಳ ಲೋಕವಾದ ಸ್ವರ್ಗವನ್ನೇ ಹೊಂದಿದಳು. || ೪೧ ||

ಯದಿ ಪ್ರಭುರ್ವಿದ್ವಿಷತೋಽಪಿ ಶೌರಿಃ
ಪ್ರಸಾದಕೃತ್ ತರ್ಹಿ ಕುತಃ ಸುರಾರೀನ್ ॥
ವಿಜಿತ್ಯ ಭಕ್ತಾಯ ತದೀಯ ಭಾಗ್ಯಂ
ಪ್ರಯಚ್ಛತಿ ಸ್ವೈರಮಿಹಾವತೀರ್ಯ ॥ ೪೨ ॥

ಸರ್ವಪ್ರಭುವಾದ ಪರಮಾತ್ಮನು ದ್ವೇಷಿಸುವವರಿಗೂ ಅನುಗ್ರಹಿಸಿ ಮೋಕ್ಷ ಕೊಡುವುದೇ ಆದರೆ, "ಯದಾ ಯದಾಹಿ ಧರ್ಮಸ್ಯ" ಇತ್ಯಾದಿ ಗೀತೋಕ್ತಿಯಂತೆ ತಾನು ಯುಗ ಯುಗದಲ್ಲಿಯೂ ಭೂಮಿಯಲ್ಲಿ ಅವತರಿಸಿ, ದೈತ್ಯರನ್ನು ಮಡುಹಿ, ತನ್ನ ಭಕ್ತರಾದ ದೇವತೆಗಳಿಗೆ, ಐಶ್ವರ್ಯಾದಿಗಳನ್ನು ಏಕೆ ಕೊಡುತ್ತಿದ್ದನು ? ॥ ೪೨ ॥

ದ್ವಿಷಾಂ ಹರಿರ್ಯಚ್ಛತಿ ಯರ್ಹಿ ಮೋಕ್ಷಂ
ನ ತರ್ಹಿ ಕಸ್ಮಾದಪವರ್ಗ ಮಾರ್ಗಃ ॥
ಅರಿಷ್ಟವಾತಾಸುರ ವತ್ಸಕೇಶಿ-
ವಿನಾಶಕಾಲೇ ವಿವೃತಃ ಶುಕೇನ ॥ ೪೩ ॥

ದ್ವೇಷಿಗಳಿಗೂ ಪರಮಾತ್ಮನು ಮೋಕ್ಷವನ್ನು ಕೊಡುವುದಾದರೆ– ಆ ಶಕಟ ವತ್ಸ, ತೃಣಾವರ್ತ, ಕೇಶಿ, ಅರಿಷ್ಟ ಮುಂತಾದ ಅಸುರರ ವಧಕಥನ ಸಂದರ್ಭದಲ್ಲಿ, ಶುಕಾಚಾರ್ಯರು ಅವರುಗಳಿಗೆ ಮೋಕ್ಷವನ್ನು ಏಕೆ ಹೇಳಲಿಲ್ಲ ? ॥ ೪೩ ॥

ಪತಂತ್ಯಧೋಽನಾದೃತ ಕೃಷ್ಣಪಾದಾಃ
ನ ಚೇದ್ಯ ಮಸ್ಯಾಲಯ ಮೇಷ್ಯಸಿ ತ್ವಮ್ ॥
ಸ ನೈಋತಂ ಧಾಮ ಜಗಾಮ ದೈತ್ಯಃ
ಇತೀರಿತಾ ದುರ್ಗತಿರೇವ ತೇಷಾಮ್ ॥ ೪೪ ॥

ಶ್ರೀ ಪರಮಾತ್ಮನ ಪಾದಾರವಿಂದಗಳಲ್ಲಿ ಅನಾಸಕ್ತರಾಗಿ ದ್ವೇಷಿಸುವವರು ಅಧೋಗತಿಯನ್ನೇ ಹೊಂದುತ್ತಾರೆ. ಹಾಗಿಲ್ಲದ ಪಕ್ಷದಲ್ಲಿ ದಾರಿಗೆ ಅಡ್ಡಗಟ್ಟಿದ ಅಂಬಷ್ಟನಿಗೆ (ಮಾವುತನಿಗೆ) ಶ್ರೀಕೃಷ್ಣನು, "ನಿನ್ನನ್ನು ಯಮಸದನಕ್ಕೆ ಕಳಿಸುತ್ತೇನೆ," ಎನ್ನದೆ "ನನ್ನ ಮನೆಯನ್ನು ಕೊಡುತ್ತೇನೆ" ಎನ್ನಬೇಕಾಗಿದ್ದಿತು ! ಮತ್ತು ಕುವಲಯಾಪೀಡ (ಆನೆ)ದೊಂದಿಗೆ ಅಂಬಷ್ಟನು ನೈಋತ್ಯ ದಿಕ್ಕಿನಲ್ಲಿರುವ ದುಃಖಾತ್ಮಕವಾದ ಲೋಕವನ್ನು ಹೊಂದಿದನು" ಎಂದು ಹೇಳಿ, ಅವರುಗಳಿಗೆ ದುರ್ಗತಿಯನ್ನೇ ವರ್ಣಿಸಿರುತ್ತಾರೆ. ॥ ೪೪ ॥

ವಿದ್ವೇಷಮೂಲ ಸ್ಮರಣೇನ ತುಷ್ಟಿ-
ರಿತ್ಯಪ್ಯವದ್ಯಂ ನ ಜಹಾತಿ ಪಕ್ಷಃ ॥

ಹಿಂಸಾರ್ಥ ಮಾಲಿಂಗ್ಯ ಯತಸ್ತ್ವರಕ್ಷೋಃ
ಕಿಂ ಚೇಷ್ಟಯಾ ತುಷ್ಯತಿ ಕಾಮಧೇನುಃ ॥ ೪೫ ॥

"ದ್ವೇಷ ಮೂಲಕವಾಗಿಯಾದರೂ ಹರಿಯನ್ನು ಸ್ಮರಿಸಲು ತುಷ್ಟನಾಗಿ ಸದ್ಗತಿಯನ್ನು ಕೊಡುತ್ತಾನೆ"ಯೆಂಬ ಪಕ್ಷವೂ ದೋಷಯುಕ್ತವಾದುದೇ! ಕೊಲ್ಲಲಿಕ್ಕೆ ಹಿಡಿದ ಹುಲಿಯು ಕೈಸಿಕ್ಕ ಗೋವಿಗೆ ಚುಂಬನ ಮುಂತಾದ ಚೇಷ್ಟೆಗಳನ್ನು ಮಾಡಲು, ಅದರಿಂದ ಗೋವಿಗೆ ಎಂದಾದರೂ ಸಂತೋಷವಾದೀತೇ! ॥ ೪೫ ॥

ನ ಚೇದ್ ಗವಾಂ ವಿಪ್ರಶಿಖಾಮಣೀನಾಂ
ಹತಿಶ್ಚ ಪುಣ್ಯಾಯು ಭವೇದ್ಧಿ ಮೂಢಾಃ ॥
ತದಂಗಸಂಸ್ಪರ್ಶನ ದರ್ಶನಾದ್ಯೈ-
ಸ್ತದೀಯ ನಾಮ ಸ್ಮರಣಾದಿಭಿರ್ವಾ ॥ ೪೬ ॥

ದ್ವೇಷಮೂಲಕವಾಗಿಯಾದರೂ ನಾಮೋಚ್ಚಾರ ಸ್ಪರ್ಶಾದಿಗಳು ಪುಣ್ಯಕರಗಳೇ ಆದ ಪಕ್ಷದಲ್ಲಿ-ಗೋ ಬ್ರಾಹ್ಮಣಾದಿಗಳ ಕೊಲೆಗಳೂ ಸಹ ಸ್ಪರ್ಶ, ನಾಮೋಚ್ಚಾರಣ ಇತ್ಯಾದಿ ರೂಪಗಳೇ ಆದುದರಿಂದ ಪುಣ್ಯಕರಗಳೇ ಆಗಬೇಕಾದೀತು! ॥ ೪೬ ॥

ದೋಷಂ ದುರಂತಂ ಕ್ವಚ ವರ್ಣಯದ್ಭಿಃ
ದ್ವೇಷಂ ಹರೇಃ ಕ್ವಾಪಿ ತಮೋನಿದಾನಮ್ ॥
ಈಶಾಪ್ತಿ ವಿಘ್ನಂ ಕ್ವ ಚವರ್ಣಯದ್ಭಿ-
ರೇತನ್ಮತಂ ವಿಪ್ರತಿಷಿದ್ಧಮಾರ್ಯೈಃ ॥ ೪೭ ॥

"ಪರಮಾತ್ಮನಲ್ಲಿ ದ್ವೇಷ ಬುದ್ಧಿಯು ದೊಡ್ಡ ದೋಷವು; ತಮಸ್ಸಿಗೆ ಕಾರಣವು;" ಕೆಲವು ಸ್ಥಲಗಳಲ್ಲಿ "ಭಗವತ್ಪ್ರಾಪ್ತಿಗೆ ಪ್ರತಿಬಂಧಕವು" ಎಂದು ವರ್ಣಿಸುವ ಆರ್ಯರುಗಳಿಂದ "ದ್ವೇಷಾದಿಗಳಿಂದಲೂ ಮೋಕ್ಷವು ಬರುವು"ದೆಂಬ ಮಾರ್ಗವು ನಿಷಿದ್ಧವೇ ಆಗಿದೆ. ॥ ೪೭ ॥

ಅದ್ವೈತಿನಸ್ತಾರ್ಕಿಕ ಮಾನಿನೋವಾ
ರಾದ್ಧಾಂತ ಮಧ್ಯೇ ಪರವಾದಿನಾಂ ವಾ ॥
ಜ್ಞಾನಂ ವಿನಾ ಯನ್ನಹಿ ಬಂಧಮೋಕ್ಷ-
ಸ್ತೇನ್ಯೆದಮಾತ್ಮೀಯ ವಚೋವಿರುದ್ಧಮ್ ॥ ೪೮ ॥

ಅದ್ವೈತಿಗಳಾಗಲೀ ತಾರ್ಕಿಕನಾಗಲಿ ಪರವಾದಿಗಳೆಲ್ಲರೂ ತಮ್ಮ ತಮ್ಮ ಸಿದ್ಧಾಂತಗಳಲ್ಲಿ ಜ್ಞಾನದಿಂದಲೇ ಮುಕ್ತಿಯೆಂದು ಒಪ್ಪಿರಲಾಗಿ, ಮೋಕ್ಷವು ದ್ವೇಷದಿಂದಲೂ ಆಗುವುದೆಂದು ಹೇಳಿದರೆ ಸ್ವವಚನ ವಿರೋಧವಾಗಿ ಅಪಸಿದ್ಧಾಂತವಾಗುವುದಿಲ್ಲವೇ? ॥ ೪೮ ॥

ಜ್ಞಾನಾನ್ಯ ಮಾರ್ಗಪ್ರತಿಷೇಧ ಕರ್ತ್ರ್ಯಾ
ಶ್ರುತ್ಯಾ ಚ ನಿರ್ಣಾಯಕ ಸೂತ್ರಕರ್ತ್ರಾ ||
ಕಿಮೇಷ ಮಾರ್ಗಃ ಸುಲಭೋ ನ ದೃಷ್ಟಃ
ಕಿಂ ವಾ ತಪಸ್ಯಾವ್ರತಕರ್ಶಿತಾಂಗೈಃ || ೪೯ ||

ಜ್ಞಾನಾತಿರಿಕ್ತ ಮಾರ್ಗವನ್ನು ನಿಷೇಧಿಸುತ್ತ ಜ್ಞಾನದಿಂದಲೇ ಮೋಕ್ಷವೆಂದು ಹೇಳುವ ಶ್ರುತಿಗಳಿಂದ ಹಾಗು ಸಕಲ ಶ್ರುತಿನಿರ್ಣಾಯಕ ಬ್ರಹ್ಮಸೂತ್ರಕರ್ತೃಗಳಾದ ಬಾದರಾಯಣರಿಂದಲೂ "ದ್ವೇಷಾದಿಗಳಿಂದಲೂ ಮೋಕ್ಷ" ವೆಂಬ ಈ ಸುಲಭ ಮಾರ್ಗವು ನೋಡಲ್ಪಟ್ಟಿರಲಿಲ್ಲವೇ? ತಪವ್ರತಾದಿಗಳಿಂದ ಶರೀರವನ್ನು ಶೋಷಿಸುವ ಋಷಿಗಳಿಗಾದರೂ ಆ ಮಾರ್ಗವು ಹೊಳೆಯುಲ್ಲಿಲ್ಲವೇ? || ೪೯ ||

ಅವೈಷ್ಣವಾನಾಂ ಯತನೈರ್ನಮೋಕ್ಷಃ
ಪತಂ ತ್ಯಧಸ್ತಾಮಸ ವೃತ್ತಯಸ್ತೇ ||
ಏತತ್ಸಮಾನಾರ್ಥಕ ಭಾರತೋಕ್ತಿ-
ವ್ರಾತಾಮತಂ ತಂ ನ ಮತಂ ಶುಕಸ್ಯ || ೫೦ ||

ವೈಷ್ಣವರಲ್ಲದ ತಾಮಸಜೀವಿಗಳು ಎಷ್ಟೇ ಪ್ರಯತ್ನ ಮಾಡಿದರೂ ತಾಮಸ ಸ್ವರೂಪರಾದುದರಿಂದ ಅಧೋಗತಿಯನ್ನೇ ಹೊಂದುವರಾಗಲೀ ಸುಖರೂಪವಾದ ಮೋಕ್ಷವನ್ನು ಎಂದಿಗೂ ಹೊಂದುವುದಿಲ್ಲ. ಹೀಗೆ ಹೇಳುವ ಭಾರತ ಭಾಗವತಾದಿ ಸದುಕ್ತಿಗಳ ಅಭಿಪ್ರಾಯಕ್ಕೆ ವಿರುದ್ಧವಾದ ಈ ಮತವು ಶುಕಾಚಾರ್ಯರಿಗೆಂದಿಗೂ ಸಮ್ಮತವಲ್ಲ. || ೫೦ ||

ನಿಂದಾಂ ಮುಕುಂದಸ್ಯ ಸಕೃನ್ನಿಶಮ್ಯ
ಮಂದಃ ಪತೇತ್ಕಿಂ ಪುನರಚ್ಯುತಂ ತಮ್ ||
ನಿಂದನ್ನಿತಿ ಹ್ಯಾಲಪತಃ ಶುಕಸ್ಯ
ಕಿಂ ದ್ವೇಷತೋ ಮುಕ್ತಿರಿತಿ ಸ್ಮ ಹೃದ್ಯಮ್ || ೫೧ ||

ಮೋಕ್ಷಪ್ರದನಾದ ಪರಮಾತ್ಮನ ನಿಂದೆಯನ್ನು ಒಮ್ಮೆ ಕೇಳಿದ ಮಾತ್ರದಿಂದಲೇ ಮಂದನೂ ಅಧೋಗತಿಯನ್ನು ಹೊಂದುತ್ತಾನೆಂದಮೇಲೆ ಅಚ್ಯುತನನ್ನು ಸಾಕ್ಷಾತ್ತಾಗಿ ನಿಂದಿಸುವವನು ಅಧೋಗತಿಯನ್ನು ಹೊಂದುವನೆಂದು ಹೇಳುವುದೇನು? ಈ ರೀತಿಯಾಗಿ ಪದೇಪದೇ ವರ್ಣಿಸುವ ಶುಕಾಚಾರ್ಯರಿಗೆ "ದ್ವೇಷದಿಂದ ಮುಕ್ತಿ"ಯೆಂಬುದು ಸಮ್ಮತವಾದೀತೇ! || ೫೧ ||

ದ್ವೇಷಿಸುತ್ತಿದ್ದ ಕಂಸಶಿಶುಪಾಲಾದಿಗಳಿಗೆ ಸದ್ಗತಿಯನ್ನು ಪುರಾಣಾದಿಗಳಲ್ಲಿ ಹೇಳಿದೆಯಲ್ಲ ಎಂದರೆ ಅದರ ಸಮಾಧಾನವನ್ನು ಹೇಳುತ್ತಾರೆ.

ಆಪೋಽಬ್ರುವನ್ನಿತಿ ಸನಾತನ ವೇದವಾಕ್ಯಾತ್
ಕಿಂ ವಕ್ತೃತಾ ಜಡಜಲಸ್ಯ ತಥಾ ಶುಕೋಕ್ತೌ ॥
ಕಂಸಾದಿಮೋಕ್ಷವಚನಾನ್ಯಪಿ ಯುಕ್ತ್ಯಯುಕ್ತ-
ಮಾನಾಂತರೋದಿತ ಮನೋಽಮಧುರಾರ್ಥಭಾಂಜಿ ॥ ೫೨ ॥

"ನೀರು ಮಾತಾಡಿತು" (ಆಪೋಽಬ್ರುವನ್) ಇತ್ಯಾದಿ ಪ್ರಮಾಣಗಳೇ ಆದ ವೇದ ವಾಕ್ಯಗಳಿಗೆ, ಜಡವಾದ ನೀರು ಮಾತಾಡುವುದೆಂತು? ಇತ್ಯಾದಿ ಆಕ್ಷೇಪ ಪರಿಹಾರಕವಾಗಿ ಸಮಂಜಸವಾಗಿ (ಅಂತರ್ಯಾಮ್ಯಧಿ ದೈವಾದಿಷು ತದ್ಧರ್ಮವ್ಯಪದೇಶಾತ್ ಇತ್ಯಾದಿ ಸೂತ್ರಗಳಲ್ಲಿ ಹೇಳಿದಂತೆ.) ಅಂತರ್ಯಾಮಿಗಳಾದ ದೇವತೆಗಳ ಪರವಾಗಿ ಹೇಗೆ ಅರ್ಥವೋ ಹಾಗೆಯೇ ಕಂಸಾದಿಗಳಿಗೆ ಮೋಕ್ಷವನ್ನು ತಿಳಿಸುವ ಶುಕಾಚಾರ್ಯರ ವಚನಗಳಿಗೆ, ಯುಕ್ತಿ ಯುಕ್ತವಾದ ಪ್ರಮಾಣಾಂತರ ಸಿದ್ಧವಾದ ಮನೋಹರವಾದ ತತ್ತ್ಚರೀರಗತ ಸಜೀವ ಪರವಾಗಿ ಅರ್ಥವನ್ನು ಹೇಳಬೇಕು. ॥ ೫೨ ॥

ಯಥಾ ಗ್ರಹಾವಿಷ್ಟ ಕಲೇವರೇ ದ್ವೌ
ಕೃತಾಭಿಮಾನಾ ವಿಹ ಚೇತನೌ ಸ್ತಃ ॥
ತಥೈವ ಕಂಸಾದಿ ಶರೀರಸಂಸ್ಥೌ
ಶುಭಾಶುಭೌ ದ್ವೌ ಸುಖದುಃಖಭಾಜೌ ॥ ೫೩ ॥

ಹೇಗೆ ಪಿಶಾಚಾದಿಗ್ರಹಗಳಿಂದ ಆ ವಿಷ್ಟವಾದ ಮನುಷ್ಯದೇಹದಲ್ಲಿ ಎರಡು ಜೀವಿಗಳು ಅಭಿಮಾನಿಗಳಾಗಿ ಇರುವದು ಕಂಡಿಪೆಯೋ ಹಾಗೆಯೇ ಕಂಸಾದಿ ಶರೀರಗಳಲ್ಲಿ ಸದಸಚ್ಚೇತನಗಳು ಶುಭಾಶುಭ ಕಾರ್ಯಗಳನ್ನು ಮಾಡುವವರಾಗಿ ತತ್ತತ್ಫಲವಾಗಿ ಮೋಕ್ಷ ತಮಸ್ಸುಗಳನ್ನು ಹೊಂದುವರು. ॥ ೫೩ ॥

ದ್ವಿಷಂತಮೇಕಂ ದಿತಿಜಂ ವಿಹಾಯ
ಹರಿಪ್ರಿಯಸ್ಯಾಸುರತಾ ಕಥಂ ಸ್ಯಾತ್ ॥
ಕ್ವಚಿದ್ದ್ವಿಷಂತೋಽಪಿ ಕಿಮುರ್ಜುನೇಂದ್ರ-
ಪುರೋಗಮಾ ದೈತ್ಯತಯಾ ನಿರುಕ್ತಾಃ ॥ ೫೪ ॥

ದ್ವೇಷಿಸುವ ಅಸಚ್ಚೇತನವನ್ನು ಬಿಟ್ಟು, ಹರಿಪ್ರಿಯನಾದ ಸಚ್ಚೇತನಿಗೆ ಅಸುರತ್ವವಾಗಲೀ ಅಧೋಗತಿಯಾಗಲೀ ಹೇಗೆ ಆಗುತ್ತದೆ? (ಆಗುವುದಿಲ್ಲ) ದುಷ್ಟಸಹವಾಸಮೂಲಕ ಸಚ್ಚೇತನನೂ ಕಥಂಚಿದ್ ದ್ವೇಷಿಸುವವನಾದರೂ ಆ ಸಹವಾಸ ಮೂಲಕವಾದ ದ್ವೇಷಾದಿಗಳು ಅಷ್ಟು ಬಾಧಿಸುವದಿಲ್ಲವಾದುದರಿಂದ ಒಮ್ಮೊಮ್ಮೆ ದ್ವೇಷಿಸಿದ ಅರ್ಜುನ-ಇಂದ್ರ ಈ ಮುಂತಾದವರು ದೈತ್ಯರೆಂದಾಗಲೀ ಅವರಿಗೆ ಅಧೋಗತಿಯಾಯಿತೆಂದಾಗಲೀ ಎಲ್ಲಿಯೂ ಹೇಳಿರುವುದಿಲ್ಲ. ॥ ೫೪ ॥

ನ ಚೋಗ್ರಶಾಪಾದ ಸುರಸ್ತ್ರಮೇಷಾಂ
ವಿಹಾಯ ದುಷ್ಟಂ ಕಮಪಿ ಸ್ವನಿಷ್ಠಮ್ ॥
ಯತೋಽಭಿಶಪ್ತೋಽಪಿ ನೃಪೋ ತದೇತ
ದಭೂತ್ಪುರಾ ಕಿಂಕರದೈತ್ಯಯೋಗಾತ್ ॥ ೫೫ ॥

ದೇವತೆಗಳಿಗೆ "ಅಸುರರಾಗಿರಿ" ಎಂಬ ಉಗ್ರವಾದ ಶಾಪವೆಂದರೆ ದೈತ್ಯರ ದೇಹದಲ್ಲಿದ್ದು ದುಃಸಹವಾದ ದುಃಖವನ್ನು ಅನುಭವಿಸಿದರೆಂದರ್ಥವೇ ಆಗಲಿ "ದೈತ್ಯನೇ ಆಗು" ಎಂದು ಅರ್ಥವಲ್ಲ. ಪೂರ್ವದಲ್ಲಿ ವಸಿಷ್ಠ ಋಷಿಗಳಿಂದ ರಾಕ್ಷಸನಾಗೆಂದು ಶಪ್ತನಾದ ಕಲ್ಮಾಷಪಾದನೆಂಬ ರಾಜನು ಹನ್ನೆರಡು ವರ್ಷಗಳ ಕಾಲ ರಾಕ್ಷಸನಾಗಿ ಪುನಃ ಅದೇ ದೇಹದಿಂದಲೇ ರಾಜ್ಯವಾಳಿದನು. ಶಾಪಗ್ರಸ್ತನಾದ ಹನ್ನೆರಡುವರ್ಷಗಳು ಅವನ ದೇಹದಲ್ಲಿ ಕಿಂಕರನೆಂಬ ದೈತ್ಯನಿದ್ದು ರಾಜನನ್ನು ರಾಕ್ಷಸನೆಂದು ಅನಿಸಿಸಿದನು; ಎಂಬುದು ಪ್ರಸಿದ್ಧವಷ್ಟೇ. ॥ ೫೫ ॥

ತನ್ಯೈವ ಚೈದ್ಯೇ ಜಯನಾಮಕಃಸನ್
ತಥಾನ್ಯಸ್ಮಿನ್ವಿ ಜಯಾಭಿಧಾನಃ ॥
ನಿರಂತರದ್ವೇಷ ಫಲಸ್ಯ ಮೂಲಂ
ಬಲೇನ ರಕ್ಷೋಽಪಿ ಚ ತರ್ಹಿ ಸಿಧ್ಯೇತ್ ॥ ೫೬ ॥

ನಿನ್ನ ಪಕ್ಷದಲ್ಲಿಯೂ "ಚೇದಿದೇಶಾಧಿಪನಾದ ಶಿಶುಪಾಲನಲ್ಲಿ ಜಯನು, ಕಲಿಂಗ ದೇಶಾಧಿಪತಿಯಾದ ದಂತ ವಕ್ರನಲ್ಲಿ ವಿಜಯನು" ಎಂದು ಒಪ್ಪಿದುದರಿಂದ, ನಿರಂತರ ದ್ವೇಷರೂಪಕಾರ್ಯದ ಕಾರಣವಾಗಿ ರಾಕ್ಷಸನೂ ಆ ದೇಹಗಳಲ್ಲಿ ಇರುವನೆಂದು ಯುಕ್ತಿಬಲದಿಂದ ಸಿದ್ಧಿಸುತ್ತದೆ. ॥ ೫೬ ॥

ಯದೀಹ ಚೈದ್ಯೇ ದಿತಿಜೋ ನ ನೈರಾ-
ನ್ನ ತರ್ಹಿ ಮೋಕ್ಷಃ ಪರಿಚರ್ಯಯೈವ ॥
ಯದಾ ತು ಸೇವಾವಿಧುರೋಽಪರೋಸ್ತಿ
ತದಾ ಬಲಾತ್ಸಿಧ್ಯತಿ ಜೀವಯುಗ್ಮಮ್ ॥ ೫೭ ॥

ಶಿಶುಪಾಲಾದಿ ದೇಹಗಳಲ್ಲಿ ಅಸುರರಿಲ್ಲದಿದ್ದ ಪಕ್ಷದಲ್ಲಿ— "ದ್ವೇಷದಿಂದ ಮೋಕ್ಷವಿಲ್ಲ. ಆದರೆ ಸೇವೆಯಿಂದಲೇ ಮೋಕ್ಷವು." ಎಂದು ಹೇಳಬೇಕಾಗುತ್ತದೆ. (ಸ್ವಲ್ಪ ಕಾಲದ ದ್ವೇಷವನ್ನು ಅನಾದರಿಸಿ, ತನ್ನ ದ್ವಾರದಲ್ಲಿದ್ದು ಮಾಡಿದ ಬಹು ಕಾಲದ ಸೇವೆಯಿಂದ ಮೆಚ್ಚಿ ಹರಿಯು ಮುಕ್ತಿಯನ್ನು ಕೊಡುವನೆಂಬುದು ಯುಕ್ತಿಯುಕ್ತವಾಗುತ್ತದೆ) ಸೇವೆಯಿಲ್ಲದೆ ದ್ವೇಷವನ್ನು ಮಾಡುವ ಮತ್ತೊಬ್ಬನಿರುವನೆಂಬ ಪಕ್ಷದಲ್ಲಿ ಹಿಂದಿನ ಯುಕ್ತಿಬಲದಿಂದ ಜೀವದ್ವಂದವು ಸಿದ್ಧಿಸುತ್ತದೆ. ॥ ೫೭ ॥

ವಿದ್ವೇಷಿ ಜೀವಕೃತಸಂಗಮಪಿ ಸ್ವಭಕ್ತಂ
ಕೃಷ್ಣೋ ವ್ಯಮೋಚಯದಹೋ ಕರುಣಾಂಬುರಾಶಿಃ ||
ಕಿಂನಾಮ ತದ್ರಹಿತ ಭಕ್ತ ಜನಾನಿತಿಸ್ಮ
ಕೈಮುತ್ಯ ಮೂಹಯತ ಸತ್ಯವತೀ ಸುತೋಕ್ತ್ಯಾ || ೫೮ ||

ಕರುಣಾಸಮುದ್ರನಾದ ಶ್ರೀಹರಿಯು, ತನ್ನ ಭಕ್ತರು (ಶಾಪಾದಿ ಮೂಲಕ) ದುಷ್ಟ ಸಹವಾಸದಿಂದ ತನ್ನನ್ನು ದ್ವೇಷಿಸಿದರೂ ಅದನ್ನು ಲೆಕ್ಕಿಸದೆ, ಕೈಹಿಡಿದು ಉದ್ಧಾರವನ್ನೇ ಮಾಡಿದನು! ಅಂದ ಮೇಲೆ ದ್ವೇಷವಿಲ್ಲದೆ ಶುದ್ಧ ಭಕ್ತ್ಯಾದಿಗಳನ್ನು ಮಾಡುವವರನ್ನು ಮತ್ತೆಷ್ಟು ಉದ್ಧರಿಸುವನೆಂಬುದನ್ನು ವೇದವ್ಯಾಸರ ವಚನದಿಂದ ಕೈಮುತ್ಯ ನ್ಯಾಯದಿಂದ ಊಹಿಸಿರಿ, ಎಂಬಿಲ್ಲಿ ತಾತ್ಪರ್ಯವು. || ೫೮ ||

ದ್ವೇಷಾಭಿವೃದ್ಧಿಂ ದ್ವಿಷತಾಂ ವಿಧಾತುಂ
ವ್ಯಾಸಶ್ಚ ನ ಸ್ಪಷ್ಟಮಿದಂ ಪ್ರಮೇಯಮ್ ||
ಊಚೇ ನ ಚೇದ್ಭಕ್ತಜನ್ಯೈರಗಮ್ಯಂ
ಪಾಪೈರಸಾಧ್ಯಂ ತಮ ಆಪ್ನುಯಾತ್ ಕಃ || ೫೯ ||

ಸ್ವರೂಪದ್ವೇಷಿಗಳಾದ ತಾಮಸ ಜೀವಿಗಳಿಗೆ ದ್ವೇಷಾಧಿಕ್ಯವನ್ನು ಉಂಟು ಮಾಡುವುದಕ್ಕೋಸ್ಕರ, ವೇದವ್ಯಾಸರು ಈ ಪ್ರಮೇಯವನ್ನು ಕಂಠತಃ ಹೇಳಲಿಲ್ಲ. ಹಾಗಿಲ್ಲದ ಪಕ್ಷದಲ್ಲಿ ಭಕ್ತರಿಗೆ ಅಗಮ್ಯವಾದ ಭಗವದ್ವೇಷಾತಿರಿಕ್ತ ಪಾಪಗಳಿಂದ ಅಸಾಧ್ಯವಾದ ತಮಸ್ಸನ್ನು ಹೊಂದುವವನು ಯಾವನು ?

ತ್ರಿವಿಧ ಜೀವರಿಗೆ ಅವರವರ ಸ್ವರೂಪಾನುಸಾರವಾಗಿ ಸಾಧನ ಮಾಡಿಸಿ ಅವರವರ ಸಾಧನಾನು ಗುಣವಾದ ಫಲವನ್ನು ಕೊಡುವುದೇ ಪರಮಾತ್ಮನ ನಿಷ್ಪಕ್ಷಪಾತತೆಯೆಂದು ತಾತ್ಪರ್ಯ. || ೫೯ ||

ಆನಂದ ತೀರ್ಥಮತಮುಜ್ಝಿತದೋಷ ಜಾತಂ
ಸ್ವಾನಂದ ದಾಯ ಶಿಥಿಲೀಕೃತ ಮತ್ತಮಾಯಿ ||
ಮಾನೌಘ ಶೋಭಿ ಮಮ ದುರ್ಜನ ಪುಂಜತೋ ಭೀ-
ರ್ಯೇನೇದೃಶೀ ಮತಿರಭೂತ್ಕ ವಿತೋಲ್ಲಸದ್ಭ್ಯಃ || ೬೦ ||

ಆನಂದತೀರ್ಥರ ಮತವೇ ಸಕಲ ದೋಷಗಳಿಂದ ರಹಿತವಾದುದು. ಸ್ವರೂಪಾನಂದ ಅನುಭವರೂಪವಾದ ಮೋಕ್ಷವನ್ನು ಕೈಗೂಡಿಸುವದು. ಉನ್ಮತ್ತರಾದ ಮಾಯಾವಾದಿಗಳ ದುಃಶ್ಶಾಸ್ತ್ರಗಳನ್ನು ಶಸ್ತ್ರದಂತೆ ಶಿಥಿಲಿಸಿ ಖಂಡನ ಮಾಡುವುದು. ಅನೇಕಾನೇಕ ಪ್ರಮಾಣಗಳ ಪುಂಜದಿಂದ ಶೋಭಿಸುತ್ತಿರುವುದು. ದುರ್ಜನರಿಂದಾಗುವ ಭಯವನ್ನು ಪರಿಹರಿಸುವುದು. ಇಂಥಹ ಸಚ್ಛಾಸ್ತ್ರವನ್ನು

ಆಶ್ರಯಿಸಿದವರಿಗೇ ಶ್ರೀ ವ್ಯಾಸದೇವನ ಹಾರ್ದವು ತಿಳಿಯುತ್ತದೆ. ಅಂಥಹ ಈ ಮತವನ್ನು ಆಶ್ರಯಿಸಿಯೇ ನನಗೆ ಇಂಥಹ ಮಹಾಕಾವ್ಯವನ್ನು ರಚಿಸುವ ಸುಬುದ್ಧಿಯು ಪ್ರಾಪ್ತವಾಗಿರುತ್ತದೆ || ೬೦ ||

ಪೂತನಾವಧವನ್ನು ಹೇಳಿ, ಸಂದರ್ಭಾನುಗುಣವಾಗಿ ಸುಪ್ರಮೇಯವನ್ನು ಇಪ್ಪತ್ತೊಂದು ಶ್ಲೋಕಗಳಿಂದ ಚಿತ್ರಿಸಿ, ಹುಟ್ಟಿದ ಹಬ್ಬ ಮುಂತಾದ ಕಥಾ ಸಂದರ್ಭವನ್ನು ಮುಂದುವರೆಯಿಸುತ್ತಾರೆ.

ತತಃ ಶುಭೋತ್ಥಾನಿಕರ್ಮ ಕರ್ತು-
ಮಿಯೇಷ ನಂದಃ ಪುರುಷೋತ್ತಮಸ್ಯ ||
ಗೃಹಾದ್ಬಹಿರ್ದೈತ್ಯ ಚಮೂಂ ಜಿಘಾಂಸು-
ರಮಂಸ್ತ ತತ್ ಸ್ವಾಚರಣಾನುರೂಪವತ್ || ೬೧ ||

ಪೂತನೆಯ ವಧೆಯ ಅನಂತರ ಪರಮ ಪುರುಷನಾದ ಶ್ರೀಕೃಷ್ಣನಿಗೆ ಶುಭ ಕರವಾದ ಔತ್ಥಾನಿಕಕರ್ಮವನ್ನು (ಹನ್ನೆರಡನೆಯ ದಿನ, ಅಥವಾ ಒಂದುವರೆ ತಿಂಗಳು, ಇಲ್ಲವೆ ಮೂರನೆಯ ತಿಂಗಳಲ್ಲಿ ಶಿಶುವಿಗೆ ಸೂರ್ಯದರ್ಶನ ಮಾಡಿಸುವ ಒಂದು ಮಂಗಲ ಕಾರ್ಯವನ್ನು) ಮಾಡಲು ನಿಶ್ಚಯಿಸಿದನು. ಮನೆಯ ಹೊರಗಿರುವ ದೈತ್ಯರ ಸೇನೆಯನ್ನು ಸಂಹರಿಸಲಿಚ್ಛಿಸುವ ಶ್ರೀ ಕೃಷ್ಣನು, ಈ ಔತ್ಥಾನಿಕ ಕರ್ಮವನ್ನು ತನ್ನ ದೈತ್ಯವೃಂದದ ನಾಶಕವಾದ ವ್ಯಾಪಾರಕ್ಕೆ ಅನು ಕೂಲವೆಂದು ತಿಳಿದನು (ಭಾವಿಸಿದನು). || ೬೧ ||

ನಿಜಂ ಸಮಾಹೂಯ ಸ ಬಂಧುವರ್ಗಂ
ಪಿತಾ ಸುತಂ ಶ್ರೀಪತಿಮಭ್ಯಷಿಂಚತ್ ||
ತತಃಪ್ರಭೃತ್ಯುದ್ಧತ ದೈತ್ಯವರ್ಗ-
ವಿಘಾತದೀಕ್ಷಾಮಿವತಸ್ಯ ಬಧ್ನನ್ || ೬೨ ||

ನಂದಗೋಪನು ತನ್ನ ಬಂಧು-ಬಾಂಧವರ ವೃಂದವನ್ನೇ ಕರೆದುಕೊಂಡು, ಮಗನಾದ ಶ್ರೀ ಕೃಷ್ಣನಿಗೆ ಅಭ್ಯಂಗಾಭಿಷೇಕವನ್ನು ಮಾಡಿದನು. ಅಂದಿನಿಂದಲೇ ಶ್ರೀಪತಿಗೆ ಸಕಲ ದೈತ್ಯರ ವಧೆಯಲ್ಲಿ ದೀಕ್ಷಾಬಂಧನವಾದಂತಾಯಿತು. || ೬೨ ||

ಯದಾ ಸುಹೃತ್ಸಂ ಚಯಮರ್ಚಯಂತೀ
ಸುತಂ ನ ಸಸ್ಮಾರ ಮುದಾ ಯಶೋದಾ ||
ತದೈವ ಮಾಯೀ ಶಕಟಾಸುರಸ್ತಂ
ನಿಹಂತುಕಾಮೋಽಭಿ ಸಸಾರ ಶೂರಃ || ೬೩ ||

ಈ ಉತ್ಸವದಲ್ಲಿ ಬಂದ ಬಂಧುಗಳ ಆಹ್ವಾನಾದಿ ಆದರೋಪಚಾರಗಳಲ್ಲಿ ನಿರತಳಾದ ಯಶೋದೆಯು, ಶ್ರೀಕೃಷ್ಣನನ್ನು (ಬಂಡಿಯ ಕೆಳಗೆ ಮಲಗಿಸಿ)ಯಾವಾಗ

ಮರಿತಂತಾದಳೋ ಆ ಕ್ಷಣದಲ್ಲಿಯೇ ಬಂಡಿಯ ರೂಪವನ್ನು ತಾಳಿದ ಶಕಟಾಸುರನು ತಾನು ಶೂರನೆಂದು ಭ್ರಮಿಸಿ, ಶ್ರೀ ಕೃಷ್ಣನನ್ನು ಕೊಲ್ಲಲಿಕ್ಕೆ ಇಚ್ಛಿಸಿ ಸಮೀಪದಲ್ಲಿ ಸರಿದುಬಂದನು. ॥ ೬೩ ॥

ಶಕಟಾಸುರನ ವಧೆಯನ್ನು ಉತ್ಪ್ರೇಕ್ಷಿಸುತ್ತಾರೆ.

ಮರಿಷ್ಯಮಾಣಃ ಸಕಲಂ ಸ್ವಭಾಗ್ಯ-
ಮನೇನ ಕಂಸಂ ಸಹ ನೇಷ್ಯತೀತಿ ॥
ಭಿಯೇವ ಪೂರ್ವಂ ಶಕಟಂ ಮುರಾರಿಃ
ಬಭಂಜ ಪಾದೇನ ಸುಕೋಮಲೇನ ॥ ೬೪ ॥

ಸಾಯಲು ಸಿದ್ಧನೇ ಆದ ಕಂಸನು, ಹೇಗೂ ಸಾಯುವೆನೆಂದು ತನ್ನ ಸಂಪತ್ತನ್ನೆಲ್ಲವನ್ನೂ ಈ ಶಕಟನೆಂಬ ಬಂಡಿಯಲ್ಲಿ ತುಂಬಿ ಸಾಗಿಸಲು ಅನುಕೂಲವಾದೀತು. ಹಾಗಾಗಬಾರದೆಂಬ ಧ್ಯೇಯದಿಂದಲೋ ಎಂಬಂತೆ ಶ್ರೀ ಕೃಷ್ಣನು ತನ್ನ ಕೋಮಲವಾದ ಕಾಲಿನಿಂದ ಬಂಡಿಯನ್ನು ಒದ್ದನು. ಬಂಡಿಯು ನುಚ್ಚುನುಚ್ಚಾಗಿ ಶಕಟನು ಹತನಾದನು. ॥ ೬೪ ॥

ತತಃ ಸ ಮಾಯಾ ಮುಪಹಾಯ ದೈತ್ಯಃ
ಸ್ವ[illegible]ಪಧಾರೀ ಪುನರಾವಿರಾಸೀತ್ ॥
ತಥಾ ಹಿ ವಿಷ್ಣೋಃ ಪದಯೋಗಕಾಲೇ
ಕಥಂ ತು ಸಾ ಜೀವಿತು ಮುತ್ಸಹೇತ ॥ ೬೫ ॥

ಆ ದೈತ್ಯನು, ಪರಮಾತ್ಮನ ಪಾದಪ್ರಹಾರದಿಂದ, ತನ್ನ ಮಾಯೆಯನ್ನು (ಶಕಟವೇಷವನ್ನು) ಬಿಟ್ಟು, ಸ್ವರೂಪವನ್ನೇ ಧರಿಸಿ, ಆವಿರ್ಭೂತನಾಗಿ ಮೃತನಾದನು. ಅದು ವಿಹಿತವೇ! ಶ್ರೀವಿಷ್ಣುವಿನ ಪಾದಸಂಸರ್ಗವಾದ ಮೇಲೆ ಆ ಮಾಯೆಯು ಹೇಗೆ ಜೀವಿಸುವುದು- ಉಳಿಯುವುದು? ॥ ೬೫ ॥

ಸ ಕೃಷ್ಣಪಾದಾಭಿಹತಾಖಿಲಾಂಗೋ
ಬಭೂವ ದೈತ್ಯಃ ಕಿಲ ನಿರ್ಗತಾಸುಃ ॥
ಅಹಂ ತು ಮನ್ಯೇ ಸ್ವಕಜಾತ್ಯಯೋಗ್ಯ-
ರಥಾಂಗಧಾರೀ ಸ ಮಮಾರ ಧೀರಃ ॥ ೬೬ ॥

ಶ್ರೀ ಕೃಷ್ಣನ ಪಾದದಿಂದ ಒದಿಸಿಕೊಂಡು ಛಿನ್ನ ಭಿನ್ನ ಸರ್ವಾಂಗನಾದ ಆ ದೈತ್ಯನು ಮೃತನೇ ಆದನು."ಆ ದೈತ್ಯನು ಧೀರನೇ ಆದರೂ ತನ್ನ ಜಾತಿಗೇ (ಅಸುರಕುಲಕ್ಕೇ) ಮಾರಕವಾದ ಚಕ್ರದ ರೂಪವನ್ನು ಧರಿಸಿ ಬಂದುದು. ಅದುದರಿಂದಲೇ ಮೃತನಾದನು", ಹೀಗೆ ನಾನು ಭಾವಿಸುತ್ತೇನೆ. ॥ ೬೬ ॥

ಧ್ರುವಂ ಪುನರ್ವಿಷ್ಣುಪದಸ್ಯ ಸಂಗ-
ಭಯಾತ್ ಸಕೃದ್ವಿಷ್ಣು ಪದಾಹತೋಽಸೌ ||
ಅಧಃ ಪಪಾತಾಸುರ ಮಂಡಲೀಯಂ
ವಿನಾಶಕಾಲೇ ವಿಪರೀತ ಬುದ್ಧಿಃ || ೬೭ ||

ಒಂದೇ ಬಾರಿ ಶ್ರೀ ಕೃಷ್ಣನ ಪಾದದಿಂದ ಒದೆಯಲ್ಪಟ್ಟ ಆ ಶಕಟಾಸುರನು, ಮೇಲಕ್ಕೆ ಹೋಗಲು, ಮತ್ತೆ "ವಿಷ್ಣುಪದ" (ಆಕಾಶ, ಶ್ರೀಕೃಷ್ಣನ ಪಾದ) ದ ಸಂಗವಾಗುವುದೆಂಬ ಭೀತಿಯಿಂದ ಕೆಳಗುರುಳಿದನು. ಅಸುರ ವರ್ಗದ ಸ್ವಭಾವವೇ ಇಂತಹದು. ವಿನಾಶಕಾಲದಲ್ಲಿ ವಿಪರೀತ ಬುದ್ಧಿಯುವರಾಗಿ ಬಾಳುವುದು. || ೬೭ ||

ರೋಮ್ಣಾಂ ಹರ್ಷಣಕಾರಿಣಿ ಶ್ರವಣತಃ ಪಾಪೌಘವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ವಿಚಿತ್ರವಿಮಲಶ್ಲಾಘ್ಯಾರ್ಥ ಸಂದಾಯಿನಿ ||
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷು ಮಹತಃ ಸರ್ಗೋದ್ವಿತೀಯೋಮುದಾಮ್ ||೬೮||

ಶ್ರೀಮದ್ವಾದಿ ರಾಜ ಶ್ರೀಪಾದಂಗಳವರು ಹತ್ತೊಂಬತ್ತು ಸರ್ಗಗಳ ಕೊನೆಯದಾಗಿ ಒಂದೇ ಶ್ಲೋಕವನ್ನೇ ರಚಿಸಿ, ಸರ್ಗಗಳ ಸಂಖ್ಯೆಯನ್ನು ಮಾತ್ರ ತೋರಿಸಿರುತ್ತಾರೆ. || ೬೮

ಈ ಶ್ಲೋಕದ ಅರ್ಥವನ್ನು ಪ್ರಥಮ ಸರ್ಗದ ಕೊನೆಯಲ್ಲಿಯೇ ಬರೆದಿರುತ್ತದೆ.

ಶ್ರೀಮದ್ವಾದಿರಾಜ ಪೂಜ್ಯ ಚರಣವಿರಚಿತವಾದ ಶ್ರೀರುಕ್ಮಿಣೀಶ ವಿಜಯ
ಮಹಾ ಕಾವ್ಯದಲ್ಲಿ ಎರಡನೆಯ ಸರ್ಗವು ಸಮಾಪ್ತಿಗೊಂಡಿತು.

— ಶ್ರೀಮಧ್ವೇಶಾರ್ಪಣಮಸ್ತು —

ಶ್ರೀ ರುಕ್ಮಿಣೀಶವಿಜಯ— ಮೂರನೆಯ ಸರ್ಗ.

ಕ್ರಮವಾಗಿ ದುಷ್ಟನಿಗ್ರಹಾದಿಗಳನ್ನು ವರ್ಣಿಸುತ್ತಾ ಬಾಲಲೀಲಾದಿಗಳನ್ನು ಹೇಳುತ್ತಾರೆ.

ಅಥಾಪರೋ ದೈತ್ಯಕದಂಬಕಾಸು-
ರಿವ್ರೋದ್ಧತೋ ವಾತಶರೀರಧಾರೀ ||
ಪ್ರಗೃಹ್ಯ ಕೃಷ್ಣಂ ಗಗನಂ ಜಗಾಮ
ಸ್ವನಾಶಯೋಗ್ಯಸ್ಥ ಲಕಾಂಕ್ಷಯೇವ ||೧||

ಶಕಟಾಸುರನ ವಧಾನಂತರ ದೈತ್ಯರಗುಂಪಿಗೆ ಪ್ರಾಣದಂತಿರುವ ತೃಣಾವರ್ತನೆಂಬ ದೈತ್ಯನು ಗಾಳಿಯ ರೂಪವನ್ನು ಧರಿಸಿದವನಾಗಿ ಶ್ರೀಕೃಷ್ಣನನ್ನು ಎತ್ತಿಕೊಂಡು ಸ್ವನಾಶಕವಾದ ಸ್ಥಳವನ್ನು ಬಯಸಿಯೋ ಎಂಬಂತೆ ಆಕಾಶಕ್ಕೆ ಎತ್ತಿಕೊಂಡು ಹಾರಿದನು. ||೧||

ದುಸ್ತರ್ಕಾಯಿತಶರ್ಕರಾಭಿರಮಲಂಚಕ್ಷುಸ್ಸಮುಷ್ಣನ್ನಗವಾ
ಮಾವಾಸೇ ವಸತಾಂ ಸತಾಮುರುತಮೋ ವಿಸ್ತಾರಯನ್ಮಾರಯನ್ ||
ತದ್ವಾಕ್ಯಶ್ರವಣಂ ಕಠೋರಕುಟಿಲಧ್ವಾನೈರ್ಯಶೋದಾಸುತಂ
ದೈತ್ಯೋಽಗೂಹ ಯದಾಗಮಾಂತಲಲನಾಗರ್ಭಂ ಕುವಾದೀವತಂ ||೨||

ಸದಾ ಸತ್ಶಾಸ್ತ್ರಾಧ್ಯಯನ ನಿರತಚಿತ್ತರಾದ ಸಜ್ಜನರಿಗೆ, ಉನ್ಮತ್ತರಾದ ಮಾಯಿಗಳು (ದುಷ್ಟವಾದಿಗಳು) ದುಸ್ತರ್ಕಗಳಿಂದ ನಿರ್ದಿಷ್ಟ ಜ್ಞಾನವನ್ನು ಮರೆಮಾಡಿ ಬಹುವಾಕ್ಯಗಳನ್ನು ಆಡುತ್ತಾ ಅಜ್ಞಾನವನ್ನು ಹರಡಿ ಕಠೋರ ಶಬ್ದಗಳಿಂದ ಕಿವಿಗಳನ್ನು ಕೆಡಿಸಿ ವೇದ ಗರ್ಭನಾದ ಪರಮಾತ್ಮನನ್ನು ಹೇಗೆ ಗೂಹಿಸುವರೋ (ಮರೆಮಾಡುವರೋ) ಹಾಗೇಯೇ ತೃಣಾವರ್ತನೆಂಬ ದೈತ್ಯನು ಗಾಳಿಯ ರೂಪವನ್ನುತಾಳಿ ಗೋಕುಲವಾಸಿಗಳಾದ ಎಲ್ಲಾ ಗೊಲ್ಲರು ಗೋಪಿಯರುಗಳ ಕಣ್ಣನ್ನು ಉಸಿಕಿನಿಂದಾತುಂಬಿ ಕಗ್ಗತ್ತಲನ್ನು ಕವಿಸಿ ಕಠೋರ ಶಬ್ದದಿಂದ ಕಿವಿಗಳನ್ನು ಗದ್ಗವಿಸಿಸಿ ಯಶೋದಾನಂದ ನಂದನನಾದ ಶ್ರೀಕೃಷ್ಣನನ್ನು ಕುವಾದಿಯಂತೆ ಎತ್ತಿಕೊಂಡು ಹೋದನು. ||೨||

ತದಾ ಖಲಸ್ಯೋತ್ಪತನಂ ಸ ಶೌರಿಃ
ಹೃದಾನುಮೇನೇ ಪತಿತಸ್ಯ ದೂರಾತ್ ||
ಗಿರೀಂದ್ರ ಕಲ್ಪೋತ್ಪತಿತಾತ್ಮ ಮೂರ್ತ್ಯಾ
ಶರೀರಮಾಚೂರ್ಣಯಿತುಂ ಧಿಯೇವ ||೩||

ಆ ಸಮಯದಲ್ಲಿ ಶೌರಿಯಾದ ಶ್ರೀಕೃಷ್ಣನು, ಖಳನಾದ ಆ ತೃಣಾವರ್ತನು ತನ್ನನ್ನು ಬಹು ಮೇಲ್ಭಾಗದಲ್ಲಿ ತೆಗೆದುಕೊಂಡು ಹೋಗುವುದನ್ನು ಬಹು ಚನ್ನವೆಂದೇ ತಿಳಿದನು. ಏಕೆಂದರೆ ಪರ್ವತಪ್ರಾಯನಾದ ಇವನನ್ನು ಎಷ್ಟು ಮೇಲಿಂದ ಒಗೆದರೇ ಅಷ್ಟು ಚೂರು ಚೂರಾದ ದೇಹವುಳ್ಳವನಾಗಿ ಸಾಯುತ್ತಾನೆ ಎಂಬ ಧ್ಯೇಯದಿಂದಲೋ ಎಂಬಂತೆ. ||೩||

ಹರಿಂ ಸ ಸಂಸ್ಥಾಪ್ಯ ಹೃದಿ ಸ್ವಕೀಯೇ
ಪರಿಭ್ರಮನ್ವ್ಯೋಮ್ನಿ ಮುಹುಃಶ್ವಸಂಶ್ಚ ||
ಗರಂ ನಿಪೀಯ ಭ್ರಮಿತಾಂತರಾತ್ಮಾ
ಸರೋಧಿಯಾಭ್ರಂ ಪ್ರವಿಶನ್ನಿವಾಸ್ತೇ ||೪||

ಆ ತೃಣಾವರ್ತನು ಶ್ರೀಕೃಷ್ಣನನ್ನು ಎದೆಯ ಮೇಲೆ ಎತ್ತಿಕೊಂಡು ಆಕಾಶದಲ್ಲಿ ಬಹು ಶ್ವಾಸೋಚ್ಛ್ವಾಸವನ್ನು ಮಾಡುತ್ತಾ ಪರಿಭ್ರಮಿಸಿದನು. ವಿಷವನ್ನು ಕುಡಿದು ಭ್ರಾಂತನಾಗಿ ಆಕಾಶವನ್ನೇ ಸರೋವರವನ್ನಾಗಿ ತಿಳಿದು ಸುತ್ತುವನೋ ಎಂಬಂತಿದ್ದಿತು. ||೪||

ಮುರದ್ವಿಷಂ ಮೂರ್ಧ್ನಿ ನಿಧಾಯ ವಿಷ್ಣೋಃ
ಪದಂ ಪ್ರವೇಷ್ಟುಂ ತ್ವರಯಾ ಗತೋಽಪಿ ||
ಅಸೌ ಪಪಾತಾ ಮರವೈರ್ಯಧಸ್ತಾ
ದಯೋಗ್ಯ ಕಾಮಸ್ಯ ಕಥಂ ನ ಪಾತಃ ||೫||

ಮುರಮಥನನಾದ ಶ್ರೀಕೃಷ್ಣನನ್ನು ಎತ್ತಿಕೊಂಡು ಆಕಾಶದಲ್ಲಿ ಮೇಲಕ್ಕೆ ಹಾರಿದರೂ ಸುರವೈರಿಯಾದ ಆ ದೈತ್ಯನು (ತೃಣಾವರ್ತನು) ಕೆಳಗೇ ಬಿದ್ದನು. (ಅಯೋಗಮಿಚ್ಛನ್ಪುರುಷಃ ಪತತ್ಯೇವ ನ ಸಂಶಯಃ ಎಂಬಂತೆ) ತನಗೆ ಯೋಗ್ಯತಾತಿಕ್ರಾಂತವಾದ ಸ್ಥಾನವನ್ನು ಬಯಸುವ ಪಾಪಿಗೆ ಅಧೋಗತಿಯು ಏಕೆ ಆಗದಿರುವುದು ? ||೫||

ಸ ವಾತರೂಪೋ ದಿತಿಜೋ ಮುಕುಂದ
ಭರಾಸಹಿಷ್ಣುರ್ನಿಪಪಾತ ಭೂಮೌ ||
ತಥಾ ಹಿ ವಾತಸ್ಯ ಜವೋಧಿ ಕೋಽಪಿ
ಕಥಂ ನು ವಿಶ್ವಂಭರ ಮುದ್ವಿಭರ್ತಿ ||೬||

ವಾತರೂಪಿಯಾದ ತೃಣಾವರ್ತನು ಎಷ್ಟೇ ವೇಗದಿಂದ ಮೇಲೇರಿ ಹೋದರೂ ಶ್ರೀ ಮುಕುಂದನ ಭಾರವನ್ನು ಸಹಿಸಲಾರದೇ ಕೆಳಗೇ ಬಿದ್ದನು. ಇದೂ ವಿಹಿತವೇ; ಗಾಳಿಗೆ ವೇಗವಿದ್ದರೂ ವಿಶ್ವಂಭರನಾದ ಶ್ರೀಕೃಷ್ಣನನು ಹೊರುವ ಸಾಮರ್ಥ್ಯವು ಹೇಗೆ ಬರುವದು. ||೬||

ಚಕ್ಷುಃಶ್ಚಾರ್ಯ್ಯರ್ ಫಲಂ ಜಗಾಮ ಪರಿವೃತ್ತಾಕ್ಷಃ ಪ್ರಭೋ ರೋಜಸಾ
ವಿಷ್ವಕ್ಸಂಭ್ರಮಣೇನ ದತ್ತತಮಸೋ ವಿಭ್ರಾಂತಮೂರ್ಧಾ ಫಲಂ ||
ಸಾಧೂನಾಂ ಹೃದಯಾರ್ತಿದಾನಫಲಿತಂ ಕ್ಲೇಶಂ ಪ್ರಪನ್ನಃ ಕ್ಷಿತಾ
ಮಾತುಃ ಪಾತಕರಃ ಪರಸ್ಯ ಸ ಬಲಃ ಪಾಷಾಣಪೃಷ್ಠೇ ಪತತ್ || ೭ ||

ಎಲ್ಲರ ಕಣ್ಣಿಗೆ ಮಣ್ಣೆರಚಿದ ಫಲವಾಗಿ ವ್ಯತ್ಯಸ್ತ ಕಣ್ಣುಗಳುಳ್ಳವನಾಗಿಯೂ ಪ್ರಭುವಾದ ಶ್ರೀಕೃಷ್ಣನನ್ನು ಎತ್ತಿ ಗಿರಿಗಿರಿತಿರುಗುತ್ತಾ ಕತ್ತಲೆಯನ್ನು ಕವಿಸಿದರ ಫಲವಾಗಿ ಛಿದ್ರ ಶಿರಸ್ಕನಾಗಿಯೂ ಸಜ್ಜನರಿಗೆ ದುಃಖದಾನದ ಫಲವಾಗಿ ಸ್ವಯಂ ಸಂಕಟಪಡುವನಾಗಿಯೂ ಯಶೋದೆಯನ್ನು ಭೂಮಿಯ ಮೇಲೆ ದಬ್ಬಿದರ ಫಲವಾಗಿ ಶ್ರೀಕೃಷ್ಣನಿಂದ ದೊಡ್ಡಕಲ್ಲಿನ ಮೇಲೆ ಒಗಿಸಿಕೊಳ್ಳಲ್ಪಟ್ಟವನಾಗಿಯೂ ನುಚ್ಚು ನುಚ್ಚಾದ ದೇಹಉಳ್ಳವನಾಗಿ ಮೃತಗೊಂಡನು. || ೭ ||

ಆಲೋಲಹೈಮವರದಾಮವತೀಂ ವಿತಾನ-
ಜಾಲಾವಲಂಬಿ ಶುಭಮೌಕ್ತಿಕ ರಮ್ಯ ಮಾಲಾಮ್ ||
ದೋಲಾಂ ವಿಧಾಯ ತದುಪರ್ಯ್ಯಧಿರೋಪ್ಯ ಬಾಲಂ
ಸಾಲೋಕ್ಯ ಸೌಖ್ಯ ಮಲಭೀಷ್ಟ ಹೃದಾ ಯಶೋದಾ || ೮ ||

ಚಲನಯುಕ್ತವಾದ ಭಂಗಾರದ ಪರಪಳಿಗಳಿಂದಲೂ ತೊಟ್ಟಿಲ ಮೇಲ್ಗಟ್ಟನಲ್ಲಿ (ಅಸ್ಮಾನಗಿರಿಯಲ್ಲಿ)ನೇತಾಡುತ್ತಿರುವ ಮುತ್ತಿನ ಮಾಲೆಗಳಿಂದಲೂ ರಮ್ಯವಾದ ಪರದೆಗಳಿಂದಲೂ ತೊಟ್ಟಿಲನ್ನು ಸುಂದರವಾಗಿ ರಚಿಸಿ ಅದರಲ್ಲಿ ಶ್ರೀಕೃಷ್ಣನನ್ನು ಮಲಗಿಸಿ ಎವೆಯಿಕ್ಕದಲೇ ನೋಡುತ್ತಾ ಆನಂದಭರಿತಳಾಗಿ ಸಾಲೋಕ್ಯ ಮೋಕ್ಷಸುಖವನ್ನೇ ಯಶೋದೆಯು ಅನುಭವಿಸಿದಳು || ೮ ||

ದೋಲಾವಿಲಾಸ ಚಲಿತಾಲಕ ಶೋಭಿಫಾಲಂ
ಬಾಲಂ ಶುಭಸ್ಮಿತ ಸುಧಾರಸಶೋಭಿತಾಸ್ಯಮ್ ||
ಶ್ಯಾಮಂ ಸಮೀಕ್ಷ್ಯ ಸಮಯಂಕಿಲಶಮ್ಮಯಂ ಸಾ
ತೇನೇ ಕ್ವಣತ್ಕನಕ ನೂಪುರ ಶೋಭಿಪಾದಂ || ೯ ||

ಯಶೋದೆಯು, ತೊಟ್ಟಿಲಿನ ಚಲನೆಯಿಂದ ಚಲಿಸುವ ಉಂಗುರುಂಗರಾದ ಕೇಶಪಾಶಗಳಿಂದ ಅಲಂಕೃತವಾದ ಹಣೆಯಿಂದಲೂ, ಉಕ್ಕುವ ಸುಧಾರಸದಂತೆ ತೋರುವ ಕೆಂದುಟಿಗಳಿಂದ ಶೋಭಿತವಾದ ನಗೆಮುಖದಿಂದಲೂ, ವರ್ಣನೀಯನಾದ ಬಾಲರೂಪಿಯಾಗಿ ಧ್ವನಿಗರೆವ ಬಂಗಾರದ ಕಾಲ್ಕಡಗಳಿಂದ ಶೋಭಿಸುವ ಶ್ರೀಕೃಷ್ಣನನ್ನು ರೆಪ್ಪೆಹೊಡೆಯದೇ ನೋಡುತ್ತಾ ಎಲ್ಲ ಕಾಲವನ್ನು ಆನಂದಮಯವಾಗಿಯೇ ಕಳೆಯುತ್ತಿದ್ದಳು || ೯ ||

ಗಂಡಂ ವರಾಂಗುಲಿದಲೈರ್ಲಘು ಲಾಲಯಂತೀ
ಮಂದಸ್ಮಿತಾನನ ಮಹೋ ಪರಿಭಾವಯಂತೀ ॥
ಸಾಂದ್ರಸ್ತನ ಸ್ರುತಪಯಃ ಕಿಲ ಪಾಯಯಂತೀ
ನಂದಸ್ಯ ರಾಜ್ಞ್ಯಭವದಿಹಮುಹರ್ನಯಂತೀ ॥೧೦॥

ನಂದಗೋಪನ ರಾಣಿಯಾದ ಯಶೋದೆಯು ಶ್ರೀಕೃಷ್ಣನ ಕೋಮಲಗಳಾದ ಕೆನ್ನೆಗಳನ್ನು ತನ್ನ ಮೃದುತರವಾದ ಬೆರಳುಗಳಿಂದ ಲಾಲಿಸುವವಳಾಗಿ ಮುಗುಳು ನಗೆಯಿಂದ ಸುಂದರವಾದ ಮುಖವನ್ನು ಪರಿಪರಿ ವಿಧವಾಗಿ ಮನಸಾ ಭಾವಿಸುತ್ತಾ ದಟ್ಟವಾದ ತನ್ನ ಸ್ತನಗಳಲ್ಲಿ ಸ್ರವಿಸುವ ಹಾಲನ್ನು ಕುಡಿಸುವವಳಾಗಿ ಹಗಲುಗಳೆಲ್ಲವನ್ನು ಆನಂದಮಯವಾಗಿಯೇ ಅನುಭವಿಸುವವಳಾಗಿದ್ದಳು. ॥೧೦॥

ಯಾಮರ್ತ್ಯ ಮರ್ತ್ಯದಿತಿಜಾಲಿಭಿರಪ್ಯ ಭೇದ್ಯಂ
ಬ್ರಹ್ಮಾಂಡಬಾಂಡಮಭಿನನ್ನಖ ಕೋಟಿ ಮಾತ್ರಾತ್ ॥
ಸ್ವಾಂಗುಷ್ಠ ಪುಷ್ಟ ಸುಭಗಾಂಗುಲಿಮುಚ್ಯುತಸ್ತಾಂ
ಸಂಗೃಹ್ಯ ಚುಂಬತಿ ಶಿಶುಪ್ರಕೃತಿಃ ಶಯಾನಃ ॥೧೧॥

ಶ್ರೀಕೃಷ್ಣನಾದರೋ ಸ್ವಾಭಾವಿಕ ಶಿಶುವಿನಂತೆ ತೊಟ್ಟಿಲಲ್ಲಿ ಮಲಗಿದವನಾಗಿ ದೇವ-ದಾನವ ಮಾನವಾದಿಗಳಿಂದಲೂ ಅಭೇದ್ಯವಾದ ಬ್ರಹ್ಮಾಂಡವು ಯಾವ ಉಗುರಿನ ಕೋಟ್ಯಂಶಸ್ಪರ್ಶ ಮಾತ್ರದಿಂದಲೇ ಭಿನ್ನವಾಯಿತೋ ಅಂತಹ ಉಗುರಿನಿಂದ ಶೋಭಿಸುವ ಬಲಗಾಲಿನ ಹೆಬ್ಬೆರಳನ್ನು ತನ್ನ ಪುಷ್ಟವಾದ ಕೈಯಿಂದಾ ಹಿಡಿದು ಮುಖದಲ್ಲಿ ಚುಂಬಿಸುತ್ತಿದ್ದನು. ॥೧೧॥

ನಿದ್ರಾಮಾತ್ರಃಯ ಕಿಂ ತದಾಶ್ರಯಫಲಂ ಭುಂಕ್ತ ವ್ರಜೇಜ್ಜೀರ್ಣತಾಂ
ನಿದ್ರಾ ಕಾಂಬ ನಿಮೀಲಿತಾಕ್ಷಯುಗಲಃ ಪ್ರಾಜ್ಞಂ ಯದಾಲಿಂಗತಿ ॥
ಅಸ್ತ್ವೇವಂ ಕ್ವಿತಿ ಮುದ್ರಿತಾತ್ಮನಯನಃ ಸ್ವಾಂಗಂ ಸಮಾಲಿಂಗ್ಯ ತತ್
ಸರ್ವಂ ಜೀರ್ಣಮಹೋ ದಿಶೇತಿ ಜನನೀಂ ಶಂಸನ್ನಿಬಂ ಸೋಽವತಾತ್ ॥೧೨॥

ಯಶೋದೆಯು ತೂಗುತ್ತಾ ಹೇಕೃಷ್ಣ ನಿದ್ರಿಸಪ್ಪಾ ಎನಲು.

ಶ್ರೀಕೃಷ್ಣನು— ಅಮ್ಮಾ, ನಿದ್ರಿಯ ಫಲವೇನು?

ಯಶೋದೆ— ಭುಕ್ತವಾದುದೆಲ್ಲವೂ ಜೀರ್ಣವಾಗುವದು ಕೃಷ್ಣ.

ಶ್ರೀಕೃಷ್ಣ— ಅಮ್ಮಾ, ನಿದ್ರೆ ಎಂದರೇನು?

ಯಶೋದೆ— ಪ್ರಾಜ್ಞನಾಮಕನಾದ ಪರಮಾತ್ಮನನ್ನು ಆಲಂಗಿಸಿ ಕಣ್ಣುಮುಚ್ಚುವುದು ಎನಲು,

ಶ್ರೀಕೃಷ್ಣನು ತನ್ನೆರಡು ಕೈಗಳಿಂದ ತನ್ನೆದೆಯನ್ನೇ ಆಲಿಂಗಿಸಿ ಕಣ್ಣುಗಳನ್ನು ಮುಚ್ಚಿ ಚಟ್ಟನೆ ತೆರೆದು ಅಮ್ಮಾ ಎಲ್ಲವೂ ಜೀರ್ಣವಾಯಿತು ಇನ್ನು ಕೊಡು ಎಂದು ಯಶೋದೆಯನ್ನು ಮುಗ್ಧಗೊಳಿಸಿದ, ಶ್ರೀಕೃಷ್ಣನು ತನ್ನವರಾದ ನಮ್ಮ ಗಳನ್ನು ರಕ್ಷಿಸಲಿ ॥೧೨॥

ಮಾತರ್ಗಾಯಸಿ ಕಿಂ ಸದಾ ಜಲನಿಧೌ ಶೇಷಾಂಗ ಸಂಶಾಯಿನಂ
ತಾತಾಸೌ ನನು ನಿದ್ರಯಾ ಪರಿವೃತೋ ದದ್ಯಾತ್ತ್ವಪಾಪೀತಿ ತಾಮ್ ॥
ಏವಂ ಚೇದ್ಗದಿತಂ ತ್ವದೀಯ ಮಖಿಲಂ ತತ್ಕರ್ಣದೇಶಂ ಕಥಂ
ಯಾತೀತಿ ಪ್ರತಿಪಾದಯನ್ ನಿಜಮತಂ ಪಾಯಾದ್ಯಶೋದಾಸುತಃ ॥೧೩॥

ಯಶೋದೆಯು ಹಾಡುತ್ತಾತೂಗುತ್ತಿರಲು.

ಶ್ರೀಕೃಷ್ಣನು:— ಅಮ್ಮಾ ಯಾರನ್ನು ಕುರಿತು ಹಾಡುತ್ತೀಯೆ ?

ಯಶೋದೆ:— ಕ್ಷೀರಸಮುದ್ರದಲ್ಲಿ ಶೇಷಪರ್ಯಂಕ ಶಾಹಿಯಾದ ಶ್ರೀಹರಿಯನ್ನು ಕೃಷ್ಣಾ !

ಶ್ರೀಕೃಷ್ಣ:— ಅಮ್ಮಾ ನಮಗೇನು ಫಲ

ಯಶೋದೆ:— ಶ್ರೀಹರಿಯು ಆನಂದದಿಂದ ನಿದ್ರಿಸುತ್ತಿರುವನು ಅಂತಹವ ನನ್ನು ಹಾಡಿದರೇ ನಿನಗೂ ಸುಖನಿದ್ರೆಯನ್ನು ಕೊಡುವನು.

ಶ್ರೀಕೃಷ್ಣ:— ಹಾಗಾದರೆ ನೀನು ಹಾಡುವುದು ಅವನ ಕಿವಿಗೆ ಕೇಳುವುದು ಹೇಗೆ (ಬಹುದೂರನಾಗಿಯೂ ನಿದ್ರಿತನಾಗಿಯೂ ಇರುವುದರಿಂದ) ಹೀಗೆಂದು ತಾಯಿಯ ಬಾಯಿಯನ್ನೇ ಬಂಧಿಸಿ (ದೂರದಲ್ಲಿರುವವನು ನಿದ್ರಿತನೂ ಸಹ ಆಗದ) ಆ ಶ್ರೀಹರಿಯು ನಾನೇ ಎಂಬ ಸ್ವಾಭಿಪ್ರಾಯವನ್ನು ಸ್ವವಿಲಾಸದಿಂದ ತೋರಿದ ಶ್ರೀಕೃಷ್ಣನು ನಮ್ಮನ್ನು ರಕ್ಷಿಸಲಿ ॥೧೩॥

ಲೋಲತ್ಕಂಕಣ ಪಾಣಿಪದ್ಮಧೃತಯಾ ನಿಲೋಲ್ಲಸತ್ಕುಂತಲಾಃ
ಬಾಲಾಃ ಸ್ರಸ್ತದುಕೂಲ ಹಾರವಲಯಾ ಮೌಲಿಸ್ಖಲನ್ಮಲ್ಲಿಕಾಃ ॥
ಲೋಲಾಂಗ್ಯಃ ಕ್ವಣದಂಘ್ರಿ ಭೂಷಣಗಣಾ ಈಷಚ್ಚಲತ್ಕುಂಡಲಾಃ
ನ್ಯಾಲೋಲಸಹದೋಲಯಾ ಮೃಗದೃಶಃ ಕೃತ್ವೋಪನಿನ್ಯುಃ ಪ್ರಿಯಂ ॥೧೪॥

ಕಣಕಣಿಸುವ ಕಂಕಣಗಳಿಂದೊಪ್ಪುವ ಕರಕಮಲಗಳಿಂದ ತೊಟ್ಟಿಲನ್ನು ಪಿಡಿದು ತೂಗುತ್ತಿರುವುದರಿಂದ ಚಲಿಸುತ್ತಿರುವ ದೇಹದ ಕರ್ಣಕುಂಡಲಗಳ ಸೌಂದರ್ಯವುಳ್ಳ ನೀಲಿಮೆಯಿಂದ ಪ್ರಕಾಶಿಸುವ ಕೂದಲುಗಳುಳ್ಳ ಧ್ವನಿಗರೆವ ಪಾದಭೂಷಣಗಳೂ ಉಳ್ಳ ಗೋಕುಲ ಬಾಲಕಿಯರುಗಳು ತೂಗುವ ರಭಸದಲ್ಲಿ ಅವ್ಯವಸ್ಥಿತವಾದ ವಸ್ತ್ರ ಹಾರಾದಿ ಆಭರಣಗಳುಳ್ಳವರಾಗಿ ಕಳಚಿ ಬೀಳುತ್ತಿರುವ

ತಲೆಯಲ್ಲಿ ಮುಡಿದ ಮಲ್ಲಿಕಾದಿ ಪುಷ್ಪಗಳಲ್ಲಿಯೂ ಲಕ್ಷ್ಯವಿಲ್ಲದೇ ಚಲಿಸುವ ತೊಟ್ಟಿಲಿಗನುಗುಣವಾಗಿ ದೃಷ್ಟಿಯನ್ನು ಚಲಿಸುತ್ತಾ ಶ್ರೀಕೃಷ್ಣನನ್ನೇ ನೋಡುತ್ತಾ ಇವನಿಕಿಂತಲೂ ಪ್ರಿಯವಾದ ವಸ್ತುವೇ ಇಲ್ಲೆಂದು ತಿಳಿದು ಎಲ್ಲರೂ ತನ್ನ ತಮ್ಮ ಸಮೀಪದಲ್ಲಿ ತೆಗೆದುಕೊಳ್ಳುತ್ತಿದ್ದರು. ॥ ೧೪ ॥

ಯೇ ವೈ ವಿಠಲಸೇವಕಾಃ ಶುಭಧಿಯಸ್ತೇಷಾಂ ಸ ಲಭ್ಯಸ್ತ್ವಿತಿ
ಪ್ರಾಯೋ ಜ್ಞಾಪಯಿತುಂ ಮುರದ್ವಿಷಮಿತಃ ಸಂಪ್ರಾಪಯಂತ್ಯೇ ಕದಾ ॥
ಅನ್ಯೇಷಾಂ ಸ ಹಿ ದೂರಗಸ್ತ್ವಿತಿ ತತಃ ಪ್ರಾಪ್ತಂ ಚ ತಂ ಕುರ್ವತೀ
ದೋಲಾ ಸಾ ಮಣಿಮಂಡಿತಾ ವಿಜಯತೇ ಸ್ವಾನಂದಮೂರ್ತೇಃ ಶಿಶೋಃ ॥೧೫॥

ಸ್ವಾನಂದ ಮೂರ್ತಿಯಾದ ಶ್ರೀಕೃಷ್ಣನ ಮಣಿಗಳಿಂದ ಬಹು ಅಲಂಕೃತವಾದ ತೊಟ್ಟಿಲು ಯಾರು ಶುಭ ಧ್ಯೇಯವುಳ್ಳವರಾಗಿ ಶ್ರೀವಿಠಲನನ್ನು ಸೇವಿಸುವವರೋ ಅವರಿಗೆ ಅತಿ ಸುಲಭವಾಗಿಯೇ ಪ್ರಾಪ್ಯನು ಎಂಬರ್ಥವನ್ನು ಸಮೀಪವಾಗಿ ಬರುತ್ತಲೂ (ದಬ್ಬುವವರಿಂದ) ಯಾರು ಸೇವಿಸುವವರಲ್ಲವೋ ಅವರಿಗೆ ಅತಿ ದೂರನೇ ಆಗುವನೆಂಬರ್ಥವನ್ನು ತೋರಿಸುತ್ತಾ ಆ ತೊಟ್ಟಿಲು ವಿಜಯಶೀಲ ವಾಗಿದ್ದಿತು ॥ ೧೫ ॥

ಯಶೋದೆಯು ತನ್ನ ಎದೆಯ ಹಾಲನ್ನು ಕುಡಿಸುತ್ತಾ ಅತಿ ಪ್ರೀತಿಯಿಂದ ದಿಟ್ಟಿಸಿ ಶ್ರೀಕೃಷ್ಣನನ್ನು ನೋಡುತ್ತಾ ಅವನ ಆಪಾದಮೌಳಿಪರ್ಯಂತವಾದ ದೇಹ ದಲ್ಲಿಯೇ ಬ್ರಹ್ಮಾಂಡವನ್ನೇ (ಪಾತಾಳಾದಿ ಸತ್ಯಲೋಕಾಂತವಾದ) ಕಂಡಳೆಂಬ ಪೌರಾಣಿಕ ಕಥೆಯನ್ನು ಉತ್ಪ್ರೇಕ್ಷೆಯಿಂದ ಈ ಶ್ಲೋಕದಲ್ಲಿ ವರ್ಣಿಸುತ್ತಾರೆ.

ಸ್ತನೋತ್ಥದುಗ್ಧೇನ ಸುತೃಪ್ತಮೇನಂ
ನಿರೂಪಯಂತ್ಯಾಃ ಸ ಹರಿರ್ಜಗಂತಿ ॥
ಪ್ರದರ್ಶಯಾಮಾಸ ನ ತೃಪ್ತಿರಸ್ಮಾತ್
ಉದಾರ ದೇಹಸ್ಯ ಮಮೇತಿ ಶಿಕ್ಷನ್ ॥ ೧೬ ॥

ಯಶೋದೆಯು ತನ್ನ ಸ್ತನಗಳ ಹಾಲಿನಿಂದಲೇ ಶ್ರೀಕೃಷ್ಣನು ತೃಪ್ತ ನೆಂದು ಭಾವಿಸಿದಳು. ಶ್ರೀಕೃಷ್ಣನು ವಿಶ್ವವ್ಯಾಪ್ತವಾದ ವಿಶಾಲದೇಹಿಯಾದ ನನಗೆ ನಿನ್ನ ಕ್ಷೀರದಿಂದ ತೃಪ್ತಿಯೇ? ಎಂದು ತಿಳಿಸಲು ತನ್ನ ದೇಹದಲ್ಲಿ ಹದಿನಾಲ್ಕು ಲೋಕಾತ್ಮಕವಾದ ಬ್ರಹ್ಮಾಂಡವನ್ನೇ ತೋರಿಸಿದನು. ॥ ೧೬ ॥

ಮತ್ತೊಂದುಸಲ ಶ್ರೀಕೃಷ್ಣನನ್ನು ತೊಡೆಯಮೇಲೆ ಮಲಗಿಸಿಕೊಂಡು ಯಶೋದೆಯು ಕೃಷ್ಣನನ್ನು ನೋಡುತ್ತಿದ್ದಳು. ಆ ಸಮಯದಲ್ಲಿ ಶ್ರೀಕೃಷ್ಣನು ಆಕಳಿಸಿದನು. ಆಗೂ ಬಾಯಲ್ಲಿ ಬ್ರಹ್ಮಾಂಡವನ್ನು ತೋರಿಸಿದನೆಂದು ಪುರಾಣ ಕಥೆಯು ಅದನ್ನು ಹೇಳುತ್ತಾರೆ.

ಮುಖೇ ಸ ಲೋಕಾನವಲೋಕಯಿತ್ವಾ
ತದಂತರೇಂಬಾಂ ಸಗೃಹಾಂ ಸನಾಥಾಮ್ ||
ಅಖಂಡಯತ್ಪುತ್ರಮತಿಂಜನನ್ಯಾ-
ಮಯೋಜಯದ್ವಿಶ್ವ ಪಿತೃತ್ವಬುದ್ಧಿಮ್ || ೧೭ ||

ಶ್ರೀಕೃಷ್ಣನು ತನ್ನ ಬಾಯಲ್ಲಿ ಲೋಕಗಳನ್ನು ತೋರುತ್ತಾ ಭೂಲೋಕದಲ್ಲಿ ಗೋಕುಲವು, ಗೋಕುಲದಲ್ಲಿ ಯಶೋದೆಯು ತನ್ನ ಪರಿವಾರದೊಂದಿಗೆ ತಾನು, ತನ್ನ ಮನೆಯಲ್ಲಿ ತನ್ನ ಮುಂದೆ ಶ್ರೀಕೃಷ್ಣನು ಆ ಕೃಷ್ಣನ ಬಾಯಲ್ಲಿ ಈ ಯಾವತ್ತೂ ಪ್ರಪಂಚವನ್ನು (ಅಲ್ಲಿ ಕೃಷ್ಣನ ಬಾಯಲ್ಲಿಯೂ ಯಥಾ ಪ್ರಕಾರಕ ವಾದ ಯಾವತ್ತೂ ದೃಶ್ಯವು ಈ ರೀತಿ ಅಡಕು ಅಡಕುಗಳಾಗಿ ಅನಂತಾನಂತ ಬ್ರಹ್ಮಾಂಡಗಳನ್ನು ತನ್ನ ಅನಂತ ರೂಪಗಳನ್ನು) ತೋರಿಸಿ ತಾಯಿಯಾದ ಯಶೋದೆಗೆ ಕೃಷ್ಣನು ನನ್ನ ಮಗನೆಂಬ ಬುದ್ಧಿಯನ್ನು ಖಂಡಿಸಿ ವಿಶ್ವಕ್ಕೇ ಪಿತೃ ನಾದವನು ಎಂಬ ಬುದ್ಧಿಯನ್ನು ಹುಟ್ಟಿಸಿದನು. || ೧೭ ||

ನ ನಾಮ ಕುರ್ವಂತಿ ಮಮೇತಿ ನೂನಂ
ಸ ಪೂತನಾದೀನ್ನಿ ನಿಹತ್ಯ ಮಾತುಃ ||
ಪ್ರದರ್ಶ್ಯ ವಿಶ್ವಂ ಜಠರೇ ಸ್ವಶಕ್ತ್ಯಾ
ಬಹೂನಿನಾಮಾನಿ ಬಭಾರ ಬಾಲಃ || ೧೮ ||

ಹೇಗೂ ನನಗೆ ಯಾರೂ ನಾಮಕರಣಾದಿಗಳನ್ನು ಮಾಡುವವರಿಲ್ಲ ಎಂದು (ನಾನೇ ಕ್ರಿಯಾನುಗುಣವಾಗಿ ನನ್ನ ಹೆಸರುಗಳನ್ನು ತೋರಿಸಿಬಿಡುತ್ತೇನೆ ಎಂಬ ಧ್ಯೇಯದಿಂದಲೋ ಎಂಬಂತೆ) ಪೂತನ ಶಕಟ ತೃಣಾವರ್ತಾದಿಗಳನ್ನು ಕೊಂದು ತಾಯಿಗೆ ಮುಖ ದೇಹಗಳಲ್ಲಿ ಬ್ರಹ್ಮಾಂಡವನ್ನೇ ತೋರಿಸಿ ಬಾಲನಂತಿದ್ದರೂ ಅನೇಕ ಹೆಸರುಗಳನ್ನು (ಸಹಸ್ರ ನಾಮಗಳನ್ನು) ಪಡೆದನು. || ೧೮ ||

ಅಥೈತ್ಯ ಗರ್ಗಃ ಕಿಲ ರಾಮಕೃಷ್ಣೌ
ಚಕಾರ ನಾಮ್ನಾಂ ವಿನತೌ ಸುತೌ ತೌ ||
ಅಹಂ ತು ಮನ್ಯೇ ಚಕಿತ ಸ್ತದೀಯ
ಗುರುತ್ವ ಕೀರ್ತ್ಯಾ ಜಗೃಹೇ ತದಾಖ್ಯಾಮ್ || ೧೯ ||

ಹೀಗಿರಲು ಒಂದು ದಿನ ಯದುವಂಶದ ಪುರೋಹಿತರಾದ ಗರ್ಗಾಚಾರ್ಯರು ಮಥುರೆಯಿಂದ ಗೋಕುಲಕ್ಕೆ ಬಂದು ಬಹು ವಿನಯಾದಿ ಗುಣಶೀಲರಾದ ರಾಮಕೃಷ್ಣರುಗಳಿಗೆ ನಾಮಕರಣವನ್ನು ಮಾಡಿದರು. ಶ್ರೀಹರಿಗೆ ಕೃಷ್ಣ ಎಂದು ಏಕೆ ಹೆಸರಿಟ್ಟರೆಂದರೇ ನಾನು ಹೀಗೆ ತಿಳಿಯುತ್ತೇನೆ. ಅನಂತನಾಮನಾದ

ಶ್ರೀಹರಿಗೆ ನಾನು ಒಂದು ಹೆಸರನ್ನಿಡುವುದೂ, ಗುರುವೆಂದು ಪ್ರಸಿದ್ಧನಾಗುವುದೂ ಅನಂತ ಪಾಪರೂಪವಲ್ಲವೇ ? ಆ ಪಾಪಗಳು ಅದರಿಂದಲೇ ನಾಶವಾಗಲಿ ಎಂಬ ಧ್ಯೇಯದಿಂದ ಕೃಷ್ಣನೆಂದು ಹೆಸರಿಟ್ಟರು. ಕೃಷ- ಕರ್ಷಣೇ ಎಂಬ ಧಾತುವಿನಿಂದ ಕೃಷ್ಣನೆಂದರೆ (ಪಾಪನಾಶಕವೆಂದರ್ಥವು) ॥ ೧೯ ॥

ಅನಂತನಾಮಾಪಿ ಸ ಕೃಷ್ಣ ಸಂಜ್ಞಾ
ಮವಾಪ್ಯ ತುಷ್ಟಃ ಕಿಲ ಗರ್ಗ ದತ್ತಾಮ್ ॥
ತಥಾ ಹಿ ಶಬ್ದೇಷು ಬಹೂದಿತೇಷು
ಪ್ರಿಯೇರಿತಃ ಪ್ರೀತಿಕರೋ ಹಿ ಲೋಕೇ ॥ ೨೦ ॥

ಶ್ರೀಹರಿಯು ಅನಂತ ನಾಮುಗಳುಳ್ಳವನಾದರೂ ಗರ್ಗಾಚಾರ್ಯರಿಂದ ಇಟ್ಟ ಕೃಷ್ಣನೆಂಬ ಹೆಸರನ್ನು ಹೊಂದಿ ಬಹು ಸಂತುಷ್ಟನಾಗಿ ಅದನ್ನೇ ಪ್ರಸಿದ್ಧಿಗೊಳಿಸಿದನು. ಅದು ವಿಹಿತವೇ ಎಷ್ಟೇ ಹೆಸರುಗಳಿದ್ದರೂ ಅತಿ ಪ್ರಿಯರಾದವರು ಕರೆವ ಹೆಸರಿನಲ್ಲಿ ಅತಿ ಪ್ರಿಯವಾಗಿರುವುದು ಲೋಕಪ್ರಸಿದ್ಧವಲ್ಲವೇ. ॥ ೨೦ ॥

ಕೃಷ್ಣ ಎಂದರೇ ಕೃಷ್ಣ ಪಕ್ಷವೂ ಆಹುದು (ತಾಮಿಶ್ರ ಪಕ್ಷ ಕಲಿ ನೀಲ ಗುಣೇಷು ಕೃಷ್ಣಃ) ಅಭಿದಾನ ಕೋಶಾನುಗುಣವಾಗಿ ಐದು ಅರ್ಥವು ಆದರೇ ಸರ್ವಗುಣ ಪೂರ್ಣನಾದ ಪರಮಾತ್ಮನಿಗೆ ಎಲ್ಲವೂ ಒಪ್ಪುವುವೇ ಎಂದು ವರ್ಣಿಸುತ್ತಾರೆ.

ಸಪತ್ನಪತ್ನೀ ವದನೋಡುರಾಜಂ
ಕ್ರಮೇಣ ಯಃ ಕ್ಷೀಣಕಲಂ ಕರೋತಿ ॥
ಸಿತೇತರಃ ಪಕ್ಷ ಇವರ್ಕ್ಷನಾಥಂ
ಗುಣೋಚಿತಾ ತಸ್ಯ ಹಿ ಕೃಷ್ಣಸಂಜ್ಞಾ ॥ ೨೧ ॥

ಕೃಷ್ಣ ಪಕ್ಷವು ಚಂದ್ರನ ಕಾಂತಿಯನ್ನು ದಿನೇ ದಿನೇ ಕುಗ್ಗಿಸುತ್ತದೆ. ಹಾಗೆಯೇ ಶ್ರೀಕೃಷ್ಣನು ತನ್ನ ಶತೃಗಳ ಪತ್ನ್ಯಯರುಗಳ ಮುಖಗಳೆಂಬ ಅನೇಕ ಚಂದ್ರರ ಕಾಂತಿಯನ್ನು ದಿನದಿನಗಳಲ್ಲಿ ಕ್ಷೀಣಗೊಳಿಸುತ್ತಾನೆ. ಆದುದರಿಂದಲೂ ಕೃಷ್ಣನೆಂಬ ಹೆಸರು ಅವನ ಗುಣೋಚಿತವೇ (ಅನ್ವರ್ಥಕವೇ) ॥ ೨೧ ॥

ಕೃಷ್ ಆಕರ್ಷಣೇ ಎಂಬ ಧಾತ್ವರ್ಥದಿಂದಲೂ ಕೃಷ್ಣನೆಂಬ ಹೆಸರು ಶ್ರೀಹರಿಗೆ ಅನ್ವರ್ಥಕವೇ ಎಂದು ಹೇಳುತ್ತಾರೆ.

ಯತಃ ಸ್ವ ಸಂದರ್ಶನತೋ ನರಾಣಾಂ
ವರಾಂಗನಾನಾಂ ಸುರಚಾರಣಾನಾಂ ॥
ಮನಾಂಸಿ ಸರ್ವಾಣ್ಯಪಕರ್ಷತೀಶಃ
ತತೋಪಿ ಕೃಷ್ಣಂ ಪ್ರವದಂತಿ ಸಂತಃ ॥ ೨೨ ॥

ಯಾವ ಹರಿಯು ತನ್ನ ದರುಶನ ಮಾತ್ರದಿಂದಲೇ (ನಾಮ ಶ್ರವಣ ದಿಂದಲೂ) ನರನಾರೀ ಸ್ವರ್ಗಚಾರಿಗಳ ಮನಸ್ಸನ್ನು ಸರ್ವೇಂದ್ರಿಯಗಳೊಂದಿಗೆ ಆಕರ್ಷಿಸುತ್ತಾನೆಯೋ ಆ ಕಾರಣದಿಂದಲೂ ಸಮರ್ಥನಾದ ಅವನನ್ನು ಸಜ್ಜನರುಗಳು ಕೃಷ್ಣಾ ಎಂದು ಹೇಳುತ್ತಾರೆ. ॥ ೨೨ ॥

(ಕೃಷಿ ಭೂರ್ವಾಚಕಶಬ್ದಃ ಣಶ್ಚ ನಿರ್ವೃತಿ ವಾಚಕಃ) ಎಂಬ ಸ್ಮೃತಿ ಯಿಂದಲೂ ಅನ್ವರ್ಥಕತೆಯನ್ನು ಹೇಳುತ್ತಾರೆ.

ಯತಃ ಸ ಪೃಥ್ವೀತಲ ಸಂಶ್ರಿತೋಽಪಿ
ಸುಖೀ ಧರಣ್ಯಾಃ ಸುಖದಾಯಕಶ್ಚ ॥
ತತೋಽಪಿ ಕೃಷ್ಣಂ ಪ್ರವದಂತಿ
ಕೃಷ್ಣಸಮುಲ್ಲಸತ್ಕೇಶವ ಕೇಶ ರೂಪಮ್ ॥ ೨೩ ॥

ಭೂದೇವಿಯ ಸಲುವಾದ ಪ್ರಾರ್ಥನೆಯಿಂದಲೇ ಭೂಮಿಯಲ್ಲಿ ಅವತರಿಸಿ ಆ ಧರಣಿಗೆ ಆನಂದವರ್ಧಕನಾಗಿ ಇರುವುದರಿಂದಲೂ ಮೇಘದಂತೆ ನೀಲಿಮೆಯಿಂದ ಶೋಭಿಪನಾದುದರಿಂದಲೂ ಇವನನ್ನು ಜ್ಞಾನಿಗಳಾದ ಸಜ್ಜನರು ಕೃಷ್ಣನೆಂದು ಕರೆಯುತ್ತಾರೆ. ॥ ೨೩ ॥

ಕೃಷ್ಣ ಎಂದರೆ (ಅರ್ಜುನ ಅಗ್ನಿ ಹರಿ ಕೋಕಿಲ ಶೂದ್ರ ತಾಮಿಶ್ರ ಪಕ್ಷ ಕಲಿ ನೀಲ ಗುಣೇಷು ಕೃಷ್ಣಃ) ಭಾಸ್ಕರ ಕೋಶಾನುಗುಣವಾಗಿ ಅಗ್ನಿ ಎಂದು ಹೆಸರು ಇದು ಅನ್ವರ್ಥಕವೇ ಎಂಬುದನ್ನು ತೋರಿಸುತ್ತಾರೆ.

ಯತಃ ಸ ದೈತೇಯ ಕದಂಬ ಕಕ್ಷ
ಚಯಸ್ಯ ವಿಧ್ವಂಸವಿಧೌ ಮುರಾರಿಃ ॥
ವನಾಗ್ನಿ ಮನ್ವೇತಿ ಲಯಾಗ್ನಿಕಲ್ಪಂ
ತತೋಽಪಿ ಗಾಯಂತಿ ಹಿ ಕೃಷ್ಣಮೇನಮ್ ॥ ೨೪ ॥

ಮುರಮಥನನಾದ ಶ್ರೀಹರಿಯು ಅನೇಕ ದಿತಿ ಪುತ್ರರೆಂಬ ದೈತ್ಯರುಗಳ ಗುಂಪೆಂಬ ದೊಡ್ಡ ಅರಣ್ಯಕ್ಕೆ ನಾಶಕನಾದ ಪ್ರಳಯಾಗ್ನಿಯಂತೆ ಇರುವನಾದ್ದರಿಂದಲೂ ಜ್ಞಾನಿಗಳು ಕೃಷ್ಣನೆಂದು ಅವನನ್ನು ಗಾನಮಾಡುತ್ತಾರೆ. ॥ ೨೪ ॥

ಬಾಲಕರ ಕ್ರಿಯಾಅನುಕರಣರೂಪ ಬಾಲಲೀಲೆಗಳನ್ನು ವರ್ಣಿಸುತ್ತಾರೆ.

ವ್ರಜಾಂಗನಾನಾಂ ಸ್ಮರತಾಂ ಮುನೀನಾ
ಮಭೇದ್ಯಹೃದ್ಯ ಪ್ರಣಯಾಖ್ಯ ದಾಮ್ನಾ ॥
ನಿಬದ್ಧ ಮೃದ್ವಂಘ್ರಿ ಸರೋಜಯುಗ್ಮ
ಶ್ಚಚಾರದೋರ್ಭ್ಯಾಂ ಶುಭಜಾನುಯುಗ್ಮಾತ್ಯಂ ॥ ೨೫ ॥

ತನ್ನನ್ನು ಸ್ಮರಿಸುವ ಮುನಿಗಳ ಮತ್ತು ಗೋಕುಲಗತ ವ್ರಜಾಂಗನೇಯರು ಗಳ ಪ್ರೇಮಪಾಶದಿಂದ ಬಂಧಿತನೋ ಎಂಬಂತೆ ಮೃದುತರಗಳಾದ ಪಾದಪದ್ಮಗಳಿಂದಲೂ ಹಸ್ತಾರವಿಂದಗಳಿಂದಲೂ ಶುಭಕರವಾದ ಮೊಳಕಾಲುಗಳಿಂದಲೂ ಧೂಳಿ ಧೂಸರಿತಾಂಗನಾಗಿ ಶಳಿಯುತ್ತಾ (ಅಂಬೆಗಾಲಿಕ್ಕುತ್ತಾ) ಸಂಚರಿಸತೊಡಗಿದನು. ॥ ೨೫ ॥

ಅನೇಕ ಲೋಕಾನುದರೇ ವಿಧಾಯ
ಯ ಏಷ ಶೇತೇ ಸ್ಮ ಲಯಾಂಬು ಮಧ್ಯೇ ॥
ಶಿಶುಃ ಸ ಸಂದರ್ಶಯಿತುಂ ಸಲಜ್ಜಃ
ಕೃಶೋದರಂ ಜಾನುಚರೋ ಬಭೂವ ॥ ೨೬ ॥

ಪ್ರಳಯ ಕಾಲದಲ್ಲಿ ಘನೋದಕದ ಮಧ್ಯ ಅನೇಕ ಲೋಕಗಳನ್ನು ಹೊಟ್ಟೆಯಲ್ಲಿಟ್ಟು ಮಲಗುತ್ತಾನೆಯೋ ಅಂತಹ ತಾನು ಶಿಶುವಾಗಿ ಕೃಶವಾದ (ಬಹು ಸಣ್ಣಾದ) ಹೊಟ್ಟೆಯನ್ನು ತೋರಿಸಲು ಲಜ್ಜೆಯಿಂದಲೋ ಎಂಬಂತೆ ಮೊಳಕಾಲುಗಳಿಂದ ಸರಿಯುವವನಾದನು. (ಅಂಬೆಗಾಲನ್ನು ಹಾಕಿದನು) ॥ ೨೬ ॥

ಕರ್ಷನ್ನಂಘ್ರಿಯುಗಂ ಮುನೀಂದ್ರಮನಸಾ ಸಾಕಂ ವ್ರಜಸ್ತ್ರೀದೃಶಾ
ಜಂಬಾಲೇನ ಚ ನೀಲನೀಲಸುತನುರ್ಲೋಲಾ ಲಕಶ್ರೀಮುಖಃ ॥
ಅಂಬಾಂಬೇತಿ ಹಿ ಯಾಮುದೀರ್ಯ ಪಿಬತಿ ಸ್ಮಾಂಕಾಧಿರೂಢಃಸ್ತನಂ
ಕಿಂ ನಾತಪ್ಯತ ಸಾ ತಪೋಽಸ್ಯ ಜನನೀ ಯಸ್ಯೇದಮೀದೃಕ್ ಫಲಂ ॥ ೨೭ ॥

ಕಪ್ಪಾಗಿಯೂ ಉಂಗುರುಂಗರಾಗಿಯೂ ಇರುವ ಝಂಪರಿ ಕೂದಲುಗಳಿಂದ ಅಲಂಕೃತವಾದ ಮುಖಾರವಿಂದವುಳ್ಳ ಕೋಮಲಾಂಗನಾದ ಶ್ರೀಕೃಷ್ಣನು ಮುನಿಶ್ರೇಷ್ಠರುಗಳ ಮನಸ್ಸಿನಿಂದಲೂ ಮತ್ತು ವ್ರಜಸ್ತ್ರೀಯರ ದೃಷ್ಟಿಯಿಂದಲೂ ಕೂಡಿ ಮೊಳಕಾಲುಗಳನ್ನು ಸೆಳೆದು ಬರುತ್ತಾ ಅಂಗಳದ ಕೆಸರನ್ನು ಮೈಗೆಲ್ಲಾ ಬಳಿದುಕೊಂಡು ಅಮ್ಮಾ! ಅಮ್ಮಾ! ಎಂದು ಕೂಗುತ್ತಾ ಯಾವಳ ತೊಡೆಗಳ ಮೇಲೇರಿ ಹಾಲನ್ನು ಕುಡಿದನೋ ಅಂತಹ ಯಶೋದೆಯು ತಾಯಿ ಆಗಲು ಎಂತಹ ತಪಸ್ಸನ್ನು ಆಚರಿಸಿದ್ದಳೋ ಎಂತಹ ತಪಸ್ಸಿಗೆ ಇಂತಹ ಫಲವು ದೊರೆಯುವುದೋ! ॥ ೨೭ ॥

ಶ್ರೀಕೃಷ್ಣನ ಬಾಲ್ಯವೇ, ಜಗನ್ಮಿಥ್ಯಾತ್ವ, ಜೀವೈಕ್ಯ, ನಿರ್ಗುಣತ್ವಾದಿಗಳನ್ನು ಹೇಳುವ ದುರ್ವಾದಗಳಿಗೆ ನಿರಾಸಕವಾಗಿದ್ದಿತು ಎಂದು ಚಮತ್ಕಾರವಾಗಿ ವರ್ಣಿಸುತ್ತಾರೆ.

ವೈಗುಣ್ಯಂ ವಿವಿಧೋದಯೈರ್ವಿನ್ನೃಶತಾಂ ಪಿತ್ರೈರ್ಜಗದ್ವ್ಯಾಪ್ತತಾಂ
ವೈರೂಪ್ಯಂ ನಿಜತೇಜಸಾ ನಿರೂಪಮೈರಂಗೈರ್ನಿರಾಕಾರತಾಂ ॥
ನೀಚೈಕ್ಯಂ ಚ ನಿರಸ್ಯ ನಿರ್ಮಲಧಿಯಾಂ ನಿತ್ಯಾರ್ಚಯಾ ವಿಶ್ವಲೋ
ದಿಗ್ ಭಿನ್ನಾಂಬರಧಿಕ್ಕ್ರಿಯಾರ್ಥಮು ಭವದ್ದಿ ಗ್ವಸ್ತ್ರತಾಂ ದೀಪಯನ್ ॥ ೨೮ ॥

ಜ್ಞಾನಿಗಳಿಗೆ ಅನುಗ್ರಾಹಕನಾದ ಶ್ರೀಕೃಷ್ಣನು ತನ್ನನ್ನು ವಿಮರ್ಶಿಸುವವರಿಗೆ ಮತ್ತು ಗೋಕುಲಗತರಾದ ನಂದಾದಿಗಳಿಗೂ ಸ್ವಸಾನ್ನಿಧ್ಯದಿಂದ ಅನೇಕ ವಿಧವಾದ ಸೌಭಾಗ್ಯೋದಯವನ್ನು ಕೊಡುವವನಾಗಿ ಅನೇಕ ವಿಧವಾದ ಸಂಪತ್ಪ್ರದಾನದಿಂದ, ಜಗನ್ಮಿಥ್ಯಾತ್ವವನ್ನು ತನ್ನ ಪೂರ್ಣತೆಯಿಂದ ಮಾಯಿಗಳು ಹೇಳುವ ನಿರ್ಗುಣತ್ವವನ್ನು ತನ್ನ ತೇಜಸ್ಸಿನಿಂದ, ಅಶದೃಶತೆಯನ್ನೂ ಅಶದೃಶವಾದ ಅಂಗಸೌಷ್ಟವಗಳಿಂದ, ನಿರಾಕಾರತ್ವವನ್ನೂ ಅನೇಕ ಮಹಿಮೆಗಳಿಂದ ನೀಚೈಕ್ಯವನ್ನೂ ನಿರಾಕರಿಸುವವನಾಗಿ ನಿರ್ಮಲ ಮನಸ್ಕರಾದ ಸನಕನಾರದಾದಿಗಳ ನಿತ್ಯಾರ್ಚನಾಫಲವಾಗಿ ಆಕಾಶದಂತೆ ತನ್ನ ವ್ಯಾಪ್ತತೆಯನ್ನು ತೋರುವವನಾಗಿ ದಿಭ್ಭಿನ್ನನಾದ ಆಕಾಶವಿವೇ ಎಂಬ ತಾರ್ಕಿಕಮತಕ್ಕೂ ಧಿಕ್ಕಾರವನ್ನು ತೋರುವವನಾಗಿ ದಿಗಂಬರತ್ವವನ್ನು ತೋರುವವನಾದನು. (ಅಂಬೆಗಾಲಿಟ್ಟು ಹರಿದಾಡುತ್ತಾ ನಿಂತನೆಂದು ತಾತ್ಪರ್ಯವು. ॥ ೨೮ ॥

ಗೋಪೀ ಗೃಹಾಂಗಣತಲೇ ರಣದಂಘ್ರಿವೇಷೋ
ಗೋವತ್ಸಕೈಃ ಸಹಚರ ನೃಜಸಾನುಷಕ್ತಃ ॥
ದೇಹಾಭಿಮಾನ ರಹಿತೈರ್ದಿವಿ ಸಂಸ್ತುವದ್ಭಿಃ
ದೇವೈಶ್ಚ ದೃಶ್ಯವಿಭವೋ ದಯಿತಾಸಮೇತೈಃ ॥ ೨೯ ॥

ಗೋಪಿಯ ಮನೆ ಅಂಗಳದಲ್ಲಿ ಸಮವಯಸ್ಕ ಬಾಲಕರಿಂದ ಸಣ್ಣ ಸಣ್ಣ ಕರುವುಗಳೊಂದಿಗೆ ಸಂಚರಿಸುವವನಾಗಿ ಝುಂಕಾರ ಮಾಡುವ ಪಾದಭೂಷಣಗಳಿಂದಲೂ ಮೈಗೆ ಬಳಕೊಂಡಿರುವ ಧೂಳಿಯಿಂದಲೂ ಪ್ರಕಾಶ ಮಾನನಾಗಿ, ಅಂತರಿಕ್ಷದಲ್ಲಿ ತಮ್ಮ ತಮ್ಮ ಸ್ತ್ರೀಯರುಗಳೊಂದಿಗೆ ಕೂಡಿಕೊಂಡು ಸಂಚರಿಸುವ ದೇಹಾಭಿಮಾನಗಳನ್ನು ತ್ಯಜಿಸಿದ ದೇವತೆಗಳಿಂದ ಸ್ತುತ್ಯವೈಭವ ಉಳ್ಳವನಾದನು. ॥ ೨೯ ॥

ಶಾರ್ದೂಲರಮ್ಯನಖರಂಜಿತಕಂಠದೇಶಃ
ಸಾಸೂಯದಾನವನಿಕಾಯವನೇ ಹುತಾಶಃ ॥
ಹಾರಸ್ಫುರತ್ಕಟಕಕಂಕಣನೂಪುರ ಶ್ರೀ
ಹಾರ್ಸಪ್ರಕಾಶಿತದಿಶಾಪಟಲಸ್ಸಬಾಲಃ ॥ ೩೦ ॥

ಕಂಠದಲ್ಲಿ ರಕ್ಷಾರೂಪನಾಗಿ ಕಟ್ಟಲ್ಪಟ್ಟ ಸುವರ್ಣರತ್ನಕಟ್ಟಡವುಳ್ಳ ಹುಲಿ ಉಗುರುನಿಂದ ಅಲಂಕೃತನಾದ, ಅಸೂಯಾ ಮುಕ್ತರಾದ ದಾನವರ ವೃಂದವೆಂಬ ಅರ

ನ್ಯಾಕ್ಕೆ ದಾವಾಗ್ನಿಯಂತಿರುವ ಸ್ವತಃ(ಜಗತ್ತು)ಜನ್ಮನಾದುದರಿಂದ ಶೋಭಿಸುವ ಹಾರ ನೂಪುರ ಕಂಕಣ ಕಟಿಸೂತ್ರ ಕರ್ಣಕುಂಡಲಗಳಿಂದ ಪ್ರಕಾಶಿಸುವ ದಿಗ್ವಸನನುಳ್ಳ ಶ್ರೀಕೃಷ್ಣನು ನನ್ನ ಹೃದಯದಲ್ಲಿಯೂ ಬೆಳಗುವವನಾಗಲಿ ॥ ೩೦ ॥

ನವ್ಯಸ್ಫಲದ್ವಚನನಂದಿತ ಸರ್ವಲೋಕಃ
ಸುವ್ಯಕ್ತ ಕುಂತಲತತಿಃ ಸುಭಗಾಗ್ರಗಣ್ಯಃ ॥
ದಿಗ್ವಸ್ತ್ರದರ್ಶಿತ ಕಟಿರ್ದಿನನಾಥದೀಪ್ತಿಃ
ಹೃಷ್ಣಃ ಸದಾಸ್ತು ಸ ಶಿಶುರ್ಹೃದಯಂಗಮೋಮೇ ॥ ೩೦ ॥

ನೂತನವಾಗಿಯೂ ತೊದಲುತ್ತಿರುವ ಸ್ವವಚನಗಳಿಂದ, ಲೋಕವನ್ನೇ ಆನಂದಗೊಳಿಸುವ, ಚನ್ನಾಗಿ ವ್ಯಕ್ತವಾದ ಗುಂಗುರು ಕೂದಲುಗಳುಳ್ಳ ಸುಂದರರಲ್ಲಿ ಅಗ್ರಗಣ್ಯನಾದ, ದಿಗಂಬರತೆಯಿಂದ ಕಾಣಲ್ಪಟ್ಟ ಕಟಿಪ್ರದೇಶವುಳ್ಳ ದಿನನಾಥಾದಿಗಳನ್ನು ಮೀರಿಸುವ (ದೇಹಕಾಂತಿಯನ್ನು ಹೊಂದಿರುವ) ಮನೋಹರನಾದ ಶ್ರೀಕೃಷ್ಣನು ಯಾವಾಗಲೂ ನನ್ನ ಹೃದಯದಲ್ಲಿ ಶಿಶುರೂಪನಾಗಿಯೇ ಹೊಳೆಯುತ್ತಿರಲಿ. ॥ ೩೧ ॥

ನಾರೀಣಾಮಪಿ ಮೋಕ್ಷದಃ ಕಿಮಿತಿ ನೋ ದದ್ಯಾ ದ್ವಿಶುದ್ಧಾತ್ಮನಾ-
ಮಸ್ಮಾಕಂ ತ್ವಿತಿ ಯೋಗಿಪೂಗಮನಸಾಂ ಕೋಪಂ ವಿಧುನ್ವನ್ನಿವ ॥
ಗೋಪಸ್ತ್ರೀ ನಿಕರಸ್ಯ ದುಗ್ಧಜಲಧಿಂ ಸ್ವಂ ದಾತುಕಾಮೋ ಹರಿಃ
ತದ್ಗೇಹಸ್ಥಿತ ದುಗ್ಧಮಂಡಲ ಮಥೋ ಮುಷ್ಣಂಶ್ಚಚಾರ ವ್ರಜೇ ॥ ೩೨ ॥

ಸ್ತ್ರೀಯರುಗಳಿಗೆ ಮೋಕ್ಷವನ್ನು ಕೊಡುವೆ, ಯಾತಕ್ಕಾಗಿ ವ್ರತಾದಿಗಳಿಂದ ತಪಿಸುತ್ತಿರುವ ನಮ್ಮಗಳಿಗೆ ಮೋಕ್ಷವನ್ನು ಕೊಡುವುದು ತಡಮಾಡುತ್ತೀಯೋ ? ಎಂದು ಯೋಗಿಗಳ ಮನಸ್ಸಿನಲ್ಲಿ ಬರುವ ಕೋಪವನ್ನು ಕಳೆಯುವನೋ ಎಂಬಂತೆ ಶ್ರೀಕೃಷ್ಣನು ಸಕಲ ಗೋಪಿಕಾ ಸ್ತ್ರೀಯರಿಗೆ ತನ್ನ ಮನೆಯಂತಿರುವ ಕ್ಷೀರಸಾಗರವನ್ನೇ ಕೊಡುವವನಾಗಿ ಅವರ ಮನೆಗಳಲ್ಲಿದ್ದ ಹಾಲು-ಮೊಸರು-ಬೆಣ್ಣೆಗಳನ್ನು ಅಪಹರಿಸುತ್ತಾ ಗೋಕುಲದಲ್ಲಿ ಸಂಚರಿಸತೊಡಗಿದನು. ॥ ೩೨ ॥

ಹರೌ ಪಯೋ ಮುಷ್ಣತಿ ಕಾಪಿ ತುಷ್ಟಾ
ದಧಾರ ಮರ್ತ್ಯಾಯ ದದತ್ಯಮರ್ಷಮ್ ॥
ತಥಾ ಹಿ ತಚ್ಛೇಷ ಮನನ್ಯ ಯೋಗ್ಯಂ
ಹರಂತ ಮುದ್ವೀಕ್ಷ್ಯ ಕಥಂ ನ ಮನ್ಯುಃ ॥ ೩೩ ॥

ಪರಮಾತ್ಮನು ಹಾಲನ್ನು ಕದಿಯುತ್ತಿರಲು ಒಬ್ಬ ಗೋಪಿಯು ಸಂತುಷ್ಟಳಾದಳು. ತಾಕುಡಿಸುದಲ್ಲದೆ ಬೆಕ್ಕಿಗೆ ಹಾಕುತ್ತಿರಲು ಕುಪಿತಳಾದಳು. ಅದು ಉಚಿತವೇ

ಅನನ್ಯಯೋಗ್ಯವಾದ ಶ್ರೀಹರಿಶೇಷವನ್ನು ಅಯೋಗ್ಯರ ಪಾಲಾಗುವುದು ಕಂಡು ಯಾರಿಗೆ ತಾನೆ ಕೋಪಬರುವದಿಲ್ಲ. ॥ ೩೩ ॥

ಪ್ರಗೃಹ್ಯ ಘಂಟಾಮಪರೇಣ ಪಾತ್ರಂ
ಕರೇಣ ಚಾನ್ಯೇನ ಪಯಃ ಪಿಬಂತಮ್ ॥
ನಿಶಾಮ್ಯ ಮಿತ್ರಾಣಿ ಚ ತರ್ಪಯಂತಂ
ಸುವಿಸ್ಮಿತಾ ಕಾಪಿ ಬಭೂವ ತೂಷ್ಣೀಮ್ ॥ ೩೪ ॥

ಮತ್ತೊಬ್ಬ ಗೋಪಿಕಾ ಸ್ತ್ರೀಯು, ಒಂದು ಕೈಯಲ್ಲಿ ಘಂಟೆಯನ್ನು ಹಿಡಿದು ಮತ್ತೊಂದು ಕೈಯಲ್ಲಿ ಹಾಲಿನ ಪಾತ್ರೆಯನ್ನು ಹಿಡಿದು ಹಾಲನ್ನು ಕುಡಿಯುತ್ತಾ ತನ್ನ ಸ್ನೇಹಿತರಿಗೂ ತೃಪ್ತಿಬಡಿಸುತ್ತಾ ಚೌರ್ಯಾಸಕ್ತ ಶ್ರೀಕೃಷ್ಣನನ್ನು ನೋಡಿ ನಕ್ಕು ಸುಮ್ಮನಿದ್ದಳು. ॥ ೩೪ ॥

ಕರಸ್ಥಭಾಸ್ವನ್ನವನೀತಮುನ್ಯಾ
ವಿಭೀಷಯಂತ್ಯನ್ವಗಮನ್ಮುಕುಂದಮ್ ॥
ಸ್ವಮೌಲಿಮಾಲಾಚ್ಯುತ ಪುಷ್ಪಪುಂಜೈಃ
ಪದಾನಿ ತಸ್ಯೇಶಿತುರರ್ಚಯಂತೀ ॥ ೩೫ ॥

ಮೋಕ್ಷಪ್ರದನಾದ ಶ್ರೀಕೃಷ್ಣನು ಪ್ರಕಾಶಿಸುವ ಬೆಣ್ಣೆಯ ಪಾತ್ರೆಯನ್ನು ಕೈಯಲ್ಲಿ ಹಿಡಿದು ಓಡುತ್ತಿರಲು ಒಬ್ಬಗೋಪಿಯು ಅಂಜಿಸುವಳಂತೇ ಹಿಂಬಾಲಿಸಿ ಓಡಿದಳು. ಆರಭಸಕ್ಕೆ ಅವಳ ತಲೆಯಲ್ಲಿ ಮುಡಿದ ಹೂವುಗಳು ಕಳಚಿ ಕಳಚಿಬೀಳುತ್ತಾ ಶ್ರೀಕೃಷ್ಣನ ಮೂಡಿದ ಹೆಜ್ಜೆಗಳ ಮೇಲೆ ಬೀಳುತ್ತಿದ್ದವು. ಆದ್ದರಿಂದ್ಯವು ಪರಮಾತ್ಮನನ್ನು ಹೊಂದಲು ಪೂಜಿಸುತ್ತಾ ಹಿಂಬಾಲಿಸಿರುವಳೋ ಎಂಬಂತ್ತಿದ್ದಿತು. ॥ ೩೫ ॥

ಅಧಿಕ್ಷಿಪಂತ್ಯಾಂ ಸುಕೃತೇನ ಸಾಕಂ
ದಧೀನಿ ಧೀರಃ ಸ ಚುಚೋರ ಚೋರಃ ॥
ಅಗಣ್ಯಪುಣ್ಯಾಖ್ಯಧನಾನಿ ದಾನೀ
ಪ್ರದಾಯ ಸೋಽಚೂಚುರದಾನತಾಯಾಮ್ ॥ ೩೬ ॥

ದಾನಿಗಳಲ್ಲಿ ಅಗ್ರಗಣ್ಯನಾದ ಶ್ರೀಕೃಷ್ಣನು ಕಳ್ಳನಂತೆ ಆಚರಿಸುವವನಾಗಿ ತನ್ನನ್ನುಝುವರಿಸುವವರುಗಳ ಸುಕೃತದೊಂದಿಗೆ ಹಾಲು-ಮಸರನ್ನುಕದ್ದನು. ತನ್ನಲ್ಲಿ ನತರಾದವರಿಗೆ ಅಸಂಖ್ಯಾತವಾದ ಪುಣ್ಯರಾಶಿಯನ್ನೇ ಕೊಟ್ಟು ಹಾಲು-ಮಸರುಗಳನ್ನು ಕದ್ದನು. ॥ ೩೬ ॥

ಅಭೂದ್ಯಶೋದಾತನಯಸ್ಯ ಸ್ಪೃಥ್ವ್ಯಾಂ
ವಿನಿಂದಿತಾ ತಸ್ಕರತಾಽಪಿ ಭೂತ್ಯೈ ॥

ತಥಾ ಹಿ ಲಕ್ಷ್ಮೀನಯನಾಂತಭಾಜಾ-
ಮಹಸ್ಯ ದೋಷೋಽಪಿ ಭವೇದ್ಗುಣಾಯ ॥ ೩೭ ॥

ಯಶೋದೆ ತನಯನಾದ ಶ್ರೀಕೃಷ್ಣನಿಗೆ ಮಹಾಕಳ್ಳನೆಂಬ ಹೆಸರು ಭೂಲೋಕದೆಲ್ಲೆಲ್ಲೆಡೆಯಲ್ಲಿಯೂ ಹರಡಿತು. ಹೀಗೆ ಬಂದ ನಿಂದೆಯು ಕೃಷ್ಣನಿಗೆ ದೊಡ್ಡ ಕೀರ್ತಿರೂಪವೇ ಆಯಿತು. ಇದು ಉಚಿತವೇ ಲಕ್ಷ್ಮೀಕಟಾಕ್ಷ ಭಾಗಿಗಳಾದವರಿಗೆ ದೋಷವೂ ಮಹದ್ಗುಣವೇ ಆಗುವುದಷ್ಟೆ. ॥ ೩೭ ॥

ಸ್ವಕೀಯಚೌರ್ಯಂ, ನಿತರಾಂ ಗೃಣದ್ಭ್ಯಃ
ದದೌ ವಿಮುಕ್ತಿಂ ಕಿಲ ಗೋಪಬಾಲಃ ॥
ಅಹಂ ಸ್ವಮರ್ಮಾಲಪತಾಂ ಸ ಚಕ್ರೇ
ಫಲೇನ ವಾಗ್ಬಂಧಮಿತಿ ಪ್ರತರ್ಕೇ ॥ ೩೮ ॥

ಗೋಪೀಬಾಲನಾದ ಶ್ರೀಕೃಷ್ಣನು ಯಾರು ಯಾರು ಎಷ್ಟೆಷ್ಟು ತನ್ನ ಕಳ್ಳತನಾದಿಗಳನ್ನು ಎತ್ತಿತ್ತಿ ಹಾಡುವರೋ ಅಷ್ಟಷ್ಟು ಅವರುಗಳಿಗೆ ಮೋಕ್ಷವನ್ನೇ ಕೊಟ್ಟನು. ನಾನು ತರ್ಕಿಸುತ್ತೇನೆ 'ಓಹೋ ಜಗತ್ತಿನಲ್ಲಿ ತನ್ನ ಮರ್ಮವನ್ನು ಆಡಿಕೊಳ್ಳುವವರಿಗೆ ಏನಾದರೂ ಒಂದು ಫಲವನ್ನು ತೋರಿಸಿ ವಾಗ್ಬಂಧ ಮಾಡುವಂತೆಯೋ'? ಎಂದು. ॥ ೩೮ ॥

ಸ್ವಭಕ್ತ ಪುಂಜಾರ್ಜಿತ ಪಾಪವೃಂದಂ
ದಿವಾನಿಶಂ ಯೋ ಹರತಿ ಸ್ವಬಾಲಃ ॥
ಗೃಹೇಗೃಹೇ ದುಗ್ಧಮಸಾವ ಮುಷ್ಣಾತ್
ತಥಾ ಹಿ ಕಸ್ತ್ಯಕ್ಷ್ಯತಿ ಸಿದ್ಧ ವಿದ್ಯಾಂ ॥ ೩೯ ॥

ತನ್ನನ್ನು ಸ್ಮರಿಸುವ ಭಕ್ತರ ಗುಂಪಿನ ಪಾಪರಾಶಿಗಳನ್ನೇ ಅಹೋರಾತ್ರಿಗಳಲ್ಲಿ ಅಪಹರಿಸುವ ಶ್ರೀಹರಿಯು ಬಾಲಕನಾಗಿ ಎಲ್ಲರ ಮನೆಯಲ್ಲಿ ಹಾಲು ಮೊಸರುಗಳನ್ನು ಕದ್ದನು (ಅಪಹರಿಸಿದನು) ಎಂಬುದು ಅವನ ಸ್ವಭಾವ ಗುಣವೇ ಆಗಿರುತ್ತದೆ. ಸ್ವಭಾವಸಿದ್ಧವಾದ ವಿದ್ಯೆಯನ್ನು ಯಾರು ತಾನೆ ಬಿಡುತ್ತಾರೆ? ॥೩೯॥

ಹಸ್ತಃ ಕಿಂ ನವನೀತ ಭಾಜನಮುಖೇ ನ್ಯಸ್ತಸ್ತ್ವಯಾ ಶ್ರೀಪತೇ
ದೃಪ್ತಪ್ರಸ್ತರಸಂ ಮಿತಾತಿಕಠಿನಾವಸ್ಥಾಂತರಾಯಾ ಗೃಹೇ ॥
ಯುಕ್ತಾನ ಸ್ಥಿತಿರಸ್ಯ ಕೋಮಲಹೃದಸ್ತನ್ವೀಹ ಚಿತ್ತೇ ಮಮ
ಪ್ರೀತ್ಯಾಸ್ಥಾಪಯಿತುಂ ಮೃಗಾಕ್ಷಿ ಮೃದುನೀತ್ಯುಕ್ತ್ವಾ ಹಸನ್ಪಾತ್ವ ಸೌ ॥೪೦॥

ಒಬ್ಬ ಗೋಪಿಯು ಕೃಷ್ಣನನ್ನು ಕುರಿತು 'ಹೇ ಶ್ರೀಪತಿಯಾದ ಕೃಷ್ಣನೇ ನಿನ್ನ ಕೈಯನ್ನು ಬೆಣ್ಣೆಯ ಪಾತ್ರೆಯಲ್ಲಿ ಏಕೆ ಇಟ್ಟಿರುವೆ' ಎನಲು ಶ್ರೀಕೃಷ್ಣನು

'ಎಲೈ ತನುಮಧ್ಯಮಳಾದ ಕೃಷ್ಣಸಾರಸ ನೇತ್ರಿಯೇ ಕಲ್ಲಿನಕಿಂತಲೂ ಕಠಿಣವಾದ ಹೃದಯವುಳ್ಳ ನಿನ್ನ ಮನೆಯಲ್ಲಿ ಅತಿ ಮೃದುವಾದ ಬೆಣ್ಣೆಯು ಇರುವುದು ಯುಕ್ತವಲ್ಲ, ಅತಿ ಕೋಮಲಚಿತ್ತನಾದ ನನ್ನಲ್ಲಿ ಇಟ್ಟರೋಣವೆಂದು, ಉತ್ತರಿಸಿ ನಕ್ಕು ಅವಳನ್ನೂ ನಗಿಸಿದ ಶ್ರೀಕೃಷ್ಣನು ನಮ್ಮನ್ನು ರಕ್ಷಿಸಲಿ. ॥ ೪೦ ॥

ಯಸ್ಯ ಶ್ರೀಚರಣಾಂಬುಜೇನ ಶಕಟಃ ಸಂಚೂರ್ಣಿತಾಂಗೋಽಭವ-
ತ್ತಸ್ಯಾಂಗೇ ಮೃದುತಾ ಸ ಯುಕ್ತಿ ಸಹಿತೇತ್ಯುಕ್ತಂ ಮುದಾಯೇ ಽವದತ್॥
ಬಾಲ್ಯೇ ಮಾಮುಧಿರೋಪ್ಯ ವಕ್ಷಸಿಶಿಶುಂ ಸನ್ನರ್ತಯಂತ್ಯಾಸ್ತವ
ಸ್ಥೂಲೋರೋಜ ಸಮಾಗಮೇನ ತದಿತಿ ಪ್ರೌಢಿಂ ಸ ದದ್ಯಾನ್ಮಮ ॥೪೧॥

ಅದಕ್ಕೆ ಗೋಪಿಯು ಹಾಗಾ? ಯಾರ ಪಾದಕಮಲದ ಸ್ಪರ್ಶಮಾತ್ರದಿಂದಲೇ ಭಂಡಿಯು ಚೂರು ಚೂರಾಗಿ ಹೋಯಿತೋ ಅಂತಹ ದೇಹವುಳ್ಳ ನಿನ್ನಲ್ಲಿ ಮಾರ್ದವ್ಯವು ಎಷ್ಟು ಯುಕ್ತಿ ಯುಕ್ತವೋ ಅಲ್ಲವೇ? ಅನಲು ಅದಕ್ಕೆ ಶ್ರೀಕೃಷ್ಣನು ನಕ್ಕು ಅದು ನನ್ನ ದೋಷವಲ್ಲ ನಾನು ಕೂಸಾಗಿರುವಾಗ ನನ್ನನ್ನು ನೀನು ಎತ್ತಿಕೊಂಡು ಎದೆಯ ಮೇಲೆ ಕುಣಿಸುತ್ತಿದ್ದಿ ಆಗ ನಿನ್ನ ಸ್ಥನಗಳ ಸಂಸರ್ಗದಿಂದ ನನ್ನ ಕಾಲುಗಳಲ್ಲಿ ಆ ಕಾಠಿಣ್ಯವು ಬಂದಿತು ಎಂದು ಹೇಳಿ ಗೋಪಿಯನ್ನು ಮುಗ್ಧಗೊಳಿಸಿದ ಶ್ರೀಕೃಷ್ಣನು ನಮ್ಮಗಳಿಗೆ ಪ್ರೌಢಿಮೆಯನ್ನು ಕೊಟ್ಟು ಕಾಪಾಡಲಿ. ॥ ೪೧ ॥

ಬಧ್ನಾಮ್ಯದ್ಯ ಭವಂತಮುಂಗ ಕಿತವಂ ಸಾಧ್ಯಂ ತತಃ ಕಿಂ ಪ್ರಿಯೇ
ದುಗ್ಧಾನಾಂ ಪರಿರಕ್ಷಣಂ ಕಪಟಿಸಂನದ್ಧೇ ನಿಬದ್ಧೇತ್ವಯಿ ॥
ಮುಗ್ಧೇ ತ್ವಂ ವಿರಸಾ ಸಮುಜ್ಝಸಿ ಪರಂ ಸ್ನಿಗ್ಧಂ ನ ತನ್ಮಾಂ ತ್ಯಜೇತ್
ಪದ್ಮಾಕ್ಷೀತ್ಯ ಬಲಾಮುದೀರ್ಯ ವಶಯನ್ ಬುದ್ಧಿಂ ಸ ದದ್ಯಾನ್ಮಮ ॥೪೨॥

ಮತ್ತೊಬ್ಬ ಗೋಪಿಯು ಹೇ ಕೃಷ್ಣಾ ನಿನ್ನನ್ನು ಕಟ್ಟಿಹಾಕುತ್ತೇನೆ.

ಶ್ರೀಕೃಷ್ಣನು:— ಅತಿಪ್ರಿಯಳಾದ ಗೋಪಿಯೇ ನನ್ನನ್ನು ಕಟ್ಟಿ ನಿನಗೆ ಪ್ರಯೋಜನವೇನು?

ಗೋಪಿ:— ಬಹುಕಪಟಿಯಾದ ನಿನ್ನನ್ನು ಕಟ್ಟಿದರೆ ಹಾಲು-ಮುಸುರು-ಬೆಣ್ಣೆಗಳು ರಕ್ಷಿತವಾಗುವುದು.

ಶ್ರೀಕೃಷ್ಣ:—(ಧಡ್ಡೀ)ಮುಗ್ಧೇ ನೀನು ಕೋಪದಿಂದ ನನ್ನನ್ನು ಕಟ್ಟಿದರೂ ಬಹು ಸ್ನೇಹ ಉಳ್ಳ ಹಾಲು-ಮುಸರಗಳು ನನ್ನನ್ನು ಎಂದಿಗೂ ಬಿಡುವದಿಲ್ಲ ಎಂದು ಅವಳನ್ನು ವಶಪಡಿಸಿಕೊಂಡ ಶ್ರೀಕೃಷ್ಣನು ನಮಗೆ ಸುಬುದ್ಧಿಯನ್ನು ಕೊಡಲಿ. ॥ ೪೨ ॥

ತತಃ ಕ್ವಣನ್ನೂಪುರ ಶೋಭಿಪಾದಾಃ
ಸ್ತ್ರಿಯೋ ವಿದಗ್ಧೈರನುಮೇಯ ಮಧ್ಯಾಃ ||
ಶುಚಿಸ್ಮಿತಾಃ ಕುಂಡಲಶೋಭಿಗಂಡಾ ನ್ಯ-
ವೇದಯಂಸ್ತಚ್ಚರಿತಾನಿ ಮಾತುಃ || ೪೩ ||

ಶ್ರೀಕೃಷ್ಣನು ಹೀಗೆಯೇ ವರ್ತಿಸುತ್ತಿರಲು ಒಂದು ದಿನ ಧ್ವನಿಕರೆವ ಕಾಲ್ಕಡಗಗಳಿಂದ ಶೋಭಿಸ ಪಾದಗಳುಳ್ಳ ಪ್ರೌಢಿಮೆಯಿಂದ ವಿಚಾರಣೀಯವಾದ ತನು ಮಧ್ಯತೆಯುಳ್ಳ ಕರ್ಣಕುಂಡಲಗಳಿಂದ ಫಳಫಳಿಸುವ ಕೆನ್ನೆಗಳುಳ್ಳ ವ್ರಜಾಂಗನೇಯರುಗಳು ತಾಯಿಯಾದ ಯಶೋದೆಯ ಬಳಿಯಲ್ಲಿ ಬಂದು ಶ್ರೀಕೃಷ್ಣನ ಚರಿತೆಗಳನ್ನು (ಚೇಷ್ಟೆ) ಹೇಳತೊಡಗಿದರು. || ೪೩ ||

ಯದಾತ್ಮಜಸ್ತೇ ಪಿಬತಿ ಸ್ಮ ದುಗ್ಧಂ
ವಿಭಿದ್ಯ ಪಾತ್ರಾಣಿ ತದಾ ಮಮಾಸೀತ್ ||
ನ ಮನ್ಯುರುತ್ಸರ್ಪಿತದೀಯದಂತ
ದೃಗಂತಕಾಂತಿಂ ಹೃದಿತರ್ಕಯಂತ್ಯಾಃ || ೪೪ ||

ಹೇ ಯಶೋದೆಯೇ ಯಾವಾಗ ನಿನ್ನ ಮಗ ಹಾಲನ್ನು ಕುಡಿಯುತ್ತಾಯೋ ಪಾತ್ರೆಗಳನ್ನೂ ಒಡೆಯುತ್ತಾನೆಯೋ ಆಗ ನಾನು ಸಿಟ್ಟಿನಿಂದ ನೋಡಲು ಅಣಕಿಸುವಂತೆ ನಿಂತ ಅವನ ಹಲ್ಲು ಕಣ್ಣುಗಳ ಕಾಂತಿಯನ್ನು ನೋಡಿ ಏನೋ ವಿಚಿತ್ರ ವಿಚಾರ ಮಾಡಿ ಕೋಪವೆಲ್ಲವೂ ಹಿಂಗಿಯೇ ಹೋಗುವುದು. ನಿನ್ನ ಮಗ ಎಷ್ಟು ಆಶ್ಚರ್ಯಕಾರಕನೇ ! || ೪೪ ||

ಪಯಃ ಪ್ರಮುಷ್ಣನ್ ಸಖಿ ಭರ್ತ್ಸನಾರ್ಥಂ
ಸಮಾಗತಾನಾಮುಪಹೃತ್ಯ ಚೇತಃ ||
ಸ್ವಕೃತ್ಯಸಾಧ್ಯಾನ್ಯವಲಂಬ್ಯ ಕಂಠಂ
ಜಿಘೃಕ್ಷತಿ ಸ್ವೈರಮಯಂ ಸುತಸ್ತೇ || ೪೫ ||

ಹೇ ಸಖಿ ಯಶೋದೇ ಹಾಲು ಮೊಸರುಗಳನ್ನು ಅಪಹರಿಸುತ್ತಾ ಝುವರಿಸಲು ಹೋದ ನಮ್ಮಗಳ ಮನಸ್ಸನ್ನೇ ಆಕರ್ಷಿಸಿ ತನ್ನ ಕೈಲಾದದೆಲ್ಲವನ್ನೂ ಮಾಡುತ್ತಾ ಕುತ್ತಿಗೆಗೆ ಮೀಟು ಬಿದ್ದು ಸ್ವೇಚ್ಛೆಯಾಗಿ ಹಿಡಿದು ಬೇಕಾದುದೆಲ್ಲವನ್ನೂ ತೆಗೆದುಕೊಳ್ಳುತ್ತಾನಮ್ಮಾ ನಿನ್ನ ಮಗ. || ೪೫ ||

ಯದೀದೃಶಂ ಕರ್ಮ ಕರೋಷಿ ಕೃಷ್ಣ
ನ ತರ್ಹಿ ನಂದಸ್ಯ ಸುತಸ್ತ್ವಮನ್ಯಃ ||
ಇತೀರಿತೇ ಹಂತ ಹಸನ್ಯಶೋದೇ
ಬಹೂನ್ಯನಿಷ್ಟಾನಿ ಸ ನಸ್ತನೋತಿ || ೪೬ ||

ಹೇ ಕೃಷ್ಣ ನೀನು ಹೀಗೆಲ್ಲಾ ಮಾಡಿದರೇ ನಂದಗೋಪನ ಮಗನೇ ಅಲ್ಲ. ಯಾರೋ ಬೇರೆ ಅನ್ನುತ್ತೇವೆ, ಅಂದರೇ ನಗುತ್ತಾ ಹೌದು ಎಂದು ನಗುತ್ತಾ ನಮ್ಮಗಳಿಗೆ ಬಹು ಅನಿಷ್ಟಗಳೆಲ್ಲವನ್ನೂ ಮಾಡುತ್ತಾನಮ್ಮಾ ॥ ೪೬ ॥

ಇದಂ ಹಿ ದೇವಸ್ಯ ಸಮರ್ಪಣಾರ್ಹಂ ಇತೀರಿತೇ ತರ್ಹ್ಯಹ ಮೇವ ದೇವಃ ॥
ಸ ಇತ್ಥಮಾಭಾಷ್ಯ ತದೇವ ಭುಂಕ್ತೇ ನ ದೇವಿಪುತ್ರಸ್ತವ ದೇವಭಕ್ತಃ ॥೪೭॥

ಇದು ದೇವರಿಗೆ ಸಮರ್ಪಣಾರ್ಹವಾದುದು ಎಂದರೇ, ಹಾಗಾದರೇ ನಾನೇ ದೇವರು ಎಂದು ಅದೆಲ್ಲವನ್ನೂ ತಾನೇ ತಿನ್ನುವನಮ್ಮಾ, ನಿನ್ನ ಮಗ ದೈವ ಭಕ್ತನಲ್ಲವೇ ಗೋಪೀ. ॥ ೪೭ ॥

ಗೃಹೇಗೃಹೇಽಯಂನವನೀತದುಗ್ಧ-
ದಧೀನಿಸರ್ವಾಣ್ಯ ಪಹೃತ್ಯ ಭುಂಕ್ತೇ ॥
ತಥಾಪಿ ತೃಪ್ತಿಂ ನ ಸುತಸ್ತ ವೈತಿ
ಕಿಮಸ್ಯ ಭೂತಾನಿ ವಸಂತಿ ಕುಕ್ಷೌ ॥ ೪೮ ॥

ಮನೆಮನೆಗಳಲ್ಲೆಲ್ಲಾ ಯಥೇಚ್ಛವಾಗಿ ಹಾಲು ಮಸರುಗಳನ್ನು ಕುಡಿದರೂ ಇವನಿಗೆ ತೃಪ್ತಿಯೇ ಇಲ್ಲ. ನಿನ್ನ ಮಗನ ಹೊಟ್ಟೆಯಲ್ಲಿ ಎಷ್ಟು ಭೂತಗಳಿವೆಯೇ ? ॥ ೪೮ ॥

ನಮುಂಚ ವತ್ಸಾಂ ಸ್ತ್ವಮಿಃ ಹೇತ್ಯ
ಬದ್ಧಾನಿ ತೀರಿತೇ ಪುಣ್ಯಪದೇ ಯಶೋದೇ ॥
ಸ್ಮಿತೋಲ್ಲ ಸದ್ವಕ್ತ್ರಮುದಾತ್ತುಸತಸ್ತೇ
ಸ್ವಭಾವ ಇತ್ಯುತ್ತರಮುತ್ತರಜ್ಞಃ ॥ ೪೯ ॥

ಅಮ್ಮಾ ಪುಣ್ಯಭಾಗಿಯಾದ ಯಶೋದೆ ಕಟ್ಟಿಹಾಕಿರುವ ಕರುವುಗಳನ್ನು ಬಿಡಬೇಡವೋ ಕೃಷ್ಣಾ ಎಂದರೆ ಉತ್ತರವನ್ನು ಅರಿತ ನಿನ್ನ ಮಗ ನಗುತ್ತಾ ಹಸನ್ಮುಖವನ್ನು ತೋರಿ ಕಟ್ಟಿದವರನ್ನು ಬಿಡಿಸುವುದೇ ನನ್ನ ಸ್ವಭಾವ ಎಂದು ಛಟ್ಟನೆ ಉತ್ತರ ಕೊಟ್ಟು ಬಿಚ್ಚಿಯೇ ಓಡುತ್ತಾನಮ್ಮಾ. ॥ ೪೯ ॥

ಕಸ್ಮಾದಂಗ ನಯುಸ್ಯುಲೂಖಲಮಿತೋಃ ದುಗ್ಧಸ್ಯ ಪಾತ್ರಾದಧಃ
ಸ್ನಿಗ್ಧಂ ಸ್ಥಾಪಯಿತುಂ ತತಶ್ಚ ಕಿಮಿತಿ ಪ್ರೋಕ್ತೇ ಪ್ರಭುರ್ಯೋಽವದತ್ ॥
ಮಧ್ಯಸ್ಯಾಗ್ರ ಸುಜಾತಸುಸ್ಮಿತಪಯಃ ಪಾತ್ರಾನನಸ್ಯೋಪಮಾಂ
ಮುಗ್ಧೇ ವೀಕ್ಷಯಿತುಂ ತವೇತಿ ಸ ಪಟುರ್ದುಷ್ಕರ್ಮಣಾಂಗೂಹನೆ ॥ ೫೦ ॥

ಗೋಪಿ— ಕೃಷ್ಣಾ ಒರಳನ್ನು ಏಕೆ ಹೊತ್ತುಕೊಂಡು ಹೋಗುತ್ತೀಯೋ ?

ಕೃಷ್ಣ— ಇದರ ಮೇಲೆ ಮೊಸರು ಗಡಿಗೆಯನ್ನು ಇಡಲು.

ಗೋಪಿ— ಅದಾದರೂ ನಿನಗೇಕೆ ?

ಕೃಷ್ಣ— ಈ ಒರಳು ಕೆಳ-ಮೇಲ್ಭಾಗಗಳಲ್ಲಿ ಅಗಲವಾಗಿಯೂ ಮಧ್ಯದಲ್ಲಿ ಸಣ್ಣದಾಗಿಯೂ ಇರುವುದರಿಂದ ಇದರ ಮೇಲೆ ಇಟ್ಟ ಗಡಗಿಯು ತನುಮಧ್ಯತೆಯಿಂದ ಸುಂದರಿಯಾದ ನಿನ್ನ ಮುಖ ಸಾದೃಶ್ಯವನ್ನು ಹೊಂದುತ್ತದೆ ಅದನ್ನು ನೋಡಲು.

ಅಮ್ಮಾ ಯಶೋದೇ ಈ ರೀತಿ ನಿನ್ನ ಮಗ ಉತ್ತರವನ್ನು ಕೊಡುತ್ತಾ ತಾ ಮಾಡುವ ದುಷ್ಟ ಕೆಲಸಗಳನ್ನು ಮುಚ್ಚಿ ಚಮತ್ಕಾರ ಮಾಡುವದರಲ್ಲಿ ಬಹು ಚತುರನಮ್ಮಾ. ॥ ೫೦ ॥

ವ್ರಜಾಂಗನೇಯರುಗಳು ಹಿಂದೆ ಹೇಳಿದ ರೀತಿಯಾಗಿ ಹೇಳುತ್ತಾ ಅನುಭೂತವಾದ ಪುರುಷಸೂಕ್ತಾದ್ಯುಕ್ತವಾದ ಭಗವದ್ಗುಣಗಳನ್ನು ವರ್ಣಿಸ ತೊಡಗಿದರು.

ಕ್ವಚಿತ್ಕರೇಣೈವ ಸ ದುಗ್ಧ ಭಾಜನಂ
ಕ್ವಚಚ್ಚ ಪಾದೇನ ಸಮೀಕ್ಷತೇ ಸಖೀ ॥
ಸಮಾಗತಾಃ ಪಶ್ಯತಿ ಪೃಷ್ಠತಸ್ತದಾ
ಸ ವಿಶ್ವತಶ್ಚಕ್ಷುರಿವಾಸ್ತಿ ಬಾಲಕಃ ॥ ೫೧ ॥

ಅಮ್ಮಾ ಸಖಿ ಯಶೋದೇ ನಿನ್ನ ಮಗನಾದ ಕೃಷ್ಣ ಕೆಲವು ವೇಳೆ ಕೆಲ ಸ್ಥಳದಲ್ಲಿ ಕೈಯಿಂದಲೇ ಬೇಕಾಗುದುದನ್ನು ನೋಡಬಲ್ಲನು. ಕೆಲವು ಸ್ಥಳದಲ್ಲಿ ಕಾಲಿಂದಲೂ ನೋಡುತ್ತಾನೆ ಕಳವು ಮಾಡುವಾಗ ಬರುವರನ್ನು ಬೆನ್ನಿನಿಂದಲೇ ನೋಡುತ್ತಾನೆ, ಬಾಲಕನಂತಿರುವ ನಿನ್ನ ಮಗ ವಿಶ್ವತಃ ಚಕ್ಷುಸ್ಸು (ಮೈಎಲ್ಲವೂ ಕಣ್ಣುಗಳು) ಉಳ್ಳವ. ನಮ್ಮ (ವಿಶ್ವತಶ್ಚಕ್ಷುರತ ವಿಶ್ವತೋಮುಖೊ ಇತ್ಯಾದಿ ಪುರುಷಸೂಕ್ತ ಪ್ರಸಿದ್ಧವು) ॥ ೫೧ ॥

ಉಲೂಖಲೇ ತಂ ಯದಿ ಬಂಧಯಾಮೋ
ನಯೇತ್ತದೋಲೂಖಲಮೇವ ಬಾಲಃ ॥
ಧ್ರುವಂ ಗೃಹಸ್ತಂಭವರೇ ನಿಭದ್ಧೋ
ಗೃಹಾಣ್ಯಸೌ ಪಾತಯಿತುಂ ಸಮರ್ಥಃ ॥ ೫೨ ॥

ಇವನ ಕಾಟವನ್ನು ತಡೆಯಲಾರದೇ ಇವನನ್ನು ಒರಳಿಗೆ ಕಟ್ಟಿದರೆ ಅದನ್ನೇ ಎಳೆದುಕೊಂಡು ಹೋಗುತ್ತಾನೆ. ಕಂಭಗಳಿಗೆ ಕಟ್ಟಿದರೆ ಮನೆಗಳನ್ನೇ ಕೆಡವಲು ಸಮರ್ಥನಾಗಿರುವನಮ್ಮಾ ॥ ೫೨ ॥

ವಿಶ್ವಂಭರಸ್ಯಾಸ್ಯ ಹಿ ಬಂಧನಾಯ
ದಾಮಾನಿ ಸಂಪಾದಯಿತುಂ ಕ ಈಶಃ ॥
ಬದ್ಧಃ ಕಥಂಚಿದ್ಯದಿ ತರ್ಹಿ ಬದ್ಧಾಃ
ಮಧ್ಯೇ ವಿಲೀನಾ ವಯಮೇವ ನೂನಮ್ ॥ ೫೩ ॥

ವಿಶ್ವಂಭರನಾದ ಇವನನ್ನು ಕಟ್ಟಲು ಹಗ್ಗವನ್ನು ಸಂಪಾದಿಸುವ ಸಾಮರ್ಥ್ಯವಾದರೂ ಯಾರಿಗಿದೆಯಮ್ಮಾ (ಕಟ್ಟುವುದಂತೂ ದೂರತೋಽಪಾಸ್ತವೇ) ಒಂದು ವೇಳೆ ಬಹು ಜನರೂ ಕಲೆತು ಹೇಗೋ ಕಟ್ಟಬೇಕೆಂದು ಪ್ರಯತ್ನಗೊಂಡರೆ ಗುಂಪಿನಲ್ಲಿ ಪರಸ್ಪರವಾಗಿ ನಾವುಗಳೇ ಕಟ್ಟುಬೀಳುತ್ತೇವೆ. ಕೃಷ್ಣನಾದರೂ ಅಲ್ಲಿ ಲೀನನಾಗಿ ನಮ್ಮನ್ನು ನೋಡಿ ನಗುತ್ತಾ ದೂರದಲ್ಲಿಯೇ ನಿಂತಿರುತ್ತಾನೆ. ಎಷ್ಟು ಆಶ್ಚರ್ಯವಮ್ಮಾ ॥ ೫೩ ॥

ಅಹೋ ಯಶೋದೇ ತವ ಬಾಲಕೋಽಯಂ
ಗೃಹೇಗೃಹೇತ್ಯುಷ್ಣಮಪೀಹ ದುಗ್ಧಮ್ ॥
ಪಿಬನ್ನ ತಾಪಂ ಲಭತೇ ಕದಾಪಿ
ಕಿಮಸ್ಯ ವಕ್ತ್ರೇ ಜಲರಾಶಿರಾಸ್ತೇ ॥ ೫೪ ॥

ಅಹೋ ಯಶೊದೇ ನಿನ್ನ ಮಗ ಹುಡುಗನಾದರೂ ಎಲ್ಲರ ಮನೆಯಲ್ಲಿಯೂ ಅತಿ ಸುಡುವ (ಮರಳುತ್ತಿರುವ) ಹಾಲುಗಳನ್ನು ಕುಡಿದರೂ ಸ್ವಲ್ಪವೂ ತಾಪವಿಲ್ಲದಲೇ ನಗುತ್ತಿರುತ್ತಿತ್ತಾನಮ್ಮಾ ಇವನ ಬಾಯಲ್ಲಿ ಸಮುದ್ರಗಳು ಇರುವುದೇನಮ್ಮಾ? ॥ ೫೪ ॥

ವಿಲೋಕ್ಯ ದೂರಸ್ಥಿತ ದುಗ್ಧಭಾಂಡ
ಮುಲೂಖಲಾದ್ಯೈರ್ಯತತೇ ಗೃಹೀತುಂ ॥
ಶಿಶುಃ ಸ ತಾವತ್ ಕ್ವಚಿದೇಧತೇಽಹೋ
ಕಿಮೇಷ ಗೂಢಾಷ್ಟಮಹಾವಿಭೂತಿಃ ॥ ೫೫ ॥

ಮೇಲಿರುವ ಹಾಲು ಮೊಸರುಗಳ ಪಾತ್ರೆಗಳನ್ನು ಒರಳೇ ಮೊದಲಾದ ಸಾಧನೆಗಳಿಂದ ತೆಗೆದುಕೊಳ್ಳುತ್ತಾನೆ. ಕೆಲವು ವೇಳೆ ಅಷ್ಟಿಷ್ಟು ಎತ್ತರವಾಗಿ ಕ್ಷಣಮಾತ್ರದಲ್ಲಿ ತಾನೇ ಬೆಳೆಯುತ್ತಾನಮ್ಮಾ ನಿನ್ನ ಮಗ ನೋಡಲು ಕೂಸಾದರೂ ಅಣಿಮಾದಿ ಅಷ್ಟ ವಿಭೂತಿಗಳುಳ್ಳವನೇ (ಅಣಿಮಾ ಮಹಿಮಾಚೈವ ಗರಿಮಾಲಘಿಮಾ ತಥಾ ಪ್ರಾಪ್ತಿಃ ಪ್ರಾಕಾಮ್ಯಮೀಶತ್ವಂ ವಶಿತ್ವಂ ಚಾಷ್ಟ ಭೂತಯಃ) ॥ ೫೫ ॥

ನ ನಿಷ್ಠುರಾ ವಾಕ್ಸಮುದೇತಿ ವಕ್ತ್ರಾತ್
ಕರಶ್ಚ ನಸ್ತಾಡಯಿತುಂ ಯಶೋದೇ ॥
ವಿಲೋಲನೇತ್ರಂ ತವ ಪುತ್ರರತ್ನಂ
ಧ್ರುವಂ ಸುತಸ್ತೇ ಜಗತಾಂ ನಿಯಂತಾ ॥೫೭॥

ಯಶೋದೇ ನಿನ್ನ ಮಗನಿಗೆ ನಿಷ್ಠುರವಾದ ಮಾತಾಡಲು ಬಾಯಿಯೇ ಬರುವುದಿಲ್ಲ. ಹೊಡೆಯಲು ಕೈಯಂತೂ ಮೊದಲೇ ಬರುವುದಿಲ್ಲ. ಚಲಿಸುವ ನೇತ್ರಗಳಿಂದ ಸುಂದರನಾದ ನಿನ್ನ ಪುತ್ರರತ್ನನು ಸತ್ಯವಾಗಿಯೂ ಜಗತ್ತಿಗೆ ನಿಯಾಮಕನೇ ಅಮ್ಮಾ. ॥೫೭॥

ಬತಾಂಧ ಕಾರಾರ್ಪಿತ ದಧ್ಯಮತ್ರ ಮಪಿಸ್ವಭಾಸ್ವನ್ನಯನಾತಲಕ್ಷ್ಮ್ಯಾಃ ॥
ನಿರೀಕ್ಷತೇ ಲೋಚನಯೋಃ ಕಿಮೇಷ ಬಿಭರ್ತಿ ಬಾಲಸ್ತವ ಪುಷ್ಪವಂತಾ ॥೫೭॥

ಎಷ್ಟು ಕತ್ತಲೆಯಲ್ಲಿಟ್ಟಿದ್ದರೂ ಹಾಲು ಮೊಸರು ಪಾತ್ರೆಗಳನ್ನು ತನ್ನ ಕಣ್ಣುಗಳ ಬೆಳಕಿನಿಂದಲೇ ನೋಡುತ್ತಾನೆ. ನಿನ್ನ ಹುಡುಗನು ಕಣ್ಣಿನಲ್ಲಿ ಸೂರ್ಯ ಚಂದ್ರರನ್ನು ಏನಾದರೂ ಧರಿಸಿರುವನೇನೇ ? ॥೫೭॥

ಮಂತ್ರಾತ್ಮಾ ಸ ಕವಾಟವಸೂಶು ವಿವೃತಂ ಕರ್ತುಂ ಸಮರ್ಥೋವೃಥಾ
ಬಂಧಂ ನಿತ್ಯವಿಮುಕ್ತಿದೊ ರಚಯಿತುಂ ವಿಶ್ವಂಭರೋಽಯಂ ಜಗತ್ ॥
ವಕ್ತ್ರೇ ದರ್ಶಯಿತುಂ ಕಠೋರವಚಸಾಂ ವಿಸ್ಮಾಪನಂ ಕರ್ಹಿಚಿ
ದ್ವೃದ್ಧಃಪಾಟಯಿತುಂಚ ತದ್ವಿಟಪಿನಃ ಕಿಂ ದೇವಿ ಕುರ್ಮೋವಯಮ್ ॥೫೮॥

ಅಮ್ಮಾ ಯಶೋದೇ ನಿನ್ನ ಮಗ ಬಹು ಮಂತ್ರಜ್ಞನಾದವನು ಇವನು ಬಂದರೇ ಹಾಕಿದ್ದ ಬಾಗಿಲುಗಳು ತಾವಾಗಿಯೇ ಛಟ್ಟನೆ ತೆಗೆದು ಹೋಗುತ್ತವೆ. ಎಷ್ಟೇ ಪ್ರತಿಬಂಧಕಗಳನ್ನು ಕಲ್ಪಿಸಿದ್ದರೂ ಎಲ್ಲವೂ ವ್ಯರ್ಥವೇ ಆಗುತ್ತದೆ. ಕಟ್ಟುಗಳಲ್ಲಿದ್ದ ಕರುವುಗಳೇ ಮೊದಲಾದವುಗಳ ಕಟ್ಟುಗಳು ಇವನ ದೃಷ್ಟಿ ಮಾತ್ರದಿಂದಲೇ ಬಿಚ್ಚಿಹೋಗುತ್ತವೆ. ಕಠೋರ ಮಾತುಗಳನ್ನು ಆಡಬೇಕೆಂದು ಹೊರಟ ನಮ್ಮಗಳಿಗೆ ಏನಾಡಬೇಕೆಂಬುದು ಮರತೇ ಹೋಗುತ್ತದೆ. ಆದ್ದರಿಂದ ನಿನ್ನ ಮಗ ವಿಶ್ವಾಧಾರಕನಂತೆ ಇರುವನಮ್ಮಾ, ದೊಡ್ಡ ಮರಗಳಿಗೆ ಕಟ್ಟಿದರೇ ಅವುಗಳನ್ನೂ ಉರುಳಿಸಲು ಸಮರ್ಥನಾದವನು. ನಾವೇನು ಮಾಡೋಣವೇ ದೇವೀ ॥೫೮॥

ಇತಿ ಸ್ಮ ಸಂಕೀರ್ತ್ಯ ಸುರಾಧಿರಾಜಂ
ವ್ರಜಸ್ತ್ರೀಯೋ ಭಾವಿ ವಿಮುಕ್ತಿಬೀಜಂ ॥

ವಿಲೋಲ ನೇತ್ರಂ ತಮವೇಕ್ಷ್ಯ ವಾಚಃ
ಶನೈರಲಂಚಕ್ರುರನೇಕ ಭಾವಾಃ ॥ ೫೯ ॥

ಈ ರೀತಿಯಾಗಿ ವ್ರಜಾಂಗನೇಯರುಗಳು ಸುರಾಧಿ ರಾಜನೂ ಮುಂದಾಗುವ ವಿಮುಕ್ತಿಗೆ ಮುಖ್ಯ ಬೀಜನೂ ಆದ ಶ್ರೀಕೃಷ್ಣನ, ವಿಷಯಗಳನ್ನು (ಚೇಷ್ಟೆಗಳನ್ನು) ಹೇಳುತ್ತಿರಲು, ಶ್ರೀಕೃಷ್ಣನು ಚಂಚಲವಾದ ತನ್ನ ನೇತ್ರಗಳ ಕಾಂತಿಯಿಂದ ಅಲ್ಲಿಗೇ ಬಂದನು. ಬಂದವನನ್ನು ನೋಡಿ ಆ ಸ್ತ್ರೀಯರೆಲ್ಲರೂ ತಮ್ಮ ಹೇಳುವಿಕೆಯನ್ನು ಶಾಂತಗೊಳಿಸಿ ದಿಟ್ಟಿಸಿ ನೋಡುತ್ತಾ ಅನೇಕ ಭಾವನೆಗಳಿಂದ ಮುಗ್ಧರೇ ಆಗಿ ನಿಂತರು. ॥ ೫೯ ॥

ಸದಾ ಸದಾನಂದ ಸುತೃಪ್ತ ವೃತ್ತೇಃ
ಭವದ್ಗೃಹಸ್ಥೈರ್ನವನೀತ ಮುಖ್ಯೈಃ ॥
ಸಮಾ ಮಮೈಷಾ ಮೃದಿತೀವ ಶಂಸನ್
ಮೃದಂ ಜಘಾಸ ಸ್ವವಶೋಽಖಿಲೇಶಃ ॥ ೬೦ ॥

ಶ್ರೀಕೃಷ್ಣನು, ಸದಾ ಆನಂದತೃಪ್ತನೇ ಆದ ನನಗೆ ನಿಮ್ಮೆಲ್ಲರ ಮನೆಯ ಹಾಲು ಮೊಸರು ಬೆಣ್ಣೆಗಳೆಲ್ಲವೂ ಮಣ್ಣಿಗೆ ಸಮಾನವು ಎಂದು ತೋರಲೋ ಎಂಬಂತೆ ಬಾಲ ಚೇಷ್ಟೆಯನ್ನು ತೋರುತ್ತಾ ಅಖಿಳಕ್ಕೇ ಒಡೆಯನಾಗಿ ಸ್ವತಂತ್ರನಾದ ತಾನು ಮಣ್ಣನ್ನು ತಿಂದನು. ॥ ೬೦ ॥

ಗೋಪೀಭಿರಾಪಾದಿತ ಚೌರ್ಯಕರ್ಮಾ
ಮಾತುಃ ಸಮಕ್ಷಂ ಮಹಿತಸ್ತ್ರಿಲೋಕ್ಯಾಂ ॥
ಮೃತ್ಸ್ನಾಂ ಕಿಲಾದದ್ವಸುದೇವಸೂನುಃ
ನಾತ್ರಾಸ್ತಿ ಚೋರತ್ವ ಮಿತೀವ ಹಿನ್ವನ್ ॥ ೬೧ ॥

ವಸುದೇವನ ಮಗನಾದ ಶ್ರೀಕೃಷ್ಣನು ನಾನೇ ವಾಸುದೇವನು ಮೂರು ಲೋಕಗಳಲ್ಲಿ ಪೂಜ್ಯನಾದವನು ಇಂತಹ ನನ್ನನ್ನು ಗೋಪಿಯರು ನನ್ನ ತಾಯಿಯ ಮುಂದೆ ಕಳ್ಳನೆಂದು ತಿಳಿಸಿದರಲ್ಲಾ ಎಂದು ಕೋಪದಿಂದ ಈ ಕಳ್ಳತನವನ್ನು ಮುಚ್ಚಬೇಕು ಎಂದು ನನ್ನಲ್ಲಿ ಕಳ್ಳತನವೇನೂ ಇಲ್ಲಾ ಎಂದರುಹಲು ಆಕ್ರೋಶವನ್ನು ತೋರುವವನಾಗಿ ಮಣ್ಣನ್ನು ತಿಂದನೋ ಎಂಬಂತಿದ್ದಿತು. ॥ ೬೧ ॥

ಮೃದಂ ಸಮಾಸ್ವಾದ್ಯ ಜಗಂತಿ ಮಾತುಃ
ಪ್ರದರ್ಶಯಾಮಾಸ ಕಿಲಾಸ್ಯದೇಶೇ ॥
ಅಹಂ ಸುಪಾತ್ರೇ ರಸಯಾ ಪ್ರದತ್ತಾ
ಸಹಸ್ರಧಾಸೌ ಫಲಿತೇತಿ ಮನ್ಯೇ ॥ ೬೨ ॥

ಮಣ್ಣು ತಿಂದವನಂತೆ ನಟಿಸಿ ತಾಯಿಗೆ ಬಾಯ್ದೆ ತೆರೆದಾತನು ಲೋಕಗಳನ್ನೇ ತೋರಿದನು. ನಾವು ಹೀಗೆ ತಿಳಿಯುತ್ತೇವೆ ಭೂಲೋಕವೂ ಪರಮಪಾತ್ರನಾದ ಪರಮಾತ್ಮನಲ್ಲಿ ಕೆಟ್ಟ ಸ್ವಲ್ಪ ಮಣ್ಣು ಇರಬೇಕಾಗಿ (ಧರಿಸಿಕೊಂಡು ತೋರಿಸಿಕೊಂಡು. ॥ ೬೨ ॥

ರೋಮ್ಣಾಂ ಹರ್ಷಣಕಾರಿಣಿ ಶ್ರವಣತಃ ಪಾಪೌಘವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ವಿಚಿತ್ರವಿಮಲಶ್ಲಾಘ್ಯಾರ್ಥಸಂದಾಯಿನಿ ॥
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷುಮುದಿತಃ ಸರ್ಗಸ್ತೃತೀಯೋ ಮುದಾಮ್ ॥ ೬೩ ॥

ಈ ಶ್ಲೋಕವು ಅತ್ಯಾರ್ಥವಾದುದೇ
ಶ್ರೀಮದ್ವಾದಿರಾಜ ಪೂಜ್ಯಚರಣ ವಿರಚಿತ ಶ್ರೀ ರುಕ್ಮಿಣೀಶ ವಿಜಯ
ಮಹಾ ಕಾವ್ಯದಲ್ಲಿ ಮೂರನೆಯ ಸರ್ಗವು ಸಮಾಪ್ತಿಗೊಂಡಿತು.

— ಶ್ರೀಮಧ್ವೇಶಾರ್ಪಣಮಸ್ತು —

ಶ್ರೀ ರುಕ್ಮಿಣೀಶವಿಜಯ— ನಾಲ್ಕನೆಯ ಸರ್ಗ.

ಕವಿವರ್ಯರು ಕ್ರಮವಾಗಿ ಬಾಲಲೀಲೆಗಳನ್ನು ವರ್ಣಿಸುತ್ತಾರೆ.

ಉದ್ಗಚ್ಛತ್ಕಬರೀ ಪ್ರಸೂನಿಕರಾಂ ವೈರಾಗ್ಯಭಾಗ್ಯಪ್ರಿಯಃ
ಸದ್ಗೀತಾತ್ಮ ಯಶೋಽನುವರ್ಣನಪರಾಂ ಜ್ಞಾನಾನುಮೋದೀ ಹರಿಃ ॥
ದಧ್ನೋ ನಿರ್ಮಥನೋದ್ಯತಾಂ ಸಮುದಿತ ಪ್ರೇಮಾಶ್ರುಧಾರಾಂ ನಿಜ
ಪ್ರೇಮ್ಣಾ ಮಂದಮುಪಾಜಗಾಮ ಜನನೀಂ ಭಕ್ತ್ಯೈಕವಶ್ಯಃ ಪ್ರಭುಃ ॥ ೧ ॥

ಯಶೋದಾದೇವಿಯು ಸಜ್ಜನರಿಂದ ಗೇಯನಾದ ಪರಮಾತ್ಮನ ಯಶೋವರ್ಣನ ಪರವಾದ ಗೀತೆಗಳನ್ನು ಹಾಡುತ್ತಾ ಮೊಸರನ್ನು ಕಡಿಯುವ ರಭಸದಲ್ಲಿ ತಲೆಯಲ್ಲಿ ಮುಡಿದ ಹೂವುಗಳನ್ನು ಸುತ್ತಲೂ ಕೆಡುವುವವಳಾಗಿ ಮೈಮರೆತು ಆನಂದಾಶ್ರುಗಳಿಂದ ತುಂಬಿದ ಕಣ್ಣುಗಳುಳ್ಳವಳಾಗಿ ಮೊಸರನ್ನು ಕಡೆಯುತ್ತಿರಲು ವೈರಾಗ್ಯಭಾಗ್ಯ ಉಳ್ಳವರಿಗೆ ಪ್ರಿಯನಾದ ಜ್ಞಾನಾನುಮೋದಿಯಾದ ಶ್ರೀಕೃಷ್ಣನು ತಾನು ಸರ್ವಪ್ರಭುವೇ ಆದರೂ ಭಕ್ತ್ಯೈಕವಶ್ಯನೇ ಎನ್ನುವುದನ್ನು ತೋರುವವನಾಗಿ ಎದ್ದು ತಾಯಿಯ ಬಳಿಗೆ ಮೆಲ್ಲನೆ ಬಂದನು. ॥ ೧ ॥

ಅಂಕೋಜ್ಝಿತೇಂದು ಪ್ರತಿಮಾನನಂ ತ-
ಮಂಕಂ ಸಮಾರೋಪ್ಯ ಮುಹುರ್ಮೃಜಂತೀ ॥
ಪಂಕಂ ಮನೋಜ್ಞಾಂಗಗತಂ ಕ್ಷುಧಾರ್ತ-
ಶಂಕಾ ಸ್ತನಕ್ಷೀರಮಪಾಯಯತ್ಸಾ ॥ ೨ ॥

ನಿಷ್ಕಳಂಕ ಚಂದ್ರನಂತೆ ಶೋಭಿತ ವದನವುಳ್ಳ ಶ್ರೀಕೃಷ್ಣನನ್ನು ತೊಡೆಯ ಮೇಲೆತ್ತಿಕೊಂಡು ಮನೋಹರವಾದ ಮೈತಿರಿಗಳಲ್ಲಿಯ ಕೊಳೆಯನ್ನು ತಿಕ್ಕುವವವಳಾಗಿ ಶ್ರೀಕೃಷ್ಣನು ಬಹುಹಸಿದಿರುವನೆಂದು ಭ್ರಮಿಸಿ ತನ್ನ ಸ್ತನಕ್ಷೀರವನ್ನು ಪಾನಮಾಡಿಸಿದಳು. ॥ ೨ ॥

ತದನು ದಹನವೇಗಾದುತ್ಸ್ರವತ್ಕ್ಷೀರಲೋಭಾ
ನ್ಮಧುಜಿತಮಪಹಾಯಾ ಜಾನತೀ ಸಾಜಗಾಮ ॥
ಹರಿರಪಿ ಸಮಯಾಹಾರ್ಯಂ ಹಾನಿಮಸ್ಯೈ ಪ್ರದಾತುಂ
ವ್ಯಭಜತ ದಧಿಭಾಂಡಂ ಕ್ಷಿಪ್ತಪಾಷಾಣಖಂಡಃ ॥ ೩ ॥

ಅದೇ ವೇಳೆಗೆ ಅತಿ ಕಾವಿನಿಂದ ಹಾಲು ಉಕ್ಕಲು ಆ ಹಾಲಿನ ಲೋಭದಿಂದ ಯಶೋದೆಯು ಮಧುಮಥನನಾದ ಶ್ರೀಕೃಷ್ಣನನ್ನು ಅರಿಯದೇ

ಕೆಳಗೆ ಬಿಟ್ಟು ಹೋದಳು. ಶ್ರೀಹರಿಯಾದರೋ ಇವಳ ಲೋಭಕ್ಕೆ ಅನುಗುಣವಾದ ಫಲವನ್ನು ಉಣಿಸಬೇಕೆಂದು ಸಮೀಪದಲ್ಲಿದ್ದ ಸಣ್ಣ ಕಲ್ಲನ್ನು ತೆಗೆದು ಹಾಲಿನ ಗಡಿಗೆಯನ್ನು ಒಡೆದನು. (ನನ್ನ ಬಿಟ್ಟು ಅನ್ಯವಾದುದರಲ್ಲಿ ಮನಸ್ಸು ಮಾಡುವವರಿಗೆ ಆಗುವುದೇ ಇಂತಹ ಫಲ ಎಂಬುದನ್ನು ತಿಳಿಸಿದನು. ॥ ೩ ॥

ದದೌಬಿಡಾಲಾಯ ಜನನ್ಯದೃಷ್ಟಃ
ತದಾ ಸ್ವನೀತಂ ನವನೀತ ಜಾತಂ ॥
ಕ್ಷಿಣೋತಿ ನೂನಂ ಧನಲೋಭಭಾಜಾಂ
ಧನಾನ್ಯನರ್ಹತ್ಸ್ವತಿದಿಶ್ಯ ದೇವಃ ॥ ೪ ॥

ಸರ್ವದೇವನಾದ ನಾನು ಧನದಲ್ಲಿ ಲೋಭ ಮಾಡಿ ಧರ್ಮ ಬಾಹಿರರಾದವರ ಸಂಪತ್ತುಗಳನ್ನು ಅಯೋಗ್ಯರ ಪಾಲುಮಾಡಿ ಧನವನ್ನು ಕ್ಷೀಣಗೊಳಿಸುತ್ತೇನೆ ಎಂದು ತೋರುವುದಕ್ಕೋಸ್ಕರವೇ ತಾಯಿಗೆ ಕಾಣದಂತೆ .ಬೆಣ್ಣೆಯನ್ನು ಬೆಕ್ಕುಗಳಿಗೆ ಹಾಕತೊಡಗಿದನು. ॥ ೪ ॥

ವಿಚಾರಭಾರಾರ್ಪಿತ ಮಾನಸಾಥೋ
ವಿಮರ್ಶಲಭ್ಯಂ ತಮವೇಕ್ಷ್ಯ ಮಾತಾ ॥
ಅನುವ್ರಜಂತ್ಯಸ್ಸ್ಪೃಶದಪ್ಯಗಮ್ಯಂ
ಪರಾನು ಯಾತ್ರಾರ್ಜಿತ ಪುಣ್ಯ ಪಾತ್ರೀ ॥ ೫ ॥

ಯಶೋದೆಯು ಕೃಷ್ಣನು ಏನು ಮಾಡುತ್ತಿರುವನೆಂದು ಜ್ಞಾಪಿಸಿಕೊಂಡು ವಿಮರ್ಶಲಭ್ಯನಾದ ಪರಮಾತ್ಮನನ್ನು ಹುಡುಕಿ ನೋಡಲು ಕೃಷ್ಣನು ಭಯಪಡುವವನಂತೆ ಓಡಿದನು. ಯಶೋದೆಯು ಪರಮಾತ್ಮನನ್ನು ಅನುಸರಿಸಿದವಳಾಗಿ ಸದ್ಯಾತ್ರಾದಿ ತಪಸ್ಸಿನ ಫಲಭಾಗಿನಿಯಾದ್ದರಿಂದಲೇ ಅಗಮ್ಯನಾದ ಕೃಷ್ಣನನ್ನು ಹಿಡಿದಳು. ॥ ೫ ॥

ಯದೀಯನಾಮ ಸ್ಮರತಾಂ ಜನಾನಾಂ
ಬಿಭೇತ್ಯ ಸಹ್ಯೋಽಪಿ ಹಿ ದಂಡಪಾಣಿಃ ॥
ಅಭೀಷಯದ್ವಿಶ್ವಸೃಜಾಂ ಪ್ರಭುಂ ತಂ
ಗೃಹೀತದಂಡಾ ಕಿಲ ನಂದರಾಜ್ಞೀ ॥ ೬ ॥

ನಂದಪತ್ನಿಯಾದ ಯಶೋದೆಯು ಶ್ರೀಕೃಷ್ಣನನ್ನು ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ಕೋಲನ್ನು ಹಿಡಿದು ಅಂಜಿಸಿದಳು. ಯಾರ ನಾಮಸ್ಮರಣ ಮಾಡುವ ಭಕ್ತರಿಗೆ ಅಸ್ಯಾಸಹ್ಯನಾಗಿ ದಂಡಪಾಣಿಯಾದ ಯಮನೇ ಅಂಜುತ್ತಾನೆಯೋ ಅಂತಹ ಶ್ರೀಹರಿಯನ್ನು ವಿಶ್ವಸೃಜನೆಂದು ಅರಿಯದೇ ಮಗನೆಂದು ಭ್ರಮಿಸಿ ಅಂಜಿಸಿದಳು. ॥ ೬ ॥

ಅಜಾಂಡ ಕೋಟ್ಯಾಶ್ರಯ ರೋಮಕೂಪಂ
ತಮಾತ್ತ ಕೋಪಾ ಕಿಲ ನಂದಗೋಪೀ ॥
ಇಯೇಷ ಬದ್ಧುಂ ಕಿಲ ರೋಷರುದ್ಧಂ
ಮನೋನ ಮೀನಾತ್ಯಮರಾನು ಭಾವನ್ ॥ ೭ ॥

ನಂದನಪತ್ನಿಯಾದ ಯಶೋದೆಯು ಕೋಪಯುಕ್ತಳಾಗಿ ಯಾವನ ರೋಮ ಕೂಪದಲ್ಲಿ ಕೋಟ್ಯಾನುಕೋಟಿ ಬ್ರಹ್ಮಾಂಡಗಳೇ ಅಡಕಾಗಿದೆಯೋ ಅಂತಹ ಶ್ರೀಕೃಷ್ಣನನ್ನು ಕಟ್ಟಲು ಬಯಸಿದಳು. ರೋಷಾವಿಷ್ಟವಾದ ಮನಸ್ಸು ದೇವತೆಗಳ ಸಾಮರ್ಥ್ಯವನ್ನು ಅರಿಯುವದಿಲ್ಲವಷ್ಟೇ ? ॥ ೭ ॥

ಕೃತಾಗಸಂ ತಂ ಕಿಲನೈವ ಮಾತಾ
ಶಶಾಕಬದ್ಧುಂ ಮಮ ತು ಪ್ರತರ್ಕಃ ॥
ತದೀಯ ರಮ್ಯೋದರ ಮಧ್ಯಸಂಸ್ಥ
ವಿಮುಕ್ತಶಕ್ತ್ಯೈವ ನ ಬಂಧ ಆಸೀತ್ ॥ ೮ ॥

ಅಪರಾಧಿಯಾದ ಶ್ರೀ ಕೃಷ್ಣನನ್ನು ಕಟ್ಟಲು ಯಶೋದೆಯು ತಾಯಿಯೇ ಆಗಿದ್ದರೂ ಅಸಮರ್ಥಳೇ ಆದಳು. ಶ್ರೀಕೃಷ್ಣನ ರಮ್ಯ ಉದರದಲ್ಲಿ ಅನೇಕ ಮುಕ್ತರುಗಳು ಇರುವುದರಿಂದ ಅವರ ಶಕ್ತಿಯಿಂದಲೇ ಅವನನ್ನು ಕಟ್ಟುವುದು ಆಗಲಿಲ್ಲವೋ ಎಂದು ನಾನು ತರ್ಕಿಸುತ್ತೇನೆ. ॥ ೮ ॥

ಸಾಶಾಂ ಮುಹುಃ ಸ್ವಪ್ರಸುವಂ ವಿಧಾತು-
ಮೀಶತ್ವಮಪ್ಯಾತ್ಮಗತಂ ಮುಕುಂದಃ ॥
ಬಂಧಂ ರುಣದ್ಧಿ ಸ್ಮ ತದಾತ್ತದಾಮಾ
ಸಂದರ್ಶ ಮನ್ಸ್ವಾತ್ಮನಿ ಕಿಂಚಿದೂನಮ್ ॥ ೯ ॥

ಮೋಕ್ಷದಾಯಕನಾದ ಶ್ರೀಕೃಷ್ಣನು ತನ್ನ ತಾಯಿಗೆ "ನನ್ನ ಮಗನಾದುದರಿಂದ ಇನ್ನೊಂದು ಹಗ್ಗತಂದರೆ ಕಟ್ಟಿಬಿಡುತ್ತೇನೆಂಬ" ಆಶಯವನ್ನು ಬಲಪಡಿಸಲೇ ಎರಡು ಬೊಟ್ಟುಮಾತ್ರ ಕಡಿಮೆಯಾಗುವಂತೆ ಮಾಡಿದನು. ತನ್ನ ಸರ್ವೇಶ್ವರತ್ವವನ್ನು ತೋರುವವನಾಗಿ ಮತ್ತಿಷ್ಟುಹಗ್ಗಗಳು ತಂದರೂ ಎರೆಡೆರಡು ಬಟ್ಟು ಕಡಿಮೆಯೇ ಆಗಿಸಿ ತನ್ನ ಕಟ್ಟುವುದನ್ನು ತಡೆಗಟ್ಟಿದನು ॥ ೯ ॥

ಸುತೋ ನ ಮೇಯಂ ಹರಿರೇವ
ಸಾಕ್ಷಾದಿತಿ ಪ್ರಬೋಧೇಂಕುರಿತೇ ಪುರಂಧ್ರೀ ॥
ಬಬಂಧ ನಂದಸ್ಯ ಬಲಾನುಜಂ ತಂ
ಬುಧೈರ್ನಿಬದ್ಧಂ ಪ್ರಣಯಾಖ್ಯರಜ್ಜ್ವಾ ॥ ೧೦ ॥

(ಯಾವಾಗ ಕಟ್ಟುವುದು ಅಶಕ್ಯವೇ ಆಯಿತೋ ಆಗ ನಂದಪತ್ನಿಯಾದ ಯಶೋದೆಗೆ) 'ಇವನು ನನ್ನ ಮಗನಲ್ಲ; ಸರ್ವನಿಯಾಮಕನಾದ ಶ್ರೀಹರಿಯೇ ಎಂಬ ಜ್ಞಾನವು ಯಾವಾಗ ಅಂಕುರಿಸಿತೋ ಆಗೇ ಜ್ಞಾನಿಗಳ ಪ್ರಣಯ ಪಾಶಕ್ಕೆ (ಭಕ್ತಿಪಾಶಕ್ಕೆ) ಸ್ವೇಚ್ಛೆಯಿಂದ ಭದ್ದನಾಗುವ ಬಲಾನುಜನಾದ ಶ್ರೀಕೃಷ್ಣನನ್ನು ಸುಲಭವಾಗಿಯೇ ಕಟ್ಟಿದಳು. ||೧೦||

ಅಸಾಧ್ಯಭಾಗ ಸ್ಥಿತದುಗ್ಧಚೌರ್ಯೇ
ವಿಶಾರದಂ ತಂ ವಿನಿಬಧ್ಯಮಾತಾ
ಉಲೂಖಲಸ್ಯಾಪಿ ಬಬಂಧ ಮಧ್ಯಂ
ಸಹಾಯಭೂತಸ್ಯ ತದೀಯ ಕಾರ್ಯೇ ||೧೧||

ಅಸಾಧ್ಯ ಸ್ಥಳಗಳಲ್ಲಿ ಇಟ್ಟಿರುವ ಹಾಲು ಬೆಣ್ಣೆಗಳನ್ನು ಕಳವುಮಾಡುವುದರಲ್ಲಿ ಅತಿಚತುರನಾದ ಶ್ರೀ ಕೃಷ್ಣನನ್ನು ಯಶೋದೆಯು ಬಂಧಿಸಿ ಆ ಹಗ್ಗವನ್ನು ಒರಳಿಗೆ ಕಟ್ಟಿದಳು. ಅದು (ಹಾಗೆ ಕಟ್ಟಿಸಿಕೊಳ್ಳುವಿಕೆಯು) ಅವನ ಮುಂದಿನ ಕಾರ್ಯಕ್ಕೆ ಅನುಗುಣವೇ ಆಗಿದ್ದಿತು. ||೧೧||

ಅನಾಹಿ ಯಃ ಕಾರ್ಯವಶಾಜ್ಜನನ್ಯಾ ಶನೈರಸೌ ಸಾಕಮುಲೂಖಲೇನ ||
ವಿಧಾಯಪೃಷ್ಟಂ ಸ್ವಕಯೋರನಿಷ್ಟಮಭೀಪ್ಸಿತಂ ದಾತುಮಿವಪ್ರತಸ್ಥೇ||೧೨||

ಕಾರ್ಯಾಂತರಾಸಕ್ತಳಾದ ತಾಯಿಗೆ ತಿಳಿಯದಂತೆ ತನ್ನ ಹಿಂಬಾಲಿಸಿ ಬರುವ ಒರಳನ್ನು ಎಳೆದುಕೊಂಡು ತನ್ನ ಭಕ್ತರಾದ ನಳಕೂಬರ ಮಣಿಗ್ರೀವರುಗಳ ಅನಿಷ್ಟವನ್ನು ಕಳೆದು ಇಷ್ಟವನ್ನು ಕೊಡಲು ಅವರಿದ್ದ ಬಳಿಗೇ ಬಂದನು. ||೧೨||

ಅಸಜ್ಜನೇಷ್ವಾ ಚರಿತೋಗ್ರಶಿಕ್ಷಾಂ
ಸ್ವಭಕ್ತ ಪುಂಜೇಷು ಕೃತಾಂ ಚ ರಕ್ಷಾಂ ||
ನಭಸ್ಯಭೌಗಾತು ಮಥೋಚಿಕೀರ್ಷ-
ನ್ನಿಪಾಟಯಾಮಾಸ ಸ ಪಾದಪೌ ದ್ವೌ ||೧೩||

ಶ್ರೀಕೃಷ್ಣನು ತಾನು ಅಸಜ್ಜನರಲ್ಲಿ ಮಾಡಿದ ಉಗ್ರ ಶಿಕ್ಷೆಯು ಸಜ್ಜನರಲ್ಲಿ ಮಾಡಿದ ಅತಿಶ್ರೈತ ರಕ್ಷಣೆಯು ಇವೆರಡರನ್ನು ಸ್ವರ್ಗಾದಿಗಳಲ್ಲಿ ಗಾನಮಾಡಲು ಕಲಿಸಿಕೊಡಲೋ ಎಂಬಂತೆ ಎರಡು ಅರ್ಜುನ (ಮತ್ತೀ) ಮರಗಳನ್ನು ಕೆಡಹಿದನು. ||೧೩||

ಸ್ವಭೃತ್ಯ ಭೀಮಾನುಜಮದ್ವಿತೀಯಂ
ಪ್ರಿಯಂ ವಿಧಿತ್ಸುರ್ದಯಯೇವ ದೇವಃ ||

ಸ ಭೂರುಹಾವರ್ಜುನಸಂಜ್ಞಿತೌ ತೌ
ಬಭಂಜ ಕಂಜಾಯತ ಮಂಜು ನೇತ್ರಃ ॥೧೪॥

ನನ್ನ ಭೃತ್ಯಾತಿಶಯನಾದ ಭೀಮಸೇನನ ಅನುಜನಾದ ಅರ್ಜುನನನು ಜಗತ್ತಿನಲ್ಲಿ ಅಸದೃಶನೆಂದು ಅನಿಸುವವನಿದ್ದೇನೆ. ಆದುದರಿಂದ ನಾಮದಿಂದಲೂ ಸದೃಶವಾದವು ಇರಬಾರದು ಎಂಬ ಧ್ಯೇಯದಿಂದಲೋ ಅರ್ಜುನ (ಮತ್ತೀ) ಎಂಬ ವೃಕ್ಷಗಳನ್ನು ಉರುಳಿಸಿದನು. ॥೧೪॥

ತದಂಗಬಂಧ ಪ್ರತಿಬಂಧ ಪುಣ್ಯ ಬಲೇನ ಸಿದ್ಧೌ ತತ ಉತ್ಥಿತೌ ದ್ವೌ ॥
ಪ್ರಶಂಸ್ಯ ವೃಂದಾವನ ವಲ್ಲಭಂ ತಂ ತದೇಯತುಸ್ತನ್ಮನಸೌ ಸ್ವಲೋಕಮ್ ॥೧೫॥

ಶ್ರೀಕೃಷ್ಣನು ತನ್ನ ಅಂಗದಲ್ಲಿ ಬದ್ಧವಾದ ಒರಳನ್ನು ಪ್ರತಿಬಂಧಿಸಿದ (ತಟಯುವಿಕೆಯ) ಪುಣ್ಯದಿಂದ ಬಿದ್ದ ಮರಗಳಿಂದ ಎದ್ದು ಸಿದ್ಧರಾದ ನಳಕೂಬರ ಮಣಿಗ್ರೀವರು ವೃಂದಾವನ ವಲ್ಲಭನಾದ ಶ್ರೀಕೃಷ್ಣನನ್ನು ಸ್ತೋತ್ರ ಮಾಡಿ ಅವನನ್ನೇ ಮನಸ್ಸಿನಲ್ಲಿ ಸ್ಮರಿಸುವವರಾಗಿಯೂ ಸ್ವರ್ಲೋಕವನ್ನು ಕುರಿತು ಹೊರಟುಹೋದರು. ॥೧೫॥

ಬೃಹದ್ವನೇ ಸ್ವಸ್ಯ ಹಿ ಸಂನಿಧಾನಾ-
ನ್ಮಹಾಪುರೀ ಸಾಮ್ಯಮುಪೇಯುಷೀತ್ಥಮ್ ॥
ವನಪ್ರಿಯೋಽಸೌ ಚಕಮೇ ರಮೇಶೋ
ಮನೋಜ್ಞವೃಂದಾವನ ಏವ ವಾಸಮ್ ॥೧೬॥

ಬೃಹದ್ವನವೆಂಬ ನಂದಗೋಪನ ಗೋಕುಲವು ತನ್ನ ವಾಸದಿಂದ ಅಗಾಧ ಸಂಪತ್ಪೂರ್ಣವಾದ, ದೊಡ್ಡ ಪಟ್ಟಣದ (ಅನಂತ ಶಯನಾದಿಗಳ) ಸಾಮ್ಯವನ್ನು ಹೊಂದುತ್ತಿರಲು ವನಪ್ರಿಯನಾದ ಶ್ರೀ ರಮೇಶನು ಅಲ್ಲಿಂದ ಅತಿಮನೋಹರ ವಾದ ವೃಂಧಾವನದಲ್ಲಿಯೇ ವಾಸಿಸಲು ಅಪೇಕ್ಷಿಸಿದನು. ॥೧೬॥

ವಿರೋಧಿದೈತೇಯ ಪರಾಭವೇನ
ಸ್ಥಿರೇಹ ನೋತ್ಥಾಸ್ಯತಿ ಬಂಧುತೇಯಮ್ ॥
ಇತಿಪ್ರಭುಃ ಸ್ವಪ್ರಿಯಸಾಧ್ವಸಾಯ
ವೃಕಾನನೇಕಾಂಶ್ಚ ಸಸರ್ಜ ರೋಮ್ಣಃ ॥೧೭॥

ನಂದಗೋಪನೇ ಮೊದಲಾದ ಬಂಧು ವರ್ಗವು, ಇಲ್ಲಿ ವಿರೋಧಿಗಳಾದ ಸಕಲ ದೈತ್ಯರಿಗೆ ಪರಾಭವವಾಗಿ, ನಿಷ್ಕಂಟಕವಾಗಿರುವುದು, ಎಂದು ಸ್ಥಿರರೇ ಆಗಿ (ಇಲ್ಲಿಂದ) ಹೊರಡುವುದಿಲ್ಲ, ಎಂದು ಪ್ರಭುವಾದ ಶ್ರೀ ಕೃಷ್ಣನು, ತನ್ನ

ಇಷ್ಟವನ್ನೇ ಸಾಧಿಸಲು ಬಂಧಗಳ ಭಯೋತ್ಪಾದನೆಗಾಗಿ ಬಂದು ರೋಮಕೂಪದಿಂದಲೇ ಅನೇಕ ರುಷ್ಟ ತೋಳಗಳನ್ನು ಸೃಷ್ಟಿಮಾಡಿದನು. ॥೧೭॥

ಇಹ ಸ್ವಕೀಯಾನ್ನಿಹತಾನ್ನಿಶಮ್ಯ
ನವಾಂ ವ್ರಜಸ್ಥಂ ಪ್ರತಿಯಾಂತಿ ದೈತ್ಯಾಃ ॥
ಸ ಇತ್ಥಮಾಲೋಚ್ಯ ವಿಭುಃ ಸ್ವಕೀಯಾನ್
ನ್ಯಯುಙ್ಕ್ತ ವೃಂದಾವನಮೇವ ಗಂತುಮ್ ॥೧೮॥

ಸ್ವಕೀಯರಾದ ಶಕಟ ತೃಣಾವರ್ತ ಪೂತನಾದಿಗಳು ಹತರಾದುದನ್ನು ನೋಡಿ ಯಾವ ದೈತ್ಯರೂ ಇಲ್ಲಿಗೆ ಬರುವುದಿಲ್ಲ ಎಂದೇ ಯೋಚಿಸಿ ಪ್ರಭುವಾದ ಶ್ರೀ ಕೃಷ್ಣನು ತನ್ನವರೆಲ್ಲರನ್ನು ವೃಂದಾವನಕ್ಕೆ ಹೊರಡಲು ಪ್ರೇರಿಸಿದನು. ॥೧೮॥

ಭಾರಾನ್ಸ್ವಾನಧಿರೋಪ್ಯ ಚಾರುಶಕಟಶ್ರೇಣ್ಯಾಮರಣ್ಯಾಲಯಾ
ಗೋಪಾ ಗೋಧನ ವೃದ್ಧಮುಗ್ಧಲಲನಾಬಾಲಾದಿಭಿಃ ಸಂಯುತಾಃ ॥
ವೀಣಾ ವೇಣು ಮೃದಂಗ ಶೃಂಗನಿನದೈಃ ಸಂಪೂರಿತಾಶಾಃ ಶನೈಃ
ರಾಮಃ ಶ್ರೀರಮಣಾಶ್ರಯಾಃ ಪ್ರತಿಯಯುರ್ವೃಂದಾವನಂ ಪಾವನಮ್ ॥೧೯॥

ಅರಣ್ಯವೇ ಆಲಯವಾಗಿವುಳ್ಳ ಗೋಪಾಲಕರುಗಳು ಸಾಲುಸಾಲಾದ ಸುಂದರಗಳಾದ ಬಂಡಿಗಳಲ್ಲಿ ತಮ್ಮ ತಮ್ಮ ಸಾಮಗ್ರಿಭಾರಗಳನ್ನು ಹೇರಿ (ಹೊರಿಸಿ) ಗೋಧನವೃದ್ಧರುಗಳು ಮುಗ್ಧಲಲನೆಯರು ಬಾಲಬಾಲಕಿಯರೊಂದಿಗೆ ಯುಕ್ತರಾಗಿ ವೀಣ ವೇಣು ಮೃದಂಗ ಶೃಂಗ ಪಣವ ಗೋಮುಖಾದಿ ಮಂಗಳ ವಾದ್ಯವೈಭವಗಳಿಂದ ದಿಕ್ಕುಗಳನ್ನೇ ತುಂಬಿಸುವವರಾಗಿ ಮೆಲ್ಲಮೆಲ್ಲಗೆ ಬಲರಾಮ, ರಮಾರಮಣನಾದ ಕೃಷ್ಣರ ಸಹಾಯವುಳ್ಳವರಾಗಿ ಪಾವನವಾದ ವೃಂದಾವನಕ್ಕೆ ಹೊರಟರು ॥೧೯॥

ಜೃಂಭಚ್ಚಂಪಕ ಗುಂಫಿತೋಚ್ಚ ಕಬರೀ ಭಾರಾಶ್ಚಲತ್ಕಂಚುಕಾಃ
ಸಿಂಜನ್ಮಂಜುಲಭೂರಿಭೂಷಣಧರಾ ಗೋಪ್ಯಃ ಸಮಾಪ್ಯ ಕ್ರಿಯಾಃ ॥
ಕೃಷ್ಣಸ್ಯಾದ್ಭುತಕರ್ಮ ರಾಮಚರಿತೈಃ ಸಾಕಂ ಜಗುಃ ಕೃತ್ಸ್ನಶಃ
ಸ್ವಾಭೀಷ್ಟಾಪ್ತ್ಯುಚಿತಸ್ಥಲೀಗತಿಮಿವ ಪ್ರೇಕ್ಷ್ಯ ಪ್ರಹೃಷ್ಟಾಃ ಪಥಿ ॥೨೦॥

ವಿಕಸಿತವಾದ ಚಂಪಕಾದಿ ಪುಷ್ಪಗಳ ಗುಂಪಿನಿಂದ ಅಲಂಕೃತವಾದ ಸ್ಥೂಲವಾದ ತುರುಬುಗಳ ಭಾರದಿಂದಲೂ, ಚಲಿಸುವ ಕಂಚುಕಗಳಿಂದಲೂ, ಧ್ವನಿಗರೆವ ಮಂಜುಳವಾದ ಪೈಂಜನವೇ ಮೊದಲಾದ ಬಹು ಆಭರಣಗಳಿಂದಲೂ, ಅಲಂಕೃತರಾದ ಗೋಪಿಕಾಸ್ತ್ರೀಯರುಗಳು ತಮ್ಮ ತಮ್ಮ ಕಾರ್ಯಗಳನ್ನು ತೀರ್ವ

ಮುಗಿಸಿಕೊಂಡವರಾಗಿ ಸ್ವಾಭಿಷ್ಟವನ್ನು ಹೊಂದಲು ಉಚಿತವಾದ ಸ್ಥಳವನ್ನೇ ಕುರಿತು ಹೊರಡಲು ಸಂತುಷ್ಟಮನಸ್ಕರಾಗಿ ಅದ್ಭುತಗಳಾದ ಬಲರಾಮ ಕೃಷ್ಣರ ಚರಿತೆಗಳನ್ನು ಗಾನಮಾಡುತ್ತಾ ಮಾರ್ಗದಲ್ಲಿ ಮುಂದೊರೆದರು. ॥ ೨೦ ॥

ಗವಾಂ ಖುರೈರ್ಗೋಪ ಪದೈರನೋಭಿಃ
ಸಮುತ್ಥಧೂಲೀ ಸವಿತುಃ ಕರೌಘಾನ್ ॥
ರುರೋಧ ದೂರೇ ಕಿಲತಾಂ ಸ್ವಮೂರ್ಧ್ನಿ
ಸ ಏವ ವೋಢುಂ ಧ್ರುವ ಮುನ್ನಿನಾಯ ॥ ೨೧ ॥

ಗೋವುಗಳ ಖುರಪುಟಗಳಿಂಲೂ ಬಂಡಿಗಳ ಗಾಲಿಗಳಿಂದಲೂ ಗೋಪಾಲಕರ ಪಾದಗಳಿಂದಲೂ ಎದ್ದ ಧೂಳಿಯು ಸೂರ್ಯನ ಕಿರಣವನ್ನೇ ತಡೆಗಟ್ಟಿದವು. ಸೂರ್ಯನೇ ಆ ಪವಿತ್ರವಾದ ಧೂಳಿಯನ್ನು ತನ್ನ ಶಿರಸ್ಸಿನಲ್ಲಿ ಧರಿಸಲು ತನ್ನ ಕೈಗಳಿಂದ ಎತ್ತಿಕೊಂಡನಷ್ಟೇ ! ॥ ೨೧ ॥

ಪುಷ್ಪೈರ್ವೃಕ್ಷಗಣಾ ಮನೋಜ್ಞವಚನೈಃ ಕೀರಾ ಸ್ವರೈಃ ಕೋಕಿಲಾಃ
ನೃತ್ತ್ಯೈಃ ಕೇಕಿವರಾ ಗಜಾಃ ಸ್ವಗತಿಭಿಃ ಶೈಲಾಃ ಸ್ರವನ್ನಿರ್ಝರೈಃ ॥
ಸುಚ್ಛಾಯೈರ್ಮಣಿಕುಟ್ಟಿಮಸ್ಥಲಚಯೈಃ ಸಾ ಭೂರ್ಮೃಗಾ ವೀಕ್ಷಣೈ
ಸ್ತದ್ವೃಂದಾವನ ಮಚ್ಯುತಾರ್ಹ ಭವನಂ ನೂನಂ ತದಾ ತೇನಿರೇ ॥ ೨೨ ॥

ವೃಕ್ಷಗಳು ಪುಷ್ಪಗಳಿಂದಲೂ, ಗಿಳಿಗಳೇ ಮೊದಲಾದ ಪಕ್ಷಿಗಳು ಮನೋಹರ ವಚನಗಳಿಂದಲೂ, ನವಿಲುಗಳು ನೃತ್ಯಗಳಿಂದಲೂ, ಕೋಕಿಲಗಳು ಸುಸ್ವರಗಳಿಂದಲೂ, ಗಜಗಳು ಸ್ವಗಮನಗಳಿಂದಲೂ, ಪರ್ವತಗಳು ನಿರ್ಝರೋದಕಗಳಿಂದಲೂ, ದೊಡ್ಡ ದೊಡ್ಡ ಮರಗಳು ನೆರಳುಗಳಿಂದಲೂ, ಭೂಮಿಯು ರತ್ನನಿಬದ್ಧ ಭೂಪ್ರದೇಶಗಳಿಂದಲೂ, ಮೃಗಗಳು ತಮ್ಮ ಸುಲಕ್ಷಣ ವೀಕ್ಷಣಗಳಿಂದಲೂ ಬೃಂದಾವನವನ್ನು ಶ್ರೀ ಅಚ್ಯುತನಿಗೆ ಅರ್ಹವಾದ ಭವನವನ್ನಾಗಿಯೇ ಮಾಡಿದವು. ॥ ೨೨ ॥

ಸ ಲಬ್ಧ ಜನ್ಮಾ ಮಧುರಾಖ್ಯ ಪುರ್ಯಾಂ
ವ್ರಜೇಭಿ ವೃದ್ಧಃ ಕತಿ ಚಿದ್ದಿನಾನಿ ॥
ಉಪೇತ್ಯ ವೃಂದಾವನ ಮೇಷ ಕೃಷ್ಣಃ
ತ್ರಿಧಾ ಮತಾಂ ದರ್ಶಯತೀವ ದೇವಃ ॥ ೨೩ ॥

ಶ್ರೀಕೃಷ್ಣನು ತಾನು ತ್ರಿಧಾಮನೆಂಬುದನ್ನು ಲೋಕಕ್ಕೆ ತಿಳಿಸಲೋಸುಗವೋ ಎಂಬಂತೆ ಮಥುರಾಪುರಿಯಲ್ಲಿ ಅವತರಿಸಿ ಕೆಲವು ದಿನಗಳು ಗೋಕುಲದಲ್ಲಿ ವಾಸಿಸದವನಾಗಿ ಅಲ್ಲಿಂದ ಬೃಂದಾವನಕ್ಕೆ ಬಂದನು. ॥ ೨೩ ॥

ಫಲೈಃ ಪ್ರಸೂನೈಃ ಪಯಸಾ ತೃಣೇನ
ವಿಧಾಯ ಗೋಗೋಪ ನಿಕಾಯರಕ್ಷಾಂ
ವನಂ ಸ್ವನಾಮಾನುಗುಣಂ ಬಭಾಜ
ಹರೌ ಪ್ರಸನ್ನೇ ಕಿಮಿಹಾಸ್ತ್ಯಸಾಧ್ಯಮ್   ॥ ೨೪ ॥

ಫಲ, ಪುಷ್ಪ, ಉದಕ, ತೃಣ ಇವುಗಳನ್ನು ಅನುಕೂಲಪಡಿಸಿ ಗೋವುಗಳ ಗೋಪಾಲಕರ ರಕ್ಷಣೆಯನ್ನು ಮಾಡಿ ವೃಂದಾವನವನ್ನು (ನಂದನಂದನ) ತನ್ನ ಹೆಸರಿಗೆ ಅನುಗಣವಾಗಿಯೇ ಮಾಡಿದನು. ಶ್ರೀ ಹರಿಯು ಪ್ರಸನ್ನನಾಗಲು ಅಸಾಧ್ಯವಾದುದಾವುದು ? ಯಾವುದೂ ಅಸಾಧ್ಯವಿರುವುದಿಲ್ಲ. ॥ ೨೪ ॥

ತತಃ ಸ ಗೋರೂಪಧರೈರ್ನಿಯುಧ್ಯಂ ಶ್ಚ ಚಾರಚಾರೂಪಲಮುತ್ಕ್ಷಿಪಂಶ್ಚ ॥
ಸಮಭ್ಯಸನ್ಪ್ರಾಗಿವ ವತ್ಸದೈತ್ಯರಣಂ ತಥೋತ್ಕ್ಷೇಪಣಮಸ್ಯ ತನ್ವಾಃ ॥ ೨೫ ॥

ವೃಂದಾವನ ಪ್ರವೇಶಾನಂತರ ಶ್ರೀ ಕೃಷ್ಣನು ಸಮಾನ ವಯಸ್ಕ ಸ್ನೇಹಿತ ರೊಂದಿಗೆ ಆಕಳು-ಕರವುಗಳ ಆಟವನ್ನು ಆಡುವವನಾಗಿ ಕರುಗಳಂತೆ ಆಗಿರುವ ಹುಡುಗರೊಂದಿಗೆ ಕುಸ್ತಿ ಆಡುತ್ತಾ ಮುಂದಾಗುವ ವತ್ಸಾಸುರನ ವಧೆಯ ರಣದ ಅಭ್ಯಾಸವೋ ಎಂಬಂತೆ ಹುಡುಗರನ್ನು ಮೇಲಕ್ಕೆತ್ತುತ್ತಾ ಕಲ್ಲುಗಳನ್ನು ಗಿಡಗಳ ಮೇಲೆ ವಗೆಯುತ್ತಾ ಆಟ ಆಡುವವನಾಗಿ ಸಂಚರಿಸಿದನು. ॥ ೨೫ ॥

ಪ್ಲವಂಗ್ಗವೇಷೈರನುಗೈಃ ಸಮೇತಃ
ಸ ಸೇತುಬಂಧಾದಿವಿಹಾರಶೀಲಃ ॥
ಚರನ್ನರಣ್ಯೇ ರಘುರಾಮ ರೂಪಂ
ಸ್ವಕೀಯ ಮಾಜ್ಞಾಪಯತಿ ಸ್ಮ ದೇವಃ   ॥ ೨೬ ॥

ಕಪಿಗಳ ವೇಷವನ್ನೇ ಧರಿಸಿ ಆಟಾಡುತ್ತಿರುವ ಸಮವಯಸ್ಕರಾದ ಸ್ನೇಹಿತ ರೊಂದಿಗೆ ಯಮುನಾ ತೀರದಲ್ಲಿ ಸಣ್ಣ ಸಣ್ಣ ಸೇತುಬಂಧನವೇ ಮೊದಲಾದ ಆಟ ಗಳನ್ನು ಆಡುವವನಾಗಿ ಹಿಂದಾದ ರಘುರಾಮನು ನಾನೇ ಎಂಬರ್ಥವನ್ನು ತೋರುವವನಾಗಿ ಅರಣ್ಯದಲ್ಲಿ ಸಂಚರಿಸಿದನು. ॥ ೨೬ ॥

ಸಹಾನುಗೈರ್ಗಾಃ ಕಿಲ ಚಾರಯನ್ತಂ
ಖಲೋಭ್ಯಗಾತ್ತಂ ಪಶುವೇಷಧಾರೀ ॥
ಅಹಂ ಮಹಾಂತಂ ಪ್ರತಿಯಾಸ್ಯತೋಸ್ಯ
ಪಶುತ್ವಮಾಜಾನಜಮೇವ ಮನೇ   ॥ ೨೭ ॥

ಸ್ನೇಹಿತರೊಂದಿಗೆ ಗೋವುಗಳನ್ನು ಚಾಲನಮಾಡುವ ಶ್ರೀ ಕೃಷ್ಣನ ಬಳಿಗೆ ಪಶುವೇಷವನ್ನು ಧರಿಸಿದ ವತ್ಸನೆಂಬ ದೈತ್ಯನು ಬಂದನು. ಅಗಾಧನಾದ ಪರ

ಮಾತ್ಮನಲ್ಲಿ ಕದನಕ್ಕೆ ಬರುವ ಆವನಿಗೆ ಪಶುತ್ವವು ಸಹಜವೇ ಎಂದು ನಾನು ತಿಳಿಯುತ್ತೇನೆ. ॥ ೨೭ ॥

ಅಲ್ಪವಾದ ಪಶುಗಳನ್ನು ಸಂಹರಿಸಲು ಮಹಾ ಹುಲಿಯು ಹೇಗೆ ಸಮರ್ಥವಾದುದೋ ಹಾಗೆ ಶ್ರೀಕೃಷ್ಣನು ವತ್ಸಾದಿ ದೈತ್ಯರ ಮಾರಕನಾಗಿ ಚರಿಸಿದನು ಎಂದು ಕೃಷ್ಣಚರಿತೆಯನ್ನು ಸೋಪಮಾನವಾಗಿ ಶಾರ್ದೂಲ ವಿಕ್ರೀಡಿತ ವೃತ್ತದಿಂದ ವರ್ಣಿಸುತ್ತಾ ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತ ವೃತ್ತದ ಲಕ್ಷಣದಲ್ಲಿರುವ (ಸೂರ್ಯಾಶ್ವೈಃ ಯದಿಮಃ ಸಜೌ ಸ ತತಗಾಃ ಶಾರ್ದೂಲವಿಕ್ರೀಡಿತಂ) ಮಗಣ ಸಗಣ ಜಗಣಾದಿಗಳಿಗೆ (ಅಮೃತಾನಂದೀಯೆ, ಶುಭದೋ ಮೋ ಭೂಮಿಮಯಃ ಸೋವಾಯುರ್ವ್ಯೋ ಜಯಪ್ರದಃ ಜಃಸೂರ್ಯೋರೋಗದಃ ಪ್ರೋಕ್ತಃ ಶನೈಃಶ್ವರ್ಯೋ ನಭಸ್ತುತ:) ಅಭಿಮಾನಿಗಳಾದ ಭೂದೇವಿಯೇ ಮೊದಲಾದ ದೇವತಾವಾಚಕ ಪದಗಳ ವಿನ್ಯಾಸದಿಂದ ವೃತ್ತಲಕ್ಷಣವನ್ನು ಸೂಚಿಸಿರುತ್ತಾರೆ. ॥ ೨೭ ॥

ತದ್ವೃಂದಾವನ ಭೂಗಣಂ ಪದರುಚಾ ಪ್ರಾಗಂಕಯನ್ಸೋಽಸಕೃತ್
ಪಶ್ಚಾತ್ತ ಮರುದ್ಗಣಂ ಚ ವರಯನ್ಸ್ಕುರ್ವನ್ನಿವಾಂತರ್ವನಂ ॥
ಸದ್ಭಾಸ್ವದ್ಗಣಶೋಭಿ ಲೇಖ ಶನಯೋಹೃದ್ವ್ಯೋಗಣೌ ಚಾಶ್ರಯನ್
ಲಕ್ಷ್ಮೀಶೋಽನುಕರೋತಿ ತತ್ರ ವಿಚರನ್ ಶಾರ್ದೂಲವಿಕ್ರೀಡಿತಮ್ ॥ ೨೮ ॥

(ದೊಡ್ಡಹುಲಿಯು ತನ್ನ ನಿರ್ಭಯವಾದ ಸಂಚಾರದಿಂದ ಅರಣ್ಯಭೂಪ್ರದೇಶವನ್ನೆಲ್ಲಾ ತನ್ನ ಪಾದ ಚಿನ್ಹೆಗಳಿಂದ ಚರ್ಚಿತವನ್ನಾಗಿಮಾಡಿ ನಂತರ ಯಥೇಚ್ಛವಾದ ಗಾಳಿಯನ್ನು ಸೇವಿಸಿ ವನಮಧ್ಯದಲ್ಲಿ ಸ್ವಪ್ರಭಾವದಿಂದ ಶೋಭಿಸಿ ಪೊದೆಯನ್ನು ಆಶ್ರಯಿಸಿ ಅನೇಕ ಪಶುಗಳನ್ನು ಸ್ವೇಚ್ಛಾ ನಾಶಗೊಳಿಸುವಂತೆ).

ಲಕ್ಷ್ಮೀಶನಾದ ಶ್ರೀಕೃಷ್ಣನು ಆ ವೃಂದಾವನ ಭೂಪ್ರದೇಶವನ್ನೆಲ್ಲಾ ತನ ಪಾದಗಳ ಚಿನ್ಹೆಗಳಿಂದ ಅಂಕಿತಗಳನ್ನಾಗಿಮಾಡಿ ಅಲ್ಲಿರುವ ಮಂದ ಮಾರುತವನ್ನು ಸೇವಿಸುತ್ತಾ ತನ್ನ ಕಾಂತಿಯಿಂದ ವನಮಧ್ಯಪ್ರದೇಶವನ್ನು ಶೋಭಿಸಿಸುವನಾಗಿ ದೇವತೆಗಳ ಮತ್ತು ಸ್ನೇಹಿತರುಗಳ ಹೃದಯಾಕಾಶದಲ್ಲಿ ಪ್ರಕಾಶಿಸುವವನಾಗಿ ವತ್ಸಾದಿ ದೈತ್ಯರ ವಧಾನುಗುಣವಾದ ಆಟಗಳನ್ನು ಅನುಕರಿಸುವವನಾಗಿ ಸಂಚರಿಸಿದನು. ॥ ೨೮ ॥

ಉದಕ್ಷಿಪತ್ತಂ ಹರಿರಾತ್ಮದೋರ್ಭ್ಯಾಂ
ಅಧಃ ಪಪಾತಾಶು ಸ ವತ್ಸ ದೈತ್ಯಃ ॥
ವ್ರಜಾಧಿನಾಥಸ್ಯ ಸಪಿಷ ಧರ್ನೋ
ಗೃಹೀತ ಮಾಯಸ್ಯ ಚ ತಸ್ಯ ಪಾತಃ ॥ ೨೯ ॥

ಶ್ರೀಕೃಷ್ಣನು ವತ್ಸಾಸುರನನ್ನು ತನ್ನ ಎರಡೂ ಕೈಗಳಿಂದ ಮೇಲಕ್ಕೆ ಎತ್ತಿ ಒಗೆದನು. ಆ ದೈತ್ಯನು ಕೆಳಗೆ ಬಿದ್ದು ಸತ್ತೇ ಹೋದನು. ಮಾಯಾವಿಯಾದ ಅವನನ್ನು ಕೆಡಹಿದುದು ಗೋನಾಥನಾದ ಶ್ರೀಹರಿಗೆ ಧರ್ಮವೇ ಸರಿ. ॥ ೨೯ ॥

ಸ ಪಾತಯಾಮಾಸ ಪತನ್ನಪಿತ್ಥ
ಫಲಾನಿ ಲೋಲದ್ದ್ರುಮಸಂಚಯೇಭ್ಯಃ ॥
ತಥಾಹಿ ಕೃಷ್ಣ ಪ್ರತಿಪಕ್ಷಿ ಪಕ್ಷಃ
ಕಥಂ ನ ಪಾತ್ಯೈಕ ಫಲಸ್ತದೈವ ॥ ೩೦ ॥

ವತ್ಸಾಸುರನು ಕೆಳಬೀಳುತ್ತಾ ಚಲಿಸುತ್ತಿರುವ ಬೆಲ್ಲದ ಮರ(ಬೇಳವಲ) ಗಳ ಗುಂಪಿನಿಂದ ಹಣ್ಣುಗಳನ್ನು ತಪತಪನೆ ಕೆಡಹುತ್ತಾ ಬಿದ್ದನು. ಅದು ಉಚಿತವೇ ಶ್ರೀಕೃಷ್ಣನ ಪ್ರತಿಪಕ್ಷಿಯ ಪಕ್ಷವನ್ನವಲಂಬಿಸಿದವನಿಗೆ ಹೇಗೆ ತಾನೆ ಪಾತ್ಯೈಕ ಫಲವಾಗದೇ ಇರುವುದು. ॥ ೩೦ ॥

ಅನ್ಯೋನ್ಯಾಶ್ರಿತರಾಗರಜ್ಜುವಿತತೆ ಸಂಸೃತ್ಯಭೇದ್ಯದ್ರುಮೇ
ಸಂಗೃಹ್ಯ ಪ್ರತಿಕಲ್ಪಮಬ್ಜಜಮುಖಾನ್ಭುಂಕ್ತೇಸುಪರ್ಣಾನಿಹ ॥
ತಂ ವಿಶ್ವಾದ್ಭುತ ಲುಬ್ಧಕಂ ದಿತಿಸುತಃ ಕೃತ್ವಾ ಬಕೋಭ್ಯಾಯಯೌ
ನೂನಂ ಮೀನತನುಂ ತಿಮಿಂಗಲಮಿವ ವ್ಯತ್ಯಸ್ತಬುದ್ಧಿರ್ಬಕಃ ॥೩೧॥

ಪರಸ್ಪರ ಅಭಿಮಾನವೆಂಬ ಹಗ್ಗದ ಬಲಿಯಿಂದ ಯುಕ್ತವಾಗಿ ವಿಸ್ತೃತವಾದ ಅಭೇದ್ಯವಾದ ಸಂಸಾರವೆಂಬ ವೃಕ್ಷದಲ್ಲಿ ಬ್ರಹ್ಮಾದಿ ಪಿಪೀಲಿಕಾಂತರಾದ ಜೀವರಾಶಿ ಎಂಬ ಪಕ್ಷಿಗಳನ್ನು ಪ್ರತಿಕಲ್ಪದಲ್ಲಿಯೂ ಸಂಗ್ರಹಿಸಿ ದೊಡ್ಡ ಬೇಡನಂತೇ (ಬೇಟೆಗಾರ) ಯಾವನೇ ನುಂಗಿಹಾಕುತ್ತಾನೆಯೋ, ಅಂತಹ ವಿಶ್ವಾದ್ಭುತನಾದ ಪರಮಾತ್ಮನು, ಮೀನಾಗಿದ್ದನು ಎಂಬುದನ್ನು, ಯಾರಿಂದಲೋ ಕೇಳಿ (ಹಾಗಾದರೆ) ಸುಲಭನೆಂದು ಭ್ರಾಂತಿಗೊಂಡ ದಿತಿ ಪುತ್ರನಾದ ಬಕನೆಂಬ ದೈತ್ಯನು. ಬಕಪಕ್ಷಿಯ ರೂಪವನ್ನೇ ಧರಿಸಿ ತಿಮಿಂಗಿಲದಂತಿರುವ ಶ್ರೀಕೃಷ್ಣನ ಬಳಿಗೆ ಬಂದನು. ॥ ೩೧ ॥

ಪಕ್ಷಿಯ ಸ್ವಭಾವವೇ ಕೊಕ್ಕನ್ನು ತೆರೆದು ಎರಡು ರೆಕ್ಕೆಗಳನ್ನು ಹೊಡೆಯುತ್ತಾ ಕಾಲುಗಳನ್ನು ಚಾಚಿ ಚಾಡಿಸುತ್ತಾ ಏರಿ ಹಾರಿ ಬರುವುದು. ಅದನ್ನು ಉತ್ಪ್ರೇಕ್ಷಿಸುತ್ತಾರೆ.

ಕೃಷ್ಣತ್ವನ್ನಾಮ ಜಿಹ್ವಾನ ಕಥಯತಿ ಮಮೇತ್ಯಾಸ್ಯ ಮಾದರ್ಶಯಸ್ತ್ವ
ಪಕ್ಷೌ ನೋ ಕೃಷ್ಣಪಕ್ಷಸ್ತ್ವಿತಿ ವಿಶದಯಿತುಂ ಪ್ರೋಕ್ಷಿಪನ್ನಂಘ್ರಿಯುಗ್ಮಮ್ ॥
ಪಶ್ಚಾದ್ಭಾಗೇ ವಿಧುನ್ವನ್ ಹರಿನಿಲಯಮಹೀ ಸಂಗಭೀತ್ಯೇಶಕೇಶಂ
ಮತ್ವಾವ್ಯೋಮಾಧ್ವನಾಸೌ ಯದುಕುಲತಿಲಕಂ ಸತ್ವರೋಽಭ್ಯಾಜಗಾಮ
॥ ೩೨ ॥

ಹೇ ಕೃಷ್ಣಾ ನನ್ನ ನಾಲಿಗೆಯು ಎಂದೆಂದಿಗೂ ನಿನ್ನ ನಾಮವನ್ನು ಉಚ್ಚರಿಸಿರುವುದಿಲ್ಲ ಎಂದು ತೋರಿಸುವಂತೆ ಬಾಯಿತೆಗೆದು ತೋರಿಸುವವನಾಗಿ ಎಂದೆಂದಿಗೂ ನಾನು ನಿನ್ನ ಪಕ್ಷದವನಲ್ಲ (ಕೃಷ್ಣವರ್ಣ)ವೆಂಬುದನ್ನು ತಿಳಿಸುವವನಂತೆ ಬಿಳಿಯಾದ ರೆಕ್ಕೆಗಳನ್ನು ಹಾರಿಸುವವನಾಗಿ ಈ ಭೂಮಿಯು ಹರಿಸ್ಥಾನವೆಂದು ಅದರ ಸಂಗಭಯದಿಂದ ಕಾಲುಗಳನ್ನು ಚಾಚಿಸುತ್ತಾ ಆಕಾಶವು ಶಿವಸ್ಥಾನವೆಂದು ಅರಿತು ಆಕಾಶ ಮಾರ್ಗದಿಂದಲೇ ಬಹು ವೇಗವಾಗಿ ಯದುಕುಲ ತಿಲಕನಾದ ಶ್ರೀಕೃಷ್ಣನ ಬಳಿಗೆ ಬಂದನು. ॥ ೩೨ ॥

ಹರಿಂ ಪ್ರಜಗ್ರಾಸ ತತಃ ಖಲೋಽಸೌ
ರುರೋಧ ಕಂಠಶ್ವಸನಂ ಜ್ವಲನ್ ಸಃ ॥
ಪುನಶ್ಚ ಚಚ್ಛರ್ದ ಸ ಏವ ನೂನಂ
ನಿರಸ್ತ್ರಮಿದಸ್ಯ ಹೃದೋಽಘಪೂರ್ಣಾತ್ ॥ ೩೩ ॥

ಖಳನಾದ ಆ ಬಕಾಸುರನು ಶ್ರೀಕೃಷ್ಣನನ್ನು ಹಿಡಿದು ನುಂಗೇ ಬಿಟ್ಟನು. ಶ್ರೀಕೃಷ್ಣನು ಶ್ವಾಸದೊಂದಿಗೆ ಕಂಠವನ್ನು ಸುಡುವವನಾಗಿ ತಡೆದನು. ಪುನಃ ಉಗುಳುವ ಮುಖದಿಂದ ಹೊರಬಂದನು. ಪಾಪಿಯ ದೇಹವೆಲ್ಲಾ ಪಾಪದಿಂದಲೇ ಪೂರ್ಣವಾಗಿರುವುದರಿಂದ ಶ್ರೀಕೃಷ್ಣನು ಹೊರಗೆ ಬಂದನೆಂದು ತಿಳಿಯುತ್ತೇನೆ. ॥ ೩೩ ॥

ಪ್ರಾಗ್ಬಾಲಗ್ರಹರೂಪಿಣೀಂ ಸ ಶಕಟೇ ಸಂಕಲ್ಪ್ಯ ರಜ್ಜುಗ್ರಹಾಂ
ತದ್ವಾಹಾನ್ಖರ ಕೇಶಿವತ್ಸ ವೃಷಭಾನ್ನಿಃ ಶೇಷ ದೈತ್ಯಾಸುವತ್ ॥
ಸಂಯೋಜ್ಯಾನಿಲ ರೂಪದೈತ್ಯಮಘುನಾ ತಚ್ಚಿಹ್ನಮತ್ಯದ್ಭುತಂ
ಕೃಷ್ಣಃ ಪ್ರೇಷಯತೀವ ಹಸ್ತಗಬಕೋ ಗಾಢಃ ತಮಃ ಪ್ರಾಪಯನ್ ॥೩೪॥

ಶಕಟಾಸುರನೆಂಬ ಬಂಡಿಯಲ್ಲಿ ಬಾಲಗ್ರಹರೂಪಿಯಾದ ಪೂತನೆಯನ್ನು ಮೊದಲು ಹಗ್ಗಾದಿಗಳ ಯೋಜಕಳನ್ನಾಗಿ ಸಂಕಲ್ಪಿಸಿ ಖರ ಅಶ್ವರೂಪಿಯಾದ ಕೇಶಿ ವೃಷಭ ವತ್ಸಾದಿ ದೈತ್ಯರನ್ನು ಹೂಡಿ (ಭಂಡಿಗೆ ಎಳೆವ ಪಶುಗಳನ್ನು ಮಾಡಿ) ತೃಣಾವರ್ತನನ್ನು ಸಾರಥಿ (ಬಂಡಿ ಹೊಡೆಯುವವನು)ಯನ್ನಾಗಿಯೂ ಮಾಡಿ ಅನೇಕ ದೈತ್ಯರುಗಳನ್ನು ತುಂಬಿ ಗಾಢ ತಮಸ್ಸಿಗೆ ಕಳಿಸುವ ಈ ಬಂಡಿಗೆ ಅದ್ಭುತವಾದ ಬಕಪಕ್ಷಿಯನ್ನು ಬಾವುಟವಾಗಿ ಮಾಡಿ ಕಳಿಸಿಕೊಡಲೋಸುಗವೇ ಶ್ರೀಕೃಷ್ಣನು ಈ ಬಕವನ್ನು ಕೈಯಲ್ಲಿ ಹಿಡಿದನು. ॥ ೩೪ ॥

ಪತತ್ರಿಣಂ ತಂ ಪರಿಗೃಹ್ಯ ದೋರ್ಭ್ಯಾಂ
ವಿಭಿದ್ಯತುಂಡಂ ವಿನಿಪಾತ್ಯಭೂಮೌ
ಸಯಾತನಾ ಮೀನಭುಜಂ ವಿಧಾತು
ಮಯೋಜಯನ್ನಾರಕ ವಾಪಿಕಾಸು ॥ ೩೫ ॥

ಆ ಬಕಪಕ್ಷಿಯಾದ ದೈತ್ಯನ ಕೊಕ್ಕುಗಳನ್ನು ಹಿಡಿದು ಎರಡು ಕೈಗಳಿಂದ ಸೀಳಿ ಭೂಮಿಯಲ್ಲಿ ಕಡುಹಿ ನರಕಗಳೆಂಬ ಭಾವಿಗಳಲ್ಲಿರುವ ಯಾತನೆಗಳೆಂಬ ಮೀನುಗಳನ್ನು ತಿನ್ನಲು ತಳ್ಳಿದನು. ॥ ೩೫ ॥

ಬಕಾಸುರನ ವಧಾನಂತರ ಕಾವ್ಯಲಕ್ಷಣಾನುಗುಣವಾಗಿ ಶ್ರೀಕೃಷ್ಣ ಮಹಿಮಾ ವರ್ಣನಾಂಗವಾಗಿ ವಸಂತಋತುವನ್ನು ವಿಚಿತ್ರಾರ್ಥಗರ್ಭಿತ ಉಪಮಾಲಂಕಾರಾದಿ ಶ್ಲೋಕಗಳಿಂದ ವರ್ಣಿಸುತ್ತಾರೆ.

ತತಃ ಸ ಪಶ್ಯನ್ಸರಿತೋ ವಸಂತ
ಶ್ರಿಯಂ ಮರುನ್ಮರ್ದಿತಘರ್ಮಬಿಂದುಃ ॥
ಚಚಾರ ಚಾಮೀಕರ ಚಾರುವಾಸಾಃ
ಪ್ರಸೂನ ಮೃದ್ವಂಘ್ರಿತಲೋಂಬುಜಾಕ್ಷಃ ॥ ೩೬ ॥

ಹೂವಿನಂತೆ ಮೃದುವಾದ ಅಂಗಾಲು ಅಂಗೈಗಳು ಕಮಲದಳದಂತೆ ಶೋಭಿಪ ಚಕ್ಷುದ್ವಂದ್ವಗಳಿಂದಲೂ ಸುಂದರನಾದ ಶ್ರೀಕೃಷ್ಣನು ಮಂದಮಾರುತದಿಂದ ತಡೆಯಲ್ಪಟ್ಟ ಸ್ವೇದೋದಕ ಉಳ್ಳವನಾಗಿ ಸುತ್ತಲೂ ಹರಡಿ ಶೋಭಿಪ ವಸಂತ ಸಂಪತ್ತನ್ನು ನೋಡಿ ಭಂಗಾರದಿಂದ ಮನೋಹರವಾದ ಪೀತಾಂಬರಗಳಿಂದ ಅಲಂಕೃತನಾಗಿ ಸಂಚರಿಸಿದನು. ॥ ೩೬ ॥

ಬರ್ಹಾಕ್ಷೀಂ ಪ್ರಸವಾನನಾ ಮಲಿಕುಲೋತ್ಫುಲ್ಲಾಲಕಾಂ ಪಲ್ಲವ
ಪ್ರಾಂತಸ್ಕಂಧಭುಜಾಂ ಲತಾಮೃದುತನುಂ ರಕ್ತಾಂಬರಾರಂಜಿತಾಂ ॥
ಮಾದ್ಯತ್ಕೋಕಿಲಸುಸ್ವನಾಂ ಶುಕವಚಶ್ಚಾಟುಂ ಪಲಾಶಾಧರಾಂ
ಶಕ್ತೋಽಭೂದ್ವನದೇವತಾಂ ಋತುಮತಿ ಮುಪ್ಯುಜ್ಝಿತುಂ ನೋಹರಿಃ ॥೩೭॥

ಶ್ರೀ ಕೃಷ್ಣನು ನವಿಲುಗರಿಗಳೆಂಬ ಕಣ್ಣುಗಳುಳ್ಳ, ಭ್ರಮರಗಳ (ದುಂಬಿಗಳ) ಸಾಲುಗಳೆಂಬ ಹುಬ್ಬುಗಳಿಂದ ಅಲಂಕೃತಳಾದ ಅರಳಿದ ಪುಷ್ಪಗಳೆಂಬ ಮುಖವುಳ್ಳ ಚಿಗುರುಗಳಿಂದ ಕೂಡಿದ ಟೊಂಗೆಗಳೆಂಬ ಭುಜವುಳ್ಳ ಬಳ್ಳಿಗಳೆಂಬ ತನು ಮಧ್ಯತೆವುಳ್ಳ ಸಂಜೆಯ ಕೆಂದಿಮೆ ಎಂಬ ವಸನವುಳ್ಳ ಕೋಕಿಲೆಗಳ ಕಿಲಕಿಲಧ್ವನಿಗಳೆಂಬ ಸುಸ್ವರವುಳ್ಳ ಗಿಳಿಗಳ ವಚನಗಳೆಂಬ ಚಾಟೂಕ್ತಿಗಳುಳ್ಳ ಕೇಪು ಚಿಗುರೆಲೆಗಳೆಂಬ ತುಟಿವುಳ್ಳ ವನದೇವತೆಯನ್ನು ಋತುಮತಿಯಾದರೂ (ವಸಂತಋತು) ಬಿಡಲು ಶಕ್ತನಾಗಲಿಲ್ಲ. ॥ ೩೭ ॥

ಈ ಶ್ಲೋಕದಲ್ಲಿ ವನಸೊಬಗಾದ ವಸ್ತುಗಳನ್ನು ಅವಯವ ಪ್ರತಿನಿಧಿಯಾಗಿ ವರ್ಣಿಸಿದರೇ ಋತುಪರವಾಗಿಯೂ ಅವುಗಳೇ ದೃಷ್ಟಾಂತವಾಗಿ ವರ್ಣಿಸಿದರೇ ಸುಂದರ ಸ್ತ್ರೀಪರವಾಗಿಯೂ ರಮಣೀಯವಾಗಿ ಚಿತ್ರಿಸಿರುತ್ತಾರೆ. ಋತುಕಾಲವು

ನಿಷೇಧಸೂಚವಾದರೂ ಅಚ್ಯುತನಿಗೆ ಸದಾ ಸರ್ವವೂ ಸೇವ್ಯಕಾಲವೇ ಎಂಬುದನ್ನು ಸೂಚಿಸುತ್ತಾರೆ. ಮೇಲಿನ ಅರ್ಥದಲ್ಲಿ "ಎಂಬ" ಅನ್ನುವ ಸ್ಥಳದಲ್ಲಿ "ಯಂತಿ" ಎಂದು ಉಚ್ಚರಿಸಿದರೆ ಸ್ತ್ರೀಪರತ್ವವು (ಋತು) ಸ್ಪಷ್ಟವಾಗುತ್ತಿದೆ.

ಸಜಲಸೀಕರ ದಕ್ಷಿಣವಾಯುನಾ ಕುಸುಮಸಂಚಯ ಕಂಪನಚುಂಚುನಾ ||
ವ್ಯಜಪಾಣಿತಲೇವ ತಮುನ್ಸ್ವಗಾತ್ ವನರಮಾನರಮಾನಸ ಮಂಡನಮ್||೩೮||

ವನಲಕ್ಷ್ಮಿಯು (ವಸಂತ ಋತುವಿನಿಂದ ಯುಕ್ತಳಾಗಿ) ಕುಸುಮಗಳ ಗುಂಪುಗಳನ್ನೇ ಚಲಿಸಿಸುವುದರ ಪರಿಮಳದಿಂದ ಮನೋಹಾರವಾದ ಜಲತುಂತುರುಗಳಿಂದಲೂ ಕೂಡಿದ ಮಲಯವಾಯು ಎಂಬ ಬೀಸಣಿಕೆಯಿಂದ ಲಕ್ಷ್ಮೀದೇವಿಯಂತೆ ಮಾನವರ ಮನಸ್ಸಿಗೆ ಹರ್ಷವರ್ಧಕನಾದ ಶ್ರೀ ಕೃಷ್ಣನನ್ನು ಸೇವಿಸಿದಳು. || ೩೮ ||

ಪರಿಲಸತ್ಸಹಕಾರನವಾಂಕುರೇ ಪಿಕಗಣಃ ಶುಶುಭೇ ಶನಕೈರ್ಧ್ವನನ್ ||
ಸ್ಮರರಹಸ್ಯಮನೂನಿವಸಂಜಪನ್ ಅಖಿಲದರ್ಪಕದರ್ಪಕಸಾಯ ಕೇ ||೩೯||

ಎಲ್ಲರ ಮೇಲೂ ದರ್ಪತೋರುವ ಕಂದರ್ಪನ ಬಾಣದಂತಿರುವ ಕಸೀ ಮಾವಿನ ಚಿಗರುಗಳಲ್ಲಿ ಕೋಕಿಲಗಳು ಧ್ವನಿಮಾಡುವವುಗಳಾಗಿ ಮನ್ಮಥನ ಗೋಪ್ಯ ಮಂತ್ರಗಳನ್ನು ಜಪಿಸುವವುಗಳೋ ಎಂಬಂತೆ ಶೋಭಿಸುತ್ತಿದ್ದವು || ೩೯ ||

ಕುಸುಮ ಚುಂಬನಕೃನ್ಮಧುರ ಧ್ವನಿಃ
ಪ್ರಿಯಜನಾನಿತಿ ಶಿಕ್ಷತಿ ಷಟ್‌ಪದಃ ||
ಮೃದುಗಿರಾಬ್ಜಮುಖೀ ಸರಸಾಧರಂ
ಪಿಬತ ಮಾಬತ ಮಾನ ಇಹೋಚಿತಃ || ೪೦ ||

ಅರಳಿದ ಪುಷ್ಪಗಳನ್ನು ಚುಂಬಿಸುವ ಭ್ರಮರಗಳ ಧ್ವನಿಯು, ಕೋಮಲವಾದ ಸವಿನುಡಿಗಳಿಂದ ಕಮಲಮುಖಿಯರ ರಸಪೂರ್ಣವಾದ ಅಧರಾಮೃತವನ್ನು ಪಾನಮಾಡಿರಿ. ಇಂಥಾ ಕಾಲದಲ್ಲಿ ಈ ವಿಷಯದಲ್ಲಿ ಮಾನವು ಉಚಿತವಲ್ಲ ಎಂದು ಭ್ರಮರಗಳು ಪ್ರಿಯಜನರಿಗೆ ಶಿಕ್ಷಿಸುವಂತಿದ್ದಿತು. || ೪೦ ||

ಮರುತಿ ವಾತಿ ಶುಚಾ ಪಥಿಕಾಂಗನಾಃ
ನಯನವಾರಿ ಯಯೋಜ ಪಥಿಸ್ಪೃಶನ್ ||
ಅಮುಮನ್ವೈತು ಪತಿರ್ಮಮ ವೇದನಾಂ
ಅಲಿಕುಲಾಲಿ ಕುಲಾಭ್ಯುದಿತಾಮಿತಿ || ೪೧ ||

ಮಾರ್ಗಸ್ಥರ ಅಂಗನೆಯರು ಭ್ರಮರ ಸಮುದಾಯದಿಂದ ಉತ್ಪನ್ನವಾದ ತಮ್ಮ ತಮ್ಮ ಮನ್ಮಥ ವೇದನೆಯನ್ನು ನಮ್ಮ ಪತಿಗಳೂ ಈದ್ವಾರಾ ತಿಳಿಯಲಿ ಎಂದು ಬೀಸುತ್ತಿರುವ ಗಾಳಿಯಲ್ಲಿ ತಮ್ಮ ನೇತ್ರ ಜಲಗಳನ್ನು ಯೋಜಿಸಿದರು ॥೪೧॥

ಎರಡು ಶ್ಲೋಕಗಳಿಂದ ಬಾಹ್ಯ ಅಂತಃಸುರತ ಶೃಂಗಾರವನ್ನು ವರ್ಣಿಸುತ್ತಾರೆ.

ಮಧುನಿಯುಕ್ತ ಭುಜಂಗ ಚಯಸ್ತನೇ
ರಹಸಿ ನೂತ್ನಶಿವಂ ರಚಯನ್ನಿವ ॥
ನಖಪ ನೇಂದುಕಲಾಂ ವಸನಚ್ಯುತಿಂ
ವಿತನುತೇಽತನು ತೇಜಸಿಯೋಷಿತಾಂ ॥ ೪೨ ॥

ಭ್ರಮರಗಳಿಂದ ಶಿಕ್ಷಿತರಾದ ವಿಟಪರ ಗುಂಪು (ನಮ್ಮ ಮನ್ಮಥನನ್ನು ಕೊಂದ ಈ ಶಿವನೇ ನಮಗೆ ಬೇಡ ನಮ್ಮ ಪೂಜಾರ್ಹನಾದ) ಮತ್ತೊಬ್ಬ ಶಿವನನ್ನು ರಹಸ್ಯವಾಗಿ ನಿರ್ಮಾಣ ಮಾಡುವವರಂತೆ ಸ್ತ್ರೀಯರ ಸ್ಥೂಲ ಸ್ತನ ಚಂಚುಗಳ ಮೇಲೆ ಉಗುರನ್ನು ಒತ್ತಿ ಚಂದ್ರಕಲೆಯನ್ನು, ನಿರ್ವಸನತೆಯಿಂದ ದಿಗಂಬರತೆಯನ್ನು ॥ ೪೨ ॥

ಮೃಗಮದೇನ ಸಿತೇತರ ಕಂಠತಾಂ
ಕರಯುಗಾಂಬುಜ ವೇಷ್ಟಿತ ಮೂರ್ಧತಾಂ ॥
ಹೃದಯ ಮಂದಿರತಾಂ ಸಮದೃಶ್ಯತಾಂ
ರುಚಿರತಾಂ ಚಿರತಾಂತ ಮುಖೈಃ ಸ್ವಕೈಃ ॥ ೪೩ ॥

ಸುತ್ತಲೂ ಕಸ್ತೂರಿಯೇ ಮೊದಲಾದ ಲೇಪನಗಳಿಂದ ನೀಲಕಂಠತೆಯನ್ನು (ಈಶ್ವರನು ಮನೋಭಿಮಾನಿಯಾಗಿ ಹೃದಯವಾಸಿಯಾದ್ದರಿಂದ) ಆಲಿಂಗನದಿಂದ ಹೃದಯವಾಸಿತ್ವವನ್ನು ತಮ್ಮ ಹಸ್ತಗಳ ವಿನ್ಯಾಸದಿಂದ (ಇಡುವಿಕೆಯಿಂದ) ಕಮಲ ಪುಷ್ಪ ಪೂಜೆಯನ್ನು ತಮ್ಮ ಸುರತಶ್ರಾಂತ ಮುಖದಿಂದ ಭಾವುಕತೆಯನ್ನು ತೋರಿಸಿದರು. ॥ ೪೩ ॥

ಮದನವಹ್ನಿಸಖಃ ಪ್ರಿಯಸೀತಲಃ
ಕುಸುಮಗಂಧವಹಃ ಕಿಲ ಸೇವ್ಯತೇ ॥
ಮರುದುಪಾರತ ಮನ್ಮಥ ಸಂಗರೈಃ
ಸಪರಿತಃ ಪರಿತಪ್ತಮುಖೈರ್ನರೈಃ ॥ ೪೪ ॥

ಮನ್ಮಥನೆಂಬ ಅಗ್ನಿಗೆ ಮಿತ್ರವಾದ, ಪ್ರಿಯಕರವಾಗಿಯೂ ಶೀತಲವಾಗಿಯೂ ಇರುವ ಕುಸುಮ ಪರಿಮಳವನ್ನು ಹೊತ್ತು ಬರುವ ಗಾಳಿಯು, ವಿಶೇಷವಾಗಿ ಮನ್ಮಥಸಂಗರದಲ್ಲಿ ಶ್ರಾಂತಮುಖವುಳ್ಳ ಮನುಷ್ಯರುಗಳಿಂದ ಸೇವಿಸಲ್ಪಡುವದಷ್ಟೇ ॥೪೪॥

ದಾಕ್ಷಿಣ್ಯಂ ಪ್ರಕಟೀಕರೋತಿ ಮರುತಾ ರಾಗಂ ಪ್ರವಾಲೈಃ ಪಿಕೈಃ-
ಮಾರ್ಧುರ್ಯಂ ಪ್ರಿಯಭಾಷಣಂ ಶುಕಚಯೈಃ ಗೀತಾನಿ ಭೃಂಗೈರ್ಮಧುಃ ॥
ಸ್ನಾನಂ ಸನ್ಮಧುನಾರ್ಚನಂ ಚ ಕುಸುಮೈಃ ಛತ್ರಂ ತರುಚ್ಛಾಯಯಾ
ಸ್ವಾಧೀಶಂ ಜನಯಿಷ್ಯತೋಸ್ಯ ಹೃದಯಂ ವ್ಯಗ್ರಂ ವಿಧಾಸ್ಯನ್ನಿವ ॥ ೪೫ ॥

ವಸಂತನು(ಋತುವು) ಮಲಯ ಮಾರುತದಿಂದ ಸರಳವಾದ ಅನುಸರಣತೆಯನ್ನೂ, ಚಿಗರುಗಳಿಂದ ಅನುರಾಗವನ್ನೂ, ಕೋಕಿಲಗಳಿಂದಾ ಮಾಧುರ್ಯವನ್ನೂ, ಗಿಳಿಗಳಿಂದಾ ಪ್ರಿಯಭಾಷಣವನ್ನೂ, ಭ್ರಮರಗಳಿಂದಾ ಗೀತೆಯನ್ನೂ, ಸಮೀಚಿನವಾದ ಮಧುವಿನಿಂದಾ ಸ್ನಾನವನ್ನೂ, ಪುಷ್ಪಗಳಿಂದಾ ಪೂಜೆಯನ್ನೂ, ಗಿಡಗಳ ನೆರಳಿನಿಂದಾ ಛತ್ರಿಯನ್ನೂ ಪ್ರಕಟಿಸುವವನಾಗಿ ತನ್ನ ಸ್ವಾಮಿಯಾದ ಮನ್ಮಥನನ್ನು ಹುಟ್ಟಿಸುವ ಶ್ರೀಕೃಷ್ಣನಿಗೆ ಮನೋವ್ಯಗ್ರತೆಯನ್ನು (ಕಾಮೋದ್ರೇಕವನ್ನು) ಉಂಟುಮಾಡುವವನಂತೆ ಸೇವಿಸಿದನು. ॥ ೪೫ ॥

ವಸಂತಕಾಲೇವನಿತಾಸಹಾಯಂ ಲಷಂತಿಮರ್ತ್ಯಾ ಇತಿಕಿಂವಿಚಿತ್ರಂ ॥
ಯತಃ ಸರಾಗಾಸ್ತರವೋಪಿತನ್ವೀಃ ಲತಾನವಾತಾಚ್ಚಲಿತಾಸ್ತ್ಯಜಂತಿ ॥ ೪೬ ॥

ವಸಂತಕಾಲದಲ್ಲಿ ಪುರುಷಮಾತ್ರರು ಸ್ತ್ರೀಯರನ್ನು ಬಯಸುತ್ತಾರೆಂಬುದು ಏನು ಆಶ್ಚರ್ಯವು. ಸ್ಥಾವರಗಳಾದ ಮರಗಳೇ ಗಾಳಿಯಿಂದ ಚಲಿಸಿದರೂ ಬಿಡದೇ ಕೋಮಲವಾದ ಬಳ್ಳಿಗಳನ್ನು ಸುತ್ತಕಟ್ಟಿಕೊಂಡಿರುತ್ತವೆ ಎಂದಮೇಲೆ ॥ ೪೬ ॥

ಅಧರಪಾಣಿಪದೂರ್ಜಿತಪಲ್ಲವೋ
ಮಧುರವೇಣುರವಃ ಕಲಭಾಷಣಃ ॥
ವದನಗಂಧವಹಶ್ವಸನೋ ಜಯತ್
ಸಕುಸುಮಃ ಕುಸುಮಾಕರಮಚ್ಯುತಃ ॥ ೪೭ ॥

ಅಚ್ಯುತನಾದ ಶ್ರೀ ಕೃಷ್ಣನು ತನ್ನ ತುಟಿ ಅಂಗಾಲು ಅಂಗೈಗಳ ಕೆಂದಿಮದಿಂದ, ಕೆಂಚಿಗುರುಗಳ ಕಾಂತಿಯನ್ನೂ ಕೊಳಲಿನ ಮಧುರಗಾನದಿಂದ, ಶುಕಪಿಕಗಳ ಗೀತೆಪ್ರಿಯಭಾಷಣಗಳನ್ನು, ತನ್ನ ಮುಖದ ಗಂಧವುಳ್ಳ ಶ್ವಾಸದಿಂದ, ಮಲಯ ಮಾರುತವನ್ನು ಅಲ್ಪೀಕರಿಸುವವನಾಗಿ ವಸಂತನನ್ನೇ ಜಯಸಿದನು. ॥ ೪೭ ॥

ವಿತತಪಲ್ಲವಫುಲ್ಲ ವನೇಕ್ವಚಿತ್ ತರುತಟೇ ವಸತೋಸ್ಯ ಪದಾಂಬುಜಂ
ಉಪಚಚಾರ ವರಾನುಗಮಂಡಲೀ ಭುಜಗತೋ ಜಗತೋಽಭಯಸಿದ್ಧಯೇ ॥ ೪೮ ॥

ವಿಶಾಲವಾಗಿಯೂ ಪಲ್ಲವಗಳಿಂದ ವಿಕಸಿತವಾಗಿಯೂ ಇರುವ ನವ ವನದ ಒಂದು ಮರದಕೆಳಗೆ ಕುಳಿತಿರುವ ಶ್ರೀ ಕೃಷ್ಣನ ಪಾದಾರವಿಂದಗಳ ಬಳಿಗೆ, ತನ್ನನ್ನು ಆಶ್ರಯಿಸಿರುವ ಗೋಪಾಲಕ ಬಾಲಕ ಮಂಡಲಿಯು, ಕಾಳಿಂಗನಾಮಕ ಸರ್ಪನಿಂದ ಅಭಯವನ್ನು ನಿವೇದಿಸಿಕೊಂಡರು. || ೪೮ ||

ಫಣಿಫಣಾಂಗನ ನರ್ತನಕೌಶಲಾ
ಭ್ಯಸನಧೀರಿವ ಸರ್ವ ವಿದಾಂ ವರಃ ||
ಸಶಿಖಿ ತಾಂಡವ ಮನ್ವಕರೊತ್ಕ್ವಚಿತ್
ಧೃತ ಶಿಖಂಡ ಶಿಖಂಡ ಸು ಮಂಡಿತಃ || ೪೯ ||

ಸರ್ವವನ್ನೂ ತಿಳಿದ ಶ್ರೇಷ್ಠರಿಗೆ ಶ್ರೇಷ್ಠನಾದ ಶ್ರೀಕೃಷ್ಣನು ಫಣಿಯ ಫಣವೆಂಬ (ಹಾವಿನ ಹೆಡೆ ಎಂಬ) ಅಂಗಳದಲ್ಲಿ ಮುಂದೆ ತನ್ನ ನರ್ತನ ಕೌಶಲ್ಯ ವನ್ನು ತೋರುವ ಉದ್ದೇಶ್ಯವೋ ಎಂಬಂತೆ ನವಿಲಿನ ಗರಿಗಳಿಂದ ಅಲಂಕೃತನಾಗಿ ಕಾಕಪಿಚ್ಛದಿಂದಲೂ ಸುಂದರತರನಾಗಿ ವದನಾರವಿಂದ ಸೌಂದರ್ಯಪೂರ್ಣನಾಗಿ ನವಿಲಿನಂತೇ ನರ್ತಿಸಿದನು. || ೪೯ ||

ಮುನಿಮನಃ ಸರಸೀರುಹ ಹಂಸರಾಟ್
ತದುಚಿತ ಸ್ವರಶಿಕ್ಷಣಧೀರಿವ ||
ಅನುನನಾದ ಸ ಹಂಸ ಕದಂಬಕ
ಶ್ರುತಿಮನೋಽತಿ ಮನೋರಮ ಕೂಜಿತಂ || ೫೦

ಶ್ರೀಕೃಷ್ಣನು ಸನ್ಮುನಿಗಳ ಸುಮನಸ್ಸೆಂಬ ಸರೋವರದ ಹಂಸ ಶ್ರೇಷ್ಠನೇ ಆಮದರಿಂದ ಕಾಳಿಂಗನನ್ನು ಶಿಕ್ಷಿಸುವನಾಗಿ ನರ್ತನದಲ್ಲಿ ಉದ್ಯುಕ್ತನಾಗಿ ಕಿವಿ ಗಳಿಗೆ ಇಂಪಾದ ಹಂಸಗಳ ಸಮಧ್ವನಿಯನ್ನೇ ಮುಖದಿಂದಲೂ ಅನುಕರಿಸುವವ ನಾಗಿ ನರ್ತಿಸಿದನು. || ೫೦ ||

ಸೂರ್ಯಾಸ್ತ ಸಮಯವನ್ನು ಉತ್ಪ್ರೇಕ್ಷೆಯಿಂದ ವರ್ಣಿಸುತ್ತಾರೆ.

ಮಧು ವಶೀಕೃತ ಚಿತ್ತಇವೊಷ್ಣ ಭಾ
ವರುಣಪಾಲಿತದಿಂಗ್ಮೃಗಲೋಚನಾಂ ||
ಸಮಧಿಗಮ್ಯ ದಿವಃ ಸ್ಸಮಪೀತತ್
ದುರಿತ ವಾರಿತವಾಜಿ ಮನಾ ಇವ || ೫೧ ||

ಉಷ್ಣ ಕಿರಣವುಳ್ಳ ಸೂರ್ಯನು ಮಧು (ವಸಂತ) ವಶೀಕೃತ ಚಿತ್ತನಾಗಿ ವರುಣನಿಂದ ರಕ್ಷಿತಳಾದ ದಿಕ್ಕೆಂಬ ಮೃಗಾಕ್ಷಿಯನ್ನು ಹೊಂದಿ ಹಗಲೆಲ್ಲವೂ ಕಳೆದು

(ಪರಸ್ತ್ರೀ ನಿಮಿತ್ತಕ) ಪಾಪ ಭೀತಿಯಿಂದ ಸಂಕುಚಿತ ಮನಸ್ಕನಾಗಿ ಬಿದ್ದನೋ ಎಂಬಂತೆ ತೋರುತ್ತಿದ್ದನು. (ಅಸ್ತಂಗತನಾದನು) ॥ ೫೧ ॥

ಮುದಿತಗೋನಿಕರೈಃ ಪರಿವಾರಿತಃ
ಸಖಿಜನೈಸ್ಸಹ ವೇಣು ಮುದೀರಯನ್ ॥
ನಿಜಗೃಹಂ ಪ್ರವಿಶನ್ ಸ ನಿಶಾಮುಖೇ
ನರಮಣೀ ರಮಣೀಃ ಸಮುಹರ್ಷಯತ್ ॥ ೫೨ ॥

ಸಾಯಾನ್ಹವಾಗುತ್ತಿರಲು ಶ್ರೀಕೃಷ್ಣನು ಸಂತೋಷಗೊಂಡ ಗೋವುಗಳ ಸಮೂಹದಿಂದಲೂ ಸಖೀಜನರಿಂದಲೂ ವೇಣುಗಾನದಿಂದಲೂ ತನ್ನ ಮನೆಯಂತಿರುವ ವೃಂದಾವನವನ್ನು ಪ್ರವೇಶಿಸಿ ನರಮಣಿಯರಾದ (ಸ್ತ್ರೀರತ್ನಗಳಾದ) ರಮಣೀಯರನ್ನು (ಗೋಪಿಕಾ ಸ್ತ್ರೀಯರುಗಳನ್ನು) ಸಂತೋಷಪಡಿಸಿದನು. ॥ ೫೨ ॥

ಪ್ರತಿಗೃಹಂ ಪ್ರಮುದಾಭಿರಿತಸ್ತತಃ ಸಕುತು ಕಾಭಿರಸೌ ಪರಿಸೇವಿತಃ ॥
ಸ್ಮಿತಕಟಾಕ್ಷ ಮನೋರಮ ವಿಭ್ರಮಃ ಸ್ಮರಜನೀರಜನೀಶ ಇವಾಬಭೌ ॥ ೫೩ ॥

ಶ್ರೀಕೃಷ್ಣನು ಬಹುಕುತೂಹಲ ಯುಕ್ತರಾದ ಸ್ತ್ರೀಯರುಗಳಿಂದ ಪ್ರತಿಮನೆಗಳಲ್ಲಿಯೂ ಸುತ್ತುಕಟ್ಟಿಸಿಕೊಳ್ಳುವನಾಗಿ ಚಂದ್ರನಂತೇ ನಗೆ ಮುಖದಿಂದಲೂ ಕಡೆಗಣ್ಣ ನೋಟದಿಂದಲೂ ಶೋಭಿಸುವವನಾಗಿ, ಮನ್ಮಥನನ್ನು ಹುಟ್ಟಿಸುವ ರಾತ್ರಿಗೆ ಒಡೆಯನಾಗಿ ಪ್ರಕಾಶಿಸಿದನು. ॥ ೫೩ ॥

ಯದುಪತಿಃ ಸ ನಿಜೈಃ ಸಹನಿರ್ಮಲಂ
ಸ್ವಗೃಹಮೇತ್ಯ ಶನೈರಲಸಾಂನಿಶಾಂ ॥
ತನುರುಚಾಬಹು ದೂರಪಲಾಯಿತಾಂ
ಮಹಿತಯಾ ಹಿತಯಾ ವ್ಯತನೋತ್ಸತಾಂ ॥ ೫೪ ॥

ಯದುಪತಿಯಾದ ಶ್ರೀಕೃಷ್ಣನು ಸ್ವಜನರಿಂದ ತನ್ನ ನಿರ್ಮಲವಾದ ಮನೆಗೆ ಬಂದು ಸುಖಸುಪ್ತನಾಗಿ ತನ್ನ ದೇಹಕಾಂತಿಯಿಂದಲೇ ಜಡಳಾದ (ಆಲಸ್ಯಗೊಂಡ) ರಾತ್ರಿಯನ್ನು ದೂರಓಡಿಸಿ ಸಜ್ಜನರಿಗೆ ಹಿತವಾದ ಅಹಸ್ಸನ್ನೇ (ಹಗಲನ್ನೇ) ನಿರ್ಮಿಸಿದನು (ಉಂಟು ಮಾಡಿದನು). ॥ ೫೪ ॥

ಸೂರ್ಯೋದಯವನ್ನು ಉತ್ಪ್ರೇಕ್ಷೆಯಿಂದ ವರ್ಣಿಸುತ್ತಾರೆ.

ಸ್ವತನಯಾಂ ಸರಿತಂ ವಿಷವರ್ಜಿತಾಂ
ಕರುಣಯಾ ಹರಿರದ್ಯ ಕರಿಷ್ಯತಿ ॥

ಇತಿಮುದೇಃಸಗಿರಿಂ ರವಿರೀಕ್ಷಿತುಂ
ಪರವಶೋರವ ಶೋಭಿತ ಭೂರುಹತ್ ॥ ೫೫ ॥

ಸೂರ್ಯನು ಶ್ರೀಹರಿಯು ನನ್ನ ಮಗಳಾದ ಯಮುನೆಯನ್ನು ಕರುಣದಿಂದ ವಿಷವರ್ಜಿತಳನ್ನಾಗಿ ಮಾಡುವನೆಂಬ ಸಂತೋಷದಿಂದ ನೋಡಲೋ ಎಂಬಂತೆ ಪಕ್ಷಿಗಳ ಧ್ವನಿಯಿಂದ ಶೋಭಿಸುವ ಉದಯಾಚಲವನ್ನೇರಿ ಬಂದನು. ॥ ೫೫ ॥

ತದನುಭೋಗಿ ಕುಲಾಗ್ರಜ ಮಗ್ರಜಂ
ಸ ಹಿ ವಿಸೃಜ್ಯ ತದನ್ವಯ ಸಂಭವಂ ॥
ನಮಯಿತುಂ ಯಮುನಾ ಮಗಮದ್ವಿಭುಃ
ಸಭುಜಗಾಂ ಭುಜಗಾಂತಕ ವಾಹನಃ ॥ ೫೬ ॥

ಹಗಲಾಗುತ್ತಿರಲಾಗಿ ಸರ್ಪಾಂತಕ ವಹನನಾದ ಸರ್ಪಪ್ರಭುವೂ ಆದ ಶ್ರೀ ಕೃಷ್ಣನು ಅಣ್ಣನಾದ ಬಲರಾಮನನ್ನು ಬಿಟ್ಟು ಅವನ ವಂಶದಲ್ಲಿಯೇ ಹುಟ್ಟಿದ ಕಾಳಿಂಗನೆಂಬ ಸರ್ಪನನ್ನು ಮಣಿಸಲು ಯಮುನೆಗೆ ಬಂದನು. ॥ ೫೬ ॥

ಯದಿ ರಸಾತಲ ಮೇತಿತದೈಮ್ಯಹಂ
ದಮಯಿತುಂ ತಮಿತೀವ ಸ ಪಾದಪಾತ್ ॥
ಅಪತದಂಬುನಿ ವಿಸ್ಮಯ ಕಾರಕಃ
ಸವಯಸಾಂ ವಯಸಾಮಿವ ವಲ್ಲಭಃ ॥ ೫೭ ॥

ಒಂದುವೇಳೆ ಕಾಳಿಂಗನು ಪಾತಾಳಹೊಕ್ಕರೂ ಬಿಡುವವನಲ್ಲ ಎಂಬುದನ್ನು ತೋರುವವನಾಗಿ ತೀರಗತವಾದ ಒಂದು ದೊಡ್ಡ ಕದಂಬ ಮರವನ್ನೇರಿ ಸಮವಯಸ್ಕರಾದ ಸ್ನೇಹಿತಬಾಲಕರಿಗೆ ಆಶ್ಚರ್ಯಕಾರಕನಾಗಿ ಯಮುನೋದಕದಲ್ಲಿ ಧುಮಿಕಿದನು. ॥ ೫೭ ॥

ಧುಮುಕುವಿಕೆಯಿಂದ ಆದ ಅಲ್ಲಕಲ್ಲೋಲನ್ನು (ಮೇಲುಕ್ಕಿ ಅಭಿವೃದ್ಧವಾದುದನ್ನು) ಉತ್ಪ್ರೇಕ್ಷಿಸುತ್ತಾರೆ.

ಕೃಷ್ಣಾಲಿಂಗನ ಕಾತರ್ಯೈಃ ಕರಸಮೈಃ ಓಘೈರ್ವಿನಿವೃತ್ತೈರಿವ
ಸ್ವಪ್ರಾಂತೆ ಸ್ಥಿತ ತತ್ಪದಾಂಕಮುರಸಾ ಧರ್ತುಂ ಧಿಯೇವಾರ್ಕಜಾ ॥
ಸುಪ್ರೇಮಾಂಬುಧಿಮಿಶ್ರಣಾದಿವಜಗದ್ ವಂದ್ಯಸ್ಯಪಾತಾದಿವ
ಸ್ನಿಗ್ಧಾ ತಂ ಮದನಾಕೃತಿಂ ಸ್ವಹೃದಯೇನಾಶ್ಲಿಷ್ಯಸಾವರ್ಧತ ॥ ೫೮ ॥

ಯಮುನೆಯು ತನ್ನಲ್ಲಿಬಂದ ಶ್ರೀ ಕೃಷ್ಣನನ್ನು ಕೈಗಳಿಂದಾ ಆಲಿಂಗಿಸಿ ತೀರಗಳಲ್ಲಿ ಮೂಡಿದ್ದ ಪಾದಗಳನ್ನು ತನ್ನಲೆಗಳೆಂಬ ಕೈಗಳಿಂದಾ ಸವರುತ್ತಾ

ಅವನ ಪ್ರೇಮಾತಿಶಯವನ್ನು ತನ್ನಲ್ಲಿ ಕಲಿಸುತ್ತಾ ಸ್ನಿಗ್ಧಳಾಗಿ ಮನ್ಮಥಾಕಾರನಾದ ಶ್ರೀ ಕೃಷ್ಣನನ್ನು ತನ್ನ ಹೃದಯದಲ್ಲಿ ಧರಿಸಿ ಅಭಿವೃದ್ಧಳಾದಳು. ॥ ೫೮ ॥

ಕಲಿಲಯಂತಮಪಃ ಪುರುಷೋತ್ತಮಂ
ಫಣಿಪತಿಃ ಕಿಲದಂಶಿತುಮಗ್ರಹೀತ್ ॥
ನ ಹಿ ಸವೇತ್ತಿ ಬಲಂ ಶ್ರವಣೋಜ್ಝಿತಃ
ಪರಮಯಾ ರಮಯಾ ಶ್ರುತಿಭಿಃಸ್ತುತಂ ॥ ೫೯ ॥

ಎಲ್ಲ ಉದಕವನ್ನು ಕಲಕುತ್ತಿರುವ ಶ್ರೀ ಕೃಷ್ಣನನ್ನು ಸರ್ಪರಾಜನಾದ ಕಾಳಿಂಗನು ಕಚ್ಚಲು ಹಿಡಿದನು. ಅದು ಉಚಿತವೇ; ಕಿವಿಗಳೇ ಇಲ್ಲದವನಾದುದರಿಂದ ಪರಳಾದ ರಮೆಯಿಂದಲೂ ಶ್ರುತಿಗಳಿಂದಲೂ ಪ್ರಸಿದ್ಧವಾದ ಶ್ರೀಹರಿಯ ಬಲವನ್ನು ಹೇಗೆ ಅರಿಯಬಲ್ಲನು ? ॥ ೫೯ ॥

ಅತ್ತ ಶ್ರೀಕೃಷ್ಣನು ಯಮುನೆಯಲ್ಲಿ ಧುಮುಕುತ್ತಿರಲು ವೃಂದಾವನದಲ್ಲಿ ಭೂಕಂಪಾದಿ ಉತ್ಪಾತಗಳಾದವು.

ಉತ್ಪಾತ ಚಕಿತಾ ಗೋಪಾಃ ಕೃಷ್ಣ ಸಂದರ್ಶನಾರ್ಥಿನಃ ॥
ಪುರೋಧಾಯಯಯೂರಾಮಂ ಶೇಷಮಾರ್ಗಗತಾ ಇವ ॥ ೬೦ ॥

ಉತ್ಪಾತಗಳಿಂದ ಭೀತರಾದ ಯಾವತ್ತೂ ಗೋಪ–ಗೋಪಿಯರುಗಳು ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾಗಿ ಬಲರಾಮನನ್ನು ಮುಂದುಮಾಡಿಕೊಂಡು ಯಮುನಾ ತೀರಕ್ಕೆ ಬಂದರು. ಈ ದೃಶ್ಯವು ಶ್ರೀಹರಿ ದರ್ಶನಾಕಾಂಕ್ಷಿಗಳಾದ ಹರಿಭಕ್ತರು ಶೇಷಮಾರ್ಗವನ್ನೇ ಅವಲಂಬಿಸಿ ಹೊರಡುವವರಂತಿದ್ದಿತು. ॥ ೬೦ ॥

ವ್ರಜಾನೋ ವ್ರಜಗೋಪಾಲಃ ಯಮುನಾ ಮಮುನಾಧ್ವನಾ ॥
ಪದಾನಿ ಪಥಿಕೃಷ್ಣಸ್ಯಲಕ್ಷ್ಯಂತೇ ಲಕ್ಷಣೈಃ ಸಹ ॥ ೬೧ ॥

ಶ್ರೀಕೃಷ್ಣನ ಪಾದಚಿನ್ಹೆಗಳನ್ನೇ ಗುರ್ತಿಸುತ್ತಾ ಶ್ರೀಕೃಷ್ಣನ ಪಾದಾವಲಂಬಿಗಳಾಗಿ ಲಕ್ಷಣಗಳಿಂದ ಲಕ್ಷಿಸುವ ಪಾದಗಳನ್ನೇ ವರ್ಣಿಸುತ್ತಾ ಹೊರಟ ಗೋಪಗೋಪಿಯರು ಯಮುನೆಗೆ ಬಂದರು. ॥ ೬೧ ॥

ಇಂತ್ಥ ವಿಮರ್ಶತಃ ಪ್ರಾಪ್ತಾನ್ ದೃಷ್ಟ್ವಾಸ್ವಾನ್ ಸರ್ಪಮೂರ್ಧ್ನಿಸಃ ॥
ನನರ್ತ ಕಿಲ ನರ್ನರ್ತಿ ಸುಹೃದಾಗಮನೇ ನ ಕಃ ॥ ೬೨ ॥

ತನ್ನ ಪಾದಗಳ ವಿಮರ್ಶೆಯಿಂದಲೇ ತನ್ನ ಸಮೀಪದಲ್ಲಿ ಬಂದ ಗೋಪಗೋಪಿಯರನ್ನು ಕಂಡ ಶ್ರೀಕೃಷ್ಣನು ಸರ್ಪನ ಹೆಡೆಯ ಮೇಲೆ ಕುಣಿಯಲಾರಂಭಿಸಿದನು. ಅದು ಸರಿಯೇ ಕುಣಿಯುವದರಲ್ಲಿ ಆಸಕ್ತನೇ ಆದವನು ತನ್ನವರ ಆಗಮನವಾದರೇ ಯಾರು ತಾನೇ ಮತ್ತಷ್ಟು ಕುಣಿಯುವುದಿಲ್ಲ. ॥ ೬೨ ॥

ಸ ರತ್ನ ಕೃತ್ಯಾನಿ ಫಣಾಂಗಣೇಷು
ನನರ್ತ ಕೃಷ್ಣಃ ಕಿಲಲೋಕಸಂಧ್ಯಃ ॥
ಸುರಾಂಗನಾಕ್ಷ್ಯಕ್ಷರ ಸುನಾಟ್ಯದೃಷ್ಟ-
ಮಿಂದೀವರಶ್ಯಾಮ ಕಿಶೋರನಿಧಿಸ್ಸನ್ ॥೭೩॥

ಲೋಕಸಂಧ್ಯನಾದ ಶ್ರೀಕೃಷ್ಣನು ಕಾಳಿಂಗನ ಸಾಸ್ರತ್ವತನವೆಂಬ ರಂಗಕ್ಕೆ ನಡುವಿನ ಕೃತಿಗಳಿಗೆ ಮುನ್ನುಡಿಯವನಾದ (ಕೃತಿಗಳಲ್ಲಿ ಶೋಭಿಸುವ) ತನ್ನ ಪಾದ ದ್ವಯವನ್ನೇ ಹಿತವನಾಗಿ ಮನೋಹರವನಾಗಿ ರತ್ನಗಳಿಂದ ರಮಣೀಯವಾದ ಕೃಷ್ಣ ನರ್ತನವಾದ ಕಾಳಿಂಗನ, ಫಣಾಂಗಣದಲ್ಲಿ (ಹೆಡೆಗಳಮೇಲೆ) ನರ್ತಿಸಿದನು. ॥೭೩॥

ಅಪ್ಸ್ವೇಯು ಕಾಳೀಯಮುಖೇಂದ್ರವಿಲಾಸಿತ್ರಿಕ್ತ್ಯಂ
ಸ್ವಿಷ್ಟಂ ಮುಹುರ್ಮುಹುರ್ ವಿಷವಮನೀತಮನ್ಯ ವಕ್ತ್ರಮ್ ॥
ತನ್ಮಾಲ್ಯತಾಕ್ರಿತಮುಕೇಶಮುಖಾನನಸ್ಯಂ
ಶಿಕ್ಷಾನಯನ್ನಿವ ವಿಷಂ ವಿನತಾಸುತೇನ ॥೭೪॥

ಶ್ರೀಕೃಷ್ಣನು ನರ್ತನವನ್ನು ಮಾಡುತ್ತ ಒಂದೊಂದೆಯಾಗಿ ಬಾಲವನ್ನು ಎತ್ತಿಹಿಡಿದು ವಿಷವುಳ್ಳದಾದ ಪ್ರಾಂತವಾದ ಮುಖವನ್ನು ನರ್ತನದಿಂದ ಮರ್ದನ ಮಾಡಿದನು. ಅದೃಶ್ಯವು ಕಾಳಿಂಗನಲ್ಲಿ ಆಕ್ರಮಿಸಿದಾಗ ಗರುಡನ ವಿಷಯವನ್ನೇ ಶಿಕ್ಷಿಸುವ ಶಿಕ್ಷ ಗಾದ ಮುಖದಿಂದ ಕಾರಿಸುವುದಕ್ಕೆ ಎಂಬಂತೆ ಇತ್ತು. ॥೭೪॥

ಸ ದಂಡ ಶೂಕಸ್ಯ ಮುಖಂ ವಿಧೂನ್ವನ್-
ಸ್ತದೀಯ ಪುಚ್ಛಂ ಜಗೃಹೇ ಕರೇಣ ॥
ಯಥಾಪರಾಧಂ ಹಿ ಸ ದಂಡದಾತಾ
ನಿರಾಗಸಂ ಕಿಂ ಪರಯೇನ್ನ ಶೌರಿಃ ॥೭೫॥

ಶ್ರೀಕೃಷ್ಣನು ಕಾಳಿಂಗನ ಹೆಡೆಯನ್ನು ತುಳಿದು ಮರ್ದಿಸಿ ಬಾಲವನ್ನು ಉಭಯ ಹಸ್ತದಿಂದ ಎತ್ತಿಹಿಡಿದನು. (ಅಪರಾಧಾನುಗುಣವಾಗಿ ಶಿಕ್ಷೆಯು ಎಂಬಂತೆ) ಪರಮಾತ್ಮನು ನಿಷ್ಪಕ್ಷಪಾತ ಸ್ವಭಾವವುಳ್ಳವನು. ಅದರಿಂದಲೇ ಅಪರಾಧಿಯಾದ ಮುಖವನ್ನು ಮರ್ದಿಸಿದನು. ನಿರಪರಾಧವಾದ ಬಾಲವನ್ನು ಎತ್ತಿಹಿಡಿದನು. ಅಂದ ಮೇಲೆ ಶೌರಿಯಾದ ಶ್ರೀಹರಿಯು ನಿರಪರಾಧಿಗಳೇ ಆಗಿ ತನ್ನ ಭಕ್ತರಾದವರನ್ನು ಎಷ್ಟು ರೀತಿಯಾಗಿ ರಕ್ಷಿಸುವನೋ ತಿಳಿಯವೇ? ॥೭೫॥

ವಿಭಾರಯನ್ನಪ್ಯಹಿರಾಜ ಮೌಳಿಂ
ಕರೇಣ ಪಶ್ಚ ತಮಾಶು ಬಂಧುಃ ॥
ನಿಜೇಷು ಶಿಕ್ಷಾ ವಿಹಿತಸ್ಯ ವಿಷ್ಣೋಃ
ಪರಂ ಪರಾನುಗ್ರಹ ಹೇತು ರೇವ ॥೭೬॥

ಶ್ರೀ ಕೃಷ್ಣನು ಕಾಳಿಂಗನ ತಲೆಯನ್ನು ತುಳಿದು ಶಿಕ್ಷಿಸಿದವನಾದರೂ ಆರ್ತ ಬಂಧು ಆದ್ದರಿಂದ ಅಭಯಹಸ್ತದಿಂದ ಸ್ಪರ್ಶಮಾಡಿ ಗರುಡಾದಿಗಳಿಂದ ಅಭಯ ವಿತ್ತು ರಕ್ಷಣೆಯನ್ನು ಮಾಡಿದನು. ಭಕ್ತರಲ್ಲಿ ಪರಮಾತ್ಮನ ನಿಗ್ರಹವು ಅನು ಗ್ರಹಾತಿಶಯಕ್ಕೇ ಕಾರಣವಾಗುತ್ತದೆ. ॥ ೬೬ ॥

ನೃತ್ಯಂತಮೇನಂ ಪರಿತೋಽಭ್ರಮೇತ್ಯ
ಭೃತ್ಯಾ ಭವಾಬ್ಜಾಸನ ಮುಖ್ಯ ದೇವಾಃ ॥
ವಿಷ್ವಗ್ಗೃಣಂತಃ ಕಿಲ ತಸ್ಥುರಾರ್ತ
ಸರ್ಪಾಶ್ರಿತಾ ಜ್ಞಾನ ಮಿವಾಪ ಹರ್ತುಂ ॥ ೬೭ ॥

ನರ್ತನ ಮಾಡುತ್ತಿರುವ ಶ್ರೀ ಕೃಷ್ಣನನ್ನು ಸುತ್ತುಗಟ್ಟಿ ಬ್ರಹ್ಮಾದಿ ದೇವತೆ ಗಳು ಆಕಾಶದಲ್ಲಿಯೇ ಭೃತ್ಯಭಾವವನ್ನು ತೋರುತ್ತಾ ಸ್ತೋತ್ರ ಮಾಡುವವರಾಗಿ ನಿಂತರು. ಆ ದೃಶ್ಯವು ಕಾಳಿಂಗನಲ್ಲಿ ಇರುವ ಅಜ್ಞಾನವನ್ನು ನಾಶಮಾಡಲೋ ಎಂಬಂತೆ ತೋರುತ್ತಿದ್ದಿತು. ॥ ೬೭ ॥

ಅನೀನದತ್ಪದ್ಮಭವೋ ಮೃದಂಗಂ
ಜಗೌ ಹನೂಮಾನ್ಜಗತಾಮಧೀಶಮ್ ॥
ಅದರ್ಶಯತ್ತಾಲ ಗತೀಃ ಕಪರ್ದೀ
ನನರ್ತ ಗೋಪಾಲಕ ಬಾಲಮೌಳಿಃ ॥ ೬೮ ॥

ಆನಂದತುಂದಿಲರಾದ ದೇವತೆಗಳಲ್ಲಿ ಪದ್ಮಭವನಾದ ಚತುರ್ಮುಖನು ಮೃದಂಗವನ್ನು ಬಾರಿಸಿದನು. ಹನುಮಂತನು ರಾಗವಾಗಿ ಹಾಡಿದನು. ಮಹೇ ಶನು ರಾಗಾನುಗುಣವಾಗಿ ತಾಳತಟ್ಟಿದನು. ನಂದನಂದನನಾದ ಗೋಪಾಲಬಾಲ ಮೌಳಿಯಾದ ಶ್ರೀಕೃಷ್ಣನು ಕುಣಿಕುಣಿದನು. ॥ ೬೮ ॥

ತತೋಹಿ ಪತ್ನೀ ಪ್ರಿಯಮಂಜು ವಾಕ್ಯಂ
ನಿಶಮ್ಯ ತಂ ನಿರ್ಭಯಮಾಶುಚಕ್ರೇ ॥
ತಥಾಹಿ ನಾರೀ ಮೃದುಭಾಷಣೇನ
ನ ಕಸ್ಯ ಚಿತ್ತಂ ಮೃದುತಾ ಮುಪೈತಿ ॥ ೬೯ ॥

ನರ್ತಿಸುತ್ತಿರುವ ಶ್ರೀಕೃಷ್ಣನು ಕಾಳಿಂಗನ ಪತ್ನಿಯರ ಪ್ರಾರ್ಥನಾರೂಪ ವಾದ ಮನೋಹರ ವಾಕ್ಯಗಳನ್ನು ಕೇಳಿ ಕಾಳಿಂಗನಿಗೆ ಅಭಯವನ್ನೇ ಇತ್ತನು. ಅದೂ ಸರಿಯೇ ನಾರಿಯರ ಮೃದು ಭಾಷಣವನ್ನು ಕೇಳಲು ಯಾರ ಮನಸ್ಸಾದರೂ ಮೃದುವಾಗುವುದಿಲ್ಲವೇ. ॥ ೬೯ ॥

ವಿಷಾತ್ಸ್ವೀಯತ್ವೇನ ಗುಣೇನ ನಾಮ್ನಾ
ದ್ವಯೋಃ ಸ ಸಾಮ್ಯೇsಪಿ ಭುಜಂಗಮಂ ತಮ್ ‖
ನಿಷೇಧ್ಯ ಭಾಸ್ವತ್ತನಯಾಂ ಜುಗೋಪ
ನ ಕಸ್ಯ ಯೋಷಿತ್ಸ್ವಪಿ ಪಕ್ಷಪಾತಃ ‖೭೦‖

(ವಿಷಂತು ಗರಳೇ ಜಲೇ) ಎಂದು ಕೋಶಾನುಗುಣವಾಗಿ ವಿಷ ಶಬ್ದಕ್ಕೆ ನೀರೆಂದು ಅರ್ಥವು)

(ಜಲ) ವಿಷಾತ್ವದಿಂದಲೂ (ಕಾಳಿಂದಿ, ಕಾಳಿಂಗ) ನಾಮಸಾಮ್ಯದಿಂದಲೂ ಸ್ವಕೀಯ ಭಕ್ತತ್ವದಿಂದಲೂ ಇಬ್ಬರೂ ಸಾಮ್ಯರೇ ಆದರೂ ಕಾಳಿಂಗನನ್ನು ಮರ್ದಿಸಿ ಹೊರಟೋಡಿಸಿದನು. ಸೂರ್ಯ ತನಯಳಾದ ಕಾಳಿಂದಿಯನ್ನು (ಯಮುನೆ)ಯನ್ನು ರಕ್ಷಣೆ ಮಾಡಿದನು. ಪುರುಷರಿಗೆ ಸ್ತ್ರೀ ಪಕ್ಷಪಾತವು ಸ್ವಭಾವವಲ್ಲವೇ. ‖ ೭೦ ‖

ಅಗಸ್ಕೃತಂ ನಾಗಪತಿಂ ಸ ಕೃಷ್ಣಃ
ಪದೇನ ಸಿಕ್ಷನ್ನಪಿ ತತ್ಕೃತಾಂಕೈಃ ‖
ತಾರ್ಕ್ಷ್ಯಾದ್ಭಯಂ ತಸ್ಯ ಜಹಾರ ಭಕ್ತೇ
ಕ್ರೋಧೋಪಿದೇವಸ್ಯ ವರೇಣ ತುಲ್ಯಃ ‖೭೧‖

ಶ್ರೀ ಕೃಷ್ಣನು ಅಪರಾಧಿಯಾದ ಕಾಳಿಂಗನನ್ನು ಕಾಲಿನಿಂದ ತುಳಿದರೂ ತನ್ನ ಪಾದ ಚಿನ್ಹೆಯಿಂದ ಅವನಿಗೆ ಗರುಡಾದಿ ಸರ್ವ ಅಪಮೃತ್ಯು ಭಯವನ್ನು ತಪ್ಪಿಸಿದನು. ಶ್ರೀ ಪರಮಾತ್ಮನ ಕೋಪವೂ ಭಕ್ತರಲ್ಲಿ ವರಸಮವೇ ಆಗುತ್ತದೆ. ‖ ೭೧ ‖

ಸ್ವಪಕ್ಷಪಾತಿಪ್ರಿಯಮುಕ್ತಕರ್ಣ
ವಿಮರ್ದನಾನ್ನೂನಮಸೌ ಪ್ರಸಾದ್ಯ ‖
ವಿಧಾಯ ಚಾಸ್ಮಾ ಭಯಮಂಜಸಾಂಕೇಃ
ಮುದಂ ಸ್ವತಲ್ಪಾಯ ದದಾವನಲ್ಪಾಮ್ ‖೭೨‖

ಶ್ರೀಹರಿಗೆ ಗರುಡ ಶೇಷರಿಬ್ಬರೂ ಸಮಪ್ರೀತಿ ಪಾತ್ರರೇ (ಸ್ವಸೇವ್ಯರಲ್ಲಿ) ಆದ್ದರಿಂದಾ ಕಣ್ಣೇ ಕಿವಿಯಾಗಿವುಳ್ಳ ಸರ್ಪನಾದ ಕಾಳಿಂಗನನ್ನು ಮೆತ್ತಗೆ ಮಾಡಿ ಅವನ ವಿರೋಧಿಯಾದ ತನ್ನ ವಾಹನನೂ ಆದ ಗರುಡನಿಗೆ ಪ್ರೀತಿಯನ್ನು ಮಾಡಿ ಸಂತೋಷಪಡಿಸಿದರೂ ಅದೇ ಕಾಳಿಂಗನಿಗೆ ಸ್ವಪಾದ ಚಿನ್ಹೆಯಿಂದ ಅಭಯವನ್ನೂ ಇತ್ತು ತನ್ನ ಶಯನನಾದ ಶೇಷನಿಗೂ ಸಂತೋಷಪಡಿಸಿದನು. ‖ ೭೨ ‖

ರೋಮ್ಣಾಂ ಹರ್ಷಣಕಾರಿಣಿ ಶ್ರವಣತಃ ಪಾಪೌಘ ವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ವಿಚಿತ್ರವಿಮಲಶ್ಲಾಘ್ಯಾರ್ಥಸಂದಾಯಿನಿ ॥
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷು ಮಹಿತಃ ಸರ್ಗಶ್ಚತುರ್ಥೋ ಮುದಾಮ್ ॥೭೩॥

ರೋಮಗಳಿಗೆ ಹರ್ಷವನ್ನು ಕೊಡುವ ಶ್ರವಣ ಮಾತ್ರದಿಂದಲೇ ಪಾಪಗಳ ರಾಶಿಯನ್ನೇ ಸುಡುವ ಪ್ರೇಮಪೂರ್ವಕವಾಗಿ ಚಿಂತಿಸುವವರಿಗೆ ವಿಚಿತ್ರವಾಗಿಯೂ ನಿರ್ಮಲವಾಗಿಯೂ ಶ್ಲಾಘ್ಯವಾಗಿಯೂ ಇರುವ ಅರ್ಥಗಳನ್ನು ಕೊಡುವ, ಶ್ರೀಮದ್ವಾದಿರಾಜರಿಂದ ರುಕ್ಮಿಣೀಶ ವಿಜಯವೆಂಬ ಕಾವ್ಯರತ್ನವು ರಚಿತವಾಗುತ್ತಿರಲು ದ್ಯುಭೂಲೋಕಗಳಲ್ಲಿ ಸುರಮಂಡಲಿಯಲ್ಲಿ ವರ್ಣನೀಯವಾದ ಮಹೋತ್ಸವವಾಗಿ ನಾಲ್ಕನೆಯ ಸರ್ಗವು ಸಮಾಪ್ತಿಗೊಂಡಿತು. ॥ ೭೩ ॥

ಹೀಗೆ ಕವಿ ಕುಲತಿಲಕ ಶ್ರೀಮದ್ವಾದಿರಾಜ ಪೂಜ್ಯ ಚರಣವಿರಚಿತವಾದ
ಶ್ರೀ ರುಕ್ಮಿಣೀಶ ವಿಜಯ ಮಹಾಕಾವ್ಯದಲ್ಲಿ ನಾಲ್ಕನೆಯ
ಸರ್ಗವು ಸಮಾಪ್ತಿಗೊಂಡಿತು.

— ಶ್ರೀಮಧ್ವೇಶಾರ್ಪಣಮಸ್ತು —

ಶ್ರೀ ರುಕ್ಮಿಣೀಶವಿಜಯ— ಐದನೆಯ ಸರ್ಗ.

ಶ್ರೀಮದ್ವಾದಿರಾಜ ಪೂಜ್ಯಕವಿಗಳು ಶ್ರೀಮದ್ಭಾಗವತಾದಿ ಪುರಾಣೋಕ್ತ ಕ್ರಮವಾಗಿ ಶ್ರೀಕೃಷ್ಣನ ದುಷ್ಟಶಿಕ್ಷಣ ಶಿಷ್ಟರಕ್ಷಣಾದಿ ಮಹಿಮೆಗಳನ್ನು ವರ್ಣಿಸುತ್ತಾರೆ. ಶ್ರೀಕೃಷ್ಣನು ವೃಂದಾವನದಲ್ಲಿ ಅವೇಳೆಯಲ್ಲಿ ಒದಗಿದ ದಾವಾಗ್ನಿಯೇ ಮೊದಲಾದ ವಿಪತ್ತುಗಳನು ಅಗ್ನಿಪಾನವೇ ಮೊದಲಾದ ಸ್ವಮಹಿಮೆಗಳಿಂದ ರಕ್ಷಿಸಿದನು. ಪುರುಷಾದಿ ಸೂಕ್ತಗಳಲ್ಲಿಯೂ ಉಕ್ತವಾದ ಆ ಮಹಿಮೆಗಳನ್ನು ಉತ್ಪ್ರೇಕ್ಷಾದಿ ಅಲಂಕಾರಗಳಿಂದ ವರ್ಣಿಸುತ್ತಾರೆ.

ಸ ಯಾಮುನಾಂಭಸ್ಯವಗಾಹನೋತ್ಥ
ಶರೀರ ಶೈತ್ಯಂ ಶಮಯನ್ನಿವೇಶಃ ॥
ನಿಶಿ ಪ್ರವೃದ್ಧಂ ನವಕಾನನಾಗ್ನಿಂ
ಪಪೌ ಕೃಪಾಲುಃ ಸ್ವಜನಸ್ಯ ಗುಪ್ತ್ಯೈ ॥ ೧ ॥

ಶ್ರೀಕೃಷ್ಣಪರಮಾತ್ಮನು ಕಾಳಿಂಗನ ಶಿಕ್ಷಾರ್ಥವಾಗಿ ಯಮುನೆಯಲ್ಲಿ ಮುಳಿಗಿದ ಶೈತ್ಯವನ್ನು ಕಳಿಯಲೋ ಎಂಬಂತೆ ಅಪರಾತ್ರಿಯಲ್ಲಿ ಕವಿದು ಬಂದು ವೃಂದಾವನವನ್ನೇ ಅಲ್ಲಕಲ್ಲೋಲು ಮಾಡಿ ಭಯಗೊಳಿಸಿದ ನವಕಾನನಾಗ್ನಿಯನ್ನು (ಕಾಡಕಿಚ್ಚನ್ನು) ದಯಾಳುವಾದುದರಿಂದ ಪಾನಮಾಡಿ ತನ್ನವರನ್ನು ರಕ್ಷಿಸಿದನು. ॥ ೧ ॥

ಸ್ತುವನ್ತು ಸರ್ವೇ ವನವನ್ಹಿಪಾನ
ಕೃತಾನುಭಾವಂ ನ ವಯಂ ಮುರಾರೇಃ ॥
ಸ್ವಜನ್ಮಭೂಮಿಂ ಶಿಖಿನಿ ಪ್ರವಿಷ್ಟೇ
ಕ ಈಶಿತುಸ್ತೇನ ಕೃತೋನು ಭಾವಃ ॥ ೨ ॥

ಶ್ರೀಕೃಷ್ಣನು ದಾವಾಗ್ನಿಯನ್ನು ಪಾನಮಾಡಿದ ಮಹಾನುಭಾವನೆಂದು ಸರ್ವ ಕವಿಗಳೂ ವರ್ಣಿಸಲಿ ಆದರೆ ನಾನು ಮಾತ್ರ ದೊಡ್ಡಮಹಿಮೆಎಂದು ವರ್ಣಿಸುವುದಿಲ್ಲ. ಅಗ್ನಿಯು ಸ್ವಜನ್ಮಸ್ಥಾನವನ್ನು ತಾನು ಸೇರಿದರೆ ಮುರಾರಿಯಾದ ಶ್ರೀಹರಿಯ ಹಿರಿಮೆಯೇನು ? (ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾತ್ ವಾಯುರಜಾಯತ) ॥ ೨ ॥

ಸ್ವಜನ್ಯೈರ್ನಿಜಪಾದಾಬ್ಜ ಭಜನ್ಯೈಃ ಸಹಿತ ಸ್ತತಃ ॥
ವ್ರಜಮಾರ್ಜಿತ ಸರ್ವಾರ್ಥ ವ್ರಜಂ ನಿವಿವಿಶೇಚ್ಯುತಃ ॥ ೩ ॥

ಅಗ್ನಿ ಪಾನಾನಂತರ ಅಚ್ಯುತನಾದ ಶ್ರೀಕೃಷ್ಣನು ತನ್ನ ಪಾದಕಮಲಗಳನ್ನು ಭಜಿಸುವ ಸ್ವಜನರಿಂದ ಕೂಡಿ ಅಪೇಕ್ಷಣೀಯವಾದ ಸಕಲ ಪದಾರ್ಥಗಳಿಂದಲೂ ಪೂರ್ಣವಾದ ವೃಂದಾವನವನ್ನು ಪ್ರವೇಶಿಸಿದನು. ॥ ೩ ॥

ನಿಜಬಲಕರಮಗ್ನಿಂ ಕೃಷ್ಣಪೀತಂ ನಿಶಮ್ಯ
ಜ್ವಲಿತ ಇವ ಸಸೂರ್ಯಃ ಪ್ರಾದುರಾಸೀನ್ನಿದಾಘಃ ॥
ಸ್ವಕೃತಿಮಥ ಸನಾಮ್ನಾ ನಿರ್ಣಿನೀಷುರ್ವಿಚಿಂತ್ಯ
ದ್ರುತಮೃತು ಪತಿನೇಪ ಪ್ರಾಪ ಗೋಪೋ ವನಾಂತಂ ॥ ೪ ॥

ಶ್ರೀಕೃಷ್ಣನು, ನನಗೆ ಸಹಕಾರಿಯಾದ ಅಗ್ನಿಯನ್ನು ಪಾನಮಾಡಿದನು ಎಂಬ ಸಿಟ್ಟಿನಿಂದಲೋ ಎಂಬಂತೇ ಗ್ರೀಷ್ಮನು ಮತ್ತೊಬ್ಬ ಸಹಾಯಕನಾದ ಸೂರ್ಯನಿಂದೊಡಗೂಡಿ ಆವಿರ್ಭೂತನಾದನು. ಗೋಪನಾದ ಶ್ರೀಕೃಷ್ಣನು (ಮಾಧವನು) ತನ್ನ ಕಾರ್ಯವನ್ನು ಸಾಧಿಸಲು ಹೆಸರಿನಿಂದಲೂ (ವಸಂತ ಮಾಧವ) ಗುಣದಿಂದಲೂ ಸಮನಾದ ಮಾಧವನಿಗೆ (ವಸಂತ ಋತುವಿಗೆ) ವಿಶೇಷ ಪ್ರೀತಿಯನ್ನು ಮಾಡುವವನಾಗಿ ಅವನಿಂದೊಡಗೂಡಿ ಮತ್ತೊಂದು ವನವನ್ನು ಸೇರಿದನು. ॥ ೪ ॥

ಕಾಲಾನುಗುಣವಾಗಿ ಗ್ರೀಷ್ಮ ಋತುವು ಬಂದರೂ ಶ್ರೀಕೃಷ್ಣನ ಸನ್ನಿಧಾನ ಮೂಲಕ ವೃಂದಾವನದಲ್ಲಿ ವಸಂತ ಋತುವೇ (ವಸಂತಋತು ಗುಣವೇ) ಕುಂದಿಲ್ಲದೇ ಆನಂದಕರವಾಗಿದ್ದಿತು. ಎನ್ನುವುದನ್ನು ಶ್ರೀಕೃಷ್ಣ ಸಹಾಯವುಳ್ಳ ವಸಂತನು, ಸೂರ್ಯ, ಅಗ್ನಿಗಳ ಸಹಾಯವುಳ್ಳ ಗ್ರೀಷ್ಮನು ಪರಸ್ಪರ ಸ್ಪರ್ಧೆಯನ್ನು ತೋರುತ್ತಾ ಸ್ವಭಾವಗಳನ್ನು ತೋರಿದರೆಂದು ಚಮತ್ಕಾರವಾಗಿ ಗ್ರೀಷ್ಮ ಋತುವನ್ನು ವರ್ಣಿಸುತ್ತಾರೆ.

ತಾಪೇ ತದ್ವನಮಾಧವೇನ ವಿಜಿತೇ ಭಾಸ್ವತ್ಪ್ರಭಾಸಂಭವೇ
ದಾವೇ ಚ ವ್ರಜಮಾಧವೇನ ದಮಿತೇ ಗ್ರೀಷ್ಮೇ ಜಜೃಂಭೇ ಕ್ಷಣಾತ್ ॥
ಕೋಪೇನೈವ ವಸಂತ ಪುಷ್ಪನಿಚಯಂ ಶುಷ್ಕಂ ವಿಧಾಯಾನಿಲಂ
ತಪ್ತಂ ಚಂಪಕಕಂಪಿತಾಂಶ್ಚ ಮಧುಪಾನ್ಪೂಕಾನ್ಪಿಕಾದೀನ್ ಖಗಾನ್ ॥೫॥

ಪ್ರಕಾಶಿಸುತ್ತಿರುವ ಸೂರ್ಯನ ಪ್ರಭಾ ಸಹಾಯ ಸಂಭೂತವಾದ ಗ್ರೀಷ್ಮ ತಾಪವು ವಸಂತನಿಂದ (ವನಮಾಧವನಿಂದ) ಜಿತವಾಗುತ್ತಿರಲು (ಶಾಂತವಾಗುತ್ತಿರಲು) ವ್ರಜಮಾಧವನಾದ ಶ್ರೀಕೃಷ್ಣನಿಂದ ದಾವಾಗ್ನಿಯು ದಮಿತವಾಗುತ್ತಿರಲು (ಶಾಂತವಾಗುತ್ತಿರಲು) ಇಬ್ಬಸಹಾಯಕರ ನಿರೋಧವಾಯಿತೆಂದು ಗ್ರೀಷ್ಮನು ತಕ್ಷಣದಲ್ಲಿಯೇ ಅತಿ ಕೋಪದಿಂದ ಉಕ್ಕಿದವನಾಗಿ, ವಸಂತ ಸಂಬಂಧಿಯಾದ ಪುಷ್ಪಗಳನ್ನು ಒಣಗಿಸುತ್ತಾ, ಚಂಪಕಾದಿ ಪುಷ್ಪಗಳನ್ನು ಕಂಪಿಸಿ ಮೆಲ್ಲ

ಮೆಲ್ಲನೆ ತಣ್ಣಗೆ ಬರುವ ಗಾಳಿಯನ್ನು ಬಿಸಿ ಮಾಡುವವನಾಗಿ ಭ್ರಮರ-ಗಿಳಿ-ಕೋಕಿಲಗಳನ್ನು ಮೂಕನ್ನಾಗಿ ಮಾಡುತ್ತಾ ಜೃಂಭಿಸಿದನು. (ಉದ್ದೀಪ್ತನಾದನು) || ೫ ||

ಪಾಥಃ ಶೀತಮನುಶೀತಲೋಷ್ಣಧರಣೀಂ ಭಾಸ್ವದ್ಬಲೇನೋಷ್ಣಯ-
ನ್ನೂರ್ಧ್ವಗಂ ಗಂಧವಹಂ ನಯನ್ ತ್ರಿವೃತಮಪ್ಯಮ್ಮಾತ್ರಪಾತ್ರಂ ವಪುಃ ||
ಕುರ್ವನ್ಕೃಷ್ಣ ಕೃತೇರ್ವಿರೋಧಮವತದ್ವಾಸಂ ಚ ವಾಃ ಶೋಷಯನ್
ವಿಶ್ವಂ ತಸ್ಯ ವಶಂ ದವೇನ ಚ ದಹನ್ವೈರೀವ ಸೋದೃಶ್ಯತ || ೬ ||

ಗ್ರೀಷ್ಮನು ಅಷ್ಟೇ ಅಲ್ಲದೇ ಶ್ರೀಕೃಷ್ಣನಿಗೂ ವಿರೋಧ ಮಾಡುವವನಾಗಿ (ಯತೋವಾ ಇಮಾನಿ ಭೂತಾನಿ ಜಾಯಂತೇ ಏನ ಜಾತಾನಿ ಜೀವಂತಿ) ಶೃತಿ ಪ್ರಸಿದ್ಧನಾಗಿ ಶೀತ ಸ್ಪರ್ಶವುಳ್ಳ ನೀರೇ ಮೊದಲಾದವುಗಳನ್ನು ಸೃಷ್ಟಿ ಮಾಡಿರುತ್ತಾನೆ. ಅವೆಲ್ಲವುಗಳನ್ನು ನಾನು ವಿರುದ್ಧ ಮಾಡುತ್ತೇನೆಂದು ಪಣತೊಟ್ಟವನಂತೇ ತಣ್ಣಗಿರುವ ನೀರನ್ನು ಬಿಸಿ ಮಾಡುತ್ತಾ, ಭೂಮಿಯನ್ನು ಸುಡುತ್ತಾ, ಸುಗಂಧವಾದ ಗಾಳಿಯನ್ನು ಮೇಲಕ್ಕೆ ತಳ್ಳುತ್ತಾ, ಪಂಚಭೂತಾತ್ಮಕವಾದ ದೇಹಗಳನ್ನು ಜಲಪಾತ್ರಗಳನ್ನಾಗಿ ಮಾಡುತ್ತಾ, ಶ್ರೀಕೃಷ್ಣನ ವಾಸವಾಗಿ ಅವನಿಗಿಷ್ಟವಾದ (ಆಪೋ ನಾರಾ ಇತಿ ಪ್ರೋಕ್ತಾಃ) ಉದಕಗಳನ್ನು ಹಿಂಗಿಸುತ್ತಾ (ಬತ್ತಿಸುತ್ತಾ) ವಿಶ್ವವು ಶ್ರೀಕೃಷ್ಣನ ವಶವಾದುದರಿಂದ ಅವೆಲ್ಲವುಗಳನ್ನು ಸುಟ್ಟು ಬಿಡುತ್ತೇನೆ, ಎಂದು ಸುಡುವವನಾಗಿ ಶ್ರೀಕೃಷ್ಣನಿಗೆ ವೈರಿಯೋ ಎಂಬಂತೆ ತೋರಿದನು. || ೬ ||

ಸುಚ್ಛಾಯೈಃ ಶುಕಮಂಡಿತೈಃ ಶುಭಫಲೈರುದ್ಯತ್ಪ್ರಸೂನೋದ್ಗಮೈ
ವೃಕ್ಷೈರ್ಮಾಧವ ಪಕ್ಷಗೈಃ ಪ್ರಶಮಿತೇ ಖೇದೇ ನಿದಾಘೋದ್ಭವೇ ||
ದೈತ್ಯಃ ಕೋಽಪಿ ತರುತ್ವಮೇತ್ಯ ವರತಸ್ತತ್ಪಕ್ಷಪಾತೀವ ತ-
ಚ್ಛಾಯಯಾ ವಾಸಸುಖಾತ್ ಸಹಸ್ರಗುಣಿತಂ ಶೋಕಂ ವಿತೇನೇವನೇ || ೭ ||

ಶ್ರೀಕೃಷ್ಣನ ಸಹಾಯವುಳ್ಳ ವಸಂತನು, ಸ್ವಪಕ್ಷವಾದ ವೃಕ್ಷಗಳ ಸಮೀಚೀನವಾದ ಸುಚ್ಛಾಯಗಳಿಂದಲೂ ಗಿಳಿಗಳ ಗುಂಪಿನಿಂದಲೂ ಹಣ್ಣು ಹೂವುಗಳಿಂದಲೂ ಗ್ರೀಷ್ಮನಿಂದುಂಟಾದ ತಾಪವನ್ನು ಶಮನ ಮಾಡುತ್ತಿರಲು ಯಾವನೋ ಒಬ್ಬ ದೈತ್ಯನು ಬ್ರಹ್ಮದೇವರ ವರದಿಂದ ಉನ್ಮತ್ತನಾಗಿ ವಿಷವೃಕ್ಷ ರೂಪವನ್ನು ಧರಿಸಿ ವಸಂತನ ಸುಚ್ಛಾಯಾದಿ ಸುಖದಕಿಂತಲೂ ವಿಪರೀತವಾಗಿ ಸಹಸ್ರಗುಣಾಧಿಕವಾದ ದುಃಖವನ್ನೇ ಕೊಡುವವನಾದನು. || ೭ ||

ತರುತ್ವಮಾಪ್ಯಾಪಿ ವನಂ ಮುರಾರೇರದೂಷಯದ್ಧಂತ ವಿಷೈಃ ಸಮಂತಾತ್||
ಸ್ವನಾಸಿಕಾಚ್ಛೇದಮಪೀಹ ಸೋಢ್ವಾ ಖಲೋನಿರುಂಧೇಖಲು ಸತ್ಪ್ರಯಾಣಂ
|| ೮ ||

ಮುರಾರಿಯ ವನದಲ್ಲಿ ಸರ್ವಹಿತಕರವಾದ ವೃಕ್ಷರೂಪವನ್ನು ತಾಳಿದರೂ ತನ್ನ ವಿಷವನ್ನು ಸುತ್ತಲೂ ಹರವುತ್ತಾ ದುಃಖವನ್ನೇ ಕೊಟ್ಟನು. ತನ್ನ ಮೂಗಾದರೂ ಕೊಯಿದುಕೊಂಡು ಇತರರ ಸತ್ಪ್ರಮಾಣವನ್ನು ನಿರೋಧಿಸುವುದು ದುಷ್ಟ ಸ್ವಭಾವವಲ್ಲವೇ ? ॥ ೮ ॥

ವಿನಾಶ್ಯ ವೃಂದಾವನ ವಾಸಿ ಪಕ್ಷಿ ಮೃಗಾದಿ ನಾನಾವಿಧ ಜೀವ ವರ್ಗಂ ॥
ವರಪ್ರದಾತುಸ್ತರಸಾ ವಿಧಾತುರಸೌ ವಿಶಂಕೋ ವಿದಧೇ ಪ್ರತೀಪಂ ॥ ೯ ॥

ವಿಷವೃಕ್ಷ ರೂಪಿಯಾದ ದೈತ್ಯನು ವೃಂದಾವನದಲ್ಲಿದ್ದ ಪಕ್ಷಿಗಳು ಮೃಗಗಳೇ ಮೊದಲಾದ ನಾನಾವಿಧ ಜೀವರಾಶಿಯನ್ನೇ ನಾಶಮಾಡುತ್ತಾ ತನಗೆ ವರ ಕೊಟ್ಟ ಬ್ರಹ್ಮನಿಗೂ ನಿರ್ವಿಚಾರವಾಗಿ ವಿರೋಧವನ್ನು ಕೈಗೊಂಡನು. ॥ ೯ ॥

ತದೀಯ ಗಂಧೇನ ಫಲೇನ ಪುಷ್ಪಕುಲೇನ ಮೂಲಾಶ್ರಯಣೇನ ಲೋಕಃ॥
ತದೈವ ನಾಶಂ ಕಿಲ ಯಾತಿ ಕೃಷ್ಣ ವಿಪಕ್ಷಮೈತ್ರೀ ಕಿಮುಸೌಖ್ಯದಾತ್ರೀ ॥೧೦॥

(ಒಂದೊಂದು ಪ್ರಾಣಿಗೆ ಒಂದೊಂದು ಸ್ಥಳದಲ್ಲಿ ವಿಷವಾದರೂ ದುಷ್ಟರಿಗೆ ಮೈ ಆದ್ಯಂತವೂ ವಿಷವೇ ಎಂಬುದನ್ನು ತೋರಿಸುವವನಾಗಿ) ವಿಷವೃಕ್ಷ ರೂಪಿಯಾದ ದೈತ್ಯನು ತನ್ನ ಹಣ್ಣು ಹೂವು ಎಲೆ ತೊಗಟೆ ನೆರಳು ತನ್ನ ಗಂಧ ತನ್ನಿಂದ ಬಂದ ಗಾಳಿ ಇವುಗಳಲ್ಲಿ ವಿಷವನ್ನೇ ಬಿಡುತ್ತಾ ತನ್ನ ಬಳಿಯಲ್ಲಿ ಅರಿಯದೇ ಗಿಡವೆಂದು ಭ್ರಾಂತರಾಗಿ ಬಂದವರೆಲ್ಲರನ್ನೂ ನಾಶಮಾಡುತ್ತಿದ್ದನು. ಈ ದೃಶ್ಯವು ಕೃಷ್ಣ ವಿರೋಧಿಯಾದವರು ಹೇಗಿದ್ದರೂ ಸಹವಾಸ ಅನರ್ಹರೇ, ಅಂತಹವರ ಸ್ನೇಹವು ಎಂದಿಗಾದರೂ ಸೌಖ್ಯಕೊಡುವುದೇ ? ಎಂಬರ್ಥವನ್ನು ತೋರುತ್ತಿದ್ದಿತು ॥ ೧೦ ॥

ಕಿಂವಾಚ್ಯಮುಸ್ಯಾತಿ ವಿಷೋಲ್ಬಣತ್ವಂ ಯಸ್ಮಾತ್ಸದರ್ವೀಕರ ವರ್ಗಮೌಲಿಃ ॥
ರಾಮೋಽಪಿ ತತ್ಸಂಗತ ವಾಯುನೈವ ಗ್ಲಾನಿಂ ಸತಾಂ ಗ್ಲಾನಿಹರೋಽಪ್ಯವಾಪ ॥ ೧೧ ॥

ಆ ಪಾಪಿಯಾದ ದೈತ್ಯನ ವಿಷದ ಕ್ರೂರತೆಯು ಎಷ್ಟೆಂದು ವರ್ಣಿಸಲು ಯಾರಿಗಾದರೆ ಶಕ್ಯವಾಗುವುದು. ವಿಷ ಪೂರ್ಣವಾದ ಸರ್ಪಗಳಿಗೆ ಒಡೆಯನಾದ ಆದಿಶೇಷ ಸ್ವರೂಪನೇ ಆದ ಬಲರಾಮನು ಸಜ್ಜನರ ತಾಪನಾಶಕನಾದರೂ ಈ ವೃಕ್ಷದ ಗಾಳಿಗೆ ತಾನೇ ತಾಪಗೊಂಡು ಮೂರ್ಛಿತನೇ ಆದನು. ॥ ೧೧ ॥

ಫಲೈಃ ಪ್ರಸೂನೈರ್ವಿಲಸತ್ಪ್ರವಾಲೈರ್ವಿಲೋಲಪರ್ಣೈಃ ಸಶುಭಾಯಿತೋಽಪಿ ॥
ಬಿಭರ್ತಿ ಹಾಲಾಹಲಮೇವ ಮಧ್ಯೇ ಖಲಃ ಪ್ರಕೃತ್ಯಾ ಖಲು ಗೂಢವೃತ್ತಿಃ ॥ ೧೨ ॥

ಹಣ್ಣು ಹೂವು ಚಿಗರು ಎಲೆ ಇವುಗಳಿಂದ ನೋಡಲು ಬಹು ಶೋಭಿತನೇ ಆಗಿದ್ದರೂ ಒಳಗೆ ಹಾಲಾಹಲ ವಿಷವನ್ನೇ ತುಂಬಿಕೊಂಡಿದ್ದನು. ಸ್ವಭಾವತಃ ದುಷ್ಟನು ವಂಚಕನೇ ಆಗಿ ಮೇಲೆ ಸಾಧುವಂತೆ ತೋರುವನಷ್ಟೆ ||೧೨||

ಪತತ್ರಿಣಾಂ ಪತ್ರಫಲಾಶನಾನಾಂ
ವನೇತಿರಮ್ಯೇ ವಸತಾಂ ಸತಾಂಚ ||
ನಿರಾಗಸಾಂ ದ್ರೋಹಮಹೋ ವ್ಯಧಾದ್ಯಸ್ತ-
ಮುಗ್ರನಾಮಾರ್ಹ ಚರಿತ್ರಮೂಹೇ ||೧೩||

ಅತಿರಮ್ಯವಾದ ವನದಲ್ಲಿ ಹಣ್ಣುಕಾಯಿಗಳನ್ನು ತಿನ್ನುತ್ತಾ ಯಾರಿಗೂ ಯಾವತರಹದ ದ್ರೋಹವೂ ಇಲ್ಲದೇ ತ್ರಾಸಕೊಡದೇ ನಿರಪರಾಧಿಗಳಾಗಿ ವಾಸ ಮಾಡುವ ಸಜ್ಜನರಿಗೂ ಪಶುಪಕ್ಷಿಗಳಿಗೂ ತಾಪದಾಯಕನೇ ಆಗಿದ್ದನಾದ್ದರಿಂದ ಇವನಿಗೆ ಉಗ್ರ(ಉಗ್ರಾಸುರ)ಎಂಬ ಹೆಸರು ಯುಕ್ತವೆಂದು ಊಹಿಸುತ್ತೇನೆ ||೧೩||

ನಗಂ ಸಮುತ್ಪಾಟ್ಯ ಸಮಂ ಸಮಾಧಿಕೃ-
ಚ್ಛ್ರಮಾಖ್ಯ ವೃಷೇಣ ಸಗೋಸ್ವ ರೂಪಿಣಃ ||
ಖಲಾಂಶ್ಚ ತೇನೈವ ಜಘಾನ ಲೀಲಯಾ
ಪ್ರಭೋಃಕ್ರಿಯೈಕಾಪ್ಯುರುಕಾರ್ಯಸಾಧಿಕಾ ||೧೪||

ಶ್ರೀಕೃಷ್ಣನು ಆವಿಷವೃಕ್ಷವನ್ನು, ಆಶ್ರಮಗಳಲ್ಲಿರುವ ಋಷಿಗಳ ದೇಹಶ್ರಮದೊಂದಿಗೆ ಬೇರೊರಸಿಯಾಗಿ ಕಿತ್ತಿ ಬಿಸಟು ಅನೇಕ ಗೋರೂಪಿಗಳೇ ಆದ ದೈತ್ಯರುಗಳನ್ನು ವಧಿಸಿ ಶ್ರೀಪ್ರಭುವಾದ ಕೃಷ್ಣನು (ಏಕಾಕ್ರಿಯಾ ಅನೇಕ ಅರ್ಥಕರೀ ಬಭೂವ) ಒಂದೇ ಕೆಲಸದಿಂದಲೇ (ಉಗ್ರ ಗೋರೂಪಿ ದೈತ್ಯರುಗಳ) ಅನೇಕದೈತ್ಯರ ವಧವನ್ನು ಮಾಡಿ ಸಜ್ಜನರನ್ನೂ ರಕ್ಷಿಸಿದನು. ||೧೪||

ಪ್ರಸಂಗಾನುಗುಣವಾಗಿ ಬಂದ ದುಷ್ಟನಿಗ್ರಹವನ್ನು ಹೇಳಿ ಪ್ರಸಕ್ತವಾಗಿದ್ದ ಋತು ವರ್ಣನೆಯನ್ನೇ ಕೈಗೊಳ್ಳುತ್ತಾರೆ.

ಅಹೋ ನಿದಾಘೋತ್ಥಭಯಾದಿವೇಶೋ,ಬಿಭರ್ತಿಗಂಗಾಂ ಜಲಧೌ ಸಶೇತೇ||
ರಮಾಪತಿಂ ಪಂಕಜ ವಿಷ್ಟರಶ್ಚ ಚತುರ್ಮುಖಸ್ತಂ ವಿಷಹೇತ ಕೋನ್ಯಃ||೧೫||

ಬೇಸಗೆಯ ಭಯದಿಂದಲೇ, ಶಿವನು, ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುತ್ತಾನೆ. ರಮಾಪತಿಯಾದ | ಶ್ರೀ ಹರಿಯು ಸಮುದ್ರವನ್ನೇ ಆಶ್ರಯಿಸಿರುತ್ತಾನೆ. ಚತುರ್ಮುಖ ಬ್ರಹ್ಮನಾದರೋ ಇದರ ಭಯದಿಂದಲೇ ಕಮಲವನ್ನಾಶ್ರಯಿಸಿರುತ್ತಾನೆ. ತ್ರಿಮೂರ್ತಿಗಳೇ ಬೇಸಿಗೆಗೆ ಅಂಜಿದ ಮೇಲೆ ಮಿಕ್ಕಮಾನವರಿಗೆ ಈ ಗ್ರೀಷ್ಮನನ್ನು ಸಹಿಸುವುದು ಅಶಕ್ಯವಲ್ಲವೇ ||೧೫||

ತದಾಪಿ ಸಿದ್ಧಾ ಶ್ಚತುರಗ್ನಿಮಧ್ಯೇ ಪ್ರಹೃಷ್ಟರೋಮಾವಲಯಃ ಸ್ಮರಂತಿ ॥
ನಿಮೀಲಿತಾಕ್ಷಾಃ ಪರಮಂ ಪುಮಾಂಸಂ ಫಲಾರ್ಥಿನಾಂ ಕಿಂ ನ ವಿಷಹ್ಯಮಸ್ತಿ
॥ ೧೬ ॥

ಅಂತಹ ಗ್ರೀಷ್ಮಕಾಲದಲ್ಲಿಯೂ ಋಷಿಗಳಾದವರು ತಮ್ಮ ನಾಲ್ಕೂ ಕಡೆಯಲ್ಲಿ ಅಗ್ನಿಯನ್ನೇ ಪ್ರಜ್ವಲಿಸಿ ಅವರ ಮಧ್ಯದಲ್ಲಿ ಆನಂದ ಪುಲಕಾಂಕಿತ ಗಾತ್ರರಾಗಿ ಕಣ್ಣುಗಳನ್ನು ಮುಚ್ಚಿ ಪರಮಪುರುಷನಾದ ಶ್ರೀಹರಿಯನ್ನು ಸ್ಮರಿಸುತ್ತಾರೆ. ಮೋಕ್ಷಾರ್ಥಿಗಳಾದ ಜ್ಞಾನಿಗಳಿಗೆ ಅಸಾಧ್ಯವಾದುದು ಯಾವುದಿದೆ. ॥ ೧೬ ॥

ಸುಶೀತಲಃ ಕೃಷ್ಣಪದಾಂಬುಯುಗ್ಮಮಿತಃ ಸ್ಪೃಶತ್ಯುಜ್ಜ್ವಲಕಾನನಾಗ್ನಿಮ್ ॥
ತತಃ ಸಮುತ್ಥಾಪಯತಿ ಸ್ಮ ವಾಯುರಯಂ ಸ್ವಭಾವಃ ಖಲು ಚಂಚಲಾನಾಮ್
॥ ೧೭ ॥

ವಾಯುವು ವೃಂದಾವನದಲ್ಲಿ ಶೀತಳನಾಗಿ ಸುಗಂಧಯುಕ್ತನಾಗಿ ಶ್ರೀಕೃಷ್ಣನ ಪಾದಪದ್ಮಗಳನ್ನು ಸ್ಪರ್ಶಿಸುತ್ತಲೂ ಇದ್ದನು. ವನಾಂತರಗಳಲ್ಲಿ ಉಜ್ವಲವಾದ ದಾವಾಗ್ನಿಯನ್ನು ಬಲಪಡಿಸುತ್ತಲೂ ಇದ್ದನು. ಯುಕ್ತವೇ ಚಂಚಲ ಸ್ವಭಾವವುಳ್ಳವರು ಸಜ್ಜನರ ಸಮೀಪದಲ್ಲಿ ಸೌಜನ್ಯತೆಯನ್ನು ತೋರುತ್ತಾ ದುರ್ಜನರಲ್ಲಿ ದೌರ್ಜನ್ಯದಿಂದಲೇ ವರ್ತಿಸುವವರಷ್ಟೇ. ॥ ೧೭ ॥

ಪ್ರಿಯಾಸ್ತನಾಪ್ಯಾನ್ಪರಿರಭ್ಯ ಕುಂಭಾನ್ಸುಧಾಂ ತದೀಯಾ ಧರಜಾಂ ಪಿಬಂತಃ
ವಿಂದಂತ್ಯಹೋ ನಾಗರಿಕಾ ನ ತಾಪಂ ನವಾ ಪಿಪಾಸಾಂ ಗಿರಿಕುಂಜವಾಸಾಃ
॥ ೧೮ ॥

ಸ್ವಪ್ರೇಯಸಿಯರಾದ ತಮ್ಮ ತಮ್ಮ ಸ್ತ್ರೀಯರುಗಳ ಸ್ತನಗಳೆಂಬ ಕುಂಭಗಳನ್ನು ಅಪ್ಪಿ ಅವರ ಅಧರಗಳೆಂಬ ಅಮೃತವನ್ನು ಪಾನಮಾಡುವವರಾಗಿ ನಾಗರೀಕರು ಗ್ರೀಷ್ಮನ ತಾಪವನ್ನೇ ಅರಿಯದೇ ಹೋದರು. ಇದು ವಿಹಿತವೇ ಅರಣ್ಯವಾಸಿಗಳು ಪರ್ವತಗಳ ಕುಂಜ ಪ್ರದೇಶವನ್ನು ಆಶ್ರಯಿಸುವವರಾಗಿ ಬಿಸಿಲು ನೀರಡಿಕೆಗಳ ತಾಪವನ್ನು ಕಾಣದೇ ಇರುವವರಷ್ಟೇ. ॥ ೧೮ ॥

ಜಹಾರ ಕೃಷ್ಣಸ್ತಪನೋತ್ಥತಾಪಂ ಮುಖೇಂದುನಾ ದೃಷ್ಟಿಪಥಂ ಗತೇನ ॥
ಸುಧಾರ್ದ್ರ ವೀಕ್ಷಾಮಯವೃಷ್ಟಿಭಿಶ್ಚ ವ್ರಜೌಕಸಾಂ ಕಾನನ ವಾಸಿನಾಂ ಚ
॥ ೧೯ ॥

ಶ್ರೀಕೃಷ್ಣನುತನ್ನ ಮುಖವೆಂಬ ಚಂದ್ರನ ದೃಷ್ಟಿ ಎಂಬ ಚಂದ್ರಿಕೆಯಿಂದ ಬಿಸಿಲಿನ ತಾಪವನ್ನು ಕಳೆಯುವವನಾಗಿ ತನ್ನ ದಯೆ ಎಂಬ ಸುಧಾ ವೃಷ್ಟಿಯಿಂದ ಗೋಕುಲದಲ್ಲಿ ವಾಸಿಸುವ ಸಕಲರಿಗೂ ಆನಂದವನ್ನಿತ್ತು ರಕ್ಷಿಸಿದನು. ॥ ೧೯ ॥

ಲೀಲಾ ನಾಮಕಳಾದ ಗೋಪಾಲ ಬಾಲಿಕಾ ಸ್ವಯಂವರವನ್ನು ವರ್ಣಿಸುತ್ತಾರೆ.

ನೀಲಾಂ ಕುಂಭಕಸಂಭವಾಮಲಭತ ಸ್ವೀಯಾಂ ಸ ಜಿತ್ವಾ ವೃಷಾನ್
ಶೌರಿಃ ಸಪ್ತ ಸ ಚಾಪಿ ನೀಲಮಣಿಭಿರ್ನೀಲಾಂ ಕರೇ ತತ್ಪುರೀಮ್ ॥
ಧಾತೂನ್ಸಪ್ತ ನಿಗೃಹ್ಯ ಕುಂಭಕಬಲಾಚ್ಛೃಂಗ ಪ್ರಹಾರೈರ್ದ್ರವ
ತ್ಕುಂಭಾಭಾಂಗಯುಜೋಽಪರೇಽಪಿ ಬಹವೋ ನೀಲಾಂ ಮುಖಸ್ಯ ಪಭ್ಯಾಂ ॥ ೨೦ ॥

ಶೌರಿಯಾದ ಶ್ರೀಕೃಷ್ಣನು ಸ್ವಯಂವರದಲ್ಲಿ ಏಳು ಹೋರಿಗಳನ್ನು ಜಯಿಸಿ (ಮರ್ದನದಿಂದ ಸಂಹಾರವೇ ಮಾಡಿ) ಕುಂಭಕ ನಾಮಕ ಗೋಪಾಲನ ಪುತ್ರಿಯಾದ ತನಗೆ ಯೋಗ್ಯಳೇ ಆದ ನೀಲಾ ಎಂಬ ಕನ್ಯಾರತ್ನವನ್ನು ಪಡೆದನು. ಕುಂಭಕನೆಂಬ ಗೋಪಾಲಕನಾದರೋ (ರೇಚಕ, ಕುಂಭಕ, ಪೂರಕಗಳೆಂಬ ಪ್ರಾಣಾಯಾಮದಲ್ಲಿಯ) ಕುಂಭಕ ಬಲದಿಂದ ಸಪ್ತ ಧಾತುಗಳನ್ನು (ತ್ವಕ್ಚರ್ಮ ಮಾಂಸ, ರುಧಿರ, ಮೇದೋ, ಮಜ್ಜಾಸ್ತಿ, ಧಾತವಃ) ಜಯಿಸಿ, ನೀಲಾ ಎಂಬ ನೀಲಾದಿ ಮಣಿಮಯವಾದ ಪುರಿಯನ್ನು (ವೈಕುಂಠವನ್ನು) ಕರಗತವನ್ನಾಗಿ ಮಾಡಿಕೊಂಡನು. ಸ್ವಯಂವರದಲ್ಲ ಕನ್ಯಾಭಿಲಾಷಿಗಳಾಗಿ ಬಂದ ಅನೇಕ ರಾಜರುಗಳು ಏಳು ಹೋರಿಗಳ ಶೃಂಗ ಪ್ರಹಾರಾದಿಗಳಿಂದ ರಕ್ತ ಸುರಿವ ಮುಖಾದಿಗಳುಳ್ಳವರಾಗಿ ಮುಖಗಳಲ್ಲಿ ನೀಲಾವನ್ನು ಪಡೆದರು. (ಕಪ್ಪನ್ನು ಪಡೆದರು) ॥೨೦॥

ಈ ಶ್ಲೋಕದಲ್ಲಿ ನೀಲಾ, ಕುಂಭಕ, ಸಪ್ತ ಈ ಪದಗಳ ಸಾಮ್ಯದಿಂದ ಅರ್ಥಾಂತರಗಳನ್ನು ಯೋಜಿಸುತ್ತಾ ಸ್ವಯಂವರದಲ್ಲಿ ಬಂದ ಎಲ್ಲರೂ ಸ್ವಯಂವರ ಮಾಡಿದವನು ಸಹ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಫಲವಾದ ನೀಲಾನನ್ನು ಪಡೆದರು ಎಂದು ಚಮತ್ಕಾರವಾಗಿ ವರ್ಣಿಸಿರುತ್ತಾರೆ.

ಶ್ರೀಕೃಷ್ಣನು ಏಳರಮೂಲಕ(ಏಳುಹೋರಿಗಳನ್ನು ಜಯಿಸಿ) ಕುಂಭಸಿಂದಾ (ತನ್ನಾಮಕ ಗೋಪಾಲಕನಿಂದ) ನೀಲಾನನ್ನು (ಕನ್ಯಾಮಣಿಯನ್ನು) ಪಡೆದನು.

ಕುಂಭಕನೆಂಬ ಗೋಪಾಲಕನು ಏಳರಮೂಲಕ(ಸಪ್ತಧಾತುಗಳನ್ನು ಜಯಿಸಿ) ಕುಂಭಕದಿಂದ ನೀಲಾನನ್ನು(ವೈಕುಂಠ) ಪಡೆದನು. ಬಂದಿದ್ದ ರಾಜರುಗಳು ಏಳರ ಮೂಲಕ (ಹೋರಿಗಳ ಪರಾಜಯ ಮೂಲಕ)ನೀಲಾನನ್ನು ಪಡೆದರು. (ಕಪ್ಪುಮುಖವುಳ್ಳವರಾದರು.

ಅ ಾಪರೋ ರಾಸಭವೇಷಧಾರೀ
ವನಂ ಸಮಾಕ್ರಮ್ಯ ಮುಕುಂದ ಯೋಗ್ಯಂ ॥
ಜಘಾನ ಜಂತೂನ್ಸ್ವತ ತಾದೃಶೋಽಸೌ
ಖರಃ ಪ್ರಕೃತ್ಯೇತಿ ಮಮ ಪ್ರತರ್ಕಃ ॥ ೨೧ ॥

ನೀಲಾ ಸ್ವಯಂವರಾ ನಂತರ ಮತ್ತೊಬ್ಬ ದೈತ್ಯನು (ಖರ) ಕತ್ತೆಯ ವೇಷದನ್ನು ಧರಿಸಿ ಮುಕುಂದನ ಸೇವಾರ್ಹವಾದ ವೃಂದಾವನವನ್ನು ಆಶ್ರಯಿಸಿ ಬಹು ಪ್ರಾಣಿಗಳನ್ನು ಕೊಂದನು. ಮೋಕ್ಷದಾಯಕನಾದ ಶ್ರೀಕೃಷ್ಣನ ಯೋಗ್ಯವನದಲ್ಲಿ ಈ ರೀತಿ ವರ್ತಿಸಬೇಕಾದರೇ ಅವನು ರೂಪಮಾತ್ರದಿಂದಲ್ಲದೇ ಸ್ವಭಾವದಿಂದಲೂ ಖರನೇ (ಕತ್ತೆಯೇ) ಆಗಿರಬೇಕೆಂದು ತರ್ಕಿಸುತ್ತೇನೆ. ॥ ೨೧ ॥

ಕ್ಷುಧಾತಿಲೋಲಾಃ ಕಿಲಗೋಪಬಾಲಾಃ
ಸಹಾಚ್ಯುತೇನಾ ಭಿಯಯುರ್ವನಂ ತತ್ ॥
ತಥಾ ಹಿ ದುಷ್ಟಸ್ಯ ವಿನಾಶತೋನ್ಯ
ತ್ಸತಾಂ ಮನಸ್ತೃಪ್ತಿಕರಂ ಕಿಮಸ್ತಿ ॥ ೨೨ ॥

ಅತಿ ನೀರಡಿಸಿದ ಕೃಷ್ಣಾನುಚರರಾದ ಗೋಪಾಲ ಬಾಲಕರೆಲ್ಲರೂ ಅಚ್ಯುತನಿಂದ ಕೂಡಿ ಖರನಿಂದ ವಾಸಿಸಿದ ತಾಳಾವನವನ್ನು ಕುರಿತು ಹೋದರು. ಅದು ವಿಹಿತವೇ. ಸತ್ಪುರುಷರಿಗೆ ದುಷ್ಟರ ವಿನಾಶದಕಿಂತಲೂ ತೃಪ್ತಿಕರವಾದುದು ಮತ್ತಾವುದೂ ಇಲ್ಲವಷ್ಟೇ. ॥ ೨೨ ॥

ಅಥಾಸಸಾದಾ ಸುರವರ್ಗವರ್ಯೋ ಬಲಶ್ಚ ತಂ ಪ್ರತ್ಯಗಮುದ್ಬಲಾಢ್ಯಃ ॥
ನಿಜಧ್ವಜಕ್ಷ್ಮಾಜಶಮಾಜರಾಜದ್ವನಂ ತದಾಕ್ರಾಂತ ಮಿವೇರ್ಷ್ಯಮಾಣಃ
॥ ೨೩ ॥

ತಾಳಾವನ ಗಮನಾನಂತರ ಅಸುರರ ವರ್ಗಕ್ಕೇ ಹಿರಿಯನಾದ ಆ ಖರಾಸುರನು ಕತ್ತೆಯ ವೇಷವನ್ನು ಧರಿಸಿ ಯುದ್ಧಕ್ಕೆ ಬಂದನು. ಎದುರಾಗಿ ಬಲರಾಮನು ಹೋದನು (ಅದನ್ನು ಉತ್ಪ್ರೇಕ್ಷಿಸುತ್ತಾರೆ) ನನ್ನ ಧ್ವಜದ ಚಿಹ್ನೆ ತಾಳಾವೃಕ್ಷವು ಆ ವೃಕ್ಷಗಳ ವನವು ನನಗೆ ಪ್ರಿಯವು ಅದನ್ನು ಇವನು ಆಶ್ರಯಿಸಿರುವವನಲ್ಲ ಎಂಬ ಸಿಟ್ಟಿನಿಂದಲೋ ಎಂಬಂತಿದ್ದಿತು. ॥ ೨೩ ॥

ಸಧೇನುಕಸ್ತಂ ನಿಜಪಾರ್ಷ್ಣಿಪದ್ಭ್ಯಾಂ ಪ್ರತಾಡಯನ್ ಗಾಢಮಸಹ್ಯಸತ್ವಃ ॥
ಪ್ರಗೃಹ್ಯ ತಾವುತ್ಕ್ಷಿಪತೋ ಬಲಸ್ಯ ಖಲಃ ಸಹಾಯೋ ಭವದಸ್ತಮಾಯಃ
॥ ೨೪ ॥

ಅಗಾಧವಾದ ಬಲವುಳ್ಳ ಮಹಾ ದುಷ್ಟನಾದ ಕತ್ತೆ ರೂಪವನ್ನು ಧರಿಸಿದ ಆ ಧೇನುಕಾಸುರನು ತನ್ನ ಹಿಂಗಾಲುಗಳಿಂದ ಒದ್ದನು. ಆವನ ಕಾಲುಗಳನ್ನೇ ಹಿಡಿದು ಮೇಲಕ್ಕೆ ಎಸೆದು ಕೊಲ್ಲಲಿಚ್ಛೆಯುಳ್ಳ ಬಲರಾಮನಿಗೆ ಅವನ ಚೇಷ್ಟೆಯು ಅನುಕೂಲವೇ ಆಯಿತು. ॥ ೨೪ ॥

ಉತ್ಕ್ಷಿಪ್ಯ ತಂ ತಾಲಮಹೀರುಹಾಗ್ರೇ
ಸಂಪ್ರೇಷಯಾಮಾಸ ಸತಾಂ ವಿಪಕ್ಷಾನ್ ॥
ವಿಷ್ವಕ್ಫಲಾಲಂಬಿನಿ ಪಾದಪಾಗ್ರೇ
ಧೃತೋಪಲಂ ಬಾಲಜನಾತ್ತಲೀಲಃ ॥ ೨೫ ॥

ಹಣ್ಣುಗಳಿಂದ ತುಂಬಿದ್ದ ಗಿಡವನ್ನು ಹುಡುಗರು ಕಲ್ಲುಗಳನ್ನೊಗೆಯುವಂತೆ ಈ ದೈತ್ಯನನ್ನು ಎತ್ತಿ ತಾಳಾವೃಕ್ಷಕ್ಕೆ ಆಟವಾಗಿ ಒಗೆದರು. ॥ ೨೫ ॥

ವ್ಯಸುರಥ ನಿಪತನ್ ಸ ಸ್ವಾಂಘ್ರಿಪಾನೇವ ಶಾಂಘ್ರಿ
ದ್ಗರುತಮ ತನುರುಚ್ಚೈಃ ಪಾತಯಾಮಾಸ ದೈತ್ಯಃ ॥
ಹರಿಪದವಿಮುಖಾನಾಂ ಪೋಷಣ ಸ್ಯೋಚಿತಂ ತೇ
ಫಲಮಲಭಿಷತಾಂ ತ್ಯೈಃ ಸಹೇತ್ಯಸ್ಮದೂಹಃ ॥ ೨೬ ॥

ಧೇನುಕಾಸುರನು ಮೇಲಿಂದ ಬೀಳುತ್ತಾ ಪ್ರಾಣವನ್ನು ಬಿಡುವುದಲ್ಲದೇ ದೊಡ್ಡ ದೇಹವುಳ್ಳವನಾಗಿ ಅನೇಕ ತನ್ನ ಗಿಡಗಳನ್ನೇ ಕೆಳಗೆ ಕೆಡುವುತ್ತಾ ಬಿದ್ದನು. ಅದು ಸರಿಯೇ ಪರಮಾತ್ಮನ ಪಾದ ವಿಮುಖರಿಗೆ ಆಶ್ರಯವನ್ನು ಕೊಟ್ಟರಿಷ್ಟೆ ಫಲವೆಂಬುದನ್ನು ನಾನು ಊಹಿಸುತ್ತೇನೆ. ॥ ೨೬ ॥

ಮುನಿಕೃತಾಗ್ರಜನಾಮ ಗುಣೋಚಿತಂ ವಿರಚಯನ್ನಿವ ಸಾನುಗಧೇನುಕಂ॥
ಹಲಧರೇಣ ಹತಂ ಸಮಕಾರಯತ್ಸುರನತೋ ರಣತೋಷಿತನಾಕಿನಾ ॥೨೭॥

ಧೇನುಕಾಸುರನ ರಣದಿಂದ ಸಂತುಷ್ಟರಾದ ಸ್ವರ್ಗೀಯ ದೇವತೆಗಳಿಂದ ಸ್ತುತ್ಯನಾದ ಶ್ರೀಕೃಷ್ಣ ಪರಮಾತ್ಮನು ಮುನಿಗಳಾದ ಗರ್ಗಾಚಾರ್ಯರಿಂದ ಕೃತವಾದ ಬಲರಾಮನೆಂಬ ನಾಮಕರಣವನ್ನು ಅಣ್ಣನಿಗೆ ಸಾರ್ಥಕ ಮಾಡುವವನಾಗಿ ಪರಿವಾರದೊಂದಿಗೆ ಧೇನುಕಾಸುರನನ್ನು ಹಲಧರನಿಂದಲೇ (ನೇಗಿಲು ಪಾಣಿ) ಸಂಹಾರ ಮಾಡಿಸಿದನು. ॥ ೨೭ ॥

ಗ್ರೀಷ್ಮೇ ಭಾಸ್ವತಿ ಚಾಪರಾಧಿಕೃತಿ ಸಂಕ್ರುದ್ಧಃ ಪ್ರಲಂಬಂ ಹಲೀ
ಲೀಲಾಯಾಶ್ಫಲತೋ ಜಘಾನ ಮುರಜಿದ್ವ್ಯೋಮಂ ಮಯಸ್ಯಾತ್ಮಜಂ ॥
ಯುಕ್ತಂ ತದ್ಧಿ ಮನಃ ಪ್ರಿಯಾನ್ ಜನಯಿತಾಸಂತರ್ಜಯನ್ಸ್ವಾನ್ ಶಿಶೂನ್
ತತ್ಪ್ರಾಂತಸ್ಥ ಶಿಲಾದಿ ಹಸ್ತಲಗುಡೈಸ್ತಪ್ತೋಽಪಿ ಯತ್ತಾಡಯೇತ್ ॥ ೨೮ ॥

ಗ್ರೀಷ್ಮ ಋತುವು ಪ್ರಬಲವಾಗುತ್ತಿರಲು ಅಪರಾಧಿಯಾದ ಗ್ರೀಷ್ಮನಲ್ಲಿ ಸಿಟ್ಟಿನಿಂದಲೋ ಎಂಬಂತೆ ಬಲರಾಮನು ಹಲಧರನಾಗಿ ಪ್ರಲಂಬಾಸುರನನ್ನು ಮುರಾರಿಯು ಮಯಪುತ್ರನಾದ ವ್ಯೋಮನನ್ನು ಅನಾಯಾಸವಾಗಿ ಸಂಹರಿಸಿರನು. ಆ ದೃಶ್ಯವು ತನ್ನ ಮಕ್ಕಳಲ್ಲಿ ಸಿಟ್ಟಿನಿಂದ ತಂದೆಯಾದವನು ತನ್ನಿಷ್ಟವನ್ನು

ಸಾಧಿಸುವವನಾಗಿ ಮಕ್ಕಳನ್ನು ಝುಬರಿಸುತ್ತಾ ಸಮೀಪದಲ್ಲಿರುವ ನೆಲವೇ ಮೊದಲಾದವುಗಳನ್ನು ಕಟ್ಟಿಗೆಯೇ ಮೊದಲಾದವುಗಳನ್ನು ಹಿಡಿದು ತಟ್ಟುವ ಸ್ವಭಾವದಂತಿದ್ದಿತು. ॥ ೨೮ ॥

ಪರಾಭವಂ ವೀಕ್ಷ್ಯತತೋ ನಿದಾಘಃ
ಸಸರ್ಜ ದಾವಾನಲ ಮುಜ್ಜ್ವಲಂತಮ್ ॥
ಹರಿಃ ಪಪೌ ತಂ ಚ ಜಗನ್ನಿವಾಸೋ
ವಿನಾಶ ಶೂನ್ಯಸ್ಯ ಹಿಕಿಂ ನ ಕಾರ್ಯಮ್ ॥ ೨೯ ॥

ಗ್ರೀಷ್ಮನು (ಗ್ರೀಷ್ಮಋತುವು) ತನ್ನ ಪರಾಭವವನ್ನು ಕಂಡು ಉಜ್ವಲವಾದ ದಾವಾಗ್ನಿಯನ್ನೇ ಹುಟ್ಟಿಸಿ ಹೊರಟೇ ಹೋದನು. ಜಗದ್ರಕ್ಷಕನಾದ ಜಗದ್ವ್ಯಾಪ್ತನೂ ಆದ ಶ್ರೀಕೃಷ್ಣನು ಅದನ್ನೂ ಪುನಃ ಪಾನವೇ ಮಾಡಿದನು. ನಾಶದಿಂದಲೇ ರಹಿತನಾದವನಿಗೆ ಅಸಾಧ್ಯ ಕಾರ್ಯ ಯಾವುದು ? ॥ ೨೯ ॥

ಸಮಯೋಚಿತವಾಗಿ ವರ್ಷ ಋತುವನ್ನು ವರ್ಣಿಸುತ್ತಾರೆ.

ಮೇಘಾಃ ಸವರ್ಣಸ್ಯ ಹರೇಃ ಸಹಾಯಂ
ಪ್ರಾಯೋ ವಿಧಾತುಂ ಪರಿತಃ ಸಮೇತ್ಯ ॥
ಭಾಸ್ವಂತ ಮುಂಗ್ರೈಃ ಪಯಸಾ ನಿದಾಘ
ಮಾಚ್ಛಾದ್ಯ ವಿಶ್ವಂ ಪುಪುಷುಸ್ತದೀಯಮ್ ॥ ೩೦ ॥

ಮೇಘಗಳು ಶ್ರೀಕೃಷ್ಣನ ದೇಹವನ್ನು ನೋಡಿ ಸಮಾನ ವರ್ಣನಾದುದರಿಂದ ಬಹು ಪ್ರೀತಿಯನ್ನುಂಟು ಮಾಡಬೇಕೆಂದೋ ಎಂಬಂತೆ ಸುತ್ತಲೂ ಬಂದು ಸುಡುತ್ತಲಿರುವ ಗ್ರೀಷ್ಮನನ್ನು ಅಡ್ಡಗಟ್ಟಿ ಶ್ರೀಕೃಷ್ಣನ ಸಂಬಂಧವಾದ ವನಗಳೆಲ್ಲವನ್ನೂ ನೀರಿನಿಂದಾ ವೃಷ್ಟೀಕರಿಸಿ ಪುಷ್ಟಿಯೊಂದಿಗೆ ತುಷ್ಟಿಪಡಿಸಿದವು. ॥ ೩೦ ॥

ಆಶ್ರಿತ್ಯ ವಿಷ್ಣುಪದಮರ್ಥಿಷು ಯಚ್ಛತೋಂಬು
ಮೇಘಸ್ಯ ಸಾರಥಿರಭೂಜ್ಜಲನಾಯಕೋಪಿ ॥
ನಿತ್ಯಂ ಮುಕುಂದ ಚರಣಾರ್ಪಿತ ವೈಭವಸ್ಯ
ಮತ್ರ್ಯೋಪಕಾರನಿರತಸ್ಯ ನ ಕಃ ಸಹಾಯಃ ॥ ೩೧ ॥

ವಿಷ್ಣುಪದವನ್ನು (ಆಕಾಶವನ್ನು) ಆಶ್ರಯಿಸಿ ಅಪೇಕ್ಷಿಸುವವರಿಗೆ ಯಥೇಚ್ಛ ನೀರನ್ನು ಕೊಡುವ ಮೇಘಗಳಿಗೆ ಜಲನಾಯಕನಾದ ವರುಣನು ಸಾರಥಿಯಾದನು. ಇದು ವಿಹಿತವೇ ನಿರಂತರವೂ ಮುಕುಂದನ ಪಾದಗಳನ್ನಾಶ್ರಯಿಸಿರುವ ವೈಭವವುಳ್ಳ ಪರೋಪಕಾರಿಯಾದವರಿಗೆ ಯಾರಾದರೇ ಸಹಾಯಕರಾಗುವುದಿಲ್ಲ. ॥ ೩೧ ॥

ಲೋಕಸ್ಯ ಶೋಕ ಹರ ನಾಯರ್ಭಿ ವರ್ಷತೋಲಂ
ಮೇಘಸ್ಯ ಯೋಗಕೃದ ಭೂದಮತೋಪಿ ವಾತಃ ||
ಕಾಮಂ ಪರೋಪ ಕೃತಿಲಗ್ನ ಮನೋರಥಾನಾಂ
ಕ್ಷೇಮಂಕರತ್ವ ಮುಪಯಾಂತಿ ಹಿ ಶತ್ರವೋಪಿ , ||೩೨||

ಲೋಕದಲ್ಲಿ ಶೋಕನಾಶಕವಾದ ನೀರನು ಕೊಡುವ ಮೇಘಗಳಿಗೆ ಗಾಳಿಯು ಸ್ವಾಭಾವಿಕವಾಗಿ ಅಸಮ್ಮತವೇ ಆದರೂ ಆ ವೇಳೆಯಲ್ಲಿ ಅನುಕೂಲವೇ ಆಗಿದ್ದಿತು. ಸ್ವತಃ ಪರೋಪಕಾರಾಸಕ್ತ ಮನೋರಥವುಳ್ಳವರಿಗೆ ಶತೃಗಳಾದರೂ ಆ ಸಂದರ್ಭದಲ್ಲಿ ಮಿತ್ರರೇ ಆಗುತ್ತಾರೆ. ||೩೨||

ವಿಶೇಷ ವೃಷ್ಟಿಯನ್ನು ದೃಷ್ಟಾಂತಾಲಂಕಾರದಿಂದ ವರ್ಣಿಸುತ್ತಾರೆ.

ಉದ್ಯದ್ವಿದ್ಯುತಿ ವಕ್ರಶಕ್ರಧನುಷಿ ವ್ಯೋಮಾಗ್ರ ಸೀಮಾಶ್ರಯೇ
ವರ್ಷತ್ಯೂರ್ಜಿತ ಗರ್ಜಿತೇತಿ ಚಕಿತಾ ಮರ್ತ್ಯಾಃ ಪಯೋಧಾರಿಣಿ||
ನೇತ್ರಾಂತ ಭ್ರುಕುಟೀಬಲಂ ಕೃಶಲಸನ್ಮಧ್ಯೋಧ್ರ್ವ ಭಾಗೋದಿತಂ
ನಾರೀಪೀನ ಪಯೋಧರಂ ಭಯಹರಂ ಭೇಜುಃ ಕ್ವಣದ್ಭೂಷಣಮ್ ||೩೩||

ಮಿಂಚುಗಳು ಎದ್ದೆದ್ದು ಹೊಳೆಯುತ್ತಾ ಕಾಮನಬಿಲ್ಲು ಆಕಾಶಾಗ್ರಭಾಗವನ್ನು ಆಶ್ರಯಿಸಿ ಪಯೋಧರಗಳು (ಮೇಘಗಳು) ಗಟ್ಟಿಯಾಗಿ ಗುಡುಗುತ್ತಾ ಮಳೆಗರೆಯಲು ಪ್ರಜರೆಲ್ಲರೂ ಭಯಗೊಂಡವರಾಗಿ ಕಡೆಗಣ್ಣೋಟಗಳುಳ್ಳ ಹುಬ್ಬುಗಳ ಚಲನ ಬಲವುಳ್ಳ ಕೃಶಮಧ್ಯತೆಯಿಂದ ಅಲಂಕೃತವಾದ ಮೇಲ್ಭಾಗದಲ್ಲೇ ಧರಿಸಿರುವ ಝಂಕರಿಸುವ ಆಭರಣಗಳುಳ್ಳ ನಾರಿಯರ ಪೀನಪಯೋಧರವನ್ನಾಶ್ರಯಿಸಿ ನಿರ್ಭೀತರಾದರು. ಲೋಕದಲ್ಲಿ ಒಬ್ಬ ರಾಜನಿಂದ ಭಯಗೊಂಡ ಮನುಷ್ಯನು ಮತ್ತೊಬ್ಬ ರಾಜನನ್ನು ಆಶ್ರಯಿಸಿ ಹೇಗೆ ನಿರ್ಭೀತನಾಗುವನೋ ಹಾಗೆಯೇ ಒಂದು ಪಯೋಧರ(ಮೇಘ)ದಿಂದ ಬಯಗೊಂಡ ಪ್ರಜರುಗಳು ಮತ್ತೊಂದು ಪಯೋಧರ(ಸ್ತ್ರೀ ಸ್ತನ)ಗಳ ಆಶ್ರಯದಿಂದ ನಿರ್ಭೀತರಾದರು. ಪಯೋಧರ ಶಬ್ದವು ಮೇಘ, ಸ್ತನ, ಉಭಯ ಸಾಮಾನ್ಯಾರ್ಥವಾದುದರಿಂದ ಚಮತ್ಕಾರವಾಗಿ ಈ ಶ್ಲೋಕದಲ್ಲಿ ಮೇಘಗಳಿಗೂ ಸ್ತ್ರೀಯರ ಸ್ತನಗಳಿಗೂ ಆಕಾಶಕ್ಕೂ ತನು ಮಧ್ಯತೆ(ಉದರ)ಗೂ ಮಿಂಚಿಗೂ ಕಡೆಗಣ್ಣೋಟಗಳಿಗೂ ಕಾಮನಬಿಲ್ಲಿಗೂ ಹುಬ್ಬುಗಳಿಗೂ ಧ್ವನಿಗರೆವ ಆಭರಣಗಳಿಗೂ ಗುಡುಗುಗಳಿಗೂ ದೃಷ್ಟಾಂತ ದಾರ್ಷ್ಟಾಂತಿಕ ಭಾವದಿಂದ ವರ್ಣಿಸಿರುತ್ತಾರೆ. ||೩೩||

ಬೇಸಿಗೆ ಕಾಲದಲ್ಲಿ ಆವಿ ರೂಪವಾಗಿ ನದಿ, ಸಮುದ್ರೋದಕಗಳು ಬಿಂದು ರೂಪವಾಗಿ ಆಕಾಶದಲ್ಲಿರುವ ಮೋಡಗಳಲ್ಲಿ ಸೇರುವುದು ಪ್ರಸಿದ್ಧವಷ್ಟೇ. ಅದನ್ನು ಉಪಮಾನವಾಗಿ ಸತ್ಪಾತ್ರದಾನ ಫಲವನ್ನು ಈ ಶ್ಲೋಕದಲ್ಲಿ ವರ್ಣಿಸುತ್ತಾರೆ.

ಕಾದಂಬಿನ್ಯೈ ವಿತರತಿ ಪಯೋ ಬಿಂದುಮಾತ್ರಂ ಪಯೋಧಾ
ವಾಸೀದ್ವೃದ್ಧಿಃ ಸಕಲಸರಿತಾಂ ಸ್ವಾತ್ಮಸಖ್ಯೇತಿ ಯುಕ್ತಮ್ ||
ನಿತ್ಯಂ ವಿಷ್ಣೋಃ ಪದಮಧಿಗತಾಯಾತ್ಯುದಾರಾಯ ದಾನಾ
ದಬ್ಬಿಂದೂನಾಮಪಿ ಶತಗುಣಾ ವೃದ್ಧಿರದ್ಧಾ ಸ್ವವರ್ಗೇ ||೩೪||

ಮೇಘಗಳ ಸಾಲಿನಲ್ಲಿ ನೀರಿನ ಹನಿಗಳನ್ನು ಮಾತ್ರ ಕೊಟ್ಟ ಫಲವಾಗಿ ನದಿಗಳೂ ಸಮುದ್ರವೂ ಸದಾ ಸಮೃದ್ಧಿಯನ್ನೇ ಗೊಂಡವು. ಅದು ಯುಕ್ತವೇ ನಿತ್ಯದಲ್ಲೂ ಪರಮಾತ್ಮನ ಪಾದಾರವಿಂದವನ್ನಾಶ್ರಯಿಸಿ ಅತ್ಯುದಾರನಾದವನಿಗೆ ನೀರಿನ ಹನಿಗಳನ್ನು ಕೊಟ್ಟರೂ ಕೊಟ್ಟವನ ವಂಶಕ್ಕೆ ಅದರ ನೂರರಷ್ಟು ಪ್ರತಿಫಲಿಸುತ್ತದೆಯಷ್ಟೇ. || ೩೪ ||

ಮೇಘಾಗಮೋಸಹ್ಯಮಪಿ ಪ್ರಜಹ್ರೇ
ಗ್ರೀಷ್ಮಸ್ಯ ಸತ್ವಂ ಸಕಲಂ ತಥಾ ತತ್ ||
ಸರ್ವಂಸಹಾ ಜೀವನ ಹರ್ತುರಸ್ಯ
ದುರ್ವಾರತೇಜೋಪಿ ಕಿಮೇತಿ ವೃದ್ಧಿಮ್ || ೩೫ ||

ಮೇಘಗಳ ಬರುವಿಕೆಯು ಗ್ರೀಷ್ಮನ ಸಾಮರ್ಥ್ಯವು ಎಷ್ಟು ಧಾರಣಾಶಕ್ಯವಾಗಿ ಅಗಾಧವಾಗಿದ್ದರೂ ಅಷ್ಟನ್ನೂ ಅಪಹಾರವೇ ಮಾಡಿತು (ಕಳದೇಬಿಟ್ಟಿತು). ಅದು ಯುಕ್ತವೇ ಸರ್ವವನ್ನೂ ಸಹಿಸುವರ (ಭೂದೇವಿಗೆ)ಜೀವನವನ್ನು(ನೀರನ್ನು) ಅಪಹರಿಸುವವನಿಗೆ ಎಷ್ಟು ಸಾಮರ್ಥ್ಯವಿದ್ದಾಗ್ಯೂ ಅದು ಹೇಗೆ ವೃದ್ಧಿಯನ್ನು ಹೊಂದುವುದು ? (ವರ್ಷಋತುವು ಬಂದು ಭೂದೇವಿಯ ಜೀವನವಾದ ನೀರನ್ನು -- ಇಳಿಸುವ ಗ್ರೀಷ್ಮಋತುವಿನ ಸಾಮರ್ಥ್ಯವನ್ನು ಕಳೆಯಿತು. ಬಹುಸಹನಶೀಲಳಾದ ಹೆಣ್ಣಿಗೆ ಪ್ರಾಣಾಂತಕವಾದ ದೌರ್ಜನ್ಯಕಾರಕನಾದವನಿಗೆ ಎಷ್ಟು ಸಾಮರ್ಥ್ಯವಿದ್ದರೂ ಅದು ವೃದ್ಧಿಯನ್ನು ಹೊಂದುವುದಿಲ್ಲ; ಎಂಬ ಲೋಕೋಕ್ತಿಯನ್ನು ನಿದರ್ಶಿಸಿರುತ್ತಾರೆ.) || ೩೫ ||

ಶರದೃತುವನ್ನು ಶ್ರಿಮದಾನಂದ ತೀರ್ಥರ ಸತ್ತೀರ್ಥ ದೃಷ್ಟಾಂತದಿಂದ ವರ್ಣಿಸಿರುತ್ತಾರೆ.

ಸಾಧೂನಾಂ ವರಮಾನಸಾ ಕೃತಿಸರಃ ಸಂಶೋಧಯತ್ತನ್ಮುಖ-
ಪ್ರಖ್ಯಂ ಪದ್ಮಚಯ ಪ್ರಹರ್ಷಯದಲಂ ಪಂಕಂ ಚ ಸಂಖಂಡಲಯತ್ ||
ಹೃದ್ಯೋಮೇವ ಘನಾಪಿ ಧಾನರಹಿತಂ ಕುರ್ವನ್ನಭಃ ಸಂಹರ
ತ್ತಾಮಿಸ್ರಂ ಹರಿವೀರ್ಯ ಕೀರ್ತಿಸದೃಶೋ ಸೂರ್ಯೋಡುಪೌ ಸ್ಪಷ್ಟಯತ್
|| ೩೬ ||

ಸಮೀಚೀನವಾದ ಶ್ರೀಮನ್ಮಧ್ವಶಾಸ್ತ್ರವು ಹೇಗೆ ಸಜ್ಜನರ ಮನಸ್ಸನ್ನು ಶೋಧಿಸುತ್ತಾ ಸಜ್ಜನರ ಮುಖಕಮಲಗಳನ್ನು ಹರ್ಷಯುಕ್ತವನ್ನಾಗಿ ಮಾಡುತ್ತ ಪಾಪ ಪಂಕವನ್ನು ಖಂಡಿಸಿ ಹೃದಯದಲ್ಲಿ ಪ್ರಕೃತ್ಯಾತ್ಮಕ ಪ್ರತಿಬಂಧಕವನ್ನು ಕಳೆಯುವುದಾಗಿಯೂ ಅಜ್ಞಾನವೆಂಬ ಕತ್ತಲೆಯನ್ನು ಕಳೆದು ಶ್ರೀಹರಿಯ ವೀರ್ಯ ಕೀರ್ತಿಗಳನ್ನು ಸ್ಪಷ್ಟಿಕರಿಸುವುದೋ ಅದೇ ರೀತಿಯಾಗಿಯೇ ಶರತ್ಕಾಲವು ಸರೋವರಗಳ ಉದಕಗಳನ್ನು ಸ್ವಚ್ಛಮಾಡುತ್ತಾ ಕಮಲಗಳನ್ನು ಅರಳಿಸುತ್ತಾ ಛಳಿಯನ್ನು ಖಂಡಿಸುತ್ತಾ ಆಕಾಶದಲ್ಲಿ ಮೇಘಗಳನ್ನು ಕಳೆಯುತ್ತಾ ಆಕಾಶವನ್ನು ಸ್ವಚ್ಛವನ್ನಾಗಿ ಮಾಡುತ್ತಾ ಸೂರ್ಯಚಂದ್ರರ ಕಾಂತಿಗಳನ್ನು ಸ್ಪಷ್ಟೀಕರಿಸುವವಾಗಿ ಒದಗಿತು. ॥ ೩೬ ॥

ಈ ಶ್ಲೋಕದಲ್ಲಿ

ಶರದೃತುವಿಗೂ	ಶ್ರೀಮನ್ಮಧ್ವಶಾಸ್ತ್ರಕ್ಕೂ
ಸರೋವರಗಳಿಗೂ	ಸಜ್ಜನರ ಸಮೂಹಕ್ಕೂ
ಕಮಲಗಳಿಗೂ	ಸಜ್ಜನರ ಮುಖಗಳಿಗೂ
ಪಾಪಗಳಿಗೂ	ಛಳಿಗೂ
ಹೃದಯಕ್ಕೂ	ಆಕಾಶಕ್ಕೂ
ಮೋಡಗಳಿಗೂ	ಸುಖ ಪ್ರತಿಬಂಧಕವಾದ ಪ್ರಕೃತಿ ಬಂಧಕಗಳಿಗೂ
ಅಜ್ಞಾನಕ್ಕೂ	ಕತ್ತಲೆಗೂ
ಶ್ರೀಹರಿಶೌರ್ಯ ಕೀರ್ತಿಗಳಿಗೂ	ಸೂರ್ಯಚಂದ್ರರ ಕಾಂತಿಗಳಿಗೂ

ದೃಷ್ಟಾಂತ ದಾರ್ಷ್ಟಾಂತಿಕ ಭಾವವಾಗಿ ವರ್ಣಿಸಿರುತ್ತಾರೆ.

ಸಂಸಾರಾಖ್ಯಮಭೇದ್ಯ ಬಂಧನಮಿವ ಪ್ರಾವೃಟ್‌ಕೃತಂ ಬಂಧನಂ
ಭಿಕ್ಷೂಣಾಂ ವಣಿಜಾಮಥಃ ಕೃತಜಲಂ ವಿಚ್ಛೇದಯನ್ಮೋದಯತ್ ॥
ಮೋಕ್ಷಾನಂದ ಮಹಾಪ್ರವಾಹ ತುಲನೈರ್ಗೋಕ್ಷೀರಪಾನೈರ್ಜನಾನ್
ಸಚ್ಛಾಸ್ತ್ರಪ್ರತಿಕೃತ್ಯಲಕ್ಷ್ಯತ ಶರತ್ಸಾಮ್ರಾಜ್ಯಮುಜ್ಜೃಂಭಿತಂ ॥ ೩೭ ॥

ಸನ್ಯಾಸಿಗಳಿಗೂ ವ್ಯಾಪಾರಿಗಳಿಗೂ ಅಭೇದ್ಯ ಸಂಸಾರಬಂಧನದಂತೇ ಇರುವ ವರ್ಷಋತುವಿನಿಂದಾದ ಬಂಧನವನ್ನು ಕಡಿದು ಆನಂದ ಕೊಡುವುದಾಗಿ (ಶರದೃತುವಿನಲ್ಲಿ ಹಸಿಹುಲ್ಲುಗಳಿಂದ ದನಗಳು ಹೆಚ್ಚು ಹಾಲು ಕರೆಯುವುದರಿಂದ) ಮೋಕ್ಷಾನಂದ ಪ್ರವಾಹ ಸಮವಾದ ಗೋಕ್ಷೀರಗಳನ್ನು ಹರಿಸುತ್ತಾ ಸಚ್ಛಾಸ್ತ್ರ ಪ್ರತಿನಿಧಿಯಂತೇ ಶರತ್ಸಾಮ್ರಾಜ್ಯವು ಎದ್ದು ಹೊಳೆಯಿತು. ॥ ೩೭ ॥

ಪದ್ಮಾಸೇವ್ಯ ಗುಣೌಘವಿಸ್ತೃತಿಕರಃ ಸ್ಪಷ್ಟೀಭವಚ್ಛಾರದಾ
ನಂದಃ ಕಂಪಿತ ಭೋಗಿರಾಜಶಿರಸಾ ಮಾನ್ಯಾಗಮಃ ಸಂತತಮ್ ||
ಸನ್ಮಾರ್ಗಾಶ್ರಿತ ಪಂಕಶೋಷಣಕರಃ ಸಪ್ತಾಂಥ್ಥಧರ್ಮಾಪಹೋ
ನಿತ್ಯಂ ವಿಷ್ಣುಪದಾಶ್ರಯಃ ಪರಿಲಸತ್ಪುಣ್ಯಾಂಬುಪೂತೋಽಸಕೃತ್ || ೩೮ ||

ಲಕ್ಷ್ಮೀದೇವಿಯಿಂದಲೂ ಸೇವ್ಯವಾದ ಮತ್ತು ಶ್ರೀಹರಿಯು, ಸರ್ವೇಶ್ವರನು, ಸರ್ವಕರ್ತನು, ಸರ್ವಕಾರಣನು, ಸರ್ವೋತ್ತಮನು, ಇತ್ಯಾದ್ಯನೇಕ ಗುಣಗಳನ್ನು ವಿಶದ ಪಡಿಸುವ ವಾಗ್ದೇವತೆಯಾದ ಶಾರದೆಯ ಅಭಿಪ್ರಾಯವನ್ನು ಸ್ಪಷ್ಟೀಕರಿಸುವ, ಮತ್ತು ಸಹಸ್ರಫಣನಾದ ಶೇಷದೇವರೇ ಮೊದಲಾದವರಿಗೆ ತಲೆದೂಗಿಸುವ ಸನ್ಮಾನ್ಯವಾದ ಶ್ರೀಮಧ್ವಾಗಮವು ತನ್ನನ್ನು ಆಶ್ರಯಿಸಿದವರುಗಳ ಅಜ್ಞಾನವನ್ನು ಕಳೆಯುತ್ತಾ ತನ್ನನ್ನು ಮನನ ಮಾಡುವವರಿಗೆ ಮೋಕ್ಷ ಪ್ರತಿಬಂದಕ ಪಾಪಗಳನ್ನೇ ಕಳೆಯುತ್ತಾ ನಿತ್ಯದಲ್ಲಿಯೂ ಶ್ರೀವಿಷ್ಣುವಿನ ಪಾಪವನ್ನೇ ಆಶ್ರಯಿಸಿ ಪ್ರಕಾಶಿಸುತ್ತಾ ಬಹು ಪುಣ್ಯದಿಂದಲೇ ಹೇಗೆ ಪುನಾಯಕವಾಗಿರುವುದೋ ಅದರಂತೆ ಪದ್ಮಗಳಿಂದ ಸೇವ್ಯವಾದ ಪರಿಮಳಾದಿ ಗುಣಗಳನ್ನು ವಿಶದಗೊಳಿಸುವ ಶರತ್ಕಾಲಿಕವಾದ ಚಂದ್ರ ಚಂದ್ರಿಕಾದಿ ಪ್ರಕಾಶವನ್ನು ಸ್ಪಷ್ಟಿಕರೀಸುವ ನಿರಂತರದಲ್ಲಿಯೂ ಯೋಗಿ ಶ್ರೇಷ್ಠರುಗಳಿಗಪೇಕ್ಷಿತವಾದ ಮಂದಸುಗಂಧ ಗಾಳಿಯುಳ್ಳ ಮಾರ್ಗಾವಲಂಬಿಗಳಿಗೆ ಕೆಸರನ್ನು ಕಳೆಯುತ್ತಾ ಮಾರ್ಗಾಯಾಸವನ್ನು ಹೋಗಲಾಡಿಸಿ ನಿತ್ಯದಲ್ಲಿಯೂ ವಿಷ್ಣುಪದವನ್ನೇ (ಆಕಾಶವನ್ನೇ) ಆಶ್ರಯಿಸಿ ಶೋಭಿಸುತ್ತಾ ಬಹುಶಃ ಪುಣ್ಯಕರವಾದ ನದನದಿಗಳನ್ನು ತುಂಬಿ ಹರಸುತ್ತಾ ಶುದ್ಧವಾದ ಶರದೃತುವು ವಿಶದವಾಯಿತು. || ೩೮ ||

ಈ ಶ್ಲೋಕದಲ್ಲಿಯೂ ಪದ್ಮಗಳಿಗೂ–ಲಕ್ಷ್ಮೀದೇವಿಗೂ ಶರತ್ಕಾಲಿಕ ಬೆಳದಿಂಗಳಿಗೂ, ಸರಸ್ವತಿಗೂ, ಭೋಗಿಗಳಿಗೂ-ಶೇಷದೇವರಿಗೂ ಸುಗಂಧಗಾಳಿಗೂ ಮಧ್ವಾಗಮಕ್ಕೂ, ಕೆಸರಿಗೂ–ಪಾಪಗಳಿಗೂ, ಸನ್ಮನಸ್ಕರಿಗೂ ಶಾಸ್ತ್ರಾವಲಂಬನೆಗೂ, ಕೆಸರಿಗೂ ಅಜ್ಞಾನಕ್ಕೂ ಶಕೆಯತಾಪಗಳಿಗೂ ಪಾಪಗಳಿಗೂ ವಿಷ್ಣುವಿನ ಪಾದಕ್ಕೂ ಆಕಾಶಕ್ಕೂ, ಪುಣ್ಯಗಳಿಗೂ ನದಿಗಳಿಗೂ ಉಪಮಾನ ಉಪಮೇಯ ಭಾವವು.

ರಾಮಾಽಯೋಗಿಜನಸ್ಯ ಭೀಮಚರಿತಃ ಸದ್ವಂಶಜಾತಂ ಮುಹುಃ
ಪ್ರೇಮಾಲಂಬನಶಬ್ದ ಹೃದ್ಯವದನಂ ಕುರ್ವನ್ ಸ್ವಕೀಯಾಗಮೈಃ
ಸುಕ್ಷೇಮಂ ಸುಮನಶ್ಚ ಯಸ್ಯ ವಿದಧತ್ಸುವ್ಯಾಪ್ತಮೂರ್ತಿಃ ಕ್ಷಿತೌ
ಸಚ್ಛಾಸ್ತ್ರೇ ಸುಖತೀರ್ಥವನ್ಮುರುದಭೂನ್ಮೂರ್ಧಾಭಿಷಿಕ್ತಸ್ತದಾ || ೩೯ ||

ರಾಮಧ್ಯಾನ ಅನಾಸಕ್ತ ಜನರಿಗೆ ಭಯಜನಕವಾದ (ಅಸಂಖ್ಯಾತ ರಾಕ್ಷಸಾದಿ ವಧಕಾರಕನಾದ ಭೀಮಸೇನನ ಚರಿತ್ರೆಯನ್ನೊಳಗೊಂಡ) ತನ್ನ

ಸೇವನೆಯಿಂದ ಸದ್ವಂಶಜರನ್ನು ಪ್ರೇಮಪೂರ್ವಕ (ಭಕ್ತಿಪೂರ್ವಕ) ಶಬ್ದಗಳಿಂದ ಹೃದಯವನ್ನು ಮುಖವನ್ನೂ, ವಿಕಾಸಗೊಳಿಸುವ ದೇವತೆಗಳಿಗೂ ಸುಕ್ಷೇಮಕರವಾದ ಭೂಮಂಡಲದಲ್ಲಿಯೂ ಸುಸ್ಪಷ್ಟಮೂರ್ತಿಯಾದ, ಸತ್ಶಾಸ್ತ್ರದಲ್ಲಿ ವಾಯುದೇವರು ಆನಂದತೀರ್ಥರೆಂದು ಪಟ್ಟಾಭಿಷಿಕ್ತರಾದಂತೆ ಕಾಂತಾವಿಯೋಗ ಜನವೃಂದಕ್ಕೆ ಭಯದಾಯಕವಾದ ಸಮೀಚೀನವಾದ ಬಿದರುಗಳಿಗೆ ಹೃದಯಮುಖ ಸ್ಥಾನಗಳನ್ನು ವಿಕಾಸಗೊಳಿಸಿ (ಸುಶಬ್ದದಾಯಕ ವಿವರಗಳನ್ನು ಉಂಟುಮಾಡಿ) ಸುಮನಸ್ಕರಿಗೆ ಆನಂದವನ್ನುಂಟುಮಾಡುವ ಎಲ್ಲೆಡೆಯಲ್ಲಿಯೂ ಸುವ್ಯಕ್ತಮೂರ್ತಿಯಾದ ಶರದೃತುವಿನಲ್ಲಿ ಸುಗಂಧಯುಕ್ತವಾದ ಮಲಯಮಾರುತನು (ತಂಗಾಳಿಯು) ಮೂರ್ಧ್ನಾನಿಭಿಷಿಕ್ತನಾದನು. (ಪಟ್ಟಾಭಿಷಿಕ್ತನಾದನು) ॥ ೩೯ ॥

ಹಿಮಂತಋತುವನ್ನು ವರ್ಣಿಸುತ್ತಾರೆ.

ವಿಯುಕ್ತ ನಾರೀಮುಖಪದ್ಮ ಪುಂಜೈಃ
ಸಹಾಂಬು ಜಾತಂ ಶಿಥಿಲಂ ವಿತನ್ವನ್ ॥
ಪ್ರಬೋಧ ಕಲ್ಪಂ ರವಿಮಲ್ಪಕಾಂತಿಂ
ವಿಧಾಯ ಹೇಮಂತ ಉಪಾಜಗಾಮ ॥ ೪೦ ॥

ವಿಯುಕ್ತ ನಾರಿಯರ ಮುಖಕಮಲಗಳೊಂದಿಗೆ ಜಲಕಮಲಗಳನ್ನು ಕ್ಷೀಣವಿಕಾಶವನ್ನು ಮಾಡುತ್ತಾ, ಜ್ಞಾನ ಸದೃಶವಾದ ಸೂರ್ಯಕಾಂತಿಯನ್ನು ಅಲ್ಪೀಕರಿಸುತ್ತಾ ಹೇಮಂತನು (ಹಿಮಂತಋತುವು) ಸರಿದು ಬಂದನು ॥ ೪೦ ॥

ಸೂರ್ಯಾಸ್ತಮಯವನ್ನು ವರ್ಣಿಸುತ್ತಾರೆ.

ಹಿಮಾರ್ದಿತಾಂಗಃ ಸಕೃದುಷ್ಣರಶ್ಮಿ
ರಪಿ ಸ್ವವಹ್ನಿಂ ಸ್ವಕರೈರ್ದಧಾನಃ ॥
ವಿಶತ್ಯಜಸ್ರಂ ಜಲಧಿಂ ತಮಸ್ತಾಂ
ಕಥಂ ಹಿಮಾನೀಮ ಬಲಾಃ ಸಹನ್ತೇ ॥ ೪೧ ॥

ಉಷ್ಣರಶ್ಮಿಯಾದ ಸೂರ್ಯನು ಸ್ವಯಂ ಕೈಗಳಲ್ಲಿ ಅಗ್ನಿಯನ್ನು ಧರಿಸಿದವನಾದರೂ ಛಳಿಯಿಂದ ವ್ಯಥಿತಾಂಗನಾಗಿ ಸಮುದ್ರವನ್ನೇ ಪ್ರವೇಶಿಸಿದನು. ಅಂದ ಮೇಲೆ ಅಬಲರು ಛಳಿಯನ್ನು ಹೇಗೆ ಸಹಿಸುತ್ತಾರೆ ?

ಈ ಶ್ಲೋಕದಲ್ಲಿ ಅಬಲಾಶಬ್ದ ಸೌಂದರ್ಯದಿಂದ ಸ್ತ್ರೀಯರು ಹಿಮಂತಋತುವಿನಲ್ಲಿ ಅಯಾಚಿತರಾಗಿಯೇ ಸ್ವಯಂ ಸ್ವರಮಣರಲ್ಲಿ ಆಸಕ್ತ ಚಿತ್ತರಾಗುತ್ತಾರೆಂಬ ಧ್ವನಿಯನ್ನು ತೋರಿರುತ್ತಾರೆ. ॥ ೪೧ ॥

ಪತಿಂ ವಶೀಕರ್ತುಮಯಂ ಹಿಕಾಲಃ
ಇತೀವ ಕೃಷ್ಣಂ ಪತಿ ಮಾಪ್ತುಕಾಮಾಃ ॥
ವ್ರತಂ ವಿತೇನುಃ ಕಿಲಗೋಪಕನ್ಯಾ
ವಿತರ್ಕ್ಯ ತಸ್ಯಾಸಮಧಾಮ ಧನ್ಯಾಃ ॥ ೪೨ ॥

ವೃಂದಾವನದಲ್ಲಿರುವ ಗೋಪ ಕನ್ನಿಕೆಯರುಗಳು ಶ್ರೀಕೃಷ್ಣನ ಮನಿಯೇ ಅಶದೃಶ ಧಾಮವಾದ್ದರಿಂದ ಶ್ರೀಕೃಷ್ಣನನ್ನೇ ಪತಿಯಾಗಿ ಹೊಂದಲು ಬಯಸಿದವರಾಗಿ, ಪತಿಗಳನ್ನು ವಶಪಡಿಸಿಕೊಳ್ಳಲು ಈ ಕಾಲವೇ (ಹಿಮಂತ ಋತುವೇ) ಅನುಕೂಲ ಕಾಲವೋ ಎಂಬಂತೇ ಕಾತ್ಯಾಯನೀ ನಾಮಕ ವ್ರತವನ್ನು ಆಚರಿಸಿದರು. ॥ ೪೨ ॥

ಕಾತ್ಯಾಯನೀ ವ್ರತವನ್ನೇ ಉತ್ಪ್ರೇಕ್ಷಿಸುತ್ತಾರೆ.

ಪುಮಾಂಸಮಭ್ಯರ್ಚಯಿತುಂ ಸಲಜ್ಜಾಃ
ಸಮಾಂತರಂಗಾ ವರವರ್ಣಿನೀಶ್ಚ ॥
ಸಹೋದರೀಂ ಶ್ರೀರಮಣಸ್ಯ ದುರ್ಗಾ-
ಮಪೂಜಯಂಸ್ತಾಂ ಕೃತವಿಶ್ವಸರ್ಗಾಮ್ ॥ ೪೩ ॥

(ಶ್ರೀಕೃಷ್ಣನನ್ನು ಬಯಸುವ ಗೋಪಾಲ ಕನ್ನಿಕೆಯರು ಶ್ರೀಕೃಷ್ಣನನ್ನೇ ಪೂಜಿಸದೇ ಕಾತ್ಯಾಯನಿ (ದುರ್ಗಾ) ದೇವಿಯನ್ನು ಯಾಕೆ ಪೂಜಿಸಿದರು ಎಂಬುದನ್ನು ಉತ್ಪ್ರೇಕ್ಷಿಸುತ್ತಾರೆ.) ಕನ್ನಿಕೆಯರು ಪುರುಷರನ್ನು ಅರ್ಚಿಸಿ (ಪೂಜಿಸಿ) ಅವರ ಮುಂದೆ ತಮ್ಮ ಹಾರ್ದವನ್ನು ಹೇಳಿಕೊಳ್ಳಲು ನಾಚಿಕೆಗೊಂಡು ಸಮಾಂತರಂಗರಾದ ಸ್ತ್ರೀಯರಲ್ಲೇ ಅರುಹುವರಂತೆ ವಿಶ್ವವನ್ನೇ ಪ್ರತಿನಿರ್ಮಿಸಲು ಸಮರ್ಥಳಾದ, ಶ್ರೀಕೃಷ್ಣನಿಗೆ ತಂಗಿಯಂತಿರುವ ದುರ್ಗಾದೇವಿಯನ್ನು ಅರ್ಚಿಸಿದರು (ಶ್ರೀಕೃಷ್ಣನ ಮುಂದೆ ತಮ್ಮ ಹಾರ್ದವನ್ನು ಅರುಹಲೋ ಎಂಬಂತಿದ್ದಿತು). ॥೪೩॥

ಕೃಷ್ಣಂ ಪತಿಂ ತಾಃ ಕಿಲ ಕಾಮಯಂತ್ಯೋ
ಲಕ್ಷ್ಮೀಂ ಪ್ರಸನ್ನಾಂ ವಿದಧುರ್ವ್ರತೇನ ॥
ಸ್ವಪ್ರೇಯಸೀ ವೈರಿವಧೂಃ ಕಥಂ ತಾ-
ಸ್ತುಷ್ಟಾಃ ಪ್ರಭುಃ ಸೋಽಪರಥಾ ವಿದಧ್ಯಾತ್ ॥ ೪೪ ॥

ಗೋಪ ಕನ್ನಿಕೆಯರು ಶ್ರೀಕೃಷ್ಣನನ್ನು ಪತಿಯಾಗಲು ಅಪೇಕ್ಷಿಸುವರಾಗಿ ವ್ರತಗಳಿಂದ ಲಕ್ಷ್ಮೀದೇವಿಯನ್ನೇ ಸಂತೋಷಪಡಿಸಿದರು. ಅದು ಯುಕ್ತವಾದುದೇ ಪ್ರಭುವಾದ ಶ್ರೀಕೃಷ್ಣನು ತನ್ನ ಪ್ರೇಯಸಿಯಾದ ಲಕ್ಷ್ಮೀದೇವಿಗೆ ಅಪ್ರಿಯರಾ

ದಪರುಗಳನ್ನು ಹೇಗೆ ಪರಿಸುತ್ತಾರೆ. ಆದುದರಿಂದಲೇ ವಿಪರೀತವಾಗಬಾರದೆಂದೇ ಲಕ್ಷ್ಮೀದೇವಿಯನ್ನು ಪೂಜಿಸಿದರೋ ಎಂಬಂತೆ ಇದ್ದಿತು. ॥ ೪೪ ॥

ಕಾತ್ಯಾಯನೀ ವ್ರತದಲ್ಲಿ ದೇವಿಗೆ ಗೋಪಾಲ ಕನ್ನಿಕೆಯರುಗಳು ಮಾಡಿದ ಷೋಡಶ ಉಪಚಾರ ಪೂಜೆಯನ್ನು ಎರಡು ಶ್ಲೋಕಗಳಿಂದ ವರ್ಣಿಸುತ್ತಾರೆ.

ನೇಮುಸ್ತಾಂ ಪ್ರಣಯಾಪರಾಧಶಮನೆ ನಮ್ರೋಸ್ತು ಕೃಷ್ಣಸ್ತ್ರಿಯಃ
ಸ್ರೇವಸ್ತ್ವಾ ಪುಷ್ಪಮುವೇದಯನ್ಸ್ವಕಬರೀಂ ತ್ಯೈಃ ಸಂದಧಾತ್ವಿತ್ಯಲಮ್ ॥
ಧೂಪಂ ಮಜ್ಜನವಾರಚಯ್ಯ ಸಹ ತದ್ಭೂಮೇವ ಸಂಕೋಚಷ ಯ-
ತ್ತ್ವಲಿಂಗ್ಯಾತನುತಾದಿತೀವ ತಿಲಕಂ ಗಂಧಂ ಚ ತಸ್ಯೈ ದದುಃ ॥ ೪೫ ॥

ತನ್ನ ಪತಿಯಾದ ಶ್ರೀಕೃಷ್ಣನನ್ನು ಬಯಸುವ ಅಪರಾಧವನ್ನು ಕ್ಷಮಿಸ ಲೆಂದು ನಮ್ರೀಭಾವದಿಂದ ನಮಸ್ಕಾರ ಮಾಡಿದರು. ಲಕ್ಷ್ಮೀದೇವಿಯು ನಮ್ಮನ್ನು ತಂಗಿಯರಾಗಿ ಭಾವಿಸಿ ನಮ್ಮ ತುರುಬುಗಳಲ್ಲಿ ಹೂವನ್ನು ಮುಡಿಸಲೆಂದು ಆತೆ ಯಿಂದಲೇ ಪುಷ್ಪಗಳನ್ನು ಏರಿಸಿದರು. ಶ್ರೀಕೃಷ್ಣನು ನಮ್ಮಗಳೊಂದಿಗೆ ಜಲ ಕ್ರೀಡಾಸಕ್ತನಾಗಿ ಧೂಪಗಳಿಗೆ ನಮ್ಮನ್ನು ಪಾತ್ರರನ್ನಾಗಿ ಮಾಡಲೆಂದು ಧೂಪ ವನ್ನು ಹಾಕಿದರು. ಶ್ರೀಕೃಷ್ಣನು ನಮ್ಮಗಳ ಹಣೆಯ ಮೇಲೆ ತಿಲಕವನ್ನು ಹಚ್ಚಲೆಂಬ ಆಶೆಯಿಂದಲೇ ಕುಂಕುಮದಿಂದ ಅರ್ಚಿಸಿದರು. ಶ್ರೀಕೃಷ್ಣನು ನಮ್ಮಗಳನ್ನು ಆಲಿಂಗಿಸಿ ತನ್ನ ದೇಹದ ಸುಗಂಧವನ್ನು ನಮಗೀಯಲಿ ಎಂದೇ ಗಂಧವನ್ನು ಲೇಪಿಸಿದರು. ॥ ೪೫ ॥

ತಾಂಬೂಲಂಚ ಮುಕುಂದಚರ್ವಿತ ಲಸತ್ತಾಂಬೂಲಸಿದ್ಧ್ಯೈ ಪಯ
ಸ್ತದ್ಬಿಂಬೋಷ್ಠಸುಧಾಪ್ತಯೇ ಮೃದುತನೌ ಭೂಷಾವಲಿಂ ಸಂದಧುಃ॥
ರತ್ಯಂತೇ ಸಮಲಂಕರೋತು ಗಲಿತಾಕಲ್ಪಾಪ್ಯಥ ಮಸ್ಮತ್ತನು-
ಷ್ವಿತ್ಯಾದೀಪ್ಸಿತಲಬ್ಧಯೇತಿ ಕುಶಲಾಸ್ತಾಮರ್ಚಯಾಂ ಚಕ್ರಿರೇ॥೪೬॥

ಮೋಕ್ಷಪ್ರದನಾದ ಶ್ರೀಕೃಷ್ಣನಿಂದ ಚರ್ವಿತವಾದ ತಾಂಬೂಲವು ನಮಗೆ ಲಭಿಸಲೆಂದೇ ಕಾತ್ಯಾಯನಿಗೆ (ಲಕ್ಷ್ಮೀದೇವಿಗೆ) ತಾಂಬೂಲವನ್ನು ಅರ್ಪಿಸಿದರು. ಶ್ರೀಕೃಷ್ಣನ ಅಧರಾಮೃತ ನಮಗೆ ದೊರೆಯಲೆಂದೇ ಗೋಕ್ಷೀರಾದಿಗಳಿಂದಲೂ ಅಭಿಷೇಚಿಸಿದರು. ಶ್ರೀಕೃಷ್ಣನು ರತ್ಯನಂತರ ನಮ್ಮಗಳ ಅಸ್ತವ್ಯಸ್ತವಾದ ಆಭ ರಣಗಳನ್ನು ಸರಿಬಡಿಸಿ ಪ್ರೀತಿಸಲೆಂದು ಆಭರಣಗಳನ್ನು ಅರ್ಪಿಸಿದರು. ಇತ್ಯಾದಿ ಅನೇಕ ಹಾರ್ದಗಳಿಂದಲೋ ಎಂಬಂತೆ ಪೂಜಿಸಿದರು. ॥ ೪೬ ॥

ತತಃ ಸ ಪತ್ನ್ಯರ್ಚನ ತತ್ಪರಾಣಾಂ
ವ್ರತಂ ವಿರುದ್ಧಂ ವ್ರಜ ಬಾಲಿಕಾನಾಂ ॥

ನ ಭಗ್ನ ಮಣಿಧಾತುಮಿವಾಂಬರಾಣಿ
ಜಹಾರ ಧೀರೋಽಯಮಿಹಾಂಬರಕಾಲೇ ॥ ೪೭ ॥

ತನ್ನ ಸಂಗವನ್ನು ಬಯಸುವವರು ತನ್ನನ್ನೇ ಆರಾಧಿಸಬೇಕು. ತಾನು ಬಿಟ್ಟು ನಿಮ್ಮ ಸವತಿಯಂತಾಗುವ ಆಕಾಶವನ್ನು ಆರಾಧಿಸುವುದು ವಿರುದ್ಧವು ಉಚಿತವಲ್ಲ ಎಂಬುದನ್ನು ತಿಳಿಸಲೋ ಎಂಬಂತೆ ಧೀರನಾದ ಶ್ರೀಕೃಷ್ಣನು ಗೋಪಾಂಗನೆಯರು ಸ್ನಾನಾಸಕ್ತರಾದ ವೇಳೆಯಲ್ಲಿ ಅವರ ವಸ್ತ್ರಗಳೆಲ್ಲವನ್ನು ತೆಗೆದು ಒಂದು ಮರದ ಮೇಲೆ ಹಾಕಿ ಅಲ್ಲಿ ಕುಳಿತು ಕೊಳಲನ್ನೂದಲಾರಂಭಿಸಿದನು ॥ ೪೭ ॥

ದೇಹೀತಿ ಕಾಂಬರ ಮಸ್ಮದೀಯ ಮಬಲಾ ದತ್ತಂ ಕ್ವ ತದ್ವರ್ತತೇ
ಮಧ್ಯೇ ವಃ ಪ್ರತಿಭಾತಿ ಕರ್ಹಿ ನ ಕಥಂ ಸಂದೃಶ್ಯತೇ ಸ್ಪಷ್ಟತಃ ।
ಮುಗ್ಧಾ ನ್ಯಾಯಿಕ ಮೌಲಿಯುಕ್ತಿಕಲಿತಂ ತತ್ಸ್ಯಾನ್ನ ವಃ ಶಕ್ಯತೇ
ದ್ರಷ್ಟುಂ ಚಂಚಲಲೋಚನೈರಿತಿ ವದನ್ ಕೃಷ್ಣಃ ಸ ಪುಷ್ಣಾತು ನಃ
॥ ೪೮ ॥

ಗೋಪಾಲ ಬಾಲಿಕೆಯರು ಲಜ್ಜಾಯುಕ್ತರಾಗಿ ಹೇ ಪ್ರಭೋ ನಮ್ಮ ಅಂಬರಗಳನ್ನು ನಮಗೆ ಕೊಡು (ಅಂಬರ ಶಬ್ದವು ಬಟ್ಟೆ ಎಂದು ಆಕಾಶವೆಂದು ಅರ್ಥ ಕೊಡುವುದರಿಂದ ಗೂಢಾಭಿಸಂಧಿಯುಳ್ಳವನಾಗಿ ಛಲದಿಂದ)

ಶ್ರೀಕೃಷ್ಣನು:— ಅಂಬರವು ನಿಮ್ಮಲ್ಲೇ ಇರುವದಲ್ಲವೇ

ಗೋಪಿಕಾ ಸ್ತ್ರೀಯರು:— ಹೇ ಕೃಷ್ಣಾ ಎಲ್ಲಿರುವುದು
(ಒಬ್ಬೊಬ್ಬರ ಸೊಂಟವು ಅತಿ ಸೂಕ್ಷ್ಮವಾಗಿ ತೋರ್ಪಡುವಂತೆ ಇರುವುದರಿಂದ ಆಕಾಶವನ್ನಾಗಿ ಸಂಕೇತಿಸಿ)

ಶ್ರೀಕೃಷ್ಣನು:— ನಿಮ್ಮಗಳ ಮಧ್ಯದಲ್ಲಿಯೇ

ಗೋಪಿಕಾ ಸ್ತ್ರೀಯರು:— ಹಾಗಾದರೇ ನಮಗೇಕೆ ಕಾಣಿಸುವುದಿಲ್ಲ

ಶ್ರೀಕೃಷ್ಣ:— ಧಡ್ಡಿಯರಾ! ತಾರ್ಕಿಕ ಶಿರೋಮಣಿಗಳಾದ ಗೌತಮಾದಿಗಳು ಯುಕ್ತಿಗಳಿಂದಲೂ ಪ್ರಮಾಣಗಳಿಂದಲೂ ಅಂಬರವು (ಆಕಾಶವು) ಅತೀಂದ್ರಿಯವೆಂದು ಸಾಧಿಸಿರಲು ಚಂಚಲ ಲೋಚನೆಯರಾದ ನಿಮ್ಮಗಳ ಕಣ್ಣುಗಳಿಗೆ ಹೇಗೆ ಕಾಣುವುದು.

ಹೀಗೆಂದು ಕನ್ನಿಕೆಯರನ್ನು ಮುಗ್ಧಗೊಳಿಸಿದ ಶ್ರೀಕೃಷ್ಣನು ನಮ್ಮನ್ನು ರಕ್ಷಿಸಲಿ. ॥ ೪೮ ॥

ತತಃ ಶ್ರಮೋಣಾಂಕುರಿತಾಂಗಜಾತಾ
ನಿರೀಕ್ಷ್ಯ ತಾಶ್ಚಂಚಲ ಲೋಚನಾಂತಾಃ ||
ಸ್ವಸಂಗಯೋಗ್ಯಾ ಇವ ತರ್ಕಯನ್ಸ
ದದೌ ಮುದಾತದ್ವಸನಾನಿ ಮಾನೀ || ೪೯ ||

ಅಭಿಮಾನಿಯಾದ ಶ್ರೀಕೃಷ್ಣನು ಮುಗ್ಧರಾಗಿ ಕಡೆಗಣ್ಣೋಟದಿಂದ ತನ್ನನ್ನು ನೋಡುತ್ತಾ ಛಳಿಯಿಂದ ರೋಮಾಂಚಿತರಾಗಿ ನಡುಗುತ್ತಲಿರುವ ಗೋಪ ಕುಮಾರಿಯರನ್ನು ನೋಡಿ ನನ್ನ ಅಂಗಸಂಗ ಯೋಗ್ಯರೇ ಎಂಬರ್ಥವನ್ನು ತನ್ನ ದೃಷ್ಟಿಯಿಂದ ತೋರಿ ಅವರವರ ವಸ್ತ್ರಗಳನ್ನು ಅವರವರಿಗಿತ್ತನು. || ೪೯ ||

ತತೋವನೇ ಸಂಚರಣಾದ ತಿಶ್ರಾಂತಾಃ ಕದಾಚನ ||
ಅನ್ನಾರ್ಥಿನೋಯಯುಗೋರ್ಪಾಃ ಪೂರ್ಣಾಂಯಜ್ಞ ಸಭಾಂ ದ್ವಿಜೈಃ||೫೦||

ಗೋಪಾಲ ಬಾಲಕರೊಂದಿಗೆ ಗೋವುಗಳನ್ನು ಕಾಯುತ್ತಾ ಅನ್ನಾರ್ಥಿಗಳಾದ ಬಾಲಕರನ್ನು ಬ್ರಾಹ್ಮಣರುಗಳಿಂದ ಪೂರ್ಣವಾದ ಯಜ್ಞವಾಟದಲ್ಲಿ ಅನ್ನವನ್ನು ಯಾಚಿಸಲು ಪ್ರೇರಿಸಿದನು. || ೫೦ ||

ಕ್ಷುತ್ಪೀಡಿತಾಪಿ ಪರಮಾನುಗ ಮಂಡಲೀ ಸಾ
ಕೃಷ್ಣಾಯ ಭೋಜ್ಯಮಿತಿ ವಿಪ್ರಚಯಂ ಯಯಾಚೇ ||
ಯುಕ್ತಂ ಹಿ ತನ್ಮುರರಿಪೋರನುಗಾ ವಿರಾಗಾ
ಯತ್ನಂ ಕದಾಚಿದಪಿ ನ ಸ್ವಕೃತೇ ಪ್ರಕುರ್ಯುಃ || ೫೧ ||

ಆ ಬಾಲಕರು ತಾವು ಹಸಿವೆ ನೀರಡಿಕೆಗಳಿಂದಾ ಬಳಲಿದವರಾದರೂ ಶ್ರೀಕೃಷ್ಣನಿಗೆ ಭೋಜನವನ್ನು ಕೊಡಿರೆಂದು ಯಾಚಿಸಿದರು. ಅದು ಯುಕ್ತವೇ ಶ್ರೀಮುರಾರಿಯ ಪಾದಾನುಗರು ಎಷ್ಟೆ ಕಷ್ಟವಾಗಿದ್ದರೂ ವಿರಕ್ತರಾಗಿ ಶ್ರೀಹರಿಯನ್ನೇ ನಂಬಿ ತಮಗಾಗಿ ಯಾವ ಪ್ರಯತ್ನವನ್ನೂ ಮಾಡದಲೇ ಶ್ರೀಶನ ಹೆಸರಿನಿಂದಲೇ ಬದುಕುತ್ತಾರೆ. ಸ್ವಾರ್ಥಕ್ಕಾಗಿ ಪ್ರಯತ್ನಿಸುವುದಿಲ್ಲ. || ೫೧ ||

ಸ್ವೀಯಕ್ರಿಯಾಭಂಗ ಭಯೇನ ವಿಪ್ರಾಃ
ಶ್ರೇಯಸ್ಕೃತೇ ತೇ ನ ದದುಃ ಕಿಲಾನ್ನಮ್ ||
ಭೃತ್ಯೈಃ ಸಹಾಶ್ನಾತಿ ಮುಖೇಸ್ಮದೀಯ
ಇತ್ಥಂ ವಿದಿತ್ವೇತಿ ಮುಮು ಪ್ರತರ್ಕಃ || ೫೨ ||

ಭಗವದಾಜ್ಞಾನು ರೂಪವಾದ ಶೃತಿ ಸ್ಮೃತಿ ಅನುಯಾಯಿಗಳಾದ ಆ ಬ್ರಾಹ್ಮಣರುಗಳು ತಮ್ಮ ಕಾರ್ಯದ ವಿಘ್ನ ಭಯದಿಂದ ಶ್ರೇಯೋ ಅರ್ಥಿಗಳಾಗಿ

ಅನ್ನವನ್ನು ಕೊಡಲಿಲ್ಲ. ನಾನು ಹೀಗೆ ಊಹಿಸುತ್ತೀನೆ. ನಾವು ಯಜ್ಞದಲ್ಲಿ ಶ್ರೀಹರಿಗಾಗಿಯೇ ಕೊಡುವದನ್ನು ತನ್ನ ಭೃತ್ಯರಿಗೆ ಹಂಚುವನೆಂದೋ ? ॥ ೫೨ ॥

ವಿಪ್ರಾಂಗನಾಃ ಸ್ವಪ್ರಭವೇ ಪ್ರಹೃಷ್ಟಾಃ
ಪ್ರತ್ಯರ್ಪ್ಯ ಸರ್ಪಿರ್ದಧಿಪಾಯಸಾದಿ ॥
ಮುಕ್ತಿಂ ಕರಸ್ಥಾಂ ಕಿಲ ತಾ ವಿತೇನುಃ
ಪುಂಸ್ತ್ವೇನ ಕಿಂ ಪೂರುಷ ಮೌಲಿಭಾಜಾಮ್ ॥ ೫೩ ॥

ವಿಪ್ರಪತ್ನಿಯರುಗಳು ಪ್ರಹೃಷ್ಟಮನಸ್ಕರಾಗಿ ತಮಗೆ ಮುಖ್ಯ ಪ್ರಭುವಾದ ಶ್ರೀಕೃಷ್ಣನಿಗೆ ಹಾಲು, ಮಸರು, ತುಪ್ಪ, ಬೆಣ್ಣೆ ಇವುಗಳಿಂದ ರುಚಿಕರವಾದ ಅನ್ನವನ್ನು ಅರ್ಪಿಸಿ ಮುಕ್ತಿಯನ್ನು ಕರವಶವನ್ನಾಗಿ ಮಾಡಿಕೊಂಡರು. ಪುರುಷೋತ್ತಮನ ಒಲಿಮೆಗೆ ಪುರುಷರೇ ಆಗಬೇಕೇ ? ॥ ೫೩ ॥

ಸ ವಿಪ್ರಪತ್ನ್ಯರ್ಪಿತ ಭಕ್ತಭುಕ್ತ್ಯೈ
ವಿಭುಃ ಸಮಾಸಕ್ತಮನಾ ಇವೈಂದ್ರಮ್ ॥
ಅಭುಙ್ಕ್ತ ಭೋಜ್ಯಂ ಗತಭೀರ್ಗಿರೀಂದ್ರ
ವಪುಃ ಸ್ವಕೀಯಾರ್ಪಿತ ಮಪ್ರತೀತಃ ॥ ೫೪ ॥

ಭಕ್ತರಾದ ವಿಪ್ರಪತ್ನಿಯರುಗಳಿಂದ ದತ್ತಾನ್ನದಂತೆ ಭಕ್ತರಾದ ಸ್ವಕೀಯರಿಂದಲೂ ದತ್ತವಾದ ಇಂದ್ರನ ಯಜ್ಞಾರ್ಥವಾದ ಅನ್ನವನ್ನು, ಪ್ರಭುವಾದ ಶ್ರೀ ಕೃಷ್ಣನು ನಿರ್ಭೀತನಾಗಿ ಇಂದ್ರನನ್ನು ತೃಣೀಕರಿಸಿ ಪರ್ವತದಂತೆ ಅಶದೃಶ ಪ್ರಭಾವವುಳ್ಳವನಾಗಿ ಸ್ವಕೀಯರಿಂದ ಕೊಡಲ್ಪಟ್ಟಿರುವುದೆಂದು ಪರ್ವತದಲ್ಲಿಯೂ ಒಂದು ರೂಪದಿಂದ ಸನ್ನಿಹಿತನಾಗಿ ಸರ್ವ ಭೋಜ್ಯವನ್ನೂ ತಾನೇ ಉಂಡನು. ॥ ೫೪ ॥

ಪ್ರದಕ್ಷಿಣೀಕೃತ್ಯ ಗಿರಿಂ ಸ್ವವರ್ಗೈ
ರ್ಮುದಾರ್ಪಿತಂ ಪರ್ವತವೇಷಧಾರೀ ॥
ಬಲಿಂ ಚ ಕೃಷ್ಣಃ ಶತ ಮನ್ಯುಮನ್ಯು
ವಿವರ್ಧನೋಽಸಾವುರರೀಚಕಾರ ॥ ೫೫ ॥

ಗೋವರ್ಧನ ಪರ್ವತದಲ್ಲಿ ಒಂದು ರೂಪದಿಂದಿದ್ದು ಮತ್ತೊಂದು ರೂಪದಿಂದ ಲೀಲಾಮಾನುಷನಾದ ಶ್ರೀಕೃಷ್ಣನು ಸ್ವಪರಿವಾರದೊಂದಿಗೆ ಗೋವರ್ಧನ ಪರ್ವತವನ್ನು ಪ್ರದಕ್ಷಿಣೆ ಮಾಡುವವನಾಗಿ ಇಂದ್ರನಿಗೆ ಶತಮನ್ಯು (ಬಹುಕೋಪಿ) ಎಂಬ ಹೆಸರನ್ನು ಅನ್ವರ್ಥಕರಿಸುವನೋ ಎಂಬಂತೇ ಕೋಪವನ್ನು ಉಕ್ಕಿಸುವವನಾಗಿ ಸ್ವಕೀಯರಿಂದ ಮಾಡಲ್ಪಟ್ಟ ಇಂದ್ರಯಾಗದ ಬಲಿಗಳೆಲ್ಲವನ್ನೂ (ಪೂಜೆಗಳನ್ನು) ತಾನೇ ಸ್ವೀಕರಿಸಿದನು. ॥ ೫೫ ॥

ಸಹಸ್ರನೇತ್ರೋಽಪಿ ಸ ಕೃಷ್ಣಸತ್ವಂ
ಮನಾಗವಿಜ್ಞಾಯ ದಿದೇಶ ಮೇಘಾನ್ ॥
ಪ್ರವರ್ಷಣಾರ್ಥಂ ನಿಗಮೈಕವೇದ್ಯೇ
ಕಿಮಕ್ಷಿಬಾಹುಲ್ಯಮುಪೈತಿ ಕೃತ್ಯಮ್ ॥ ೫೬ ॥

ಇಂದ್ರನು ಸಹಸ್ರನೇತ್ರನೇ ಆದರೂ ಶ್ರೀಕೃಷ್ಣನ ಮಹಿಮೆಯನ್ನು ಅರಿಯದೇ ತನ್ನ ಮೇಘಗಳಿಗೆ ಗೋಕುಲವನ್ನು ಮಳೆಗರೆದು ಧ್ವಂಸಗೊಳಿಸಲು ಆಜ್ಞಾಪಿಸಿದನು. ನಿಗಮೈಕವೇದ್ಯನಾದ ಪರಮಾತ್ಮನ ವಿಷಯದಲ್ಲಿ ಬಾಹ್ಯೇಂದ್ರಿಯಗಳಿಂದ್ದೇನು ಪ್ರಯೋಜನವು ? ॥ ೫೬ ॥

ಶತಕ್ರತೌ ವರ್ಷತಿ ವಾಸುದೇವೋ
ಗಿರಿಂ ಸಮುದ್ಧೃತ್ಯ ಬಭೂವ ತೂಷ್ಣೀಮ್ ॥
ಜಿಹೀರ್ಷುಭಿಃ ಸ್ವಾಸಮಶತ್ರುಶೌರ್ಯಂ
ತದಾದ್ಯವೈರ್ಯುದ್ಧರಣಂ ಹಿ ಕಾರ್ಯಮ್ ॥ ೫೭ ॥

ಇಂದ್ರನು ಮಳೆಗರಿಸುತ್ತಿರಲು ಶ್ರೀಕೃಷ್ಣನು ಗೋವರ್ಧನ ಪರ್ವತವನ್ನೆತ್ತಿ ತನ್ನವರುಗಳಾದ ಗೋಪಾಲಕರುಗಳನ್ನು ರಕ್ಷಿಸುತ್ತಾ ಸುಮ್ಮನಾದನು. ಅದು ಯುಕ್ತವೇ! ಸಮರ್ಥರಾದವರು ತನಗೆ ಅಸಮನಾದವನು ಮಾಡುವ ಶತ್ರುತ್ವವನ್ನು ಪ್ರತಿಬಂಧಿಸಿ ಉದಾಸೀನವನ್ನು ತಾಳುವವರಷ್ಟೇ; ಸಮರ್ಥರಾದವರು ತನಗೆ ಅಸಮರಾದವರ ಶತ್ರುತ್ವಕ್ಕೆ ಪ್ರತಿಯಾಗಿ ಅವರ ಪೂರ್ವ ಶತ್ರುವನ್ನು ಎತ್ತಿಹಿಡಿದು ಮುಂದು ಮಾಡುವರಷ್ಟೇ ॥ ೫೭ ॥

ಮಯೀಶ್ವರೇ ಭೂಭೃತಿ ಜಾಗರೂಕೇ
ಸ್ವಯಂ ಚ ಭೂಭೃತ್ಕಿಲ ಬುದ್ಧಿಶೂನ್ಯಃ ॥
ಸ ಇತ್ಯಮರ್ಷಾದಿವ ಭೂಧರೇಂದ್ರಂ
ಕರೇಣ ಭೂಮೇರುದಬೀಭಿದತ್ತಮ್ ॥ ೫೮ ॥

ಸ್ವಯಂ ನಾನೇ ಸರ್ವ ಜಗದಾಧಾರಕ ಭೂಧಾರಕನಾಗಿಯೂ ಇರಲು ನನ್ನ ಮುಂದೆ ಭೂಧಾರಕರು ಮತ್ತಾರಾದರೂ ನನ್ನಕಿಂತಲೂ ಉಂಟೇ ಎಂಬುದನ್ನು ತೋರಲೋ ಎಂಬಂತೇ ಶ್ರೀ ಕೃಷ್ಣನು ಗೋವರ್ಧನ (ಭೂಧರವನ್ನು) ಪರ್ವತವನ್ನು ಏಳು ವರ್ಷದವನಾಗಿಯೇ ಕಿರುಬೆರಳಿನಲ್ಲಿಯೇ ಅನಾಯಾಸವಾಗಿ ಎತ್ತಿನಿಂತನು. ॥ ೫೮ ॥

ರೋಮ್ಣಾಂ ಹರ್ಷಣಕಾರಣಿ ಶ್ರವಣತಃ ಪಾಪೌಘವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ವಿಚಿತ್ರವಿಮಲ ಶ್ಲಾಘ್ಯಾರ್ಥಸಂದಾಯಿನಿ ||
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷು ಮಹಿತಃ ಸರ್ಗೋ ಮುದಾಂ ಪಂಚಮಃ||೫೯||

ಈ ಶ್ಲೋಕವು ಉಕ್ತಾರ್ಥವೇ ಆಗಿದೆ.

ಶ್ರೀಮದ್ವಾದಿರಾಜ ಪೂಜ್ಯಚರಣ ವಿರಚಿತ
ಶ್ರೀರುಕ್ಮಿಣೀಶವಿಜಯ ಮಹಾ ಕಾವ್ಯದಲ್ಲಿ
ಐದನೇ ಸರ್ಗವು ಸಮಾಪ್ತಿಗೊಂಡಿತು.

— ಶ್ರೀ ಮಧ್ವೇಶಾರ್ಪಣಮಸ್ತು —

ಶ್ರೀ ರುಕ್ಮಿಣೀಶವಿಜಯ— ಆರನೆಯ ಸರ್ಗ

ಶ್ರೀಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು, ಗೋ-ಗೋಪಾಲಕರುಗಳನ್ನು ರಕ್ಷಿಸಿ ಇಂದ್ರನ ಅಜ್ಞಾನವನ್ನು ಕಳೆದ ಮಹಿಮೆಯನ್ನೇ ಅನೇಕ ಅಲಂಕಾರಗಳಿಂದ ವರ್ಣಿಸುತ್ತಾರೆ.

ಮಹೇಂದ್ರವಿಜ್ಞಪ್ತಘನಾಲಿಮುಕ್ತ-
ಪಯಃಪ್ರವಾಹಾವೃತಭಿನ್ನಭಾಗಂ ॥
ಮುಕುಂದಹಸ್ತೋದ್ಧೃತಮದ್ರಿರಾಜಂ
ಅನುದ್ಧೃತಂ ತಂ ಮನುಜಾ ವ್ಯಜಾನನ್ ॥ ೧ ॥

ಗೋಪಾಲಕರುಗಳು, ಮಹೇಂದ್ರನಿಂದ ಆಜ್ಞಪ್ತಗಳಾದ ಮೇಘಗಳ ಸಾಲುಗಳಿಂದ ಸುರಿಸಲ್ಪಟ್ಟ ನೀರಿನ ಪ್ರವಾಹದಿಂದ ನಿಮ್ನೋನ್ನತ ಪ್ರದೇಶಗಳನ್ನೇ (ತಗ್ಗು ದಿನ್ನೆಗಳನ್ನೇ) ಅರಿಯದವರಾಗಿ, ಗೋವರ್ಧನ ಪರ್ವತವನ್ನು ಮೋಕ್ಷದಾಯಕನಾದ ಶ್ರೀಕೃಷ್ಣನ ಹಸ್ತದಿಂದ ಎತ್ತಲ್ಪಟ್ಟುದನ್ನಾಗಿ ಅರಿಯದೇ ಹೋದರು. ॥ ೧ ॥

ಗೋವರ್ಧನ ಪರ್ವತವನ್ನು ಉಪಮಾಲಂಕಾರದಿಂದ ವರ್ಣಿಸುತ್ತಾರೆ.

ವರ್ಷಾಸು ವರ್ಷಸಹತಾಮಧಿಗಮ್ಯವಾರ್ಷು
ತಪ್ತುಂ ತಪಃ ಕೃತಪದಸ್ಯ ಪದಂ ಪ್ರಪೇದೇ ॥
ಶರ್ಮಾನ್ಯಜನ್ಮನಿ ಪಿಪಾಧಯಿಷೋರ್ಮಹೀಧ್ರೋ
ಹೃನ್ಮಧ್ಯಲಬ್ಧಪರಮಸ್ಯ ತದೋಪಮಾಯಾಃ ॥ ೨ ॥

ಅಗಾಧವಾದ ಮಳೆಯನ್ನು ಸಹಿಸಿ, ಶ್ರೀಕೃಷ್ಣನನ್ನು ತನ್ನ ಮಧ್ಯದಲ್ಲಿ ಮಾಡಿಕೊಂಡ ಈ ಗೋವರ್ಧನ ಪರ್ವತವು, ವರ್ಷಾಕಾಲಗಳಲ್ಲಿ ಮಳೆಯನ್ನು ಸಹಿಸಿ ಮುಂದಿನ ಜನ್ಮಾಂತರಗಳ ಸುಖಕ್ಕೋಸುಗ ನೀರಿನಲ್ಲೇ ನಿಂತು ತಪಸ್ಸನ್ನಾಚರಿಸಲು ಸ್ಥಿರಮನಸ್ಕನಾಗಿ ಶ್ರೀಹರಿಯನ್ನು ಹೃದಯದಲ್ಲಿ ಧರಿಸಿದ ಋಷಿಯೋ ಎಂಬಂತೆ ಋಷಿಯ ಉಪಮಾನವನ್ನು ಪಡೆಯಿತು. ॥ ೨ ॥

ಅಂತಃಕೃಪಾವಿಪುಲಧಾರವಿಲೋಚನ ಶ್ರೀ-
ಕಾಂತಾಖ್ಯಮೇಘವಿಭವೇ ಕ್ಷಣಲೋಲನೇತ್ರೈಃ ॥
ಸಂತೋಷಹೇತುಷು ಗುಹಾಸು ಗತೈಃ ಸ ಸತ್ವೈಃ
ಕ್ರಾಂತೋ ಬಹಿಶ್ಚ ಘನದರ್ಶಿಭಿರದ್ರಿರಾಸೀತ್ ॥ ೩ ॥

ಗೋವರ್ಧನ ಪರ್ವತವು ಒಳಭಾಗದಲ್ಲಿ ಕೃಪಾಪೂರ್ಣತೆಯಿಂದ ಆನಂದ ಧಾರಾಲೋಚನನಾದ ಶ್ರೀಕಾಂತನಾದ ಶ್ರೀಕೃಷ್ಣನೆಂಬ ಮೇಘದ ವೈಭವವನ್ನು ನೋಡುವದರಲ್ಲಿ ಚಂಚಲವಾದ ನೇತ್ರಗಳುಳ್ಳ ಪ್ರಾಣಿಗಳಿಂದಲೂ, ಹೊರಭಾಗ ದಲ್ಲಿ ಸಂತೋಷಕಾರಕಗಳಾದ ಗುಹಾಗಳಲ್ಲಿ ಇರುವವುಗಳಾಗಿ ಮೇಘಗಳ ನೋಟ ದಲ್ಲಿ ಚಂಚಲವಾದ ದೃಷ್ಟಿಗಳುಳ್ಳ ಪ್ರಾಣಿಗಳಿಂದಲೂ ತುಂಬಿಕೊಂಡಿದ್ದಿತು. ॥ ೩ ॥

ಆ ಗೋವರ್ಧನ ಪರ್ವತವನ್ನು ಶ್ರೀಹರಿಯ ವೈಕುಂಠದ ಗೋಪುರ ಸಮ ವಾಗಿ ವರ್ಣಿಸುತ್ತಾರೆ.

ಸುವರ್ಣಶೃಂಗೈಃ ಕಲಶೋಪಮಾನೈಃ
ಮೃಗಾದಿಭಿಃ ಕೃತ್ರಿಮಸನ್ನಿಭೈಶ್ಚ ॥
ಗುಹೋಲ್ಲಸದ್ದ್ವಾರಗಣೈಃ ಸಮಂತಾತ್
ವೃತೋ ಗಿರಿರ್ಗೋಪುರತೀವ ವಿಷ್ಣೋಃ ॥ ೪ ॥

ಗೋವರ್ಧನ ಪರ್ವತವು ಪೂರ್ಣ ಕಲಶಗಳಂತಿರುವ ಸುವರ್ಣಶೃಂಗಗ ಳಿಂದಲೂ, ಪರ್ವತಗತವಾದ ನವಿಲು ಜಿಂಕೆಗಳೇ ಮೊದಲಾದ ಪ್ರಾಣಿಗಳಿಂದ ಕೃತ್ರಿಮವಾಗಿ ಕೆತ್ತಲ್ಪಟ್ಟ ಕೃತ್ರಿಮ ಚಿತ್ರಗಳ ಕಲೆಗಳುಳ್ಳದ್ದಾಗಿಯೂ, ಸುತ್ತಲೂ ಗುಹಗಳೆಂಬ ದ್ವಾರಗಳಿಂದಲೂ ಯುಕ್ತವಾಗಿ ಶ್ರೀವಿಷ್ಣುವಿನ ವೈಕುಂಠದ ಮಧ್ಯ ಗೋಪುರವೋ ಎಂಬಂತಿದ್ದಿತು. ॥ ೪ ॥

ಬಭೌ ಸಮುತ್ತುಂಗನಗಂ ದಧಾನಃ
ಸ ಭಾವಿಮಲ್ಲೇಂದ್ರಜಯೋಪಯೋಗಿ ॥
ತದೀಯವಿದ್ಯಾಭ್ಯಸನಂ ವಿಧಾತುಂ
ಶಿಲೋಚ್ಚಯಂ ಬಿಭ್ರದಿವಾಭ್ರಲಗ್ನಮ್ ॥ ೫ ॥

ಉನ್ನತವಾದ ಗೋವರ್ಧನ ಪರ್ವತವನ್ನು ಎತ್ತಿಹಿಡಿದ ಶ್ರೀ ಕೃಷ್ಣನು, ಮಲ್ಲಶ್ರೇಷ್ಠರಾದ ಚಾಣೂರ ಮುಷ್ಟಿಕಾದಿಗಳಿಂದ ಮುಂದಾಗುವ ವಿಜಯದಲ್ಲಿ ಉಪಯುಕ್ತವಾದ ಮಲ್ಲ ವಿದ್ಯಾಭ್ಯಾಸವನ್ನು ಮಾಡುವವನಾಗಿ ದೊಡ್ಡ ಕಲ್ಲನ್ನು ಮುಗಿಲು ಮುಟ್ಟುವಂತೇ ಎತ್ತಿರುವನೋ ಎಂಬಂತಿದ್ದಿತು. ॥ ೫ ॥

ಕೃಷ್ಣಧೃತಃ ಸುರವಿಸ್ಮಯಕಾರೀ
ವಿಸ್ಮೃತಪುಷ್ಕರಮಧ್ಯಗತಾದ್ರಿಃ ॥
ಸಿಂಧುಕಬಂಧಸಮುದ್ಧೃತಭಾಸ್ವನ್-
ಮಂದರಕಾಂತಿಮಚೂಚುರದದ್ರಿಃ ॥ ೬ ॥

ಶ್ರೀಕೃಷ್ಣನಿಂದ ಎತ್ತಿಸಿಕೊಳ್ಳಲ್ಪಟ್ಟಿದ್ದಾಗಿಯೂ ಅಗಾಧ ಉದಕದ ಮಧ್ಯಗತವಾಗಿಯೂ ದೇವತೆಗಳಿಗೆ ಆಶ್ಚರ್ಯಕರವಾಗಿಯೂ ಇರುವ ಈ ಗೋವರ್ಧನ ಪರ್ವತವು ಕ್ಷೀರಸಮುದ್ರ ಮಧ್ಯದಲ್ಲಿ ಉದ್ಧೃತವಾದ (ಕೂರ್ಮರೂಪಿಯಾದ ಪರಮಾತ್ಮನಿಂದ) ಮಂದರಪರ್ವತದ ಕಾಂತಿಯನ್ನು ಮೀರಿಸುತ್ತಿದ್ದಿತು. ||೬||

ಅನುಚಕ್ರೇಂಭಸಾಂಚಕ್ರೇ ಲಸತಾ ತೇನ ಭೂಭೃತಾ ||
ತಿತೀರ್ಷೋರ್ವ್ರಜವರ್ಗಸ್ಯ ಶಮಿತೋಪಪ್ಲವಃ ಪ್ಲವಃ ||೭||

ಗೋವರ್ಧನ ಪರ್ವತವು ಅಗಾಧ ಉದಕಮಧ್ಯದಲ್ಲಿ ಪ್ರಕಾಶಿಸುತ್ತಾ ಅಸಾಧ್ಯವಾದ ಮಳೆಯ ಭಯವೆಂಬ ಸಮುದ್ರವನ್ನು ದಾಟಿಸಲು ಗೋ-ಗೋಪಾಲಕರಗಳ ಅಭಯದಾಯಕ ನಾವೆಯಂತಿದ್ದಿತು. ||೭||

ಖಗಾನ್ಸವೃಷ್ಟೇರ್ದ್ರುಮಕೋಟರೇಷು
ಮೃಗಾನ್ಸ್ವಗೋಪ ಸ್ವಗುಹಾಗೃಹೇಷು ||
ಮುನೀಂಶ್ಚ ನಾತ್ಯುಚ್ಛ್ರಿತಮೇಖಲಾಸು
ವಿಪತ್ಸು ಕಃ ಸ್ವೀಯಮುಪೇಕ್ಷತೇಗ್ರ್ಯಃ ||೮||

ಗೋವರ್ಧನ ಗಿರಿಯು ತನ್ನ ಮೇಲ್ಭಾಗದಲ್ಲಿಯೇ ಗಿಡಗಳ ಪೊಟರೆಗಳಲ್ಲಿ ಪಕ್ಷಿಗಳನ್ನೂ, ತನ್ನ ಕೋಟರಗಳಲ್ಲಿ ಮೃಗಗಳನ್ನೂ ಗುಹಗೃಹಗಳಲ್ಲಿ ಗೋಪಾಲಕರುಗಳನ್ನೂ ಋಷಿಗಳನ್ನೂ ಮೇಘಕ್ಕಿಂತಲೂ ಮೇಲಿರುವ ತನ್ನ ಉನ್ನತ ಪ್ರದೇಶಗಳಲ್ಲಿ ಆಶ್ರಯವಿತ್ತು ಮಳೆಯ ಭಯದಿಂದ ರಕ್ಷಿಸಿತು. ಇದು ವಿಹಿತವೇ. ಆರ್ಯನಾದವನು (ಉತ್ತಮನು) ತನ್ನನ್ನು ಆಶ್ರಯಿಸಿದವರನ್ನು ವಿಪತ್ಕಾಲದಲ್ಲಿ ಉಪೇಕ್ಷಿಸುವುದಿಲ್ಲವಷ್ಟೇ ? ||೮||

ಪ್ರಸೂನಕೋಶೈರ್ಘನವರ್ಷಪಾತ-
ನಿಪಾತಿತೈರಂಕಿತ ಸರ್ವಗಾತ್ರಃ ||
ಮುಕುಂದಹಸ್ತಾಂಬುಜಸಂಗಸೌಖ್ಯ-
ಪ್ರಹೃಷ್ಟರೋಮಾಲಿರಿವಾದ್ರಿರಾಸ್ತೇ ||೯||

ಗೋವರ್ಧನ ಪರ್ವತವು, ಮಳೆಯ ಹೊಡತಕ್ಕೆ ಕೆಳಗೆಬಿದ್ದ ಪುಷ್ಪಗಳ ಗುಂಪುಗಳಿಂದ ಅಲಂಕೃತವಾದ ಸರ್ವ ಪ್ರದೇಶವುಳ್ಳದ್ದಾಗಿ ಮೋಕ್ಷದಾಯಕನಾದ ಶ್ರೀ ಕೃಷ್ಣಪರಮಾತ್ಮನ ಕರಕಮಲಗಳ ಸ್ಪರ್ಶಸೌಖ್ಯದಿಂದ ಅಂಚಿತವಾದ ರೋಮಗಳುಳ್ಳದ್ದೊ ಎಂಬಂತಿದ್ದಿತು. ||೯||

ಸ ಭೂಧರಃ ಸಾಕನಿವರ್ಷಪಾತ-
ಸಮಾಹತೋಽಪ್ಯಣ್ವಪಿ ನೋ ಚಕಂಪೇ ||

ತಥಾಹಿ ಗೋಬ್ರಾಹ್ಮಣರಕ್ಷಕಸ್ಯ
ಕ್ವ ಕೃಷ್ಣದೋರ್ದಂಡಧೃತಸ್ಯ ಕಂಪಃ ॥ ೧೦ ॥

ಆ ಗೋವರ್ಧನ ಪರ್ವತವು, ಮಳೆಯ ಸಿಡಿಲು–ಗುಡುಗು-ಮಿಂಚುಗಳ ಹೊಡೆತಕ್ಕೆ ಸಿಕ್ಕಿದರೂ ಸ್ವಲ್ಪವಾದರೂ ಕಂಪಿಸಲಿಲ್ಲ. (ಅಂಜಲಿಲ್ಲ) ಇದು ಯುಕ್ತವೇ ! ಗೋ-ಬ್ರಾಹ್ಮಣ ರಕ್ಷಕರಾಗಿಯೂ ಶ್ರೀ ಕೃಷ್ಣನ ಕರಧೃತರಾಗಿಯೂ ಇರುವವರಿಗೆ ಕಂಪವುಂಟೇ ? (ಅಂಜಿಕೆಯುಂಟೇ ?) ॥ ೧೦ ॥

ಶ್ರೀ ಕೃಷ್ಣನಿಂದ ಎತ್ತಿಹಿಡಿದ ಗೋವರ್ಧನ ಪರ್ವತವು, ಪರಮಾತ್ಮನನ್ನು ಮಧ್ಯದಲ್ಲಿರಿಸಿ ಪುಷ್ಪದಿಂದ ಪೂಜಿಸಿ ತೆರೆದಿರಿಸಿರುವ ಸಂಪುಷ್ಟದಂತೆ ಇದ್ದಿತೆಂದು ವರ್ಣಿಸುತ್ತಾರೆ.

ಪಯಃಶ್ರಿತಸ್ವಪ್ರತಿಬಿಂಬಲೋಲಂ
ಪತತ್ರಸೂನಾಂಚಿತಶೃಂಗಜಾಲಮ್ ॥
ಸ್ವಕುಕ್ಷಿಮಧ್ಯಾರ್ಪಿತನಂದಬಾಲಂ
ಜನೋಽದ್ಭುತಂ ಸಂಪುಟಮಾಶಶಂಕೇ ॥ ೧೧ ॥

ನೀರಿನಲ್ಲಿ ಮೂಡಿದ್ದ ಪರ್ವತದ ಪ್ರತಿಬಿಂಬವು (ನೆರಳು) ಕೆಳಭಾಗವಾಗಿಯೂ ಪರ್ವತವೇ ಮೇಲ್ಭಾಗವಾಗಿಯೂ ಶ್ರೀಕೃಷ್ಣನು ಮಧ್ಯದಲ್ಲಿ ಪುಷ್ಪಗಳ ಗುಂಪಿನಿಂದ ತುಂಬಿದವನಾಗಿ ಇದ್ದುದರಿಂದ ಮನೋಹರವಾಗಿ ತೋರುತ್ತಿದ್ದ ಗೋವರ್ಧನ ಪರ್ವತವನ್ನು ಅದ್ಭುತ ಸಂಪುಷ್ಟವೆಂದು ಜನರುಗಳು ಶಂಕಿಸಿದರು. ॥೧೧॥

ತ್ರಿವಿಷ್ಟಪಾಭ್ರಪ್ರತಿವೇಷಧಾರೀ
ಸ ಪರ್ವತಃ ಸ್ಫಾಟಿಕತುಂಗಶೃಂಗೇ ॥
ಹರೇರ್ನಿದೇಶಾದಪರಾಧಿಶಕ್ರ-
ಘನಾಲಯೌ ತೌ ಗ್ರಸತೀವ ಲೋಕೌ ॥ ೧೨ ॥

ಶ್ರೀಕೃಷ್ಣನಿಂದ ಎತ್ತಿಸಿಕೊಳ್ಳಲ್ಪಟ್ಟ ಗೋವರ್ಧನ ಪರ್ವತವು, ಸ್ಫಟಿಕಮಯವಾದ ಉನ್ನತ ಶೃಂಗಗಳುಳ್ಳದ್ದಾಗಿ (ಕೋಡುಗಲ್ಲುಗಳುಳ್ಳದ್ದಾಗಿ) ಸ್ವರ್ಗ ಮತ್ತು ಆಕಾಶದ ಪ್ರತಿರೂಪವನ್ನು ಧರಿಸಿ, ಶ್ರೀಕೃಷ್ಣನ ಆಜ್ಞೆಯಿಂದ, ಶ್ರೀಕೃಷ್ಣ ವಿರೋಧಿಗಳಾದ ಇಂದ್ರ ಮತ್ತು ಮೇಘಗಳ ಆಶ್ರಯಗಳಾದ ಸ್ವರ್ಗ ಮತ್ತು ಆಕಾಶಗಳೆಂಬ ಲೋಕಗಳನ್ನು ನುಂಗುವದೋ ಎಂಬಂತೇ ತೋರುತ್ತಿದ್ದಿತು. ॥೧೨॥

ಸ ಪರ್ಯಟತ್ಕುಂಜರಪುಂಜಶೋಭಂ
ಧರಂ ಯದಾ ಶ್ರೀಪತಿರುದ್ದಧಾರ ॥
ತದಾ ಸಮಸ್ಯಾಂ ಪರಿಪೂರಯಂತಿ
ಶಿಶೋಃ ಕರೇ ಹಸ್ತಿಸಹಸ್ರಮಸ್ತಿ ॥ ೧೩ ॥

ಯಾವಾಗ ಶ್ರೀಕೃಷ್ಣಪರಮಾತ್ಮನು, ಸಂಚರಿಸುವ ಅನೇಕ ಆನೆಗಳ ಗುಂಪುಗಳುಳ್ಳ ಗೋವರ್ಧನ ಪರ್ವತವನ್ನು ಮೇಲಕ್ಕೆ ಎತ್ತಿದನೋ ಅಂದಿನಿಂದ "ಶಿಶೋಃಕರೇ ಹಸ್ತಿಸಹಸ್ರಮಸ್ತಿ" (ಕೂಸಿನ ಕೈಯಲ್ಲಿ ಸಹಸ್ರಾರು ಆನೆಗಳಿವೆ) ಎಂಬ ವಾಕ್ಯವನ್ನು ದೊಡ್ಡವಿಷಮ ಸಮಸ್ಯೆಯಾಗಿ ಪೂರ್ಣಗೊಳಿಸುವ ಅವಕಾಶವು ಕವಿಗಳಿಗೆ ದೊರೆತಿತು. ಆನೆಗಳು ಸಂಚರಿಸಿದವು ಎನ್ನುವುದರಿಂದ ಮಳೆಯು ನಿಂತಿತೆಂಬುದು ತೋರುತ್ತದೆ.

ಶ್ರೀಕೃಷ್ಣನು ಬಲಗೈ ಕಿರುಬೆರಳಿನ ಮೇಲೆ ಪರ್ವತವನ್ನು ಎತ್ತಿಹಿಡಿದು ಮೂರುಬೆರಳುಗಳನ್ನು ಮುದರಿ ಆ ಕೈಹೆಬ್ಬೆರಳನ್ನು ಸ್ವಲ್ಪ ಎಡಭಾಗದಲ್ಲಿ ಬಾಗಿದ ತನ್ನ ಮುಖದ ಬಲಕೆನ್ನೆಗೆ ತಾಗಿಸಿ ನಿಂತಿದ್ದನು. ಆ ದೃಶ್ಯವನ್ನು ಉತ್ಪ್ರೇಕ್ಷಿಸುತ್ತಾರೆ.

ಸ ಭಾಸುರಶ್ರೀಶಕಪೋಲಲಗ್ನ–
ನಖೋಲ್ಲಸದ್ರತ್ನಕರಾಗ್ರಸಂಸ್ಥಃ ||
ಬಿಭರ್ತಿ ಕೂರ್ಮಾಶ್ರಿತ ನಾಗರಾಜ–
ಫಣಸ್ಥಪೃಥ್ವೀಶ್ರಿಯಮದ್ರಿರಾಜಃ || ೧೪ ||

ಪ್ರಕಾಶಮಾನವಾದ ಶ್ರೀಶನಾದ ಶ್ರೀಕೃಷ್ಣನ ಬಲಗೆನ್ನೆಗೆ ತಗಲಿ ರತ್ನಗಳಂತೆ ಹೊಳೆವ ಉಗುರುಗಳಿಂದ ಅಲಂಕೃತವಾದ ಬಲಗೈ ಕಿರುಬೆರಳಿನ ಮೇಲೆ ನಿಂತಿದ್ದ ಪರ್ವತವು, ಶ್ರೀಹರಿ ಕೂರ್ಮವನ್ನು ಆಶ್ರಯಿಸಿದ ಶೇಷದೇವರ ಫಣಾಸಹಸ್ರದ ಮೇಲಿರುವ ಪೃಥಿವಿಯ ಕಾಂತಿಯನ್ನು ಹೋಲುತ್ತಿದ್ದಿತು. || ೧೪ ||

ಉದ್ಗಚ್ಛದೂಷ್ಮಾವಲಿ ಧೂಮಲಿಂಗ–
ಮದ್ರಿಂ ದ್ರವಧ್ಧಾತುರಸಾದ್ರಶೃಂಗಂ ||
ವಿಷ್ವಕ್ ಪತದ್ರತ್ನಚಯಸ್ಫುಲಿಂಗ–
ಮಗ್ನ್ಯಸ್ತ್ರಮೀಶಾಚರಿತಂ ಪ್ರತರ್ಕೇ || ೧೫ ||

ಗೋವರ್ಧನ ಪರ್ವತವು, ಹೊರಗೆ ಹೊರಡುವ ಆವರೆಗಳೆಂಬ ಹೊಗೆಯ ಚಿನ್ಹವುಳ್ಳದ್ದಾಗಿಯೂ ಸುತ್ತಲೂ ಕಿಡಿಗಳಂತೇ ಎರಚಿ ಬಿದ್ದಿರುವ ರತ್ನಗಳಿಂದಲೂ ಹರಿಯುತ್ತಿರುವಂತೇ ತೋರುವ ಸುವರ್ಣಾದಿ ಧಾತುಗಳಿಂದ ಜ್ವಾಲೆಯಂತೇ ಫಳಫಳಿಸುವುದಾಗಿ ಶ್ರೀಕೃಷ್ಣನು ಕೋಪಗೊಂಡು ವೃಷ್ಟಿಶಮನಾರ್ಥವಾಗಿ ಬಿಡಲ್ಪಟ್ಟ ಅಗ್ನ್ಯಸ್ತ್ರವೋ ಎಂಬಂತಿದ್ದಿತು. ಹೀಗೆನ್ನುವುದರಿಂದ ಮಳೆಯು ಸುತರಾಂ ನಿಂತಿತೆಂದು ಧ್ವನಿಸುತ್ತದೆ. || ೧೫ ||

ಅದ್ರಿಸ್ತಂ ಘನಮಿಂದ್ರನೀಲಧರಣೀಕಾಂತ್ಯಾ ಶಿಖಂಡಶ್ರಿಯಾ
ತಸ್ಯಾಖಂಡಲಚಾಪಮಂಬುನಿಚಯಂ ಮುಕ್ತಾಫಲಾನಾಂ ರುಚಾ ||

ಸೌವರ್ಣಸ್ಥಲಶೋಭಯಾ ಚ ತಡಿತಂ ಪಂಚಾಸ್ಯನಾದೇನ ತ-
ನ್ನಾದಂ ಸಾಧು ಜಿಗಾಯ ಕಿನ್ನ ಸುಕರಂ ನಿತ್ಯಂ ಕ್ಷಮಾಧಾರಿಣಃ || ೧೬ ||

ಸಂಪೂರ್ಣವಾಗಿ ಮಳೆ ನಿಂತಿತು ಎಂಬುದನ್ನು ತಿಳಿಸಲು, ಗೋವರ್ಧನ ಪರ್ವತವು ಸಕಲ ರೀತಿಯಾಗಿಯೂ ಮೇಘವನ್ನು ಗೆದ್ದಿತು ಎಂದು ಅರ್ಥಾಂತರ ನ್ಯಾಸ ಹಾಗೂ ಶ್ಲಿಷ್ಟ ಸಾಂಕರ್ಯಾಲಂಕಾರದಿಂದ ವರ್ಣಿಸುತ್ತಾರೆ,

ಗೋವರ್ಧನ ಪರ್ವತವು ತನ್ನಲ್ಲಿರುವ ಇಂದ್ರನೀಲ ಮಣಿಗಳ ಸಮುದಾಯದಿಂದ ಮೇಘದ ನೀಲಿಮೆಯನ್ನೂ, ನವಿಲುಗಳ ಸಾಲಿನಿಂದ ಕಾಮನಬಿಲ್ಲಿನ ಸೊಬಗನ್ನೂ, ಮುತ್ತುಗಳ ರಾಶಿಯಿಂದ ಹನಿಗಳ ಕಾಂತಿಯನ್ನೂ, ಸುವರ್ಣಸ್ಥಳಗಳ ಶೋಭೆಯಿಂದ ಮಿಂಚುಗಳನ್ನೂ, ಸಿಂಹಗಳ ಧ್ವನಿಯಿಂದ ಗುಡುಗಿನ ಧ್ವನಿಯನ್ನೂ ಹೀಗೆ ಸರ್ವರೀತಿಯಾಗಿಯೂ ಮೇಘವನ್ನು ಜಯಿಸಿತು. (ನಿರಂತರದಲ್ಲಿಯೂ ಕ್ಷಮಾಗುಣಶೀಲರಿಗೆ ಅಸಾಧ್ಯ ಯಾವುದು? ಕ್ಷಮಾ (ಧರಣಿ) ಧಾರಿಯಾದ ಗೋವರ್ಧನ ಗಿರಿಗೆ ಯಾವುದು ಅಶಕ್ಯವು. ||೧೬||

ನಿರ್ಗತ್ಯ ಪಶ್ಯತಾಟೋಪಃ ಕಿಮುದ್ಯಾಪ್ಯಸ್ತಿ ವಾರ್ಮುಚಾಮ್ ||
ಇತ್ಯುಕ್ತಃ ಕೋಪಿ ಗೋಪಸ್ತದ್ವಿದಿತ್ವಾ ವಕ್ತಿ ಮಾಧವಮ್ || ೧೭ ||

ಶ್ರೀಕೃಷ್ಣನು, "ಹೇ ಗೋಪಾಲಕರುಗಳಿರಾ ಮೇಘಗಳ ಅಟಾಟೋಪವು ಇನ್ನು ಇರುವುದೆ? ನೋಡಿರಿ" ಹೀಗೆ ಹೇಳಿಸಿಕೊಳ್ಳಲ್ಪಟ್ಟ ಗೋಪಾಲಕರುಗಳಲ್ಲಿ ಒಬ್ಬ ಗೋಪಾಲನು ಹೊರಗೆ ಬಂದುನೋಡಿ ತಿಳಿದು ಮಾಧವನನ್ನು ಕುರಿತು ಹೀಗೆಂದನು. ||೧೭||

ಧಾರಾನ್ನೈವ ಪಯೋಮುಚಾಂ ಯದುಪತೇ ಪ್ರೇಮಾಶ್ರುಧಾರಾ ಪರಂ
ಸ್ವಾನಾಂ ನಾಪಿ ಚ ಗರ್ಜಿತಂ ಸ್ತುತಿಕೃತಾಂ ಸಿದ್ಧೇಶ್ವರಾಣಾಂ ಧ್ವನಿಃ ||
ವಿದ್ಯುನ್ನಾಮರನರ್ತಕೀಕರಚಯಾಲಂಕಾರಕಾಂತಿಃ ಪ್ರಭೋ
ನೋ ವಾಯುಃ ಸುರವೃಷ್ಟಪುಷ್ಪಸಹಗಾನಲ್ಪಾಲಿಪಕ್ಷೈರ್ಮರುತ್ || ೧೮ ||

ಗೋಪಾಲಕ— ಹೇ ಯದುಕುಲತಿಲಕನಾದ ಕೃಷ್ಣನೇ! ಮೇಘಗಳ ಧಾರೆಗಳು ಒಂದಾದರೂ ಇಲ್ಲ ಸ್ವಾಮಿ.

ಕೃಷ್ಣ— ಏನೋ ಕಾಣುತ್ತಿರುವುದಲ್ಲ?

ಗೋಪಾಲಕ— ನಮ್ಮವರುಗಳ ಆನಂದದಿಂದ ನಿಃಸೃತವಾದ ಪ್ರೇಮಾಶ್ರುಧಾರೆಗಳು ಸ್ವಾಮಿ.

ಕೃಷ್ಣ— ಮೇಘಗಳ ಗರ್ಜನೆಯು ಇರುವುದಾ?

ಗೋಪಾಲಕ— ಅದೂ ಇಲ್ಲ ದೇವ.

ಕೃಷ್ಣ— ಹಾಗಾದರೇ ಕೇಳುವ ಧ್ವನಿಗಳಾವವು ?

ಗೋಪಾಲಕ— ನಿನ್ನಪ್ರಭಾವವನ್ನುಕಂಡ ಸಿದ್ಧೇಶ್ವರರುಗಳ ಸ್ತೋತ್ರಗಳಧ್ವನಿಯು.

ಕೃಷ್ಣ— ಮಿಂಚುಗಳಿರುವುದಾ ?

ಗೋಪಾಲಕ— ಅವುಗಳೂ ಇಲ್ಲವು.

ಕೃಷ್ಣ— ಹಾಗಾದರೇ ಥಳಥಳಿಸುವವು ಯಾವವು ?

ಗೋಪಾಲಕ— ಆನಂದ ಉದ್ರೇಕದಿಂದ ನರ್ತನೋದ್ಯುಕ್ತರಾದ ಅಮರ ನಾಯಕಿಯರುಗಳ ಕಂಕಣಾದಿ ಆಭರಣಗಳ ಹೊಳಪುಗಳು; ಪ್ರಭೋ !

ಕೃಷ್ಣ— ಪ್ರಚಂಡ ಗಾಳಿ ಯಾವುದು ?

ಗೋಪಾಲಕ— ದೇವತೆಗಳಿಂದ ಮಳೆಗರೆದ ಪುಷ್ಪಗಳೊಂದಿಗೆ ಕೂಡಿ ಹರಿದಾಡುವ ಅನೇಕ ಭ್ರಮರಗಳ ರೆಕ್ಕೆಗಳು ಬೀಸಿದುದರಿಂದಾದ ಮಂದಾನಿಲವೇ ಹೊರತು ಬಿರುಗಾಳಿಯು ಇರುವುದಿಲ್ಲ. ॥ ೧೮ ॥

ನೀಲಂ ನೈವ ನಭಃ ಸುಲಜ್ಜಿತಶಚೀಭರ್ತುರ್ಮುಖೇ ನೀಲಿಮಾ
ಮೇಘಾಃ ಕ್ವಾಪಿ ನ ಸಂತಿ ಕಿಂತು ದಿವಿಜಭ್ರಾಜದ್ವಿಮಾನಾಂಬುದಾಃ ॥
ತಾಮಿಸ್ರಂ ನ ಹಿ ದಿಶ್ಯಥೇದೃಶಮಪಿ ತ್ವಾಂ ಮಾನುಷಂ ಮನ್ವತಾಂ
ಚಿತ್ತೇಷ್ವಸ್ತಿ ನ ವೇಪಥುರ್ನಿಜಜನೇ ಭೀತೇಂದ್ರಗಾತ್ರೇ ಪರಂ ॥ ೧೯ ॥

ಕೃಷ್ಣ— ಆಕಾಶದಲ್ಲಿ ನೀಲಿಮೆಯು (ನೀಲೀಬಣ್ಣವು) ಇರುವುದಾ ?

ಗೋಪಾಲಕ— ಇಲ್ಲ ದೇವಾ, ಆ ನೀಲಿಮೆಯು ಲಜ್ಜಿತನಾದ ಶಚಿಪತಿಯಾದ ಇಂದ್ರನ ಮುಖದಲ್ಲಿ ಸೇರಿತು.

ಕೃಷ್ಣ— ಮೇಘಗಳಿವೆಯಾ

ಗೋಪಾಲಕ— ಅವುಗಳೂ ಇಲ್ಲ.

ಕೃಷ್ಣ— ಹಾಗಾದರೆ ಕಾಣುವುದೇನು ?

ಗೋಪಾಲಕ— ಸ್ವರ್ಗಗತರಾದ ನಿನ್ನ ಜಯವನ್ನು ನೋಡಲು ಬಂದ ದೇವತೆಗಳ ವಿಮಾನಗಳು ಆಕಾಶದಲ್ಲಿ ಮೇಘಗಳಂತೆ ದಟ್ಟಾಗಿ ತೋರುತ್ತವೆ.

ಕೃಷ್ಣ— ಕತ್ತಲೆಯೋ ?

ಗೋಪಾಲಕ— ಅದೂ ಇಲ್ಲ. ಯಾರು ನಿನ್ನನ್ನು ಮನುಷ್ಯ ಮಾತ್ರನೆಂದು ತಿಳಿದಿರುವರೋ ಅವರ ಅದು ಮನಸ್ಸಿನಲ್ಲಿ ಅಡಗಿತು.

ಕೃಷ್ಣ— ಛಳಿಯೋ ?

ಗೋಪಾಲಕ— ಅದೂ ಇಲ್ಲ. ಛಳಿಯು ಭಯಗೊಂಡ ಇಂದ್ರನ ದೇಹವನ್ನು ಆಶ್ರಯಿಸಿತು. ॥ ೧೯ ॥

ತತಃ ಪರೀತಃ ಸ್ವೈರ್ಗೋಪೈ ರ್ಗೋಪೀಭಿರ್ಗೋಧನೈರಪಿ ॥
ಪ್ರತಸ್ಥೇ ಪ್ರಯತಂ ಗೋಷ್ಠಂ ಸ್ತೂಯಮಾನಃ ಸುರೈರ್ನರೈಃ ॥೨೦॥

ಅನಂತರ ಶ್ರೀಕೃಷ್ಣನು ಗೋಪಾಲಕರಗಳಿಂದಲೂ, ಗೋಪಿಕಾ ಸ್ತ್ರೀಯರುಗಳಿಂದಲೂ, ಗೋಧನಗಳಿಂದಲೂ ಸುತ್ತುಕಟ್ಟಿಕೊಳ್ಳಲ್ಪಟ್ಟವನಾಗಿ ದೇವತೆಗಳಿಂದಲೂ ಮಾನವರಗಳಿಂದಲೂ ಸ್ತೋತ್ರಮಾಡಿಸಿಕೊಳ್ಳುವನಾಗಿ ಪವಿತ್ರವಾದ ಗೋಕುಲವನ್ನು ಕುರಿತು ಹೊರಟನು. ॥ ೨೦ ॥

ನಾಥಾಪರಾಧಕೃದುಪೇತ್ಯ ಸುಲಜ್ಜಿತೋಽಥೋ
ಶಕ್ರೋಽಚ್ಯುತಂ ರಹಸಿ ರಮ್ಯತಮಂ ತ್ರಿಲೋಕ್ಯಾಂ ॥
ಮೂರ್ಧ್ನಾ ಪ್ರಣಮ್ಯ ಸದಯಂ ಸುಧಯಾಭ್ಯಷಿಂಚದ್
ಗೋವಿಂದನಾಮ ಚ ಪಠನ್ಸ್ವಕೃತಾಘಶಾಂತ್ಯೈ ॥ ೨೧ ॥

ಅನಂತರ ಬಹು ಲಜ್ಜಿತನಾದ ಶಚೀಪತಿಯಾದ ಇಂದ್ರನು ಮೂರು ಲೋಕಗಳಲ್ಲಿಯೂ ಅತಿ ರಮಣೀಯನಾದ ಅಚ್ಯುತನಾದ ಶ್ರೀಕೃಷ್ಣನ ಬಳಿಯಲ್ಲಿ ರಹಸ್ಯವಾಗಿ ಬಂದು ದಯಹುಟ್ಟುವಂತೇ ಶ್ರೀಕೃಷ್ಣನ ಪಾದಗಳಲ್ಲಿ ತಲೆಯನ್ನಿರಿಸಿ ಸಾಷ್ಟಾಂಗವಾಗಿ ನಮಸ್ಕಾರ ಮಾಡಿ ಕಾಮಧೇನುವಿನ ಕ್ಷೀರದಿಂದ ಅಭಿಷೇಕವನ್ನೂ ಮಾಡಿ ತಾನು ಮಾಡಿದ ಪಾಪ ಶಾಂತಿಗಾಗಿ " ಗೋವಿಂದ ಗೋವಿಂದ " ಎಂದು ಪಠಿಸುವವನಾದನು.

ಪುರಾಣಗಳಲ್ಲಿ (ಗೋವಿಂದ ಇತಿ ನಾಮಚಕಾರತಸ್ಮೈ) ಗೋವಿಂದನೆಂದು ಶ್ರೀಕೃಷ್ಣನಿಗೆ ಹೆಸರಿಟ್ಟನೆಂದು ಹೇಳಿರುವುದರ ತಾತ್ಪರ್ಯವೂ ಸೂಚಿತವಾಗುತ್ತದೆ. ಶ್ರೀಕೃಷ್ಣನಿಗೆ ಗೋವಿಂದ (ವೇದ ಪ್ರತಿಪಾದ್ಯ) ಎಂಬ ಹೆಸರು ಸ್ವಭಾವಸಿದ್ಧವೇ ಆದುದನ್ನು ಜಪಿಸಿದನೆಂದು ತಾತ್ಪರ್ಯವು. ಸರ್ವ ಪ್ರಾಯಶ್ಚಿತ್ತಗಳಲ್ಲಿಯೂ ಅಚ್ಯುತ ಅನಂತ ಗೋವಿಂದ ನಾಮೋಚ್ಚಾರಣವು ಮುಖ್ಯ ಪ್ರಾಚ್ಯವಾಗಿ ಕಾರ್ಯ ಸಾಂಗತಾ ಸಾಧಕವಾಗಿ ಸ್ಮೃತಿ ಸಿದ್ಧವಾದುದು, ಅನಾದಿ ಕಾಲದಿಂದಲೂ ಶಿಷ್ಟರಗಳಿಂದ ಅನುಷ್ಠಿತವೇ ಎಂಬುದೂ, ನಮಸ್ಕಾರ ಅಭಿಷೇಕ ನಾಮೋಚ್ಚಾರಣಗಳು ವಿಷ್ಣುದ್ರೋಹಾದಿ ಮಹಾ ಪಾತಕಗಳಿಗೂ ಪರಿಹಾರಕಗಳೆಂದೂ ಸೂಚಿತವಾಗುತ್ತದೆ. ॥ ೨೧ ॥

ಸಾಧನದ್ವಾದಶಿಯಲ್ಲಿ ಯಮುನೆಯಲ್ಲಿ ಸ್ನಾನಾಸಕ್ತರಾದ ಗೋಪಾಲಕರುಗಳ ಗುಂಪಿನಲ್ಲಿ ಬದ್ಧನಾದ ನಂದಗೋಪನನ್ನು ಬಿಡಿಸಿ ತನ್ನ ಮಹಿಮೆಯನ್ನು ತೋರಿದನೆಂಬ ಪೌರಾಣಿಕ ಕಥೆಯನ್ನು ವರ್ಣಿಸುತ್ತಾರೆ.

ಬದ್ಧ್ವಾ ನಿನಾಯ ಕಿಲ ನಂದಮು ಗಾಲವಾರಿ–
ಮಧ್ಯಪ್ರವಿಷ್ಟಮುಸಂಗಃ ಸಲಿಲೇಶ್ವರಸ್ಯ ||
ಭೃತ್ಯಚ್ಛಲೇನ ಸ ಸಮುಸ್ಯುರಮುಂ ಬಬಂಧ
ಕೃತ್ವಾ ಸ್ವನಾಥಪಿತರಂ ಕ್ಷಿತಿ ಮೇ ಪ್ರತರ್ಕಃ || ೨೨ ||

ಆಕಾಲದಲ್ಲಿ ಸ್ನಾನಾಸಕ್ತರಾದ ಗೋಪಾಲಕರುಗಳಲ್ಲಿ ವರುಣನ ಭೃತ್ಯನೊಬ್ಬನು ಪ್ರವಿಷ್ಟನಾಗಿ ನಂದಗೋಪನನ್ನು ಕಟ್ಟಿ ವರುಣನ ಬಳಿಯಲ್ಲಿ ತೆಗೆದುಕೊಂಡು ಹೋದನು. ನಾನು ಹೀಗೆ ತರ್ಕಿಸುತ್ತೇನೆ, "ನನಗೆ ಸ್ವಾಮಿಯಾದ ಶ್ರೀ ಹರಿಗೆ ಇವನು ತಂದೆಯೇ? ಭೃತ್ಯನಾದ ನಾನು ಇವನ್ನು ಕೇಳಿ ಸಹಿಸುವುದೇ? ಎಂದು ಕೋಪದಿಂದ ಬಂಧಿಸಿದನು" ಎಂದು. || ೨೨ ||

ಕೃಷ್ಣೋಽಪಿ ವೀಕ್ಷ್ಯ ದೃಢಭಕ್ತಿಮಿವ ಪ್ರತುಷ್ಟಃ
ಕೃತ್ಯಚ್ಛಲೇ ನ ನಿಜದರ್ಶನಮೇವ ದಿತ್ಸನ್ ||
ಗತ್ವಾಂಬುರಾಶಿನಿಲಯಂ ಜನಕೇನ ಸಾಕಂ
ಅಭ್ಯರ್ಚಿತಃ ಸ್ವಭವನಂ ಪುನರಾಜಗಾಮ || ೨೩ ||

ಶ್ರೀ ಕೃಷ್ಣನಾದರೂ ವರುಣನ ದೃಢವಾದ ಭಕ್ತಿಯನ್ನು ನೋಡಿ ಸಂತುಷ್ಟನಾಗಿ ತನ್ನ ಕಾರ್ಯನೆಪದಿಂದ ವರುಣನಿಗೆ ತನ್ನ ದರ್ಶನವನ್ನೇ ಕೊಡುವವನಾಗಿ ಸಮುದ್ರವೇ ಮನೆಯಾಗಿವುಳ್ಳ (ವೈಭ್ರಾಜಕ) ವರುಣನನ್ನು ಸೇರಿ– ತಂದೆಯೊಂದಿಗೆ ಪೂಜಿತನಾಗಿ ಮನೆಯಾದ ಗೋಕುಲಕ್ಕೆ ನಂದಗೋಪನೊಂದಿಗೆ ತೆರಳಿಬಂದನು. || ೨೩ ||

ಕೆಲವು ಶ್ಲೋಕಗಳಿಂದ ಅನೇಕಾಲಂಕಾರಗಳಿಂದ ಸೂರ್ಯಾಸ್ತಮಯವನ್ನು ವರ್ಣಿಸುತ್ತಾರೆ.

ತಪ್ತಂ ಹೇಮ ಕೃಶಾನುಸಂಗಿಗಗನೇ ವಾತಾಯನೇ ಭಾಜನೇ
ಮಾಹೇದ್ರ್ಯಾಃ ಶುಭಕುಂಡಲಂ ರಚಯಿತುಂ ದೇವ್ಯೈರುಪಾಯಾದ್ದಿಶಃ ||
ಸಂಗೃಹ್ಯಾಂಬುನಿ ಸಂನಿವೇಶಿತಮಿವೋತ್ತುಂಗಸ್ಫುಲಿಂಗಾವೃತಂ
ತೇಜೋರಾಶಿರಿನೋ ಜಗಾಮ ಜಲಧಿಂ ರಾಗಾಂಕಿತಃ ಪಶ್ಚಿಮಮ್ || ೨೪ ||

ಸೂರ್ಯನು ಕೆಂಪಾಗಿ ಪಶ್ಚಿಮ ಸಮುದ್ರವನ್ನು ಸೇರಿದನು (ಅಸ್ತಮಯವನ್ನು ಹೊಂದಿದನು). ಆ ದೃಶ್ಯವು, ದೇವತೆಗಳು ವಾಯುಸಂಚಾರವುಳ್ಳ ಆಕಾಶವೆಂಬ ಪಾತ್ರೆಯಲ್ಲಿ (ಮೂಸೆಯಲ್ಲಿ, ಬಂಗಾರವನ್ನಿರಿಸಿ ಅಗ್ನಿಯಲ್ಲಿ ಚೆನ್ನಾಗಿ ಕಾಯಿಸಿ ಇಂದ್ರ ಸಂಬಂಧಿಯಾದ "ಪ್ರಾಚೀ" ಎಂಬ ದಿಗಂಗನೆಗೆ ಸುಂದರವಾದ ಕರ್ಣಕುಂಡಲಗಳನ್ನು ಮಾಡಿಸಲು ಕಾದು ಚಟಚಟನೆ ಏರುವ ಕಿಡಿಗಳುಳ್ಳ ಬಂಗಾರವನ್ನು ಉಪಾಯವಾಗಿ ತೆಗೆದು ನೀರಿನಲ್ಲಿ ಹಾಕುವರೋ ಎಂಬಂತಿದ್ದಿತು. || ೨೪ ||

ಕರೈರ್ಗಿರೀಂದ್ರಾನ್ಪರಿತೋ ದಧಾನೋಽ-
ಪ್ಯಸೌ ವಿವಸ್ವಾನ್ಪತಿತಃ ಕಿಲಾಬ್ಧೌ ॥
ಮಮೇತ್ಥಮಾಭಾತಿ ಸರಿಚ್ಛರೀರ-
ವಿಶೋಷಕಂ ತತ್ಪತಿರಗ್ರಸೀತ್ತಮ್ ॥ ೨೫ ॥

ಸೂರ್ಯನು ತನ್ನ ಕಿರಣಗಳೆಂಬ ಕೈಗಳಿಂದ ಉದಯಾಚಲ ಅಸ್ತಾಚಲ ಗಳೆಂಬ ದಂಡೆಗಳನ್ನು ಘಟ್ಟಿಯಾಗಿ ಹಿಡಿದಿರುವವನಾದರೂ ಸಮುದ್ರದಲ್ಲಿ ಬಿದ್ದೇ ಹೋದನು. ಇದು ನನಗೆ ಹೀಗೆ ತೋರುತ್ತದೆ— ಸಮುದ್ರನು ತನ್ನ ಹೆಂಡಂದಿರಾದ ನದಿಗಳನ್ನು ಇವನು ಒಣಗಿಸುವನೆಂದು ಸಿಟ್ಟಿನಿಂದ ನುಂಗಿದನೋ; ಎಂದು. ॥೨೫॥

ತ್ಯಕ್ತ್ವಾ ಕ್ರಮೇಣ ಸಹಜಾತಮಪಿ ಸ್ವರಾಗಂ
ಚಕ್ರಾಬ್ಜಮಾನಿತಕರಃ ಪ್ರತತೋರ್ಧ್ವಪಾದಃ ॥
ಆಶ್ರಿತ್ಯ ವಿಷ್ಣುಪದಮುಗ್ರತಪೋಽತಪದ್ಯ-
ಸ್ತಸ್ಯೈವ ಧಾಮ ಸ ಜಗಾಮ ಕುತೋಽಸ್ಯ ಪಾತಃ ॥ ೨೬ ॥

ಸೂರ್ಯನು ಸಹಜವಾದ ಕೆಂದಿಮೆಯನ್ನು (ರಾಗವನ್ನು) ತ್ಯಜಿಸಿದವ ನಾಗಿ ವರ್ತುಲವಾದ ಕಮಲಗಳನ್ನು ಕೈಗಳಲ್ಲಿ ತೆಗೆದು ವಿಷ್ಣುಪದವನ್ನು (ವಿಷ್ಣು ಪದ–ಆಕಾಶ) ಆಶ್ರಯಿಸಿ ಊರ್ಧ್ವಪಾದನಾಗಿ (ಶೀರ್ಷಾಸನ) ಉಗ್ರ ತಪಸ್ಸನ್ನು ಮಾಡಿ, ಆ ವಿಷ್ಣುವಿನ ಮನೆಗೆ (ಜಲಧಿ) ತಾನು ಹೋದನು. ಅಲ್ಲದೆ ಲೋಕೋಪಕಾರಿಯಾದ ಇವನಿಗೆ ಪಾತವೆಲ್ಲಿಯದು. ॥ ೨೬ ॥

ತಪ್ತಂ ತಪಸ್ವಿನಿವಹಂ ಭುವಿ ಮಸ್ತತಾನ
ಪೃಥ್ವ್ಯಾಶ್ಚ ಜೀವನಮಸೌ ಸ್ವಕರೈರ್ಜಹಾರ ॥
ಲಕ್ಷ್ಮೀಂ ತಥೋಡುನಿಕರಸ್ಯ ವೃಥೈವ ಭಾನೋ-
ಸ್ತಸ್ಮಾಸ್ಯ ಪಾತಮಪಿ ಯುಕ್ತಿಸಹಂ ವದಾಮಃ ॥ ೩೭ ॥

ಅಥವಾ ಹರಿಯನ್ನು ಬಿಟ್ಟು, ಯಾರಿಗೂ ಬೀಳು ತಪ್ಪಿದುದಲ್ಲ. ಕಾರಣ ಇವನ ಬೀಳು ಯುಕ್ತಿ ಯುಕ್ತವೇ ಅನ್ನುತ್ತೇನೆ. ತಪಸ್ವಿಗಳ ಗುಂಪನ್ನು ತಪನಗೊಳಿ ಸುತ್ತಾ ಪೃಥಿವಿಗೆ ಜೀವನದಂತಿರುವ ಉದಕವನ್ನು (ಜೀವನಂ ಭುವನಂ ವನಂ ಎಂಬ ಶೋಕದಿಂದ ಜೀವನ–ಜಲ) ತನ್ನ ಕಿರಣಗಳೆಂಬ ಕೈಗಳಿಂದ ಅಪಹರಿಸು ವವನಾಗಿ ನಕ್ಷತ್ರಗಳ ಕಾಂತಿಯನ್ನು ವ್ಯರ್ಥವನ್ನಾಗಿ ಮಾಡುವವನಾಗಿ ಭೂ-ನಕ್ಷ ತ್ರಗಳೆಂಬ ಸ್ತ್ರೀಯರ ತಪಸ್ವಿಗಳ ವ್ಯಥೆಕಾರಕನಾದ ಇವನಿಗೆ ಪಾತವೂ ಯುಕ್ತಿ ವಿಹಿತವೇ ಎನ್ನುತ್ತೇನೆ. ॥ ೨೭ ॥

ಸ ಲಬ್ಧ ಜನ್ಮಾ ದಿಶಿ ವಜ್ರಪಾಣೇಃ
ಪ್ರವೃದ್ಧಗಾತ್ರೋ ಗಗನಸ್ಯ ಮಧ್ಯೇ ॥
ಅಗಾದ್ವಿನಾಶಂ ದ್ಯುಮಣಿಃ ಪ್ರತೀಚ್ಯಾಂ
ವಿಧೇರ್ನಿದೇಶೋ ಮಹತಾಪ್ಯಲಂಘ್ಯಃ ॥ ೨೮ ॥

ಮೂರು ಲೋಕಗಳಿಗೇ ಪ್ರಕಾಶಕನಾದ ಸೂರ್ಯನು ವ್ರಜಪಾಣಿಯಾದ ಇಂದ್ರನದಾದ ಪೂರ್ವ ದಿಕ್ಕಿನಲ್ಲಿ ಜನ್ಮತಾಳಿದನು. ಆಕಾಶ ಮಧ್ಯದಲ್ಲಿ ಅಭಿವೃದ್ಧ ನಾದನು; ಪಶ್ಚಿಮದಲ್ಲಿ ಕೊನೆಗೊಂಡನು. ವಿಧಿಯ ವಿಲಾಸವು ಎಂತಹ ಮಹನೀಯರಿಗೂ ಲಂಘಿಸಲು (ದಾಟಲು) ಅಸಾಧ್ಯವಲ್ಲವೇ ? ॥ ೨೮ ॥

ರಾಗಂ ಪಯೋಧರತಟೇ ಹರಿದಂಗನಾನಾಂ
ರಾಗೀ ಸಮರ್ಪ್ಯ ಸವಿತಾ ಸಮಗಾದಗಾಂತಮ್ ॥
ಕೂಜದ್ವಿಹಂಗಮರವೈರಿವ ತಾ ರುದಂತ್ಯೋ
ಭೇಜುಸ್ತಮಸ್ತತಿಮಿಷಾಂತರಿವೋರುಮೂರ್ಛಾಮ್ ॥ ೨೯ ॥

[ವಿಟ ಪುರುಷನು (ಕಾಮಿ) ಪ್ರಯಾಣೋನ್ಮುಖನಾಗಿ ಸ್ವಸ್ತ್ರೀಯರುಗಳ ಸ್ತನಾದಿ ಸೌಂದರ್ಯಗಳಲ್ಲಿ ಅನುರಾಗ ಚಿತ್ತನಾಗಿ ಪ್ರಯಾಣಿಸುವಂತೆ] ಸೂರ್ಯನು (ಅನುರಾಗ ಚಿತ್ತನಾಗಿ) ರಾಗಯುಕ್ತನಾಗಿ (ರಾಗ–ಕೆಂಪು) ದಿಕ್ಕೆಂಬ ಪತ್ನಿಯ ಸ್ತನವೆಂಬ ಮೇಘಗಳಲ್ಲಿ ಕೆಂಪೆಂಬ ಅನುರಾಗವನ್ನಿರಿಸಿ (ಮೇರುವಿನ ಬಳಿಗೆ) ತೆರಳಿದನು. (ಪತಿವಿಯೋಗದಿಂದ ಸತಿಯರು ರೋದಿಸುತ್ತಾ ಮೂರ್ಛೆಗೊಳುವಂತೆ) ಸಾಯಂಕಾಲಿಕ ಪಕ್ಷಿಗಳ ಕಿಲಕಿಲ ಶಬ್ದವೆಂಬ ರೋದನವನ್ನು ಸೂಚಿಸುತ್ತಾ ದಿಕ್ಕೆಂಬ ಅಂಗನೆಯು ಸೂರ್ಯನೆಂಬ ಪತಿಯು ತೆರಳುತ್ತಿರಲು ಮೂರ್ಛೆ ಎಂಬ ಕತ್ತಲೆಯನ್ನು ಹೊಂದಿದಳು. ॥ ೨೯ ॥

ಅಂಬೋಧಿಹೃತ್ಕೃತಪದಂ ಪ್ರತಿರೂಪಮರ್ಕಃ
ಸಂದೃಶ್ಯ ಸಾಧುಧವಲೀಕೃತತಜ್ಜಲೌಘಮ್ ॥
ಶಾಂತೋ ಹಿ ಸರ್ವಹೃದಯಂಗಮತಾಮುಪೈತೀ-
ತ್ಯಂತೇ ಶಮಂ ಸಮಧಿಗಮ್ಯ ವಿವೇಶ ಸೋಽಬ್ಧಿಮ್ ॥ ೩೦ ॥

ಸೂರ್ಯನು, ಸಮುದ್ರದಲ್ಲಿ ಮೂಡಿರುವ ಸಮುದ್ರಜಲವನ್ನು ಶುಭ್ರ ಮಾಡಿದ ಅತಿ ಆಹ್ಲಾದಕವಾದ ತನ್ನ ಪ್ರತಿಬಿಂಬವನ್ನು ನೋಡಿ "ಶಾಂತತೆಯೇ ಸರ್ವ ಹೃದಯಾಹ್ಲಾದಕರವಾದುದು" ಎಂದರಿತು ಶಾಂತತೆಯನ್ನು ಹೊಂದುವುದಕ್ಕೋಸ್ಕರವಾಗಿಯೇ ಸಮುದ್ರವನ್ನು ಸೇರಿದನು. ॥ ೩೦ ॥

ಮಿತ್ರೇಂಬುಜಾತನಿಕರಸ್ಯ ನಿತಾಂತಮಿತ್ರೇ
ಹ್ಯಸ್ತಂ ಸಮೀಯುಷಿ ಮುಖಂ ಮುಕುಲೀಬಭೂವ ॥
ಪದ್ಮಸ್ಯ ಶುದ್ಧಜಲಗಸ್ಯ ಚ ಮುದ್ರಯಂತಿ
ನಷ್ಟಾಃ ಪ್ರಿಯಾಃ ಖಲು ಸಮೃದ್ಧಿಯುಜೋಽಪಿ ವಕ್ತ್ರಮ್ ॥೩೧॥

ಕಮಲಗಳ ಸಮುದಾಯಕ್ಕೆ ಮಿತ್ರನಾದ ಸೂರ್ಯನು ಅಸ್ತಮಿತನಾಗುತ್ತಿರಲು ಕಮಲಗಳು ತಮ್ಮ ಮುಖಗಳನ್ನೂ ಮುಚ್ಚಿಕೊಂಡವು. (ಬಾಡಿದವು) ಎಷ್ಟೇ ಸಮೃದ್ಧ ಶುದ್ಧ ಜಲರಾಶಿಯನ್ನೇ ಆಶ್ರಯಿಸಿದ್ದರೂ ಬಾಡೇ ಹೋದವು, ಇದು ವಿಹಿತವೇ! ಎಷ್ಟೇ ಸಮೃದ್ಧಿಯಾದ ಸಂಪತ್ತು ತುಂಬಿ ತುಳುಕುತ್ತಿದ್ದರೂ ಪ್ರಿಯವಿಯೋಗವಾಯಿತೆಂದರೇ ಮುಖ ಬಾಡುವುದು ಸಹಜವಷ್ಟೇ! ॥ ೩೧ ॥

ಆಕಂಠೋದಕವಾಸಿ ಹೃದ್ಗಮಧುಕೃಜ್ಝಂಕಾರರಮ್ಯೋಂಕೃತಿ
ಭ್ರಾಜತ್ಕಂಟಕಕಂಟಕದ್ಯುತಿ ಮುಹುರ್ಮಂತ್ರಾರ್ಥಸಂಚಿಂತಯಾ ॥
ಈಷತ್ಕಂಪಿತಮೂರ್ಧಶೋಭಿ ನಲಿನಂ ಹಂಸೌಘಸಂಶಿಕ್ಷಿತಂ
ಸ್ವಾಂತಸ್ಥಾಪಿತಧಾತೃ ಸಾಧು ತಪತೀವಾಕಾಂಕ್ಷ್ಯ ಮಿತ್ರೋದಯಮ್ ॥೩೨॥

ಕಂಠಪರಿಯಂತವಾದ ನೀರಿನಲ್ಲಿ ನಿಂತು ಹೃದಯದಲ್ಲಿ ಪರಮಾತ್ಮನನ್ನು ಸ್ಮರಿಸುತ್ತಾ ಮಧುರವಾದ ಓಂಕಾರ ಧ್ವನಿವುಳ್ಳವನಾಗಿಯೂ ರೋಮಾಂಚಿತನಾಗಿಯೂ ಮಂತ್ರಾರ್ಥಗಳ ಚಿಂತನೆಯಿಂದ ತಲೆದೂಗುವವನಾಗಿಯೂ ಪರಮಹಂಸಾದಿ ಶ್ರೀಸ್ಮರುಗಳಿಂದ ಸುಶಿಕ್ಷಿತನಾಗಿಯೂ ಹರಿಯ ಅಪರೋಕ್ಷವನ್ನು ಬಯಸುತ್ತಾ ಇರುವ ತಪಸ್ವಿಗಳ ಸಮೂಹದಂತೆ ಕಮಲಗಳು ಪ್ರಕಾಶಿಸುತ್ತಿದ್ದವು. ಎಂದು ತಪಸ್ವಿಗಳ ದೃಷ್ಟಾಂತದಿಂದ ಕಮಲಗಳನ್ನು ವರ್ಣಿಸುತ್ತಾರೆ.

ಕುತ್ತಿಗೆಮಟ್ಟ ನೀರಿನಲ್ಲಿದ್ದು ತನ್ನ ಮುಕುಲೀಭಾವ (ಮುಚ್ಚುವಿಕೆ) ದಿಂದ ಒಳಗಡೆಗಿರುವ ಭ್ರಮರಗಳ ಝುಂಕಾರ ಧ್ವನಿವುಳ್ಳದ್ದಾಗಿಯೂ ಮುಳ್ಳು ಮೊದಲಾದವುಗಳಿಂದ ಅಲಂಕೃತವಾಗಿಯೂ ಗಾಳಿಯಿಂದ ಚಲಿಸುವುದಾಗಿಯೂ ಅನೇಕ ಹಂಸಪಕ್ಷಿಗಳಿಂದ ಕುಕ್ಕಿಸಿಕೊಳ್ಳಲ್ಪಡುವವುಗಳಾಗಿಯೂ ಅಂತಸ್ಥ ಚತುರ್ಮುಖನಿಂದಲೂ ಯುಕ್ತವಾಗಿ ಸೂರ್ಯನ ಉದಯವನ್ನು ಬಯಸುವವುಗಳಾಗಿ ತಪಸ್ವಿಗಳಂತೆ ಕಮಲಗಳು ತೋರುತ್ತಿದ್ದವು.

ಇಲ್ಲಿ ಕಮಲಗಳಿಗೂ ತಪಸ್ವಿಗಳಿಗೂ, ಭ್ರಮರಗಳ ಝುಂಕಾರ ಧ್ವನಿಗೂ ಓಂಕಾರ ಧ್ವನಿಗೂ, ಮುಳ್ಳುಗಳಿಗೂ ಅಂಚಿತವಾದ ರೋಮಗಳಿಗೂ, ಕಮಲಗಳ ಚಲನೆಗೂ ಮಂತ್ರಾರ್ಥಚಿಂತನಾ ಪೂರ್ವಕ ತಲೆ ತೂಗುವಿಕೆಗೂ, ಪರಮಹಂಸರುಗಳಿಗೂ ಹಂಸಪಕ್ಷಿಗಳಿಗೂ, ಸೂರ್ಯೋದಯಕ್ಕೂ ಭಗವದಪರೋಕ್ಷಕ್ಕೂ ಉಪಮಾನ ಉಪಮೇಯಭಾವವು. ॥ ೩೨ ॥

ಕಂಠಪರ್ಯಂತವಾದ ನೀರಿನಲ್ಲಿ ನಿಂತು ತಪಿಸುವ ತಪಸ್ವಿಯಂತೆ ತಾನೂ ತನ್ನ ಕುತ್ತಿಗೆಯ ಪರ್ಯಂತ ನೀರಿನಲ್ಲಿದ್ದು ಓಂಕಾರ ಧ್ವನಿಯಂತೇ ಝುಂಕರಿಸುವ ಭ್ರಮರ ಧ್ವನಿವುಳ್ಳದ್ದಾಗಿ ರೋಮಾಂಚಗಳಂತೇ ಮುಳ್ಳುಗಳಿಂದಲೂ ಅಲಂಕೃತವಾಗಿ ಮಂತ್ರಾರ್ಥಚಿಂತನೆಯಿಂದ ತಲೆದೂಗುವಂತೆ ಗಾಳಿಯಿಂದಾ ಚಲಿಸುವುದಾಗಿ ಪರಮಹಂಸರುಗಳ ಸುಶಿಕ್ಷಣೆಯಂತೆ ಹಂಸಪಕ್ಷಿಗಳಿಂದ ಕುಕ್ಕಿಸಿಕೊಳ್ಳುವುಗಳಾಗಿ ಹೃದಯದಲ್ಲಿ ಧರಿಸಿದ ಪರಬ್ರಹ್ಮನಂತೆ ತಾನೂ ಬ್ರಹ್ಮನನ್ನು ಹೃದಯದಲ್ಲಿ ಧರಿಸಿ ಪರಮಾತ್ಮನ ಅಪರೋಕ್ಷವನ್ನು ಬಯಸುವಂತೇ ಸೂರ್ಯನ ಉದಯವನ್ನು ಬಯಸುವವುಗಳಾದ ಕಮಲಗಳು ತಪಸ್ವಿಗಳಂತೇ ಹೊಳೆಯುತ್ತಿದ್ದವು. ॥ ೩೨ ॥

ಚಂದ್ರೋದಯವನ್ನು ಉತ್ಪ್ರೇಕ್ಷಾದಿ ಅಲಂಕಾರಗಳಿಂದ ವರ್ಣಿಸುತ್ತಾರೆ.

ದಿಗಾಯತಾಕ್ಷೀಮುಪರಾಮುಪೇತ್ಯ
ದಿಶಾಪತೌ ರಾಗಮುಪೇಯುಷೀಂದುಃ ॥
ಅದೃಶ್ಯತೈಂದ್ರ್ಯಾಂ ದಿಶಿ ರೋಷರಕ್ತಂ
ನಿಬದ್ಧನೀಲಭ್ರುಕುಟೀವವಕ್ತ್ರಮ್ ॥ ೩೩ ॥

"ಪ್ರಾಚೀ" (ಪೂರ್ವದಿಕ್ಕೆಂಬ) ಎಂಬ ಸ್ತ್ರೀಗೆ ಪತಿಯಂತಿರುವ ಸೂರ್ಯನು, ವಿಶಾಲ ನೇತ್ರಳಾದ "ಪ್ರತೀಚಿ" ಎಂಬ (ಪಶ್ಚಿಮದಿಕ್ಕೆಂಬ) ಸ್ತ್ರೀಬಳಿಯಲ್ಲಿ ಅನುರಕ್ತನಾಗಿ ಹೋಗುತ್ತಿರಲು, ಚಂದ್ರನು ಹುಬ್ಬುಗಂಟಾಗಿ ಕೆಂಗಣ್ಣು ಮುಖವುಳ್ಳವನಾಗಿ ರೋಷಯುಕ್ತನೋ ಎಂಬಂತೆ ಪೂರ್ವ ದಿಕ್ಕಿನಲ್ಲಿ ಕಂಡನು. ಅತ್ತ ಸೂರ್ಯನು ಅಸ್ತಂಗತನಾದನು. ಕೂಡಲೇ ಚಂದ್ರನೂ ಉದಿತನಾದನು; ಎಂದು ತಾತ್ಪರ್ಯವು. ॥ ೩೩ ॥

ನಕ್ಷತ್ರಾಲಿಭಿರಿಂದ್ರದಿಙ್ಮೃಗದೃಶಂ ಸಂಧಾಯ ಪೂರ್ವಂ ಪುನ-
ಸ್ತತ್ಪಾದೇ ಪ್ರಣತಿಂ ವಿಧಾಯ ನಿತರಾಮಾಶಾಂತರಾಸಕ್ತಿಜಮ್ ॥
ತಸ್ಯಾಃ ಕೋಪಸಮಂ ತಮಃ ಪರಿಹರನ್ ಸ್ವೀಯೈಃ ಕರೈಸ್ತಾಂ ಸ್ಪೃಶನ್
ವಕ್ತ್ರಾಂಭೋರುಹಚುಂಬನಾಯ ಶನಕೈರುದ್ಯಾತಿ ನೂನಂ ಶಶೀ ॥ ೩೪ ॥

ಕಾಮುಕನಾದ ಮನುಷ್ಯನು ಕುಪಿತಳಾದ ಕಾಮಿನಿಯನ್ನು ವಶಪಡಿಸಿಕೊಳ್ಳಲು ಮೊದಲು ರತ್ನಹಾರಾದಿ ಆಭರಣಗಳನ್ನರ್ಪಿಸಿ ಹೆಚ್ಚು ಆಸಕ್ತಿಯನ್ನು ತೋರಿ ಪಾದಾಕ್ರಾಂತನಂತೇ ಆಗಿ ಅವಳ ಕೋಪವನ್ನು ಅಡಗಿಸಿ ತನ್ನ ಕೈಗಳಿಂದ ಸ್ಪರ್ಶಿಸುತ್ತಾ ಕೆನ್ನೆಯನ್ನು ಎತ್ತಿಹಿಡಿದು ಮುಖ ಚುಂಬನದಲ್ಲಿ ಹೇಗೆ ಪ್ರಯತ್ನಿಸುತ್ತಾನೆಯೋ ಹಾಗೆಯೇ ಚಂದ್ರನೆಂಬ ವಿಟನು (ಪೂರ್ವದಿಕ್ಕು) ಪ್ರಾಚಿಯೆಂಬ ಸ್ತ್ರೀಯನ್ನು ವಶಪಡಿಸಿಕೊಳ್ಳಲು ನಕ್ಷತ್ರಗಳ ಸಾಲೆಂಬ ರತ್ನಹಾರವನ್ನು ಅರ್ಪಿಸಿ

ತನ್ನ ಕಿರಣಗಳೆಂಬ ಕೈಗಳಿಂದ ಸ್ಪರ್ಶಿಸುವವನಾಗಿ ಪಾದಸ್ಥಾನೀಯವಾದ ಪೂರ್ವಾಧೋಭಾಗದಲ್ಲಿ ಆಸಕ್ತಿಜನ್ಯ ಪ್ರಣತಿಕಾರನಂತೇ ಹುಟ್ಟುವವನಾಗಿ ಕತ್ತಲೆಗಳೆಂಬ ಕೋಪವನ್ನಡಗಿಸುವವನಾಗಿ ಕಿರಣಗಳೆಂಬ ಕೈಗಳಿಂದ ಆಲಿಂಗಿಸಿ ದಿಗೂರ್ಧ್ವಭಾಗವೆಂಬ ಕೆನ್ನೆಗಳನ್ನು ಚುಂಬಿಸುವವನಂತೆ ಉದಿತನಾದನು. ॥ ೩೪ ॥

ಚಂದ್ರಸ್ಯ ಕೋಮಲಕರೈರಚಿತಾಂಗಸಂಗಾಃ
ಸಾಂದ್ರಾಂಧಕಾರಮಪಿ ತಾಃ ಸಹಸಾ ವಿಹಾಯ ॥
ಈಶಂ ಸ್ವಪತ್ಸ್ವಖಿಲಜಂತುಷು ವವ್ರುರೇನ-
ಮಾಶಾ ಹಿ ನೂತ್ನವಿಷಯಾ ಗಣಯಂತಿ ನೈನಃ ॥ ೩೫ ॥

(ಪೂರ್ವದಿಕ್ಕೆಂಬ) ಪ್ರಾಚೀ ಎಂಬ ಸ್ತ್ರೀಯು ಚಂದ್ರನ ಕಿರಣಗಳೆಂಬ ಕೈಗಗಳಿಂದ ಪೂರ್ಣಾಂಗಾಲಿಂಗನವುಳ್ಳವಳಾಗಿ, ಥಟ್ಟನೇ ಗಾಢಾಂಧಕಾರವೆಂಬ ಪತಿವಿಯೋಗ ದುಃಖವನ್ನು ತ್ಯಜಿಸಿ ಸಕಲ ಪ್ರಾಣಿಗಳೂ ಸುಪ್ತರಾಗಿರುವ ಏಕಾಂತವನ್ನು ಅರಿತು ಚಂದ್ರನನ್ನೇ ಪತಿಯನ್ನಾಗಿ ವರಿಸಿ ತುಷ್ಟಳಾದಳು (ಪ್ರಕಾಶಿಸಿದಳು) ಲೋಕದಲ್ಲಿ ನೂತನ ತರವಾದ ವಿಷಯ ಸಂಬಂಧ ಸಂದರ್ಭದಲ್ಲಿ ಎಂತಹವರೂ ಪಾಪಗಳನ್ನು ಎಣಿಸುವದಿಲ್ಲವಲ್ಲವೇ ? ॥ ೩೫ ॥

ಪೂರ್ವಾಬ್ಧಾವವಗಾಹ್ಯ ಫೇನನಿಚಯಶ್ರೀಖಂಡಲೇಪದ್ಯುತಿಃ
ಸ್ವಾಂಕಾಲಂಕೃತಿಮೂಲನೀಲತಿಲಕಸ್ತಾರೌಘಹಾರಾನ್ ದಿಶನ್ ॥
ವ್ಯೋಮಾಖ್ಯಾಂ ಕಬರೀಂ ಪ್ರಗೃಹ್ಯ ಸುಕರೈರಾಶ್ಲಿಷ್ಯ ದಿಕ್ಕಾಮಿನೀ-
ಮೈಂದ್ರೀಮಿಂದುರಸೌ ಚುಚುಂಬ ಸರಸೋ ರಾಗೇಣ ತಾಂ ರಂಜಯನ್ ॥ ೩೬ ॥

ಚಂದ್ರನು, ಪೂರ್ವ ಸಮು[illegible]ಲ್ಲಿ ಸ್ನಾನಮಾಡಿ, ಬುರಗುಗಳೆಂಬ ಶುಭ್ರಗಂಧದಿಂದ ಲಿಪ್ತಾಂಗನಾಗಿ, ತನ್ನ [illegible]ಶೆಯೆಂಬ ಆಭರಣದಿಂದಲೂ ನಕ್ಷತ್ರ ಮಾಲೆ ಎಂಬ ಹಾರದಿಂದಲೂ (ಸ್ವಾಂ[illegible] ಮೂಲ ನೀಲಿಮೆ ಎಂಬ ತಿಲಕದಿಂದಲೂ ಅಲಂಕೃತನಾಗಿ, ಇಂದ್ರಸಂಬಂಧಿ[illegible]ದ (ಪೂರ್ವ ದಿಕ್ಕೆಂಬ) ಪ್ರಾಚೀ ಕಾಮಿನಿಯ (ಆಕಾಶದ ಮೇಲಿನ ಕಪ್ಪೆಂಬ) ತುರುಬನ್ನು ಹಿಡಿದು, ಕಿರಣಗಳೆಂಬ ಕೈಗಳಿಂದ ಆಲಿಂಗಿಸಿ, ತನ್ನ ಅನುರಾಗದಿಂದ (ಕೆಂಪಿನಿಂದ) ಅವಳನ್ನುರಂಜಿಸಿ, ಚುಂಬಿಸಿದನು. ಚಂದ್ರನು ಪೂರ್ವದಿಕ್ಕಿನಲ್ಲಿ ಏರಿಬರುವವನಾಗಿ ತನ್ನ ಚಂದ್ರಿಕೆಯನ್ನು (ಬೆಳದಿಂಗಳನ್ನು) ಹರಡಿದನೆಂಬ ತಾತ್ಪರ್ಯವು. ॥ ೩೬ ॥

ಕೆಲವು ಶ್ಲೋಕಗಳಿಂದ ಆಕಾಶವನ್ನು ವರ್ಣಿಸುತ್ತಾರೆ.

ಸುವರ್ಣಸಂವೀತವರೇಂದ್ರನೀಲ-
ಸುಮಧ್ಯನಿಷ್ಕಾಂಚಿತಕೃಷ್ಣವಕ್ಷಃ ॥

ಸಹಾರಮನ್ವೇತ್ಯುದಿತೋರ್ಧ್ವರಶ್ಮಿ-
ಶಶಾಂಕಸಂಗ್ಯಭ್ರಮುದಾರತಾರಮ್ ॥ ೩೭ ॥

ನೀಲಿಮೆಯಿಂದ ಅಲಂಕೃತವಾದ ಆಕಾಶವು, ಮುತ್ತುಗಳಂತೆ ಪ್ರಕಾಶಿಸುವ ಸಾಲು ಸಾಲಾದ ನಕ್ಷತ್ರಗಳಿಂದಲೂ, ಥಳಥಳಿಸುವ ಚಂದ್ರನ ಊರ್ಧ್ವಮುಖ ಕಿರಣಗಳಿಂದಲೂ ಶಶಾಂಕದಿಂದಲೂ ಯುಕ್ತವಾಗಿ, ಶ್ರೇಷ್ಠವಾದ ಇಂದ್ರ ನೀಲಾದಿ ಮಣಿಗಳಿಂದಲೂ ಸುವರ್ಣದ ಗುಂಡುಗಳಿಂದಲೂ ಮುತ್ತುಗಳಿಂದಲೂ ಅಲಂಕೃತವಾದ ಹಾರಾಭರಣದಿಂದ ಒಪ್ಪುವ ಶ್ರೀಕೃಷ್ಣನ ವಕ್ಷಸ್ಥಳದಂತಿದ್ದಿತು. ॥ ೩೭ ॥

ನಾರ್ವಾಹಾವೃತಸರ್ವಭಾಗಮುದಿತಂ ಬಿಂಬಂ ಶಶಾಂಕಂ ವಿಧೋ-
ರೀಷದ್ದರ್ಶಿತಕೋಣಮಚ್ಯುತಮನಸ್ತೋಷಂ ನಭೋಗ್ರಸ್ಥಿತಮ್ ॥
ರೇಜೇ ಕುಂಕುಮಶೋಭಿ ರಮ್ಯವಸನಚ್ಛನ್ನಂ ಮರುದ್ದರ್ಶಿತ-
ಪ್ರಾಂತಂ ಶ್ರೀಕುಚಕೋಶಮೀಷದುದಯನ್ಮಧ್ಯೋಪರಿಷ್ಟಾದಿವ ॥ ೩೮ ॥

ಸುತ್ತೂರೆದ ಮೋಡಗಳಿಂದ ಆವೃತವಾದ ಶಶದ ಚಿಹ್ನೆಯಿಂದಲೂ ಕೂಡಿದ ಆಕಾಶಾಗ್ರಭಾಗಗಳಲ್ಲಿ ಸ್ವಲ್ಪ ಸ್ವಲ್ಪವಾಗಿಯೇ ಕೆಳಮೇಲ್ಭಾಗಗಳಲ್ಲಿ ಕೆಂಪಾಗಿ ಪ್ರಕಾಶಿಸುವ (ಮಸುಗು ಮಸುಗಾದ) ಚಂದ್ರ ಬಿಂಬವು, ಕಾಶ್ಮೀರ ಕುಂಕುಮದಿಂದ ಅಲಂಕೃತವಾಗಿ ಶೋಭಿಸುತ್ತಿರುವ, ಸೂಕ್ಷ್ಮವಸ್ತ್ರದಿಂದಲೂ ಛನ್ನವಾಗಿ ಗಾಳಿಯಿಂದ ಚಲಿಸುವ ವಸ್ತ್ರದಿಂದ ತೋರುವ ಕೊನೆಭಾಗವುಳ್ಳದ್ದಾದ ಶ್ರೀ ಲಕ್ಷ್ಮೀದೇವಿಯ ಸ್ತನದ್ವಂದ್ವಗಳ ಮಧ್ಯಗತ ಊರ್ಧ್ವ ಅಧೋ ಭಾಗಗಳಂತೇ ಒಪ್ಪುವುದಾಗಿ ಅಚ್ಯುತನಾದ ಶ್ರೀಕೃಷ್ಣನ ಮನಸ್ಸಿಗೆ ಸಂತೋಷಕರವಾಗಿದ್ದಿತು. ॥ ೩೮ ॥

ಗತೇ ದಿಶಾಂ ಭರ್ತರಿ ದೇಶಮನ್ಯಂ
ದಿವಾಕರೇ ಮಂದಮುಪೇತ್ಯ ಚಂದ್ರಃ ॥
ತದಂಬರಂ ಯಜ್ಜಗೃಹೇ ಕರೈಃ ಸ್ವೈ-
ಸ್ತತಃ ಕಲಂಕೀತಿ ಮಮ ಪ್ರತರ್ಕಃ ॥ ೩೯ ॥

ಪ್ರಾಚೀ ಎಂಬ ಸ್ತ್ರೀಗೆ (ಪೂರ್ವದಿಕ್ಕಿಗೆ) ಪತಿಯಾದ ಸೂರ್ಯನು, ಸ್ಥಾನಾಂತರವನ್ನು ಕುರಿತು ಹೋಗುತ್ತಿರಲು, ಚಂದ್ರನು ಸಂತೋಷದಿಂದ ಅವಳ ಬಳಿಗೆ (ಪೂರ್ವದಿಕ್ಕಿಗೆ) ಬಂದು ಅವಳ ವಸ್ತ್ರವನ್ನು ತನ್ನ ಕೈಗಳಿಂದ ಹಿಡಿದನು. ಅದುದರಿಂದಲೇ ಅಂದಿನಿಂದಲೇ "ಕಲಂಕೀ" (ಶಶಾಂಕ) ಎನಿಸಿಕೊಂಡನೆಂದು ನಾನು ತರ್ಕಿಸುತ್ತೇನೆ. ॥ ೩೯ ॥

ಚಂದ್ರಬಿಂಬವನ್ನು, ಶ್ರೀಕೃಷ್ಣನ ಯಶಸ್ಸೆಂಬ, ಅಂಗನೆಯ ಮುಖಬಿಂಬವಾಗಿ ವರ್ಣಿಸುತ್ತಾರೆ.

ಯತ್ಪೂರ್ಣಂ ಪೌರ್ಣಮಾಸ್ಯಾಮುದಯತಿ ನಿಶಿ ತತ್ಕೀರ್ತಿನಾರ್ಯಾಃ
ಕುಮಾರ್ಯಾಃವಕ್ತ್ರಂ ಕಸ್ತೂರಿಕಾಕ್ತಂ ಪ್ರವಿರಲಕಚವಿನ್ಯಸ್ತಪುಷ್ಪಂಹಿಮನ್ಯೇ॥
ಸ್ತೋತ್ರವ್ಯಾಜೇನ ದೇವೈರ್ವದನವಿನಿಹಿತಂ ನಂದಸೂನೋರ್ನ ಚೇತ್ತತ್
ಪ್ರೀತ್ಯೈ ಗೋಪಾಂಗನಾನಾಂ ಕಥಮಹಿತವಧೂವರ್ಗತಾಪಾಯ ಚ ಸ್ಯಾತ್
॥ ೪೦ ॥

ಪೌರ್ಣಿಮಾ ರಾತ್ರಿಯಲ್ಲಿ ಆಕಾಶದಲ್ಲಿ ಪೂರ್ಣವಾಗಿ ಉದಯಿಸುವ ಅಹ್ಲಾದಕರವಾದ ಬಿಂಬವು, ಕೃಷ್ಣನ ಯಶೋ (ಕೀರ್ತಿ) ಅಂಗನೆಯ ಮುಖಬಿಂಬವೆಂದು ಭಾವಿಸುತ್ತೇನೆ. ತಿಲಕದಿಂದ ಒಪ್ಪುತ್ತಾ (ಚಂದ್ರನ ಶಶಾಂಕ ಸಾರ್ಥಕ್ಯವು) ಹರವಿದ ಕೇಶಪಾಶಗಳಲ್ಲಿ ಮುಡಿದ ಪುಷ್ಪಗಳಿಂದಲೂ ಅಲಂಕೃತವಾಗಿ (ನಕ್ಷತ್ರಗಳ ಸಾರ್ಥಕತೆಯು) ಸ್ತೋತ್ರವ್ಯಾಜದಿಂದ ದೇವತೆಗಳ ಮುಖದಲ್ಲಿ (ಆಕಾಶ ಸಾರ್ಥಕತೆಯು) ಧರಿಸಿದ ನಂದನಂದನನಾದ ಶ್ರೀಕೃಷ್ಣನ ಕೀರ್ತಿ ಎಂಬ ನಾರೀ ಮುಖವೇ ಸರಿ. ಹಾಗಲ್ಲದ ಪಕ್ಷದಲ್ಲಿ ಅದು ಗೋಪಾಲಕರುಗಳಿಗೂ, ಗೋಪಿಕಾಸ್ತ್ರೀಯರುಗಳಿಗೂ ಹರ್ಷದಾಯಕವೇ ಆಗಿ ಕೃಷ್ಣನ ವೈರಿಗಳ ಹೆಂಡಿರುಗಳಿಗೆ ಮಾತ್ರ ಯಾಕೆ ತಾಪದಾಯಕವಾಗುತ್ತಿದ್ದಿತು ? ॥ ೪೦ ॥

ದುಷ್ಟರ ಶಿಕ್ಷೆಯೊಂದಿಗೆ ಸುರಕ್ಷಕನಾದ ರಾಜನು ದೇಶಾಂತರ ತೆರಳಿದರೆ, ಅವನ ಪ್ರತಿನಿಧಿಯಾದ ಮಂತ್ರಿಯು ಮತ್ತಿಷ್ಟು ಸುಖಾತಿಶಯಕಾರಕನೇ ಆದರೇ ಪ್ರಪಂಚವು ಹೇಗೆ ಸಂತೋಷ ಪಾತ್ರವಾಗುವುದೋ ಹಾಗೆಯೆ ಚಂದ್ರ-ಸೂರ್ಯರು ಎಂದು ವರ್ಣಿಸುತ್ತಾರೆ.

ದಿವಸಕರೇ ಹೃತತಸ್ಕರಪ್ರಚಾರೇ
ನರನಯನಸ್ಯ ವಿದೂರವರ್ತ್ಮ ಯಾತೇ ॥
ರಜನಿಕರೋಽಯಮುಪೇತ್ಯ ಮಾನವಾನಾಂ
ಶ್ರಮಮಧರೀಕುರುತೇ ಸ್ಮ ಪೂರ್ಣಬಿಂಬಃ ॥ ೪೧ ॥

ಕಳ್ಳರೇ ಮೊದಲಾದ ಉಪದ್ರವಕಾರಕರನ್ನು ಕಳೆವ ಸೂರ್ಯನು ದೂರ ಹೋಗುತ್ತಿರಲು (ಅಸ್ತನಾಗುತ್ತಿರಲು) ಚಂದ್ರನು ರಾತ್ರಿಯಲ್ಲಿ ಪೂರ್ಣಬಿಂಬನಾಗಿ ಮಾನವರುಗಳಿಗೆ ಎಲ್ಲ ಶ್ರಮವನ್ನು ಕಳೆಯುವವನಾಗುತ್ತಾನೆ. ಸುಪ್ರಸಿದ್ಧವಲ್ಲವೇ ? ॥ ೪೧ ॥

ಸ ಮಾರಮೌರ್ವೀಸ್ಥಿತಮಲ್ಲಿಕೇಷು-
ರಿವ ವ್ರಜಸ್ತ್ರೀಹೃದಯಂ ವಿಜಿತ್ಯ ॥
ಹರೇಃ ಪದಂ ಪ್ರಾಪ ಶನೈಃ ಸ್ಮರೇಣ
ತಮಾತ್ಮಸಾತ್ಕರ್ತುಮಿವ ಪ್ರಯುಕ್ತಃ ೪೨ ॥

ಚಂದ್ರನು ಮನ್ಮಥನ ಜ್ಯಾ(ಹಗ್ಗ)ದಲ್ಲಿರುವ ಮಲ್ಲಿಕಾದಿ ಪುಷ್ಪಬಾಣದಂತೆ ವ್ರಜ (ಗೋಕುಲ) ದಲ್ಲಿರುವ ಗೋಪಾಲ ಬಾಲಿಕೆಯರ ಮನಸ್ಸನ್ನು ಜಯಿಸಿ (ಕಲಕಿ) ಮೆಲ್ಲಗೆ ಮನ್ಮಥನಿಂದಲೂ ಕೂಡಿ ವಿಷ್ಣುಪದ(ಆಕಾಶ)ಕ್ಕೂ ಬಂದವನಾಗಿ ಶ್ರೀ ಕೃಷ್ಣನನ್ನು ಮನ್ಮಥಯುಕ್ತನನ್ನಾಗಿಸಿ ಜಯಿಸಲೋ ಎಂಬಂತೆ ಮೇಲೇರಿ ಬಂದನು. (ಚಂದ್ರನು ಪೂರ್ಣಚಂದ್ರಿಕೆಯಿಂದ ಬೆಳಗುವವನಾಗಲು ಗೋಪಾಂಗನೆಯರು ಶ್ರೀ ಕೃಷ್ಣನೊಡನೆ ವಿಹರಿಸಲು ಮನಮಾಡಿದರು. ಶ್ರೀ ಕೃಷ್ಣನೂ ಅವರಲ್ಲಿ ಮನಮಾಡಿದನೆಂದು ತಾತ್ಪರ್ಯವು) ॥ ೪೨ ॥

ಗಂಧರ್ವಗೀತಮೃತಮುಭ್ರಮಪಾರತಾರಂ
ಚಂದ್ರೇಣ ರಂಜಿತಮುದೀಕ್ಷ್ಯ ಮುದಾ ಮುಕುಂದಃ ॥
ವೃಂದಾವನಂ ಮಧುಪಮಂಜುರವಂ ಪ್ರಸೂನ-
ಸಂದೋಹಸಾಂದ್ರಮವಿಶತ್ತರುಜಾಲನೀಲಂ ॥ ೪೩ ॥

ಮೋಕ್ಷದಾಯಕನಾದ ಶ್ರೀಕೃಷ್ಣನು, ಗಂಧರ್ವರ ಗಾನದಿಂದಲೂ ಅನೇಕ ನಕ್ಷತ್ರಗಳ ಕಾಂತಿಯಿಂದಲೂ, ಚಂದ್ರನ ಸಾಂದ್ರ ಚಂದ್ರಿಕೆಯಿಂದಲೂ ಅಲಂಕೃತವಾದ ಆಕಾಶವನ್ನು ನೋಡಿ, ಭ್ರಮರಗಳ ಮಂಜುಳ ಝುಂಕಾರದಿಂದ ರಂಜಿತವಾದ, ಗುತ್ತಿಗುತ್ತಿಯಾಗಿ ಘಮಘಮಿಸುವ ಪುಷ್ಪಗಳಿಂದಲೂ, ದಟ್ಟವಾದ ಮರಗಳಿಂದಲೂ ಪೂರ್ಣವಾದ ವೃಂದಾವನವನ್ನು ಸಂತೋಷದಿಂದ ಪ್ರವೇಶಿಸಿದನು.॥೪೩॥

ಇಂದುಃ ಸ್ವರಮ್ಯಕಿರಣೈರ್ವಿಪಿನಂ ಪುಪೂರ
ಮಂದಾನಿಲಶ್ಚ ಮುದಿತೋತ್ಪಲಮಾಲ್ಯಗಂಧೈಃ ॥
ಸಾಂದ್ರಪ್ರಸೂನನಿಚಯೈಸ್ತರವಃ ಸಮಂತಾತ್
ಕಂದರ್ಪತಾತಮವಲೋಕ್ಯ ಪಿಕಾಶ್ಚ ಗೀತೈಃ ॥ ೪೪ ॥

ಶ್ರೀಕೃಷ್ಣನು ರತ್ಯಾಸಕ್ತ ಮನಸ್ಕನಾಗಿ ವೃಂದಾವನವನ್ನು ಪ್ರವೇಶಿಸುತ್ತಿರಲು, ಚಂದ್ರನು ತನ್ನ ಮನೋಹರವಾದ ಕಿರಣಗಳಿಂದ ವನವನ್ನೆಲ್ಲವನ್ನೂ ತುಂಬಿದನು. ಮಲಯ ಮಾರುತನು ಕಮಲಾದಿ ಪುಷ್ಪಗಳ ಸಾಲಿನ ಗಂಧವನ್ನೇ ತೆಗೆದು ಮಂದವಾಗಿ ಹರಿಯತೊಡಗಿದನು (ಬೀಸಿದನು). ಗಿಡಗಳು ಎಲ್ಲೆಡೆಯಲ್ಲಿಯೂ ವಿಕಸಿತವಾದ ಪುಷ್ಪಗಳ ದಟ್ಟವಾದ ರಾಶಿಯನ್ನೇ ಸುರಿಸಿದವು. ಕಂದರ್ಪನ ತಂದೆಯೇ ಆದ ಶ್ರೀಕೃಷ್ಣನನ್ನು ನೋಡಿ ಕೋಕಿಲಗಳು ಸುಸ್ವರವಾಗಿ ಧ್ವನಿಗರೆದವು. ॥ ೪೪ ॥

ವಿಶ್ವಸ್ಯ ಮೋಹನ ಇತೀಶ ಯಶೋಮದೀಯಂ
ವಿಸ್ತಾರಯೇಹ ಲಲನಾಸಹಿತೋ ವಿಹೃತ್ಯ ॥

ಉತ್ಕರ್ಷಣಾಸ್ಯದಿವ ವೃಕ್ಷತಲಪ್ರವಿಷ್ಟೈಃ
ಕೃಷ್ಣಾಂಘ್ರಿಪದ್ಮಮಸ್ಪೃಶತಿ ಹೃಷ್ಟ ಕರೈರ್ಹಿಮಾಂಶುಃ ॥ ೪೫ ॥

ಹಿಮಾಂಶುವಾದ ಚಂದ್ರನು, ವಿಶ್ವಕ್ಕೆ ಮೋಹಕನನೂ ಜಗದೊಡೆಯನೂ ಆದ ಹೇ ಕೃಷ್ಣಾ! "ನೀನು ಈ ವೃಂದಾವನದಲ್ಲಿ ಗೋಪಾಲಬಾಲರೊಂದಿಗೆ ವಿಹರಿಸಿ ನನ್ನ ಯಶಸ್ಸನ್ನು ವಿಶದಪಡಿಸು" ಎಂದು ಪ್ರಾರ್ಥಿಸುವನಂತೆ, ಗಿಡಗಳ ಬುಡಭಾಗದಲ್ಲಿ ರೆಂಬೆಗಳ ಸಂದಿನಿಂದ ಕೆಳಬಿದ್ದ ಕಿರಣಗಳೆಂಬ ಕೈಗಳಿಂದ (ಬೆಳದಿಂಗಳಿಂದ) ಶ್ರೀಕೃಷ್ಣನ ಪಾದಗಳನ್ನು ಸ್ಪರ್ಶಿಸುತ್ತಿದ್ದನು. ॥ ೪೫ ॥

ವ್ಯಾಕೀರ್ಣಕಾಮ ಇವ ತೈರ್ವಿವಿಧೈರ್ವಿಭಾವೈ-
ರಾಕರ್ಷಯನ್ ವ್ರಜವಧೂರ್ನಿಜಸಂಗಯೋಗ್ಯಾಃ ॥
ವೇಣುಂ ಕ್ರಮೇಣ ರಣಯನ್ ಬಹುತಾನಗಾನ-
ಮಾನಜ್ಞಮೌಲಿರುದಗಾಯದಧೀಶ್ವರೋಽಸೌ ॥ ೪೬ ॥

ಅನೇಕ ವಿಧಗಳಾದ(ಚಂದ್ರಿಕಾದಿ)ಉದ್ದೀಪನ ವಿಭಾವಗಳಿಂದ ಉದ್ರಿಕ್ತಕಾಮಿಯಂತೆ ಸರ್ವೇಶ್ವರನಾದ ಶ್ರೀಕೃಷ್ಣನು ತನ್ನ ಸಂಗಕ್ಕೆ ಅರ್ಹರೇ(ಯೋಗ್ಯರೇ) ಆದ ವೃಂದಾವನದಲ್ಲಿರುವ ಕನ್ನಿಕೆಯರನ್ನು(ಗೋಪಿಕಾಸ್ತ್ರೀಯರುಗಳನ್ನು) ಆಕರ್ಷಿಸುವವನಾಗಿ ಅನೇಕ ತರಹಗಳಾದ ತಾನಯುಕ್ತಗಾನ ಕಲಾ ಅಭಿಜ್ಞರ ಶಿರೋರತ್ನನೇ ಆದುದರಿಂದ ವೇಣುವನ್ನು ತನ್ನ ಕೋಮಲಾಂಗಗಳಿಂದ ನುಡಿಸುವವನಾಗಿ ಗಾನ ಮಾಡಿದನು. (ಕೊಳಲಿನ ರಂಧ್ರಗಳನ್ನು ಕೋಮಲಾಂಗಗಳಿಂದ ಬಾರಿಸುವವನಾಗಿ ಊದಿದನು.) ॥ ೪೬ ॥

ಹೃದ್ಗಂ ಹೃದ್ಯನುರಂಜಯನ್ ಸವಯಸಃ ಸಂಹರ್ಷಯನ್ ಕರ್ಷಯನ್
ಗೋಪಸ್ತ್ರೀಹೃದಯಂ ಪಶೂನ್ಪಶಿಗಣಾನ್ನಿಶ್ಚೇಷ್ಟಯನ್ ಸ್ಪೃಷ್ಟಯನ್ ॥
ವಿಶ್ವಂ ಸ್ವಸ್ಯ ವಶಂ ವಿಯದ್ಗ್ರಹವಧೂಃ ಸಂಮೂರ್ಛಯಂಶ್ಚಾರಣಾನ್
ಸಿದ್ಧಾನ್ ಸಂತ್ರಪಯನ್ ಸುರಾನ್ವಿನಮಯನ್ ವೇಣುಂ ಪುಪೋಷಾಚ್ಯುತಃ
॥ ೪೭ ॥

ನಾಶರಹಿತನಾದ ಶ್ರೀಕೃಷ್ಣನು, ತನ್ನ ಹೃದಯದಲ್ಲಿಯೇ ಇರುವ ಜಗತ್ತನ್ನು ತನ್ನಲ್ಲಿಯೇ ಅನುರಕ್ತವನ್ನಾಗಿ (ಆಸಕ್ತವನ್ನಾಗಿ) ಮಾಡುವವನಾಗಿ ಸಮವಯಸ್ಕರಾದ ಸ್ನೇಹಿತರನ್ನು ಸಂತೋಷಪಡಿಸುತ್ತಾ, ಗೋಪಿಕಾಸ್ತ್ರೀಯರುಗಳ ಮನಸ್ಸನ್ನು ಆಕರ್ಷಿಸುತ್ತಾ, ಪಶುಗಳ,ಪಕ್ಷಿಗಳ ಗುಂಪನ್ನೇ ನಿಶ್ಚೇಷ್ಟವನ್ನಾಗಿ ಮಾಡುತ್ತಾ ಋಷಿಗಳ ಗುಂಪನ್ನೇ ಸಂತೋಷಪಡಿಸುತ್ತಾ ವಿಶ್ವವು ತನ್ನವಶವೆಂಬುದನ್ನು ತೋರುವವನಾಗಿ ಆಕಾಶದಲ್ಲಿ ನೋಡುತ್ತಿರುವ ದೇವಾಂಗನೆಯರುಗಳನ್ನು ಮೂರ್ಛೆ

ಗೊಳಿಸುವವನಾಗಿ, ಸಿದ್ಧ, ಸಾಧ್ಯ, ಚಾರಣ, ಗಂಧರ್ವಾದಿಗಳಿಗೆ, ಶಿಕ್ಷಕನಾಗಿ ದೇವತೆಗಳನ್ನು ನಮ್ರೀಕರಿಸುವವನಾಗಿ (ವಿನಯ ಯುಕ್ತರನ್ನಾಗಿಸುವವನಾಗಿ) ಕೊಳಲನ್ನು ಊದಿದನು.

ಶುಷ್ಕಾಮಪಿ ಸ್ಮ ಸರಸಾಮಧರಾಮೃತೇನ
ಹೃದ್ಯಸ್ವನಾಮಪಿ ವಿಧಾಯ ಮೃದೂಕ್ತಿಶೂನ್ಯಾಮ್ ॥
ಛಿದ್ರಂ ನಿಗೂಹ್ಯ ಮುರಲೀಂ ಮುರಜಿಚ್ಚುಚುಂಬೇ
ಸದ್ವಂಶಜಾತಲಲನಾಸು ನ ಕಸ್ಯ ಪಕ್ಷಃ ॥ ೪೮ ॥

ಮುರಮಥನನಾದ ಶ್ರೀಕೃಷ್ಣನು, ಕೊಳಲು ಒಣಗಿ ನೀರಸವಾದದ್ದಾದರೂ ತನ್ನ (ಅದನ್ನು) ಅಧರಾಮೃತದಿಂದ ಸರಸವನ್ನಾಗಿ ಮಾಡಿ, ಮೃದೂಕ್ತಿರಹಿತ ವಾದುದಾದರೂ ಮನೋಹರ ಸುಸ್ವರ ಯುಕ್ತವನ್ನಾಗಿ ಮಾಡಿ, ಛಿದ್ರಗಳನ್ನು ಮುಚ್ಚುತ್ತಾ ಮುರಳಿಯನ್ನು (ಕೊಳಲನ್ನು) ಚುಂಬಿಸಿದನು (ಊದತೊಡಗಿದನು). ಅದು ವಿಹಿತವೇ! ಲೋಕದಲ್ಲಿ ಸದ್ವಂಶಜಳಾಗಿ ಸ್ವಾಧೀನದಲ್ಲಿರುವವಳಲ್ಲಿ ಯಾರಿಗೆ ತಾನೆ ಪಕ್ಷಪಾತವಿರುವುದಿಲ್ಲ. (ವಂಶವೆಂದರೇ, ಬಿದರೆಂದು, ಕುಲವೆಂದೂ, ಅರ್ಥವು) ಮುರಳಿ ಶಬ್ದವು ಸ್ತ್ರೀಲಿಂಗವಾದುದರಿಂದ ಸ್ತ್ರೀ ದೃಷ್ಟಾಂತದಿಂದ ಲೋಕೋಕ್ತಿಯನ್ನು ಹೇಳಿರುತ್ತಾರೆ. ॥ ೪೮ ॥

ಅಪರವಶಮಪೀಶಂ ಸ್ವಾನುರಕ್ತಂ ವಿಧತ್ತೇ
ಸಹಜಮಪಿ ವಿರೋಧಂ ಹಂತಿ ಜಂತುಷ್ವಭೇಧ್ಯಮ್ ॥
ವಶಯತಿ ಜಗದೇತನ್ಮಾನ್ಯತಾಮಾಪವೇಣು-
ರ್ಮಧುರನಿನದಭಾಜಾಂ ಕಿಂ ನ ಸಾಧ್ಯಂ ಹಿ ಲೋಕೇ ॥ ೪೯ ॥

ಮುರಳಿಯು (ಕೊಳಲು) ಯಾರಿಗೂ ವಶವಾಗದ ಶ್ರೀಕೃಷ್ಣನನ್ನು ತನ್ನಲ್ಲಿ ಅನುರಕ್ತನನ್ನಾಗಿ (ಆಸಕ್ತ) ಮಾಡಿಕೊಂಡಿತು. ಪ್ರಾಣಿಗಳಲ್ಲಿ ಸಹಜವಾದ ನಶಿಸಲಶಕ್ಯವೇ ಆದ (ಹುಲಿ, ಗೋವು, ಇಲಿ, ಬೆಕ್ಕು, ಹಾವು, ಮುಂಗಸಿ, ಆನೆ, ಸಿಂಹ, ಇಂತಹವುಗಳಲ್ಲಿದ್ದ) ವಿರೋಧವನ್ನು ನಾಶಮಾಡಿತು. ಜಗತ್ತನ್ನೇ ಸ್ವಾಧೀನ ಮಾಡಿಕೊಂಡು ಮಾನ್ಯತೆಯನ್ನು ಪಡೆಯಿತು. ಇದು ವಿಹಿತವೇ! ಮುಖದಲ್ಲಿ (ಬಾಯಲ್ಲಿ) ಮಾಧುರ್ಯವನ್ನು ಪಡೆದವರಿಗೆ (ಮೃದುವಚನವುಳ್ಳವರಿಗೆ) ಅಸಾಧ್ಯವಾದುದುಂಟೇ ? ॥ ೪೯ ॥

ಸ ಜಯತಿ ಯದುನಾಥಃ ಶ್ರಾವಿತಾನೇಕಗೀತಃ
ಕರಧೃತವರವೇಣುಃ ಕಾಮಿನೀಕಾಮಧೇನುಃ ॥
ಸುಲಲಿತವನಮಾಲಃ ಸುಂದರಾಪಾಂಗಲೀಲಃ
ಸಜಲಜಲದಮೂರ್ತಿಃ ಸಾಧುಭಿರ್ಗೀತಕೀರ್ತಿಃ ॥ ೫೦ ॥

ಮುರಳಿಯನ್ನು ಹಿಡಿದು ಅನೇಕ ಸುಮಧುರ ಗೀತೆಗಳನ್ನು ಕೇಳಿಸುತ್ತಾ ಕಾಮಿನಿಯರುಗಳ ಕಾಮಧೇನುವಾಗಿ ಸುಲಲಿತವಾದ ಘಮಘಮಿಸುವ ವನ ಮಾಲಾದಿಗಳಿಂದ ಸುಂದರನಾಗಿ ಕಡೆಗಣ್ಣೋಟದಿಂದ ಜಗದಾಕರ್ಷಕನಾಗಿ ಜಲಪೂರ್ಣ ಮೇಘದಂತೆ ನೀಲಮೂರ್ತಿಯಾದ ಸಾಧುಗಳಿಂದ ಸುಗೇಯ ಕೀರ್ತಿ ಪಾತ್ರನಾದ ಯದುಕುಲತಿಲಕನಾದ ಶ್ರೀ ಕೃಷ್ಣನು ಜಯಶೀಲನಾಗಿರುತ್ತಾನೆ. ಅಂತಹ ಶ್ರೀಕೃಷ್ಣನು (ನಮ್ಮಗಳ ವಿಷಯದಲ್ಲಿಯೂ) ದಯಾದೃಷ್ಟಿಯನ್ನು ಬೀರುವ ವನಾಗಲಿ; ಎಂದು ತಾತ್ಪರ್ಯ.) ॥ ೫೦ ॥

ಚಂದ್ರೇ ಜೃಂಭತಿ ತನ್ಮುಖತ್ವಿಷಿ ಮುಹುರ್ಮಂದಾನಿಲೇ ತದ್ವಪು-
ರ್ಗಂಧೇ ವಾತಿ ವಿಯೋಗವಹ್ನಿಸಚಿವೇ ತತ್ಕೋಮಲಾಲಾಪವತ್ ॥
ವೇಣೌ ಕೂಜತಿ ಪಂಚಬಾಣವಿಶಿಖೈಃ ಶಾಣಾಶಿತೈಸ್ತಾಡಿತಾ
ಮಾನಿನ್ಯೋಽಪಿ ಯಯುರ್ಮನೋಭವಪಿತುಃ ಶ್ರೇಯೋನಿಧಿಂ ಸನ್ನಿಧಿಮ್
॥ ೫೧ ॥

ಶ್ರೀಕೃಷ್ಣನ ಮುಖಕಾಂತಿಗೆ ಅನುಗುಣವಾಗಿ ಚಂದ್ರನು ಜೃಂಭಿಸುತ್ತಿರಲು, (ಬೆಳಗುತ್ತಿರಲು) ತರುಣಿಯರ ವಿರಹತಾಪವೆಂಬ ಅಗ್ನಿಗೆ ಉದ್ದೀಪಕನೇ ಆದ ಮಲಯ ಮಾರುತನು ಶ್ರೀಕೃಷ್ಣನ ದೇಹಗಂಧಾನುಗುಣವಾಗಿ ಬೀಸುತ್ತಿರಲು, ಶ್ರೀ ಕೃಷ್ಣನು ಕೋಮಲವಾಗಿ ಕೊಳಲನ್ನೂದುತ್ತಿರಲು, ನಿಶಿತವಾದ ಕಾಮ ಬಾಣದಿಂದ ತಾಡಿತರಾದ ಗೋಪಿಕಾಂಗನೆಯರುಗಳು ಸೌಶೀಲ್ಯಾದಿ ಗುಣ ಗಳಿಂದ ಬಹು ಮಾನಿಗಳೇ ಆದರೂ "ಮನ್ಮಥನ ಪಿತನಾದ ಶ್ರೀ ಕೃಷ್ಣನ ಸನ್ನಿಧಿಯು ಬಹು ಶ್ರೇಯೋನಿಧಿಯು" ಎಂದು ನಿಶ್ಚಯಿಸಿ, ಶ್ರೀ ಕೃಷ್ಣ ಸನ್ನಿಧಿಗೆ ತೆರಳಿದರು. ॥ ೫೧ ॥

ದೋಹಂ ಕಾಪಿ ವಿಹಾಯ ಕೃಷ್ಣಸುರಭಿಂ ದೋಗ್ಧುಂ ಸಮಸ್ತೇಪ್ಸಿತಂ
ತದ್ಬಿಂಬೋಷ್ಠಸುಧಾತಿಲುಬ್ಧಹೃದಯಾ ಭುಕ್ತಿಂ ವಿಸೃಜ್ಯಾಪರಾ ॥
ಕಾಂತಂ ಕಾಚನ ಸದ್ಗುಣಾರ್ಣವಭೃತೇ ಭರ್ತ್ರೇ ಸ್ಪೃಹಾಂ ಬಿಭ್ರತೀ
ತೋಕಂ ಕೃಷ್ಣವಿಹಾರಯೋಗ್ಯವಿಭವಾ ಕನ್ಯೇತಿ ಕಾಚಿದ್ಗತಾ ॥ ೫೨ ॥

ಒಬ್ಬ ಗೋಪಾಲಬಾಲಕಿಯು ಹಾಲನ್ನು ಕರೆಯುತ್ತಿದ್ದಳು. ಶ್ರೀಕೃಷ್ಣನ ಮುರಳೀ ನಾದವನ್ನು ಕೇಳಿ, ಸಕಲಾಭೀಷ್ಟಪ್ರದವಾದ ಶ್ರೀ ಕೃಷ್ಣನೆಂಬ ಕಾಮಧೇನು ಇರಲು, ಈ ಗೋವನ್ನು ಕರೆಸುವುದೆ? ಛೇ, ಎಂದು ಪಾತ್ರೆಯನ್ನು ಒಗೆದು ಓಡಿದಳು. ಎಲೆಯ ಮುಂದೆ ಊಟಕ್ಕೆ ಕಳಿತ ಮತ್ತೊಬ್ಬ ಗೋಪಿಕೆಯು, ಶ್ರೀ ಕೃಷ್ಣನ ಅಧರಸುಧೆಗಿಂತಲೂ ಸ್ವಾದುವಾದುದು (ರುಚಿಕರವಾದುದು) ಜಗತ್ತಿನಲ್ಲಿ ಮತ್ತೊಂದು ಭೋಜ್ಯವಾದುದುಂಟೇ? ಎಂದು ಭೋಜನವನ್ನೇ ಬಿಟ್ಟು ಓಡತೊಡಗಿದಳು. ಮತ್ತೊಬ್ಬ ಗೋಪಿಕಾಸ್ತ್ರೀಯು ಪತಿಯ ತಲ್ಪದಲ್ಲಿ

(ಹಾಸಿಗೆಯಲ್ಲಿ) ಮಲಗಿದವಳಾಗಿದ್ದರೂ ಸಕಲ ಗುಣಾಗರನಾದ ಶ್ರೀಕೃಷ್ಣನಿರಲು ಅಲ್ಪರ ಪತಿತ್ವವೇಕೆ ಎಂಬಂತೇ ಎದ್ದು ಓಡತೊಡಗಿದಳು. ತನ್ನ ಶಿಶುವನ್ನು ಎತ್ತಿ ಸ್ತನಪಾನವನ್ನು ಮಾಡಿಸುತ್ತಿದ್ದ ಮತ್ತೊಬ್ಬ ಗೋಪಿಯು, ತಾನು ಕೃಷ್ಣ ವಿಹಾರ ಯೋಗ್ಯ ಕನ್ಯೆ ಎಂದೆನಿಸಿಕೊಳ್ಳಲೋ ಎಂಬಂತೇ ಕೂಸನ್ನು ದಬ್ಬಿ ಓಡಿದಳು. ॥ ೫೨ ॥

ಗೋಪ್ಯನ್ಯಾಂಜನರೂಷಿತಂ ಸ್ವನಯನಂ ಕುರ್ವತ್ಯಗಾತ್ಸತ್ವರಾ
ತಜ್ಞಾನಾಂಜನತುಷ್ಟಧೀರಿವ ಪದೋರ್ಭೂಷಾಂ ಸ್ವದೋಷ್ಣೀತರಾ ॥
ಸಂಧಾಯಾಚ್ಯುತಸಂನಿಧಿಂ ಸಮುಗಮತ್ ಕೃಷ್ಣಾಂಘ್ರಿಸೇವಾಂ ಸದಾ
ತನ್ವತ್ಯಾಃ ಕರಭೂಷಣಂ ಮಮ ಭವೇತ್ತತ್ಪಾದಯೋರ್ಭೂಷಣಮ್ ॥೫೩॥

ಒಬ್ಬ ಗೋಪಿಕೆಯು ತನ್ನ ಮಗುವಿಗೆ ಎರೆದು (ಸ್ನಾನಮಾಡಿಸಿ) ಕಾಡಿಗೆಯನ್ನು ಹಚ್ಚುತ್ತಿದ್ದಳು. ಕೊಳಲಿನ ಧ್ವನಿಯನ್ನು ಕೇಳಿ ಆತುರದಿಂದ ಮುಖವೆಲ್ಲವೂ ಬಳಿದು ಓಡತೊಡಗಿದಳು (ಶ್ರೀಕೃಷ್ಣನ ದರ್ಶನಕ್ಕಿಂತಲೂ ಕಣ್ಣುಗಳಿಗೆ ಅಲಂಕಾರವು ಮತ್ತೊಂದು ಉಂಟೇ ಎಂದೋ ಎಂಬಂತೆ) ಮತ್ತೊಬ್ಬಗೋಪಿಯು ಕಾಲುಗಳಿಗೆ ತೊಡಿಸುವ ಕಡಗಗಳನ್ನು ಕೈಗಳಿಗೆ ತೊಡಿಸಿಕೊಂಡು ಓಡಿದಳು. ಪರಮಾತ್ಮನ ಪಾದಸೇವೆಯೇ ನನ್ನ ಕೈಗಳಿಗೆ ಭೂಷಣವೆಂದು ತೋರಲೋ ಎಂಬಂತಿದ್ದಿತು. ॥ ೫೩ ॥

ಆನಂದಪೂರ್ಣತಾಂ ಕೃಷ್ಣಃ ಸ್ವಾನಾಂ ಸಂದರ್ಶಯನ್ವಿಭುಃ ॥
ಆನತಾ ಅಪಿ ತಾಃ ಪ್ರೀತಾ ಮಾನಿನೀರಿತ್ಯಚೀಕಥತ್ ॥ ೫೪ ॥

ಸಮರ್ಥನಾದ ಶ್ರೀಕೃಷ್ಣನು, ಸ್ವಕೀಯರುಗಳಿಗೆ ಸ್ವಯಂ ಆನಂದ ಪೂರ್ಣತೆಯನ್ನು ತೋರುವವನಾಗಿ ಆನತರೇ ಆಗಿ ಬಹುಪ್ರೀತಿಯಿಂದ ಬಂದ ಮಾನಿನಿಯರನ್ನು ಕುರಿತು ಹೀಗೆಂದನು. ॥ ೫೪ ॥

ಪಿತೃಭರ್ತೃಜನನ್ಯಾದೇಃ ಪರಿಚರ್ಯಾ ಯತೋಽರ್ಥದಾ ॥
ವ್ರಜತ ವ್ರಜಮೇವಾತಃ ಕುರುತ ಸ್ಮರತಾಂ ಹಿತಂ ॥ ೫೫ ॥

ಸ್ತ್ರೀಯರಿಗೆ, ತಂದೆ, ತಾಯಿ, ಅಣ್ಣ-ತಮ್ಮಂದಿರು, ಪತಿ ಹಾಗು ತದ್ಬಂಧುಗಳ ಸೇವೆಯೇ ಸಾರ್ಥಕವಾದುದು. ಆದ್ದರಿಂದಲೇ ವ್ರಜವನ್ನು ಕುರಿತು ಹಿಂತಿರುಗಿರಿ! ನಿಮ್ಮಗಳನ್ನು ಸ್ಮರಿಸುತ್ತಿರುವ ಪತ್ಯಾದಿ ಬಂಧುಗಳಿಗೆ ಹಿತವನ್ನು ಉಂಟುಮಾಡಿರಿ. ॥ ೫೫ ॥

ಹೀಗೆ ಶ್ರೀಕೃಷ್ಣನಿಂದ ಹೇಳಿಸಿಕೊಂಡ ಗೋಪಿಕಾ ಸ್ತ್ರೀಯರುಗಳು ದಿಗ್ಭ್ರಾಂತರಂತೆ ನಿಂತು ಕೈಮುಗಿದು ಕಣ್ಣಲ್ಲಿ ನೀರು ಸುರಿಸುತ್ತಾ ಹೀಗೆಂದರು.

ಯದೀಶ ತೇಷಾಂ ಹಿತಮೇವ ಕಾರ್ಯಂ
ತದಾಂಗ ನಾಜ್ಞಾಪಯ ಗಂತುಮಸ್ಮಾನ್ ॥
ವಿಯೋಗದಗ್ಧೈರ್ಬತ ನಃ ಶರೀರೈಃ
ಮಹೀಂ ನ ತಾಂ ಪ್ರೇತಮಹೀಂ ವಿಧೇಹಿ ॥ ೫೬ ॥

ಹೇ ಸ್ವಾಮಿಯಾದ ಕೃಷ್ಣನೇ ! ನಾವುಗಳು ಬಂಧುಗಳಿಗೆ ಹಿತವನ್ನು (ಸೇವೆಯನ್ನು) ಮಾಡಬೇಕಾದುದೇ ಆದರೆ ನಮ್ಮಗಳನ್ನು ಹಿಂತಿರುಗಿ ಹೋಗಲು ಅಜ್ಞಾಪಿಸಬೇಡ. ನಿನ್ನ ವಿಯೋಗದಿಂದ ದಗ್ಧವೇ ಆಗುವ ನಮ್ಮ ಶರೀರಗಳಿಂದ ಈ ಭೂಮಿಯನ್ನು ಪ್ರೇತಭೂಮಿಯನ್ನಾಗಿ (ಸ್ಮಶಾನವನ್ನಾಗಿ) ಮಾಡಬೇಡ. ॥೫೬॥

ಪತ್ಯಾದಿಸೇವಾಪಿ ಭವತ್ಪ್ರಸಾದ-
ಪ್ರಾಪ್ತ್ಯರ್ಥಮೇವೇತಿ ವದಂತಿ ಸಂತಃ ॥
ತ್ವತ್ಪಾದಮೂಲಂ ವಿಧಿನೋಪನೀತಾಃ
ಕಸ್ಮಾನ್ಮೃಥಾ ಜ್ಞಾಪಯಸೀಶ ಗಂತುಂ ॥ ೫೭ ॥

ಹೇ ಕೃಷ್ಣಾ ! ಪತಿಯು ಮೊದಲಾದ ಬಂಧುಗಳ ಸೇವೆಯು ನಿನ್ನ ಅನುಗ್ರಹಪ್ರಾಪ್ತಿಗಾಗಿಯೇ; ಎಂದು ಸಜ್ಜನರುಗಳು ಹೇಳುತ್ತಾರೆ. ನಮ್ಮ ಜನ್ಮಾಂತರಾರ್ಜಿತ ಭಾಗ್ಯೋದಯದಿಂದಲೇ ನಿನ್ನ ಪಾದಮೂಲವು ಸಿಕ್ಕಿರಲು ವ್ಯರ್ಥವಾಗಿ ಹಿಂತಿರುಗಿ ಹೋಗಲು ಏಕೆ ಅಜ್ಞಾಪಿಸುವೆ ? ॥ ೫೭ ॥

ನಾನಾಯೋನಿಷು ಸಂಭವೇ ಕತಿ ಕತಿ ಶ್ರೀನಾಥ ನೋ ಮಾತೃತಾಂ
ಮಾನ್ಯತ್ವಂ ಪಿತೃತಾಂ ಪ್ರಿಯತ್ವಮಗಮಂಸ್ತತ್ಕುತ್ರ ಕುರ್ಮೋರ್ಚನಂ ॥
ವೈರಂ ವಾ ಕತಿವಾರಮೇಷು ನ ಕೃತಂ ವಿಶ್ವಾಂತರಾತ್ಮನ್ವಿಭೋ
ತಂ ನಿತ್ಯಂ ಪಿತರಂ ಪತಿಂ ಚ ಜನನೀಂ ತ್ವಾಮೇವ ಸೇವಾಮಹೇ ॥ ೫೮ ॥

ಹೇ ಶ್ರೀನಾಥನಾದ ಕೃಷ್ಣನೇ ! ಅನೇಕಾನೇಕ ಯೋನಿಗಳಲ್ಲಿ ಸುತ್ತಿ ಸುತ್ತಿ ಬರುತ್ತಾ ಎಷ್ಟೆಷ್ಟು ತಾಯಿ, ತಂದೆ, ಪತಿಗಳನ್ನು ಪಡೆದಿರುವೆವೋ? ಸ್ವಯಂ ಮಾತೃತ್ವ, ಪಿತೃತ್ವ, ಬಂಧುತ್ವಗಳನ್ನು ಪಡೆದಿರುವೆವೋ ? ಎಷ್ಟು ಜನ್ಮಗಳಲ್ಲಿ ಇವರುಗಳನ್ನು ದ್ವೇಷವೇ ಮಾಡಿರುವೆವೋ ? ಹೀಗಿರಲು, ನಿನ್ನ ವಿನಾ ಯಾರನು ಎಲ್ಲಿ ಹೇಗೆ ಅರ್ಚಿಸುವುದು? ಆದುದರಿಂದ, ವಿಶ್ವಾಂತರಾತ್ಮನಾದ ಸರ್ವಸ್ವಾಮಿಯೂ ಆದ ನೀನೇ ತಂದೆ, ತಾಯಿ, ಪತಿಯು; ನಿನ್ನ ವಿನಾ ನಾವು ಮತ್ತಾರನ್ನೂ ಅರಿಯವು. ನಿನ್ನನ್ನೇ ಸೇವಿಸುವೆವು. ॥ ೫೮ ॥

ಜಗತ್ಪಿತಾ ತ್ವಂ ನ ಪಿತಾ ಕಿಮಾಸಾಂ
ಜಗತ್ಪ್ರಸೂತಿಃ ಜನನೀ ನ ಕಿಂ ನಃ

ಜಗತ್ಪತಿಃ ಕಿಂ ನ ಪತಿಃ ಸಖೀ ನಃ
ಜದಸ್ಯಜುಷಾಸ್ಯಂಬಸಂರಿಷ್ಯಸ್ಯಷಾಸ್ಯ ॥ ೫೯ ॥

ಹೇ ಕೃಷ್ಣಾ! ಜಗತ್ತನ್ನೇ ರಕ್ಷಿಸುವ ನೀನು ನಮಗೆ ರಕ್ಷಕನಾದ ಪಿತೃ ಅಲ್ಲವೇ ? ಜಗತ್ತನ್ನೇ ಸೃಜಿಸುವ ನೀನು ನಮ್ಮಗಳಿಗೆ ಜನನಿಯೂ ಅಲ್ಲವೇ ? ಜಗತ್ತಿಗೇ ಪತಿಯಾದ ನೀನು ನಮ್ಮಗಳಿಗೆ ಪತಿಯೂ ಏಕೆ ಆಗುವುದಿಲ್ಲ ? ಸರ್ವ ಜಗತ್ತಿಗೆ ಸುಖದಾಯಕನಾದ ನೀನು ನಮ್ಮಗಳಿಗೆ ಸಖನೂ ಆಗಿರಲು, ನಮ್ಮನು ಸರ್ವಸೇವಾಫಲದಾಯಕನಾದ ನಿನ್ನ ಸೇವೆಯನ್ನು ತೊರೆದು ಹಿಂತಿರುಗಲು ಏಕೆ ಆಜ್ಞಾಪಿಸುವೆ ? (ನಿನ್ನನ್ನು ಬಿಟ್ಟು ಹೊರಟಲ್ಲಿ ಸರ್ವಪತ್ಯಾದಿ ಬಂಧು ಸೇವಾತ್ಯಾಗ ದೋಷವೇ; ಎಂದು ತಾತ್ಪರ್ಯವು) ॥ ೫೯ ॥

ಕಾಂತಃ ಸ ಏವ ಯಃ ಸ್ಥೈರ್ಯಶೌರ್ಯಸೌಂದರ್ಯಸಾಗರಃ ॥
ಸುಖಸ್ಯಾಂತಕರಂ ಕಾಂತಮಪರಂ ತರ್ಕಯಾಮಹೇ ॥ ೬೦ ॥

ಯಾವಾತನು ಸ್ಥೈರ್ಯ, ಶೌರ್ಯ, ಸೌಂದರ್ಯಗಳಿಗೆ ಸಾಗರವೇ ಆಗಿರುತ್ತಾನೆಯೋ ಅವನೇ ಕಾಂತನೆನಿಸುತ್ತಾನೆ. ಹಾಗೆ ಸಕಲ ಗುಣಗಳಿಗೆ ಆಗರನಾಗಿ ಪೂರ್ಣ ಸುಖನಾಗಿ ಪೂರ್ಣ ಸುಖವನ್ನೂ ಕೊಡುವ ನಿನ್ನ ವಿನಃ "ಇತರರು (ಕಸ್ಯ) ಸುಖದ ನಾಶಕರೇ" (ಅಂತ) ಎಂದು ತರ್ಕಿಸುತ್ತೇವೆ.. ॥ ೬೦ ॥

ಪರಸ್ತ್ರೀಯರ ಸಂಗವು ನಿಷಿದ್ಧವಲ್ಲವೇ ? ನಿಮ್ಮಗಳ ಇಚ್ಛಾಪೂರಕವಾದ ಸನ್ನಿವೇಶದಲ್ಲಿ ನಾನು ತೊಡಗುವುದಾದರೂ ವಿಹಿತವೆ? ಎಂಬ ಶ್ರೀಕೃಷ್ಣನ ಶಂಕೆಯನ್ನು (ಅಂತರಂಗವನ್ನು) ಕಳೆಯುವವರಾಗಿ ವಿಧಿನಿಷೇಧಗಳು ಲೌಕಿಕರಿಗೆ ಅಲೌಕಿಕನಾದ ನಿನ್ನವಿಷಯದಲ್ಲಿ ಎಲ್ಲವೂ ಅನಿಷಿದ್ಧವೇ ಆಗಿ ಲೋಕೋದ್ಧಾರಕಗಳೇ ಎಂಬ ಅಭಿಪ್ರಾಯದಿಂದ ಪ್ರಾರ್ಥಿಸುತ್ತಾರೆ.

ಯಃ ಸಾರಭಾಗಮನುಭೂಯ ಶರೀರಭಾಜಾಂ
ಶಿಷ್ಟಂ ಪ್ರಯಚ್ಛಸಿ ಕಿಲಾರಸಮಲ್ಪಭೋಗ್ಯಂ ॥
ದುಃಖಾತಿದೂರಗತಸಾರಸುಖೈಕಭೋಕ್ತುಃ
ತಸ್ಯೇಶಯೋಗ್ಯ ಮಖಿಲಂ ತವ ತರ್ಕಯಾಮಃ ॥ ೬೧ ॥

ಯಾವನು ಭೋಗ್ಯ ಪದಾರ್ಥಗಳ ಸಾರಭೋಕ್ತೃವಾಗಿ ತನ್ನ ಉಚ್ಛಿಷ್ಟವಾದ ಅಲ್ಪ ಭೋಗ್ಯವನ್ನು (ಅಸಾರವಾದುದನ್ನು), ದೇಹಧಾರಣಮಾಡಿದ ಜೀವಸಾಮಾನ್ಯಕ್ಕೆ ಕೊಟ್ಟು ರಕ್ಷಿಸುತ್ತಾ ಸರ್ವಸಾರ ಭೋಕ್ತೃವೆನಿಸಿರುವನೋ (ಶುಭಂ ಪಿಬತ್ಯಸೌ ನಿತ್ಯಂ ನಾಶುಭಂ ಸಹರಿಃ ಪಿಬೇತ್ ಇತಿಸ್ಮೃತೇಃ) ಅಂತಹ ದುಃಖಾತಿದೂರನೇ ಆಗಿ ಸುಖೈಕಮೂರ್ತಿಯೂ ಆಗಿ ಸರ್ವವನ್ನೂ ಹೃದಯ

ದಲ್ಲಿಯೇ ಧರಿಸಿರುವ ನಿನಗೆ ಭೋಗಕ್ಕೆ ಅಯೋಗ್ಯವಾದುದು ಜಗತ್ತಿನಲ್ಲಿ ಇರುವುದೇ? ದೇವಾ! ಎಂದು ನಾವು ತರ್ಕಿಸುತ್ತೇವೆ. ॥ ೬೧ ॥

ಶ್ರೀ ಕೃಷ್ಣನು ತಮ್ಮಲ್ಲಿ ಅನುಗ್ರಹಿಸುವುದನ್ನು ಅವನ ದಯಾದೃಷ್ಟಿಯಿಂದಲೇ ಮನಸಾ ನಿಶ್ಚಯಿಸಿಕೊಂಡ ಗೋಪಿಕಾಂಗನೆಯರು ಶ್ರೀ ಕೃಷ್ಣನ ಉಕ್ತಿಗಳಿಗೆ ಗೂಢಾಭಿಸಂಧಿಯಿಂದ ಉತ್ತರಿಸುತ್ತಾರೆ. (ಗೂಢ- ರಹಸ್ಯವಾದ, ಅಭಿಸಂಧಿ- ಹಾರ್ದ)

ಧರ್ಮೋ ನವೋಽಯಂ ಶ್ರುತಿಸಂಗತಾಕ್ಷ್ಯೋ
ಧರ್ಮೋ ನವೋಽಯಂ ಶ್ರುತಿಸಂಗತಾಕ್ಷ ॥
ಮಾನ್ಯಂ ಭಜಧ್ವಂ ರಮಣಂ ವಿಹಾಯ
ಮಾನ್ಯಂ ಭಜಾಮೋ ರಮಣಂ ವಿಹಾಯ ॥ ೬೨ ॥

ಶ್ರೀ ಕೃಷ್ಣ— (ಶ್ರುತಿಸಂಗತಾಕ್ಷ್ಯಃ) ಹೇ ಆಕರ್ಣಾಂತ ನೇತ್ರಗಳುಳ್ಳ ಸುಂದರಿಯರುಗಳಿರಾ! (ವಃ) ನಿಮ್ಮಗಳಿಗೆ (ಅಯಂ) ಈ ನಡತೆಯು (ಧರ್ಮಃ ನ) ಧರ್ಮವಲ್ಲವು. [ಹೀಗೆ ಶ್ರೀ ಕೃಷ್ಣನು ಅನ್ನಲು ಅದೇ ಪದಗಳಿಂದಲೇ ಉತ್ತರಿಸಿದರು].

ಗೋಪಿಕಾಸ್ತ್ರೀಯರು— (ಶ್ರುತಿಸಂಗತಾಕ್ಷ) ವೇದಜನ್ಯಜ್ಞಾನ ವಿಷಯನಾದ ಹೇ ಕೃಷ್ಣನೇ! (ಅಯಂ) ಈ ನಮ್ಮ ನಡತೆಯು (ನವ) ನೂತನವಾದ (ಧರ್ಮಃ) ಪರಮ ಧರ್ಮವು.

ಶ್ರೀ ಕೃಷ್ಣ— (ರಮಣಂ) ಪತಿಯನ್ನು (ವಿಹಾಯ) ಬಿಟ್ಟು (ಅನ್ಯಂ) ಬೇರೆಯವನನ್ನು (ಮಾ ಭಜಧ್ವಂ) ಸೇವಿಸಬೇಡಿರಿ.

ಗೋಪಿಕಾಸ್ತ್ರೀಯರು— (ರಮಣಂ) ಪತಿಯನ್ನು (ವಿಹಾಯ) ಬಿಟ್ಟು (ಮಾನ್ಯಂ) ಜಗನ್ಮಾನ್ಯನಾದ ನಿನ್ನನ್ನು (ಭಜಾಮಃ) ಸೇವಿಸುತ್ತೇವೆ. ॥ ೬೨ ॥

ಹಿತಾಹಿತಾಜ್ಞಾ ಬತ ಯೂಯಮಂಗನಾಃ
ಯತೋ ಹ್ಯಧರ್ಮೇ ಮತಿರಸ್ತಿ ನಿಶ್ಚಲಾ ॥
ಹಿತಾಹಿತಜ್ಞಾ ವಯಮಚ್ಯುತ ಪ್ರಭೋ
ಯತೋ ಹ್ಯಧರ್ಮೇ ಮತಿರಸ್ತಿ ನಿಶ್ಚಲಾ ॥ ೬೩ ॥

ಶ್ರೀ ಕೃಷ್ಣ— ಹೇ ಅಂಗನೆಯರುಗಳಿರಾ! ನೀವುಗಳು ಅಧರ್ಮದಲ್ಲಿ ನಿಶ್ಚಲವಾದ ಆಸಕ್ತಿಯುಳ್ಳವರು, ಆದ್ದರಿಂದಲೇ ಹಿತಾ

ಹಿತಗಳನ್ನು ತಿಳಿಯುವವರಾಗಿರುವಿರಿ. [ಶ್ರೀಕೃಷ್ಣನು ಹೀಗೆನ್ನಲು ಅದೇ ಪದಗಳಿಂದಲೇ ಗೂಢಾಭಿಸಂಧಿಯುಳ್ಳವರಾಗಿ ಉತ್ತರಿಸಿದರು.

ಗೋಪಿಕಾಸ್ತ್ರೀಯರು— ಹೇ ನಾಶರಹಿತನಾದ ಕೃಷ್ಣನೇ ನಾವುಗಳು ಅಧರ್ಮದಲ್ಲಿಯೇ ದೃಢನಾದ ಬುದ್ಧಿವುಳ್ಳವರಾದುದರಿಂದಲೇ ನಾವು ಹಿತಾಹಿತಗಳನ್ನು ಅರಿತಿರುವೆವು. ಅಧರ್ಮವೆಂದರೆ– ಭಗವದ್ಧರ್ಮವೆಂದರ್ಥ; ಅ ಇತಿ ಬ್ರಹ್ಮ ಎಂದು ಶ್ರುತಿಯು. " ಅಕಾರೋ ವಾಸುದೇವಃ ಸ್ಯಾತ್ " ಎಂದು ಏಕಾಕ್ಷರಕೋಶವು. ಆದುದರಿಂದ ಅಕಾರ ವಾಚ್ಯನಾದ ಪರಬ್ರಹ್ಮನ– ಭಗವಂತನ, ಪ್ರೀತಿಕರವಾದ ಧರ್ಮಗಳಿಂದ ಧರ್ಮವು. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬ ಗೀತೋಕ್ತಿಯಂತೇ ಭಗವತ್ಪ್ರೀತ್ಯರ್ಥವಾಗಿ ಯಥಾಯೋಗ್ಯ ಕ್ರಿಯೆಗಳೆಲ್ಲವೂ ಭಗವದ್ಧರ್ಮಗಳು. ಅವು ಅಂತಹವರಿಗೆ ಹಿತಗಳೇ ಎಂದು ತಾತ್ಪರ್ಯ. ॥ ೬೩ ॥

ವಾಗ್ವೈಖರೀಮಿವ ನಿರೀಕ್ಷ್ಯ, ಸ ವಲ್ಲವೀನಾಂ
ಪ್ರೀತಃ ಪ್ರಿಯೋಕ್ತಿಪರಿರಂಭಣಚುಂಬನಾದ್ಯೈಃ ॥
ಸುಪ್ತಂ ಪ್ರಬೋಧ್ಯ ಮದನಂ ಸಮಭೂದದೃಶ್ಯಃ
ಸತ್ಯಾಂ ವಿಧಾತುಮಿವ ಕಾಮಿವಿದೂರತಾಂ ಸ್ವಾಂ ॥ ೬೪ ॥

ಶ್ರೀಕೃಷ್ಣನು ಶ್ರೇಷ್ಠರಾದ ಗೋಪಿರುಗಳ ವಾಗ್ವೈಖರಿಯನ್ನು (ಪರರ ಶಬ್ದಗಳಿಂದಲೆ ಸ್ವಾರ್ಥಸೂಚಕತೆ) ನೋಡಿ ಮೆಚ್ಚಿಯೋ ಎಂಬಂತೆ ಪ್ರಸನ್ನನಾಗಿ ಪ್ರಿಯೋಕ್ತಿಗಳಿಂದಲೂ, ಆಲಿಂಗನ, ಚುಂಬನಾದಿಗಳಿಂದಲೂ ಸುಪ್ತನಾದ ಮನ್ಮಥನನ್ನು ಬಡಿದೆಬ್ಬಿಸುವವನಾಗಿ, ನಾನು ಭಕ್ತ್ಯೈಕ ಲಭ್ಯನೇ ಆಗಲಿ ಕಾಮಿಗಳಿಗೆ ಅತಿ ದೂರನೇ ! ಸ್ವತಃ ಆನಂದಮಯನಾದ ನನ್ನಿಂದಲೇ ಜಗತ್ತಿಗಾನಂದವಾಗಲಿ ನನಗೆ ಯಾರಿಂದಲೂ ಏನೂ ಆಗಬೇಕಾದುದಿಲ್ಲ; ಎಂಬರ್ಥವನ್ನು ತೋರಲೋ ಎಂಬಂತೆ ಅದೃಶ್ಯನಾದನು. ॥ ೬೪ ॥

ತಾಃ ಪತ್ಯಪತ್ಯಭವನೇಷು ವಿರಕ್ತಚಿತ್ತಾಃ
ಶ್ರೀಪುಂಡರೀಕನಯನೇಕ್ಷಣಕಾರ್ಯಸಕ್ತಾಃ ॥
ಆರಣ್ಯಕೇಷು ಮುನಿವರ್ಗ ಇವಾತಿಮುಗ್ಧಾಃ
ಚೇರುರ್ವಿಮೃಗ್ಯ ಬಹುಧಾ ತಮರಣ್ಯಕೇಷು ॥ ೬೫ ॥

ಶ್ರೀಕೃಷ್ಣನ ವಿರಹತಪ್ತರಾದ ಗೋಪಿಕಾಸ್ತ್ರೀಯರುಗಳು ಕಮಲದಳಗಳಂತಿರುವ ನೇತ್ರದ್ವಂದ್ವಗಳಿಂದ ಸುಂದರನಾದ ಶ್ರೀಕೃಷ್ಣನದರ್ಶನಕಾರ್ಯದಲ್ಲಿಯೇ ಆಸಕ್ತಚಿತ್ತರಾಗಿ ಪತಿಗೃಹಗಳಲ್ಲಿಯೂ (ಶಯ್ಯಾಗಾರಗಳಲ್ಲಿಯೂ) ಪತಿಭಿನ್ನರಾದ ಮಾತಾ–ಪಿತ್ರಾದಿ ಆಗಾರಗಳಲ್ಲಿಯೂ (ಕೊಟಡಿಗಳಲ್ಲಿಯೂ) ಹುಡುಕು

ವವರಾಗಿ ಕೃಷ್ಣಾತಿರಿಕ್ತವಾದ ಜಗತ್ತಿನಲ್ಲಿಯೇ ವಿರಕ್ತಚಿತ್ತರಾಗಿ, ಅರ
ನಿರಾಹಾರಾದಿಗಳಿಂದ ಭಗವದನ್ವೇಷಣದಲ್ಲಿ ಆಸಕ್ತಮನಸ್ಕರಾದ ಮುನಿ
ಬಹುರೀತಿಯಾಗಿ ಶ್ರೀಕೃಷ್ಣನನ್ನೇ ಹುಡುಕುತ್ತಾ ಅರಣ್ಯಗಳಲ್ಲಿ ಅಲೆಯ
ಗಿದರು. ॥ ೬೫ ॥

ಸಮುಮುದಿತವಿಯೋಗಾವಸ್ಥಯಾ ಕ್ವಾಪಿ ಮುಗ್ಧಾಃ
ಸಮುದಿತಘನಚಿಂತಾವಸ್ಥಯಾ ಕ್ವಾಪಿ ಶಾಂತಾಃ ॥
ವಶಯಿತುಮಿವ ಕಾಂತಂ ಯೋಗಿಪೂಗೈಕಚಿಂತ್ಯಂ
ಮಧುರವಚನದಕ್ಷಾಸ್ತಂ ಜಗುಸ್ತಾಃ ಪರೋಕ್ಷಂ ॥

ಆ ಗೋಪಿಕಾಸ್ತ್ರೀಯರುಗಳು ಶ್ರೀಕೃಷ್ಣನ ವಿಯೋಗನಿಮಿತ್ತ
ರಾಗಿ (ಮೈಮರೆತವರಾಗಿ) ಯುಕ್ತಾಯುಕ್ತ ವಿವೇಕರಹಿತರಾಗಿ,
ಶ್ರೀಕೃಷ್ಣ ಚಿಂತಾಯುಕ್ತರಾದುದರಿಂದಲೇ ಶಾಂತಿಯನ್ನೂ ತಾಳುವವರಾ
ಯೋಗಿಗಳ ಗುಂಪಿನಿಂದಲೇ ವಿಚಾರಣೀಯನಾದ (ಚಿಂತ್ಯನಾದ) ಮನೋ
ಶ್ರೀಕೃಷ್ಣನನ್ನು ವಶಪಡಿಸಿಕೊಳ್ಳಲೇ ಮಧುರತರವಾದ ವಚನಗಳಲ್ಲಿ ದಕ್ಷ
ದರಿಂದಲೇ ಪರೋಕ್ಷವಾದರೂ (ಕಣ್ಮರೆಯಾಗಿದ್ದರೂ) ಶ್ರೀಕೃಷ್ಣನನ್ನು
ಮಾಡತೊಡಗಿದರು. ॥ ೬೬ ॥

ರೋಮ್ಣಾಂ ಹರ್ಷಣಕಾರಣಿ ಶ್ರವಣತಃ ಪಾಪೌಘವಿಧ್ವಂಸಿನಿ
ಪ್ರೇಮ್ಣಾ ಚಿಂತಯತಾಂ ವಿಚಿತ್ರವಿಮಲಶ್ಲಾಘ್ಯಾರ್ಥಸಂದಾಯಿನಿ ॥
ಸಂಜಾತೇ ಭುವಿ ರುಕ್ಮಿಣೀಶವಿಜಯೇ ಸದ್ವಾದಿರಾಜೋದಿತೇ
ಸಂಜಾತಃ ಸುರಮಂಡಲೀಷು ಮಹಿತಃ ಸರ್ಗಶ್ಚ ಷಷ್ಠೋ ಮುದಾಮ್ ॥೬

ಶ್ರವಣ ಮಾತ್ರದಿಂದಲೇ ರೋಮಾಂಚಕವಾಗಿ ಹರ್ಷೋದ್ರೇಕಕರವಾ
ಪ್ರೇಮ ಪೂರ್ವಕವಾಗಿ, ಚಿಂತಿಸುವರಿಗೆ ಸಕಲಪಾಪಗಳನ್ನು ಪ್ರಧ್ವಂಸಿಸುವುದಾ
ವಿಚಿತ್ರವಾದ ಶ್ಲಾಘನೀಯವಾದ ಅರ್ಥಾತಿಶಯಗಳನ್ನು ತೋರಿಸುವುದಾಗಿಯ
ಇರುವ ಶ್ರೀರುಕ್ಮಿಣೀಶವಿಜಯವೆಂಬ ಮಹಾಕಾವ್ಯವು, ಶ್ರೀಮದ್ವಾದಿರಾಜ ಪೂ
ಚರಣರಿಂದ ಅಭ್ಯುದಿತವಾಗುತ್ತಿರಲು ದೇವ ಮಂಡಲಿಯಲ್ಲಿಯೂ, ಭೂಲೋಕ
ಭೂಸುರ ಮಂಡಲಿಯಲ್ಲಿಯೂ ಅಗಾಧವಾದ ಹರ್ಷವು ಉತ್ಪನ್ನವಾಗಿ ಆರ
ಭಾಗವು (ಸರ್ಗವು) ಸಮಾಪ್ತಿಗೊಂಡಿತು.

ಶ್ರೀಮದ್ವಾದಿರಾಜ ಪೂಜ್ಯಚರಣ ವಿರಚಿತ ಶ್ರೀರುಕ್ಮಿಣೀಶವಿಜಯ
ಮಹಾಕಾವ್ಯದಲ್ಲಿ ಆರನೆಯ ಸರ್ಗವು ಸಮಾಪ್ತವಾಯಿತು.

— ಶ್ರೀಮಧ್ವೇಶಾರ್ಪಣಮಸ್ತು —